Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 170
ಶನಿವಾರ,20 ಜೂನ್ 2026 | ಪುಟಗಳು: 20+4+4 | ಬೆಲೆ: ₹ 5.00
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಪುಷ್ಪ 2 ಕಾಲ್ತುಳಿತ ಪ್ರಕರಣ: ನಟ ಅಲ್ಲು ಅರ್ಜುನ್‌ಗೆ ಕೋರ್ಟ್ ನೋಟಿಸ್

ಕಳೆದ ಹಣಕಾಸು ವರ್ಷದಲ್ಲಿ ದೇಶದ ಬ್ಯಾಂಕ್‌ಗಳಿಂದ ಮುದ್ರಣ, ಪೆನ್ನು ಮತ್ತು ಕಾಗದದಂತಹ ಸ್ಟೇಷನರಿ ವಸ್ತುಗಳಿಗೆ ಬರೋಬ್ಬರಿ 3,870 ಕೋಟಿ ರೂ. ಖರ್ಚು

ರಾಹುಲ್ ಗಾಂಧಿಗೆ 56ನೇ ಜನ್ಮದಿನ ಸಂಭ್ರಮ: ಮೋದಿ, ಖರ್ಗೆ ಸೇರಿ ಗಣ್ಯರಿಂದ ಶುಭಾಶಯ

it's on
Sangeetha 52nd Anniversary Sale

SANGEETHA 1 RUPEE MARGIN SALE
800+ STORES
SINCE 1974

ಸಂಗೀತಾದಲ್ಲಿ ಖರೀದಿಸಿದಾಗ
100% ನೆಮ್ಮದಿ ಗ್ಯಾರಂಟಿ

365 DAYS

DAMAGE PROTECTION
PHONE BROKE?
GET UP TO 70% OFF
ON SECOND PHONE

THEFT / LOST PROTECTION

FREE DOORSTEP SERVICE
for home electronics

CYBER THEFT PROTECTION
worth
₹50,000

JUST WALK IN AND GET ₹6000

iPhone 17 Pro

Actual Price	₹1,34,900
Bajaj Cashback	₹5,000
SBI Cashback	₹4,000
Anniversary Cashback	₹3,000
Exchange + Bonus	₹20,000
Effective Price	₹1,02,900

Pixel 10 Pro

Actual Price	₹1,09,999
Card Cashback	₹12,000
Anniversary Cashback	₹3,000
Exchange + Bonus	₹20,000
Effective Price	₹74,999

SAMSUNG Galaxy S26 Ultra

Actual Price	₹1,39,999
Bajaj Cashback	₹5,000
SBI Cashback	₹3,000
Instant Discount	₹9,000
Anniversary Cashback	₹3,000
Exchange	₹20,000
Effective Price	₹99,999

vivo X300 Pro

Actual Price	₹1,09,999
Card Cashback	₹10,000
Anniversary Cashback	₹3,000
Exchange	₹20,000
Effective Price	₹76,999

oppo Find X9 Pro

Actual Price	₹1,09,999
10% UPI Cashback	₹11,000
Anniversary Cashback	₹3,000
Exchange	₹20,000
Effective Price	₹75,999

Xiaomi 17 Ultra

Actual Price	₹1,39,999
Card Cashback	₹10,000
Anniversary Cashback	₹3,000
Exchange	₹20,000
Effective Price	₹1,06,999

All top brands
Air Conditioners Available
Starting @ ₹33/day
DAIKIN LLOYD Haier

*T&C apply. Select offers applicable on Samsung products.

Shop @ sangeetha.com & get
30 Minutes DELIVERY

BAJAJ FINANCE ₹5,000 CASHBACK

UP TO ₹5,000 INSTANT DISCOUNT* SBI card
*Min. Trxn.: ₹20,000; Max. Discount: ₹5,000 per card;
Validity: 31 May - 06 Jul 2026. T&C Apply.

ಸಂಗೀತಾ
Sangeetha.com
PIONEER THEN, LEADER NOW.

52 YEARS ▪ 7 STATES ▪ 800+ STORES ▪ 60 MILLION DELIGHTED CUSTOMERS

Feedback/suggestions: support@sangeetha.com | SangeethaMobilesIndia | Sangeetha.since1974 | T & C: www.sangeetha.com | Customer Care No.: 080-69246924

Bennett & Coleman
THE TIMES OF INDIA
ಸಂಪಾದಕೀಯ
EDITORIAL

ನಿರ್ಭೀತ ನಡಿಗೆಯೇ ಅಭಿವೃದ್ಧಿ

ಪಾದಚಾರಿ ಮಾರ್ಗಗಳು ಕಣ್ಮರೆಯಾಗದಿರಲಿ

ಪಾದಚಾರಿ ಮಾರ್ಗವಿಲ್ಲದ ರಸ್ತೆಯಲ್ಲಿ ತಂದೆಯೊಡನೆ ಹೊರಟಿದ್ದ ಐದು ವರ್ಷದ ಬಾಲಕನೊಬ್ಬ ಟ್ರಕ್‌ಗೆ ಬಲಿಯಾದ ಕರುಣಾಜನಕ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ''ಗುರುತಿಸಲಾದ ಪಾದಚಾರಿ ಮಾರ್ಗದಲ್ಲಿ ನಡೆಯುವುದು ಸಂವಿಧಾನದ ವಿಧಿ 19 ಮತ್ತು 21ರ ಅಡಿಯಲ್ಲಿ ರಕ್ಷಿಸಲಾದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು,'' ಎಂದು ಅತ್ಯಂತ ಸ್ಪಷ್ಟವಾಗಿ ತಿಳಿಹೇಳಿದೆ. ವಾಹನಗಳ ಭರಾಟೆಯಲ್ಲಿ ಮನುಷ್ಯನ ಜೀವಕ್ಕೆ, ಆತನ ಹೆಜ್ಜೆಗೆ ಬೆಲೆಯೇ ಇಲ್ಲದಂತಾಗಿರುವ ಇಂದಿನ ನಗರ ಯೋಜನೆಗಳ ಕರಾಳ ಮುಖವನ್ನು ನ್ಯಾಯಪೀಠವು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸಿದೆ. ಎಲ್ಲಿ ರಸ್ತೆ ಇರುತ್ತದೆಯೋ, ಅಲ್ಲಿ ಪಾದಚಾರಿ ಮಾರ್ಗ ಇರಲೇಬೇಕು; ಅದನ್ನು ನಿರ್ಮಿಸಿ, ನಿರ್ವಹಿಸಿ, ಜನರ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡುವುದು ಸ್ಥಳೀಯ ಆಡಳಿತಗಳ ಕಡ್ಡಾಯ ಜವಾಬ್ದಾರಿ ಎಂದು ನ್ಯಾಯಾಲಯ ಎಚ್ಚರಿಸಿದೆ. ಇಂದಿನ ನಗರಾಭಿವೃದ್ಧಿ ಎಂದರೆ ಕೇವಲ ಫ್ಲೈಓವರ್‌ಗಳು, ಅಂಡರ್‌ಪಾಸ್‌ಗಳ ನಿರ್ಮಾಣ ಎಂಬ ಭ್ರಮೆಗೆ ಆಡಳಿತ ವ್ಯವಸ್ಥೆ ಸಿಲುಕಿರುವುದರಿಂದ, ರಸ್ತೆ ಅಗಲೀಕರಣದ ನೆಪದಲ್ಲಿ ಮೊದಲ ಬಲಿಯಾಗುತ್ತಿರುವುದೇ ಪಾದಚಾರಿ ಮಾರ್ಗಗಳು ಎಂಬಂಥ ಸ್ಥಿತಿ ದೇಶದುದ್ದಗಲವಿದೆ.

ಈಗಿನ ನಗರಗಳ ದುಸ್ಥಿತಿಯನ್ನು ನೋಡಿದಾಗ, ಶತಮಾನದ ಹಿಂದಿನ ನಮ್ಮದೇ ನೆಲದ ದೂರದೃಷ್ಟಿಯ ನಾಯಕರು ನೆನಪಾಗುತ್ತಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನಲ್ಲಿ 100 ಅಡಿ ಅಗಲದ ರಸ್ತೆಗಳನ್ನು ನಿರ್ಮಿಸುವಾಗಲೇ, ವಾಹನಗಳಿಗಿಂತ ಮನುಷ್ಯನಿಗೆ ಹೆಚ್ಚಿನ ಆದ್ಯತೆ ನೀಡಿ, ಪಾದಚಾರಿಗಳಿಗಾಗಿ ಅತ್ಯಂತ ವಿಶಾಲವಾದ ಪಥವನ್ನು ರೂಪಿಸಿದ್ದರು. ಆದರೆ, ಆ ಕಾಲದ ಆಡಳಿತಗಾರರಿಗಿದ್ದ ಜನಪರ ಕಾಳಜಿಯನ್ನು ಇಂದಿನ ವ್ಯವಸ್ಥೆ ಮರೆತಂತಿದೆ. ವಾಹನ ದಟ್ಟಣೆ ಕಡಿಮೆ ಮಾಡುವ ನೆಪದಲ್ಲಿ ಉಳಿದುಕೊಂಡಿರುವ ಪುಟ್ಟ ಪಾದಚಾರಿ ಮಾರ್ಗಗಳೂ ಅತಿಕ್ರಮಣಕ್ಕೋ ಅಥವಾ ಒತ್ತುವರಿಗೋ ಬಲಿಯಾಗಿವೆ. ಪರಿಣಾಮವಾಗಿ, ಮಕ್ಕಳು, ವೃದ್ಧರು, ಗರ್ಭಿಣಿಯರು ರಸ್ತೆಯ ಬದಿಯಲ್ಲಿ ಜೀವ ಕೈಯಲ್ಲಿ ಹಿಡಿದು ವಾಹನಗಳ ನಡುವೆಯೇ ನಡೆಯುವಂಥ ಭಯಾನಕ ಪರಿಸ್ಥಿತಿ ನಿರ್ಮಾಣವಾಗಿದೆ. ನಾಗರಿಕರಿಗೆ ನೆಮ್ಮದಿಯಿಂದ ಕಾಲಿಡಲು ಜಾಗ ನೀಡದಿರುವುದು ಆಡಳಿತ ಯಂತ್ರದ ಅಮಾನವೀಯತೆಗೆ ಸಾಕ್ಷಿಯಾಗಿದೆ.

ಪಾದಚಾರಿ ಮಾರ್ಗಗಳಿಲ್ಲದ ರಸ್ತೆಯಲ್ಲಿ ಅಪಘಾತ ಸಂಭವಿಸಿದರೆ ಅಥವಾ ಮೂಲಭೂತ ಹಕ್ಕಿನ ಉಲ್ಲಂಘನೆಯಾದರೆ, ಆದಕ್ಕೆ ನೇರವಾಗಿ ಸ್ಥಳೀಯ ಆಡಳಿತದ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ ಮತ್ತು ಅವರಿಂದಲೇ ಪರಿಹಾರ ವಸೂಲಿ ಮಾಡಬಹುದು ಎಂಬ ಸುಪ್ರೀಂ ಕೋರ್ಟಿನ ನಿಲುವು ನಿಜಕ್ಕೂ ನ್ಯಾಯಯುತ. ನಗರಗಳು ಇರುವುದು ಮನುಷ್ಯರ ಬದುಕಿಗಾಗಿ ಮತ್ತು ಅವರ ಸುರಕ್ಷಿತ ಓಡಾಟಕ್ಕಾಗಿಯೇ ಹೊರತು, ಕೇವಲ ಯಂತ್ರಗಳ ಓಟಕ್ಕಲ್ಲ ಎಂಬ ಕಣ್ತೆರೆಸುವ ಸಂಗತಿಯನ್ನು ಈ ತೀರ್ಪು ಎತ್ತಿ ಹಿಡಿದಿದೆ. ಈ ಸಂದರ್ಭದಲ್ಲಿ ಸಾಹಿತಿ ಡಾ. ಯು.ಆರ್. ಅನಂತಮೂರ್ತಿಯವರು ಒಮ್ಮೆ ಸುಸ್ಥಿರ ಅಭಿವೃದ್ಧಿಯ ಕುರಿತು ಆಡಿದ ಮಾತೊಂದು ನೆನಪಾಗುತಿದೆ: ''ಅಭಿವೃದ್ಧಿಯೆಂದರೆ ಗಂಟೆಗೆ ನೂರಾರು ಕಿ.ಮೀ. ವೇಗದಲ್ಲಿ ಚಲಿಸುವ ರಸ್ತೆಗಳನ್ನು ನಿರ್ಮಿಸುವುದಲ್ಲ; ಯಾವ ನಗರದ ಮಾರ್ಗದಲ್ಲಿ ಪಾದಚಾರಿ ನಿರ್ಭೀತನಾಗಿ ನಡೆಯುತ್ತಾನೋ, ಅದೇ ನೈಜ ಅಭಿವೃದ್ಧಿ''! ಈ ಮಾತು ಪ್ರಸ್ತುತವಾಗುವುದು ಎಂದು? ಕಡೇಪಕ್ಷ ಸುಪ್ರೀಂ ಕೋರ್ಟ್ ಈಗ ಬೀಸಿದ ಚಾಟಿಯಿಂದಲಾದರೂ ಆಡಳಿತ ವ್ಯವಸ್ಥೆ ಎಚ್ಚೆತ್ತುಕೊಂಡು, ಮನುಷ್ಯನ ನಿರ್ಭೀತ ಹೆಜ್ಜೆಗೆ ಬೆಲೆ ಕೊಡುವ ಮೂಲಕ ನೈಜ ಅಭಿವೃದ್ಧಿಯತ್ತ ಮುಖ ಮಾಡಬೇಕಿದೆ.

ಬೋಧಿ ವೃಕ್ಷ

ಹಣತೆ ಬೇರೆಯಾದರೂ ಬೆಳಗುವ ಜ್ಯೋತಿ ಒಂದೇ



ಈ ಜಗತ್ತು ಕತ್ತಲೆ ಬೆಳಕು ಸಿಹಿ- ಕಹಿ, ಪಾಪ- ಪುಣ್ಯ, ಒಳಿತು- ಕೆಡಕುಗಳ ಸಮ್ಮಿಶ್ರಣ. ಮನುಷ್ಯ ಎಷ್ಟೇ ಒಳಿತಾದ ವಸ್ತು ತೆಗೆದುಕೊಂಡರೂ ಅದರಲ್ಲಿ ಸ್ವಲ್ಪಾದರೂ ಕೆಡಕು ಇದ್ದೇ ಇರುತ್ತದೆ. ಆದರೆ, ಮನುಷ್ಯನು ಹೆಚ್ಚಾಗಿ ಕಾಣುವುದು ಒಳಿತನ್ನಲ್ಲ, ಕೆಡುಕನ್ನೇ ಕಾಣುತ್ತಾನೆಂಬ ಮಾತು ಸತ್ಯ. ಹಣತೆ ಚಿನ್ನದ್ದಾದರೇನು, ಮಣ್ಣಿನದಾದರೇನು... ಅದರಲ್ಲಿ ಬೆಳಗುವ ಜ್ಯೋತಿ ಒಂದೇಯಾಗಿರುತ್ತದೆ. ರಾಜ ರೈತರಲ್ಲಿ, ಬಡವ ಬಲ್ಲಿದರಲ್ಲಿ ಇರುವ ಪ್ರಾಣ ಜ್ಯೋತಿ ಒಂದೇ. ಮಣ್ಣಿನ ಹಣತೆಯಲ್ಲಿರುವ ಜ್ಯೋತಿ ನಾ ಬಡವನೆಂದು ಕೊರಗದು. ಚಿನ್ನದ ಹಣತೆಯಲ್ಲಿರುವ ಜ್ಯೋತಿ 'ನಾ ಸಿರಿವಂತ' ಎಂದು ಬೀಗಲಾರದು. ಹಣತೆಯಲ್ಲಿರುವ ಎಣ್ಣೆ ಇರುವವರೆಗೆ ಎರಡೂ ಜ್ಯೋತಿ ಒಂದೇ ಕಳೆಯಿಂದ ತೇಜಪುಂಜದಿಂದ ಬೆಳಗುತ್ತವೆ. ಮಾನವ ಜೀವನವೆಂಬ ಜ್ಯೋತಿಯು ಎಂಥ ಕಠಿಣ ಪ್ರಸಂಗದಲ್ಲಿಯೂ ಸಹ ಉತ್ಸಾಹದಿಂದ ಬಾಳುವುದನ್ನು ಮರೆಯಬಾರದು. ಬಂಗಾರದ ಆಭರಣಕ್ಕೆ ಬೆಲೆ ಬಹಳ ಆದರೆ ಆಕರ್ಷಣೆ ಕಡಿಮೆ.

ಬಂಗಾರದಂಥ ಬಣ್ಣದಲ್ಲಿ ಮಾಡಿದ ನಕಲಿ ಆಭರಣಕ್ಕೆ ಬೆಲೆ ಕಡಿಮೆ ಆದರೆ ಆಕರ್ಷಣೆ ಬಹಳ. ಆಕರ್ಷಣೆಗೆ ಮನಸೋತವರು ಹೊರಗೆ ಸಿರಿವಂತನಾದರೂ ಒಳಗೆ ಬಡವರು. ಬಡವರಾಗಿದ್ದರೂ ಹೃದಯ ಸಿರಿವಂತರಾಗಲು ಪ್ರಯತ್ನಿಸಬೇಕು. ಪ್ಲಾಸ್ಟಿಕ್ ಹೂ ಎಂದಿಗೂ ಬಾಡದು. ಸದಾ ಅರಳಿದಂತೆಯೇ ಇರುತ್ತದೆ. ನೈಜ ಹೂವಿಗಿಂತ ಸುಂದರ ಬಲು ಆಕರ್ಷಕ. ಅದರೊಳಗೆ ಯಾವುದೇ ಸುಗಂಧ ಮಕರಂದ ಇರುವುದಿಲ್ಲ, ಅಂದೇ ಹುಟ್ಟಿ ಅಂದೇ ಬಾಡುವ ನೈಜ ಹೂವಿನ ಸಿರಿಯೇ ಬೇರೆ. ಪ್ಲಾಸ್ಟಿಕ್ ಹೂ ಆಡಂಬರದ ಸಂಕೇತವಾದರೆ ನೈಜ ಹೂ ನಿರಾಡಂಬರದ ಸಂಕೇತವಾಗಿದೆ. ವಿಶ್ವಾಸವುಳ್ಳ ಜನರು ಬಂಧು ಬಾಂಧವರು ಮಿತ್ರರು ಬದುಕಿನಲ್ಲಿ ದೊರಕಿದರೆ ಅದೊಂದು ಮಹಾ ಭಾಗ್ಯ. ಆದರಿಂದ ಜೀವನದಲ್ಲಿ ಶಾಂತಿ ಸಂತೃಪ್ತಿ ಸಮಾಧಾನ ಪ್ರಾಪ್ತಿ. ವ್ಯಕ್ತಿ ಸಮಾಜ ಕುಟುಂಬ ಮತ್ತು ದೇಶ ಎಲ್ಲದರ ಕಲ್ಯಾಣಕ್ಕೆ ಕಾರಣ ವಿಶ್ವಾಸ ಎಂಬುದನ್ನು ಮರೆಯಲಾಗದು.

ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು, ಬಾಳೆಹೊನ್ನೂರು

ವಿಕ ತಗೋ ಕನ್ನಡ

ಚಂದ್ರೋದಯ

ಇದರ ಅರ್ಥ 'ಚಂದ್ರ ಕಾಣಿಸಿಕೊಂಡ' ಎಂದಾದರೂ ಸಾಮಾನ್ಯವಾಗಿ 'ಪೂರ್ಣಚಂದ್ರ ಮೂಡಿದ' ಎನ್ನುವುದನ್ನು ಸೂಚಿಸುತ್ತದೆ. 'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ' ಎನ್ನುವ ಜನಪ್ರಿಯ ಬಸವಣ್ಣನವರ ವಚನದಲ್ಲಿ ವೈಜ್ಞಾನಿಕ ವಿಚಾರವೊಂದು ಸುವ್ಯಕ್ತವಾಗಿ, ಕೊನೆಗೆ 'ಜಗದ ನೆಂಟ ಯಾರು?' ಎಂಬುದನ್ನು ತೆರೆದಿಡುತ್ತದೆ. ಇದನ್ನು ಕುಮಾರವ್ಯಾಸನು '...ನಾಸಿಕದೆರಲ ಚಂದ್ರೋದಯವನೀಕ್ಷಿಸಿ ದೇವ ಹೊರವಂಟ' ಎಂದು ಪ್ರಯೋಗಿಸಿದ್ದಾನೆ (ಉದ್ಯೋಗ ಪರ್ವ, 7-5). ಕೌರವರೊಡನೆ ಸಂಧಾನಕ್ಕೆ ಶ್ರೀಕೃಷ್ಣ ಹೊರಟ ಸಂದರ್ಭವಿದು. ತನ್ನ ಕರತಳವನ್ನು ಮೂಗಿನ ಹತ್ತಿರ ತಂದು, ಎಡಹೊಳ್ಳೆಯಿಂದ ಚಂದ್ರಸ್ವರವೆಂಬ ವಾಯುವು ಹೊರಬರುತ್ತಿರುವುದನ್ನು (ಚಂದ್ರೋದಯವನ್ನು) ಗಮನಿಸಿದ. ಚಂದ್ರಸ್ವರವೆಂದರೆ ಯೋಗದ ಅಂಗವಾದ ಪ್ರಾಣಾಯಾಮದ 'ಇಡಾ ನಾಡಿ'. ಅದರಂತೆ ದೂರಪ್ರಯಾಣಕ್ಕೆ ಹೊರಟಾಗ ಎಡಹೊಳ್ಳೆಯಿಂದ 'ಚಂದ್ರಸ್ವರ'ವು ಬಂದರೆ ಅದು ಸೂಕ್ತವಾದ ಸಮಾಧಾನದ ಸ್ಥಿತಿಯನ್ನು ಸೂಚಿಸುತ್ತದೆ. ಹೀಗೆ ಯೋಗೇಶ್ವರನಾದ ಶ್ರೀಕೃಷ್ಣನು 'ಚಂದ್ರೋದಯವನೀಕ್ಷಿಸಿ' ಹೊರಟದ್ದನ್ನು ಕುಮಾರವ್ಯಾಸ ನಾಟಕೀಯವಾಗಿ ಚಿತ್ರಿಸಿದ್ದಾನೆ.

- ಜಿ.ವಿ. ಅರುಣ

- ಪದ ಸೂಚಿಸಿದವರು: ರಮ್ಯಾ ಕಿರಣ್ ಬೆಂಗಳೂರು

ಬತ್ತಳಿಕೆ



ವಿಕ ಜೋಕ್ FALLS

ಹುಡುಗಿ: ಬೆಳಗ್ಗೆಯಿಂದ ನನಗೆ ತಲೆ ಸುತ್ತುತ್ತಿದೆ.
ಡಾ. ಸಂಗ್ಯಾ: ನಿಮ್ಮ ನಾಡಿಮಿಡಿತ ಸರಿಯಾಗಿ ಓಡುತ್ತಿದೆ, ಗಡಿಯಾರದಂತೆಯೇ.
ಹುಡುಗಿ: ಸಾರಿ ಡಾಕ್ಟ್ರೇ... ನೀವು ನಾಡಿಯ ಬದಲು ನನ್ನ ವಾಚ್‌ನ ಮೇಲೆ ಕೈ ಇಟ್ಕೊಂಡಿದ್ದೀರಿ!

ತರಗತಿಗಳ ನಡುವಿನ ವಿರಾಮದಲ್ಲಿ ವಿದ್ಯಾರ್ಥಿನಿಯರು ತುಟಿಗೆ ಲಿಪ್‌ಸ್ಟಿಕ್ ಬಳಿದುಕೊಳ್ಳುವುದು, ಮೇಕಪ್ ಮಾಡಿಕೊಳ್ಳುವ ವರ್ತನೆಯಿಂದ ಕೇರಳದ ಕೊಲ್ಲಂನ ಶಾಲೆಯೊಂದು ಎಚ್ಚೆತ್ತುಕೊಂಡಿದೆ. ಮಕ್ಕಳು ಬಳಸುವ ಸೌಂದರ್ಯವರ್ಧಕಗಳ ಬಳಕೆ ವಿರುದ್ಧ ಕೇರಳ ಮಕ್ಕಳ ಕಲ್ಯಾಣ ಸಮಿತಿ ಆಂದೋಲನ ಆರಂಭಿಸಿದ್ದು 'ಲಿಪ್‌ಸ್ಟಿಕ್ ಮುಕ್ತ ಕ್ಯಾಂಪಸ್' ಘೋಷಿಸಿದೆ. ನಿಜಕ್ಕೂ, ಮಕ್ಕಳಿಗೆ ಕಾಸ್ಮೆಟಿಕ್ಸ್ ಅಪಾಯಕಾರಿಯೇ? ಏನೆನ್ನುತ್ತಾರೆ ತಜ್ಞರು?

ಲಿಪ್‌ಸ್ಟಿಕ್ ಯುದ್ಧ

ಮಕ್ಕಳ ಮುಖಕ್ಕೆ ಕಾಸ್ಮೆಟಿಕ್ಸ್... ಇದು ಅಂದವೋ, ಆಪತ್ತೋ?

● ಡಾ. ಗುರುರಾಜ ಆರಕೇರಿ

ಅದೊಂದು ಸಂಜೆ. ಕ್ಲಿನಿಕ್‌ನ ಕೆಲಸಗಳನ್ನೆಲ್ಲ ಮುಗಿಸಿ ಬಂದು, ಲಿವಿಂಗ್ ರೂಮಿನಲ್ಲಿ ವಿಶ್ರಾಂತವಾಗಿ ಕುಳಿತು ಪೇಪರ್ ಓದುತ್ತಿದ್ದ ನನಗೆ ಇದ್ದಕ್ಕಿದ್ದಂತೆ ಆಶ್ಚರ್ಯ ಕಾದಿತ್ತು! ನನ್ನ ಹನ್ನೆರಡು ವರ್ಷದ ಹಿರಿಯ ಮಗಳು ಮತ್ತು ಎಂಟು ವರ್ಷದ ಕಿರಿಯ ಮಗಳು ಇಬ್ಬರೂ ಒಟ್ಟಿಗೆ ಕುಳಿತು ಅತ್ಯಂತ ಗಂಭೀರವಾಗಿ ಏನೋ ಸಮಾಲೋಚನೆ ನಡೆಸುತ್ತಿದ್ದರು. ಕುತೂಹಲ ತಡೆಯಲಾಗದೆ ಹತ್ತಿರ ಹೋಗಿ ನೋಡಿದರೆ, ಇಬ್ಬರ ಕೈಯಲ್ಲೂ ರಂಗುರಂಗಿನ ಲಿಪ್‌ಸ್ಟಿಕ್‌ಗಳು! ಹಿರಿಯ ಮಗಳು ಗಾಢ ಕೆಂಪು ಬಣ್ಣದ ಲಿಪ್‌ಸ್ಟಿಕ್ ಲೇಪನ ಮಾಡಿಕೊಳ್ಳುತ್ತಿದ್ದರೆ, ಕಿರಿಯ ಮಗಳು ಅದನ್ನೇ ನೋಡಿ ಸಂಭ್ರಮಿಸುತ್ತಿದ್ದಳು.

''ಏನಮ್ಮಾ ಇದು? ಇಷ್ಟು ಚಿಕ್ಕ ವಯಸ್ಸಿಗೆ ಲಿಪ್‌ಸ್ಟಿಕ್ ಯಾಕೆ?,'' ಎಂದು ಪ್ರೀತಿಯಿಂದಲೇ ಕೇಳಿದೆ.

ಅದಕ್ಕೆ ಹಿರಿಯ ಮಗಳು ತಕ್ಷಣ, ''ಅಯ್ಯೋ ಅಪ್ಪ, ಇವತ್ತು ಫ್ರೆಂಡ್ ಬರ್ತ್‌ಡೇ ಪಾರ್ಟಿ ಇದೆಯಲ್ಲ, ಅದಕ್ಕೆ ಹಚ್ಚಿಕೊಳ್ತಿದ್ದೀನಿ,'' ಎಂದು ಸಮರ್ಥಿಸಿಕೊಂಡಳು.

ಆದರೆ, ಪಕ್ಕದಲ್ಲೇ ಇದ್ದ ಕಿರಿಯ ಮಗಳು ಅಕ್ಕನ ರಹಸ್ಯ ಬಿಟ್ಟುಕೊಡುವಂತೆ, ''ಹೌದು ಪಪ್ಪಾ... ಯೂಟ್ಯೂಬಲ್ಲಿ 'ಗೆಟ್ ರೆಡಿ ವಿತ್ ಮಿ' ಅಂತ ರೀಲ್ಸ್ ಬರುತ್ತವಲ್ಲ, ಅದರಲ್ಲಿ ಎಲ್ಲರೂ ಹೀಗೆ ಬಣ್ಣ ಹಚ್ಚಿಕೊಂಡು ರೆಡಿಯಾಗ್ತಾರೆ. ಅದನ್ನೇ ನೋಡಿ ನಾವೂ ಟ್ರೈ ಮಾಡ್ತಿದ್ದೀವಿ. ಎಲ್ಲರೂ ಇದನ್ನು ಮಾಡ್ತಾರೆ ಪಪ್ಪಾ...,'' ಅಂದಳು ಮುಗ್ಧವಾಗಿ.

ನನಗೆ ತಕ್ಷಣ ನೆನಪಾಗಿದ್ದು ನೆರೆರಾಜ್ಯ ಕೇರಳದ ಇತ್ತೀಚಿನ ಸುದ್ದಿ. ಅಲ್ಲಿನ ಸರಕಾರಿ ಶಾಲೆಗಳಲ್ಲಿ ಮತ್ತು ಬಾಲ ಕಲ್ಯಾಣ ಮಂಡಳಿಗಳಲ್ಲಿ ವಿದ್ಯಾರ್ಥಿನಿಯರು ಲಿಪ್‌ಸ್ಟಿಕ್ ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಕೆಲವು ಶಾಲೆಗಳ ಗೋಡೆಗಳ ಮೇಲಂತೂ ಮಕ್ಕಳು ಲಿಪ್‌ಸ್ಟಿಕ್ ಹಚ್ಚಿದ ಮುದ್ರೆಗಳನ್ನು ಒತ್ತಿ ಇಡೀ ಕ್ಲಾಸ್‌ರೂಮ್‌ಗಳನ್ನೇ ರಂಗುರಂಗಾಗಿಸಿದ್ದರು! ವಿಷಯ ಕೇವಲ ಗೋಡೆ ಹಾಳಾಗುವುದಲ್ಲ; ಮಕ್ಕಳ ಈ ಮೇಕಪ್ ಗೀಳಿನ ಹಿಂದೆ ಅಡಗಿರುವ ಗಂಭೀರ ಆರೋಗ್ಯದ ಅಪಾಯಗಳು ಮತ್ತು ಮನಸ್ಸಿನ ಆಪತ್ತುಗಳು ತುಂಬಾನೇ ಇವೆ.

ಹಾಗಾಗಿಯೇ, ಆ ಇಬ್ಬರನ್ನು ನನ್ನ ಹತ್ತಿರ ಕರೆದು ಪ್ರೀತಿಯಿಂದ ಬೆನ್ನು ಸವರಿ ಹೇಳಿದೆ, ''ಅಮ್ಮಾ... ನೀವು ಹೀಗೆಯೇ ತುಂಬಾ ಮುದ್ದಾಗಿ ಕಾಣಿಸುತ್ತಿದ್ದೀರಾ. ಆದ್ರೆ, ಈ ರೀತಿ ಕೃತಕ ರಾಸಾಯನಿಕ ಬಣ್ಣಗಳನ್ನು ಹಚ್ಚಿಕೊಳ್ಳೋದ್ರಿಂದ ನಿಮ್ಮ ಪುಟ್ಟ ದೇಹದೊಳಗೆ ಏನೆಲ್ಲಾ ಆಗುತ್ತೆ ಗೊತ್ತಾ?''.

ಕಿರಿಯ ಮಗಳು ಕಣ್ಣರಳಿಸಿ ನೋಡಿದಳು. ದೊಡ್ಡವಳು ಕೂಡ ಫೋನ್ ಪಕ್ಕಕ್ಕಿಟ್ಟು ಕಿವಿಗೊಟ್ಟಳು.

ಮುಖದ ಕ್ರೀಮ್, ಕಣ್ಣಿನ ಶ್ಯಾಡೋ ಹಿಂದಿನ ಅಸಲಿ ಸತ್ಯ!

''ಲಿಪ್‌ಸ್ಟಿಕ್ ಒಂದೇ ಅಲ್ಲ ಕಣೋ,'' ಅಂದೆ. ''ಬೇರೆ ಮೇಕಪ್‌ಗಳಲ್ಲೂ ಎಚ್ಚರ ಬೇಕು. ಸಾಮಾನ್ಯವಾಗಿ ಒಳ್ಳೆಯ ಪ್ರತಿಷ್ಠಿತ ಬ್ರಾಂಡ್‌ಗಳು ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸಿ ಸುರಕ್ಷಿತ ವಸ್ತುಗಳನ್ನೇ ಬಳಸುತ್ತವೆ. ಆದರೆ, ಮಾರುಕಟ್ಟೆಯಲ್ಲಿ ಯಥೇಚ್ಛವಾಗಿ ಸಿಗುವ ಕಳಪೆ ಗುಣಮಟ್ಟದ ಅಥವಾ ನಕಲಿ ಉತ್ಪನ್ನಗಳಲ್ಲಿ ಸುವಾಸನೆಗಾಗಿ ನಿಯಮ ಮೀರಿ ಹಾಕುವ ವಸ್ತುಗಳು ಮತ್ತು ಕ್ರೀಮ್‌ಗಳು ಹಾಳಾಗದಂತೆ ಕಾಪಾಡಲು ಬಳಸುವ ರಾಸಾಯನಿಕಗಳು ಇರಬಹುದು. ಇವು ನಮ್ಮ ದೇಹದ ಹಾರ್ಮೋನುಗಳ ಮೇಲೆ ಪರಿಣಾಮ ಬೀರಬಹುದು. ಬೆಳೀತಾ ಇರೋ ಮಕ್ಕಳಿಗೆ ಇವು ಬಹಳ ಮುಖ್ಯ.

ಇನ್ನು ಬೀದಿಬದಿಯ ಅಗ್ಗದ ಫೇರ್‌ನೆಸ್ ಕ್ರೀಮ್‌ಗಳಲ್ಲಿ ಹಾನಿಕಾರಕ ಅಂಶಗಳಿರುತ್ತೆ. ಇವು ಚರ್ಮವನ್ನು ಕೆಡಿಸುತ್ತವೆ. ಕಣ್ಣಿಗೆ ಹಚ್ಚುವ ಕಳಪೆ ಗುಣಮಟ್ಟದ ಐ-ಶ್ಯಾಡೋಗಳಲ್ಲಿ ಸೀಸ ಇರುತ್ತೆ. ಇದು ಕಣ್ಣಿನ ಸೂಕ್ಷ್ಮ ಪೊರೆಗೆ ತೊಂದರೆ ಕೊಡುತ್ತೆ. ಅಷ್ಟೇ ಯಾಕೆ, ಕೆಲವು ಕೂದಲಿನ ಜೆಲ್‌ಗಳಲ್ಲಿ ಕೃತಕ ಅಂಶಗಳಿರುತ್ತೆ, ಇದು ಕೂದಲಿನ ಆರೋಗ್ಯಕ್ಕೆ ಒಳ್ಳೆಯದಲ್ಲ. ನಿಯಮ ಪಾಲಿಸದ ಇಂಥ ಅಗ್ಗದ ವಸ್ತುಗಳಲ್ಲೇ ಕಲಬೆರಕೆ ಜಾಸ್ತಿ ಇರುತ್ತೆ''.

ನನ್ನ ಮಾತುಗಳನ್ನು ಕೇಳುತ್ತಿದ್ದ ಕಿರಿಯ ಮಗಳು ಮುಗ್ಧವಾಗಿ ಕೇಳಿದಳು, ''ಹಾಗಾದ್ರೆ ಪಪ್ಪಾ, ಪಾರ್ಟಿಯಲ್ಲಿ ಎಲ್ಲರೂ ಇದನ್ನು ಮಾಡ್ತಾರಲ್ಲ, ನಮಗೂ ಹಚ್ಚಿಕೊಳ್ಬೇಕು ಅನ್ನೋದು ತಪ್ಪಾ?''.

''ಇಲ್ಲಮ್ಮಾ... ಭಯಪಡೋ ಅಗತ್ಯವಿಲ್ಲ, ಮೇಕಪ್ ಅಂದ್ರೆ ವಿಷ ಅಲ್ಲ. ಯಾವಾಗಲೋ ಒಮ್ಮೆ ಹಬ್ಬ, ಮದುವೆ ಅಥವಾ ಫ್ಯಾನ್ಸಿಡ್ರೆಸ್‌ಗೆ ಸ್ವಲ್ಪ ಹಚ್ಚಿಕೊಂಡ್ರೆ ಆಕಾಶವೇನೂ ಉರುಳಿ ಬೀಳಲ್ಲ. ಆದ್ರೆ, ಸಮಸ್ಯೆ ಇರೋದು ಎರಡು ಕಡೆ. ಒಂದು, ಪ್ರತಿದಿನ ಪದೇಪದೆ ಹಚ್ಚಿಕೊಳ್ಳುವುದು; ಹೀಗೆ ಸ್ವಲ್ಪ ಸ್ವಲ್ಪವೇ ದಿನಾಲೂ ದೇಹ ಸೇರಿದರೆ ಅದು ಆಪತ್ತು. ಎರಡು, ಬೀದಿಬದಿಯ ಬ್ರಾಂಡ್ ಅಲ್ಲದ ಅಗ್ಗದ ಲಿಪ್‌ಸ್ಟಿಕ್‌ಗಳು; ಇವುಗಳಲ್ಲೇ ಹಾನಿಕಾರಕ ಅಂಶಗಳು ಜಾಸ್ತಿ ಇರುತ್ತೆ ಮತ್ತು ಇವು ಮಕ್ಕಳ ಸೂಕ್ಷ್ಮ ಚರ್ಮಕ್ಕೆ ಅಲರ್ಜಿ ತರುತ್ತವೆ, ಅಷ್ಟೇ.''

(ಲೇಖಕರು: ವೈದ್ಯಕೀಯ ತಜ್ಞರು)

ಬಾಯಿಗೆ ಹತ್ತಿರವಿರುವ ಅಪಾಯ!

''ಮಕ್ಕಳೇ... ಲಿಪ್‌ಸ್ಟಿಕ್ ಮುಖಕ್ಕೆ ಹಚ್ಕೋದು ಸರಿ, ಆದರೆ, ಅದು ನಮ್ಮ ಬಾಯಿಗೆ ಎಷ್ಟು ಹತ್ತಿರ ಗೊತ್ತಾ? ನಾವು ಮಾತಾಡ್ತಾ, ತಿಂತಾ, ನಗುತ್ತಾ ಇದ್ದಾಗ ಸ್ವಲ್ಪ ಸ್ವಲ್ಪವೇ ಲಿಪ್‌ಸ್ಟಿಕ್ ಹೊಟ್ಟೆಗೇ ಹೋಗ್ಬಿಡುತ್ತೆ. ವಿಜ್ಞಾನದ ಲೆಕ್ಕಾಚಾರದ ಪ್ರಕಾರ, ಲಿಪ್‌ಸ್ಟಿಕ್ ಬಳಸುವವರು ತಮ್ಮ ಜೀವಮಾನದಲ್ಲಿ ತಮಗೆ ತಿಳಿಯದಂತೆ ಸುಮಾರು 3ರಿಂದ 4 ಕಿಲೋದಷ್ಟು ಲಿಪ್‌ಸ್ಟಿಕ್ಕನ್ನು ಹೊಟ್ಟೆಯೊಳಗೆ ಸೇರಿಸಿಕೊಂಡಿರ್ತಾರೆ!''

ನನ್ನ ಈ ಮಾತನ್ನು ಕೇಳಿ ಇಬ್ಬರೂ ಬೆಚ್ಚಿಬಿದ್ದರು! ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತಾ ಕೈಯಲ್ಲಿದ್ದ ಲಿಪ್‌ಸ್ಟಿಕ್ ಕಡೆಗೆ ಆತಂಕದಿಂದ ನೋಡಲಾರಂಭಿಸಿದರು.

ಮುಂದುವರಿದು ಹೇಳಿದೆ, ''ವಿಷಯ ಕೇವಲ ನುಂಗುವುದಷ್ಟೇ ಅಲ್ಲ, ಆ ಬಣ್ಣದ ಹಿಂದೆ ಅಡಗಿರುವ 'ಭಾರೀ ಲೋಹಗಳು' ಮತ್ತಷ್ಟು ಆಪತ್ತು ತರುತ್ತವೆ. ಕೆಲವು ಲಿಪ್‌ಸ್ಟಿಕ್‌ಗಳಲ್ಲಿ ಮುಖ್ಯವಾಗಿ ಅವುಗಳಿಗೆ ಆಕರ್ಷಕ ಬಣ್ಣ ಕೊಡಲು ಹಾಕುವ ವಸ್ತುಗಳಲ್ಲಿನ ಸೀಸ, ಕ್ಯಾಡ್ಮಿಯಂ, ಕ್ರೋಮಿಯಂ ಥರದ ಭಾರ ಲೋಹಗಳ ಸಣ್ಣ ಪ್ರಮಾಣ ಇರುತ್ತೆ. ಆದರಲ್ಲೂ ಸೀಸ ತುಂಬಾ ಅಪಾಯಕಾರಿ. ಆದಕ್ಕೆ 'ಸುರಕ್ಷಿತ ಪ್ರಮಾಣ' ಅನ್ನೋದೇ ಇಲ್ಲ! ಅದು ಎಷ್ಟು ಕಡಿಮೆ ಇದ್ದರೂ ದೇಹಕ್ಕೆ ಒಳ್ಳೆಯದಲ್ಲವೇ ಅಲ್ಲ. ಅದು ನಿಧಾನಕ್ಕೆ ದೇಹದಲ್ಲಿ ಸೇರಿಕೊಳ್ಳುತ್ತಾ ಹೋದರೆ ಮಕ್ಕಳ ಮಿದುಳಿನ ಬೆಳವಣಿಗೆ, ಕಲಿಯುವ ಶಕ್ತಿ ಮತ್ತು ಜ್ಞಾಪಕ ಶಕ್ತಿಯ ಮೇಲೆ ಗಂಭೀರ ಪರಿಣಾಮ ಬೀರಬಹುದು.''

''ಅಷ್ಟೊಂದು ಡೇಂಜರಾ ಪಪ್ಪಾ ಇದು? ಆದ್ರೆ, ಯೂಟ್ಯೂಬಲ್ಲಿ ದೊಡ್ಡವರೆಲ್ಲ ಹಚ್ಚಿಕೊಳ್ತಾರಲ್ಲ?,'' ಎಂದು ಹಿರಿಯ ಮಗಳು ಆತಂಕದಿಂದ ಕೇಳಿದಳು.

ನಾನು ಅವಳ ತಲೆ ಸವರಿ ಹೇಳಿದೆ, ''ಅಮ್ಮಾ, ದೊಡ್ಡವರ ಚರ್ಮ ಈ ಕೆಮಿಕಲ್‌ಗಳನ್ನು ತಡೆಯುವಷ್ಟು ಬಲಿಷ್ಠವಾಗಿರುತ್ತದೆ. ಆದರೆ, ನಿಮ್ಮಂಥ ಮಕ್ಕಳ ದೇಹ ಇನ್ನೂ ಬೆಳೀತಾ ಇದೆ. ನಿಮ್ಮ ಚರ್ಮ ತುಂಬಾ ತೆಳ್ಳಗಿದೆ, ಸೂಕ್ಷ್ಮವಾಗಿದೆ, ಯಾವುದೇ ರಾಸಾಯನಿಕವನ್ನು ದೊಡ್ಡವರಿಗಿಂತ ಬೇಗ ಮತ್ತು ಜಾಸ್ತಿ ಹೀರಿಕೊಳ್ಳುತ್ತೆ! ಆದರಲ್ಲೂ ಇವತ್ತು ಹತ್ತು- ಇಪ್ಪತ್ತು ರೂಪಾಯಿಗೆ ಸಿಗುವ ಅಗ್ಗದ ಲಿಪ್‌ಸ್ಟಿಕ್‌ಗಳಲ್ಲಿ ಕಳಪೆ ಗುಣಮಟ್ಟದ ಕೈಗಾರಿಕಾ ಬಣ್ಣಗಳು ಮತ್ತು ಹಾನಿಕಾರಕ ರಾಸಾಯನಿಕಗಳನ್ನೇ ಬಳಸಲಾಗುತ್ತದೆ. ಇದು ನಿಮ್ಮ ಕೋಮಲ ಚರ್ಮಕ್ಕೆ ದೊಡ್ಡ ಆಘಾತ.

ಹಾಗಾದ್ರೆ ಈಗ ದಾರಿ ಏನು?

ಮಕ್ಕಳು ಆತಂಕದಿಂದಲೇ ಕೇಳಿದವು.
ನಾನು ಹೀಗೆ ಹೇಳಿದೆ....

1. ಕಾಸ್ಮೆಟಿಕ್ಸನ್ನು ನಿಯಮಿತ ಬಳಸ್ಬೇಡಿ; ತುಟಿ ಒಣಗಿದ್ರೆ, ಬಣ್ಣದ ಲಿಪ್‌ಸ್ಟಿಕ್ ಬದಲು ಒಳ್ಳೆಯ ಪ್ಲೇನ್ ಲಿಪ್ ಬಾಮ್ ಬಳಸಿ.
2. ಬೀದಿಬದಿಯ ಅಗ್ಗದ, ಅನಧಿಕೃತ ಅಥವಾ ಅವಧಿ ಮುಗಿಯುವ ಹಂತದಲ್ಲಿರೋ ಯಾವುದೇ ಮೇಕಪ್ ವಸ್ತುಗಳನ್ನು ಖರೀದಿಸ್ಬೇಡಿ.
3. ಮೇಕಪ್ ಹಾಕಿಕೊಂಡರೆ ಕೆಲಸ ಮುಗಿದ ತಕ್ಷಣವೇ ಅದನ್ನು ತೆಗೆದುಹಾಕಿ, ಮುಖವನ್ನು ಚೆನ್ನಾಗಿ ತೊಳೆದುಬಿಡಿ.
4. ಮೇಕಪ್ ಹಾಕಿದರೆನೇ ಅಂದ ಅನ್ನೋ ಯೋಚನೆ ತಪ್ಪು, ನೀವು ಹಾಗೆ ತುಂಬಾ ಚೆಂದ ಇದ್ದೀರಾ ಎನ್ನುವ ಸತ್ಯ ಅರಿತುಕೊಳ್ಳಿ.

ಆರ್ಗ್ಯಾನಿಕ್ ಕಾಸ್ಮೆಟಿಕ್ಸ್!

''ಪಪ್ಪಾ... ಹಾಗಾದ್ರೆ ಕೆಮಿಕಲ್ ಇಲ್ಲದ ಆರ್ಗ್ಯಾನಿಕ್ ಲಿಪ್‌ಸ್ಟಿಕ್ ಅಥವಾ ಆರ್ಗ್ಯಾನಿಕ್ ಮೇಕಪ್ ವಸ್ತುಗಳನ್ನು ಹಚ್ಚಿದರೆ ಓಕೆನಾ?,'' ಎಂದು ಹಿರಿಯ ಮಗಳು ಮುಗ್ಧವಾಗಿ ಕೇಳಿದಳು.

ನಾನು ಅವಳ ಕೈಹಿಡಿದು ಸಮಾಧಾನವಾಗಿ ಹೇಳಿದೆ, ''ಅಮ್ಮಾ, ಆರ್ಗ್ಯಾನಿಕ್ ಅಥವಾ ನ್ಯಾಚುರಲ್ ಅಂದ ತಕ್ಷಣ ಅದು ಸಂಪೂರ್ಣ ಸುರಕ್ಷಿತ ಅಂತ ತಿಳಿಯೋದು ತಪ್ಪು. ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳ ಪ್ರಕಾರ, ಆರ್ಗ್ಯಾನಿಕ್ ಕಾಸ್ಮೆಟಿಕ್ಸ್ ಕೂಡ ಸಾಮಾನ್ಯ ಮೇಕಪ್ ವಸ್ತುಗಳಷ್ಟೇ ರಾಸಾಯನಿಕ, ಸೂಕ್ಷ್ಮಾಣು ಜೀವಿಗಳ ಸೋಂಕು ಮತ್ತು ಅಲರ್ಜಿಯ ಅಪಾಯಗಳನ್ನು ಹೊಂದಿರುತ್ತವೆ. ನೈಸರ್ಗಿಕ ಮೂಲದಿಂದ ಬಂದ ತಕ್ಷಣವೇ ಅದರಲ್ಲಿ ಯಾವುದೇ ಆಪತ್ತು ಇಲ್ಲ ಎಂದು ಗ್ಯಾರಂಟಿ ಕೊಡಲು ಬರುವುದಿಲ್ಲ.

ಇವೆಲ್ಲಕ್ಕಿಂತ ಮುಖ್ಯವಾಗಿ, ಸಮಸ್ಯೆ ಕೇವಲ ರಾಸಾಯನಿಕಗಳದ್ದಲ್ಲ, ನಮ್ಮ ಮನಸ್ಸಿನ ಆರೋಗ್ಯದ್ದು ಕೂಡ! ವಸ್ತು ಆರ್ಗ್ಯಾನಿಕ್ ಆಗಿದ್ದರೂ, ಇಷ್ಟು ಚಿಕ್ಕ ವಯಸ್ಸಿನಲ್ಲೇ ದಿನಾಲೂ ಮೇಕಪ್ ಮಾಡೋ ಅಭ್ಯಾಸ ಬೆಳೆದರೆ, ನಿಮ್ಗೆ ನಿಮ್ಮ ನೈಸರ್ಗಿಕ ಮುಖದ ಮೇಲೆಯೇ ಕೀಳರಿಮೆ ಮೂಡಲು ಶುರುವಾಗುತ್ತೆ. 'ನಾನು ಮೇಕಪ್ ಇಲ್ಲದೆ ಸುಂದರವಾಗಿ ಕಾಣ್ಸಲ್ಲ' ಅನ್ನೋ ಆತಂಕ ಕಾಡತೊಡಗುತ್ತೆ. ಕೊನೆಗೆ ಯಾವುದೇ ಮೇಕಪ್ ಇಲ್ಲದೆ ಹೊರಗೆ ಹೋಗಲು ಹಿಂಜರಿಯುವ ಒಂದು ರೀತಿಯ ದಾಸ್ಯಕ್ಕೆ ಒಳಗಾಗುತ್ತೀರಾ. ನಿಮ್ಮ ಮುಗ್ಧ ಮುಖದ ನೈಜ ಸೌಂದರ್ಯವೇ ಮಾಯವಾಗ್ಬಿಡುತ್ತೆ. ಮೊಬೈಲ್ ರೀಲ್ಸ್ ಮತ್ತು ಶಾರ್ಟ್ ವಿಡಿಯೋಗಳು ಮಕ್ಕಳಲ್ಲಿ ಈ ಮೇಕಪ್ ಗೀಳನ್ನು ಹೆಚ್ಚಿಸುತ್ತಿವೆ''. ಇದನ್ನೆಲ್ಲ ಕೇಳುತ್ತಾ ಮಕ್ಕಳು ಲಿಪ್‌ಸ್ಟಿಕ್ ಬದಿಗಿಟ್ಟವು.

ಬಣ್ಣದ ಹಿಂದೆ ಅಡಗಿವೆ ಭಾರಿ ಲೋಹಗಳು

ಮಾರುಕಟ್ಟೆಯಲ್ಲಿ ಕೇವಲ ಹತ್ತಿಪ್ಪತ್ತು ಅಥವಾ ಐವತ್ತು ರೂಪಾಯಿಗೆ ಸಿಗುವ ಅಗ್ಗದ ಲಿಪ್‌ಸ್ಟಿಕ್‌ಗಳು, ಕಾಡಿಗೆಗಳು ಮತ್ತು ಐ-ಶ್ಯಾಡೋಗಳು ಮಕ್ಕಳ ಬ್ಯಾಗ್ ಸೇರುತ್ತಿವೆ. ಇಷ್ಟೊಂದು ಕಡಿಮೆ ಬೆಲೆಗೆ ಇವುಗಳನ್ನು ತಯಾರಿಸಲು ಕಂಪನಿಗಳು ಬಳಸುವುದಾದರೂ ಏನನ್ನು? ಅತ್ಯಂತ ಕಳಪೆ ಗುಣಮಟ್ಟದ ಕೈಗಾರಿಕಾ ಡೈಗಳು ಮತ್ತು ಸೀಸ, ಕ್ಯಾಡ್ಮಿಯಂ, ಕ್ರೋಮಿಯಂ ಹಾಗೂ ಆರ್ಸೆನಿಕ್‌ನಂಥ ಅಪಾಯಕಾರಿ ಹೆವಿಮೆಟಲ್‌ಗಳನ್ನು ಇವುಗಳಲ್ಲಿ ಬಳಸಲಾಗುತ್ತದೆ.

ಲಿಪ್‌ಸ್ಟಿಕ್‌ನಲ್ಲಿನ ಸೀಸದ ಲೋಹ ನಾಲಿಗೆ ಮೂಲಕ ದೇಹ ಸೇರಿದರೆ ಅದು ರಕ್ತಹೀನತೆ ಮಾತ್ರವಲ್ಲದೆ, ಮಕ್ಕಳ ಮಿದುಳಿನ ಬೆಳವಣಿಗೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಇದು ಮಕ್ಕಳ ಜ್ಞಾಪಕ ಶಕ್ತಿ ಮತ್ತು ಬುದ್ಧಿವಂತಿಕೆಯನ್ನು ಕುಂಠಿತಗೊಳಿಸಬಹುದು. ಪಾಶ್ಚಿಮಾತ್ಯ ದೇಶಗಳಲ್ಲಿ ಮಕ್ಕಳು ಬಳಸುವ ಕಾಡಿಗೆಯಲ್ಲಿ ಸೀಸದ ಪ್ರಮಾಣ ಹೆಚ್ಚಿರುವುದನ್ನು ಪತ್ತೆಹಚ್ಚಿ, ಅದರಿಂದ ಮಕ್ಕಳಲ್ಲಿ 'ಲೆಡ್ ಪಾಯ್ಸನಿಂಗ್' ಆಗುತ್ತಿರುವುದನ್ನು ವೈಜ್ಞಾನಿಕವಾಗಿ ಸಾಬೀತುಪಡಿಸಿದ್ದಾರೆ.

ಪೋಷಕರೇ, ನಮ್ಮ ಜವಾಬ್ದಾರಿ ಏನು?

- **ಸಂವಹನ ನಡೆಸಿ:** ಮಕ್ಕಳನ್ನು ಬೈದು ಮೇಕಪ್ ಕಿಟ್‌ಗಳನ್ನು ಕಿತ್ತುಕೊಳ್ಳಬೇಡಿ. ಅದರ ಬದಲಿಗೆ ಅದರಲ್ಲಿರುವ ಸೈನ್ಸ್ ಮತ್ತು ಹಾನಿಕಾರಕ ಅಂಶಗಳ ಬಗ್ಗೆ ಸ್ನೇಹಪೂರ್ವಕವಾಗಿ ಮಾತನಾಡಿ.
- **ನೈಜ ಸೌಂದರ್ಯ ಗೌರವಿಸಿ:** ''ನೀನು ಮೇಕಪ್ ಇಲ್ಲದೆಯೇ ತುಂಬಾ ಮುದ್ದಾಗಿ ಕಾಣಿಸುತ್ತೀಯಾ,'' ಎಂದು ಮಕ್ಕಳ ನೈಸರ್ಗಿಕ ರೂಪವನ್ನು ಪ್ರಶಂಸಿಸಿ.
- **ಜಾಲತಾಣಗಳ ಮೇಲೆ ನಿಗಾ ಇರಲಿ:** ಇಂಟರ್ನೆಟ್‌ನ ಸುಳ್ಳು ಜಗತ್ತಿನ 'ಫಿಲ್ಟರ್' ಮತ್ತು 'ಮೇಕಪ್ ಸಂಸ್ಕೃತಿ'ಯೇ ಅಂತಿಮವಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಿ.
- **ನೈಜ ಸೌಂದರ್ಯ:** ಮಕ್ಕಳ ಮುಗ್ಧ ನಗು ಮತ್ತು ಆರೋಗ್ಯವೇ ಅವರ ನೈಜ ಸೌಂದರ್ಯ. ಕಾಸ್ಮೆಟಿಕ್ ಬಣ್ಣಗಳ ಕೃತಕ ಹೊಳಪಿಗಿಂತ, ಅವರಲ್ಲಿ ನೈಸರ್ಗಿಕ ಆತ್ಮವಿಶ್ವಾಸದ ಬೆಳಕು ಮೂಡುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ.

ನಮ್ಮಲ್ಲೂ 'ಮೇಕಪ್ ಮುಕ್ತ ಕ್ಯಾಂಪಸ್' ಏಕೆ ಬೇಕು?

- ಶಾಲಾ ಅವಧಿಯಲ್ಲಿ ಲಿಪ್‌ಸ್ಟಿಕ್, ಫೌಂಡೇಷನ್‌ನಂಥ ಕೃತಕ ಕಾಸ್ಮೆಟಿಕ್ಸ್ ಬಳಕೆಯನ್ನು ನಿಷೇಧಿಸುವುದೇ ಒಳಿತು. ಕೇವಲ ಸಾದಾ ಲಿಪ್ ಬಾಮ್ ಅಥವಾ ಮಾಯಿಶ್ಚರೈಸರ್‌ಗೆ ಮಾತ್ರ ಅವಕಾಶ ನೀಡುವುದು ಸೂಕ್ತ.
- ನಿಯಮ ಉಲ್ಲಂಘಿಸುವ ಮಕ್ಕಳನ್ನು ಬಯ್ಯುವ ಬದಲು, ಕಳಪೆ ಗುಣಮಟ್ಟದ ಸೌಂದರ್ಯವರ್ಧಕಗಳಿಂದ ಚರ್ಮ ಮತ್ತು ಆರೋಗ್ಯದ ಮೇಲಾಗುವ ಕೆಟ್ಟ ಪರಿಣಾಮಗಳ ಬಗ್ಗೆ ಶಿಕ್ಷಕರು ಪ್ರೀತಿಯಿಂದ ತಿಳಿಹೇಳುವುದು.
- ಶಾಲಾ ಫ್ಯಾನ್ಸಿಡ್ರೆಸ್ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಕೃತಕ ಮೇಕಪ್‌ಗಿಂತ ನೈಸರ್ಗಿಕ ಪ್ರತಿಭೆ ಮತ್ತು ಮುಗ್ಧತೆಗೆ ಹೆಚ್ಚಿನ ಆದ್ಯತೆ ಹಾಗೂ ಅಂಕಗಳನ್ನು ನೀಡುವುದು.
- ಎಐನ 'ಫಿಲ್ಟರ್ ಸಂಸ್ಕೃತಿ' ಮತ್ತು ರೀಲ್ಸ್ ಗೀಳಿನಿಂದ ಮಕ್ಕಳಲ್ಲಿ ಮೂಡುತ್ತಿರುವ ಕೀಳರಿಮೆಯ ಬಗ್ಗೆ ಪೋಷಕರ ಸಭೆಗಳಲ್ಲಿ ಚರ್ಚಿಸಿ, ಜಾಗೃತಿ ಮೂಡಿಸುವುದು.

ಕೋಟ್ಯಂತರ ಬಳಕೆಯ ಟೆಲಿಗ್ರಾಂ ಹಿಂದಿರೋದು ನೂರೇ ಮಂದಿ!

ನೀರು ಕೊಂಡೊಯ್ಯುವುದಕ್ಕೆ ಇನ್ನು ಬಾಟಲ್ ಬೇಕಿಲ್ಲ, ಜಾಕೆಟ್ ಸಾಕು, ನೂರು ಕೋಟಿ ಜನರನ್ನು ಬ್ಯುಸಿಯಾಗಿ ಇಡುವುದಕ್ಕೆ ಕೆಲಸ ಮಾಡುತ್ತಿರುವುದು ನೂರೇ ಜನ! ಸಹಾಯಕ್ಕೆ ಬಂದ ರಷ್ಯನ್ನರಿಗೆ 'ನೀವು ಸುಮ್ನಿದ್ರೆ ಸಾಕಪ್ಪ' ಎಂದಿದೆ ನಾಸಾ.

ಟೆಕ್ಕೋಪನಿಷತ್

ಧೀರಜ್ ಪೊಯ್ಯೆಕಂಡ

ನೀರು ಕುಡಿಸುವ ಜಾಕೆಟ್

ಅಮೆರಿಕದ 'ಯೂನಿವರ್ಸಿಟಿ ಆಫ್ ಟೆಕ್ಸಾಸ್ ಅಟ್ ಆಸ್ಟಿನ್' ಎಂಜಿನಿಯರ್‌ಗಳು ಗಾಳಿಯಲ್ಲಿರುವ ತೇವಾಂಶವನ್ನು ಹೀರಿಕೊಂಡು, ಅದನ್ನು ನೇರವಾಗಿ ಕುಡಿಯುವ ನೀರನ್ನಾಗಿ ಪರಿವರ್ತಿಸುವ ವಿಶೇಷವಾದ ಜಾಕೆಟ್ ಅಭಿವೃದ್ಧಿಪಡಿಸಿದ್ದಾರೆ.

ಸಾಮಾನ್ಯವಾಗಿ ಗಾಳಿಯಿಂದ ತೇವಾಂಶವನ್ನು ಹೀರಿಕೊಂಡು ಕುಡಿಯುವ ನೀರನ್ನಾಗಿ ಪರಿವರ್ತಿಸುವ ಸಾಧನಗಳು ದೊಡ್ಡಗಿರುತ್ತವೆ. ಅವುಗಳನ್ನು ಒಂದೇ ಕಡೆ ಸ್ಥಾಪಿಸುವುದರಿಂದ ಹೊತ್ತುಕೊಂಡು ಹೋಗುವುದೂ ಅಸಾಧ್ಯ. ಆದರೆ, ಈಗ ವಿಜ್ಞಾನಿಗಳು ಈ ತಂತ್ರಜ್ಞಾನವನ್ನು ಧರಿಸಬಹುದಾದ ಬಟ್ಟೆಯ ರೂಪಕ್ಕೆ ತಂದಿದ್ದಾರೆ. ಈ ಜಾಕೆಟ್‌ನಲ್ಲಿ ಬಳಸಲಾಗಿರುವ ವಿಶೇಷ ಜೈವಿಕ ಹೈಡ್ರೋಜೆಲ್ ಫ್ಯಾಬ್ರಿಕ್ ಗಾಳಿಯಲ್ಲಿರುವ ತೇವಾಂಶವನ್ನು ತ್ವರಿತವಾಗಿ ಹೀರಿಕೊಳ್ಳುತ್ತದೆ. ನಂತರ ಇದರಲ್ಲಿರುವ ಕಳಚಬಹುದಾದ ಭಾಗಗಳನ್ನು ಬಿಸಿ ಮಾಡಿದಾಗ ಅದು ತೇವಾಂಶವನ್ನು ಶುದ್ಧ ಕುಡಿವ ನೀರಾಗಿ ಪರಿವರ್ತಿಸುತ್ತದೆ. ಈ ಜಾಕೆಟ್ ದಿನಕ್ಕೆ ಸುಮಾರು 400ರಿಂದ 900 ಮಿ.ಲೀ.ನಷ್ಟು ಶುದ್ಧ ಕುಡಿವ ನೀರನ್ನು ಉತ್ಪಾದಿಸುತ್ತದೆ. ಚಾರಣಿಗರು, ದುರ್ಗಮ ಪ್ರದೇಶಗಳಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿರುವ ಸೈನಿಕರು, ಕಾರ್ಮಿಕರು, ನೀರಿನ ಅಭಾವವಿರುವ ಮರುಭೂಮಿಯ ಜನರಿಗೆ ಈ ಜಾಕೆಟ್ ಬಹಳ ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿ ಈ ತಂತ್ರಜ್ಞಾನವನ್ನು ಬ್ಯಾಕ್‌ಪ್ಯಾಕ್, ಟೆಂಟ್‌ಗಳಿಗೂ ಅಳವಡಿಸುವ ಬಗ್ಗೆ ಎಂಜಿನಿಯರ್‌ಗಳು ಯೋಚಿಸುತ್ತಿದ್ದಾರೆ.

ಚಟಾಕಿ: ಸ್ವಲ್ಪ ಟ್ರೈ ಮಾಡಿ ಗಾಳಿಯಿಂದ ನೀರನ್ನು ತೆಗೆಯುವಂಥ ಲೋಟವನ್ನೇ ಕಂಡುಹಿಡಿಯಬಹುದಿತ್ತೇನೋ!

ಅಲ್ಲಿರುವುದು ನೂರೇ ಜನ!

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯನ್ನು ತಡೆಗಟ್ಟುವುದಕ್ಕಾಗಿ ಕೇಂದ್ರ ಸರಕಾರ ಟೆಲಿಗ್ರಾಂ ಮೇಲೆ ಜೂನ್ 22ರವರೆಗೆ ನಿಷೇಧ ಹೇರಿದೆ. ಸರಕಾರವನ್ನೇ ಕಂಗೆಡಿಸಿರುವ ಈ ಟೆಲಿಗ್ರಾಂಗೆ ಭಾರತದಲ್ಲಿ ಅಂದಾಜು 15 ಕೋಟಿ ಬಳಕೆದಾರರಿದ್ದಾರೆ. ಇವರಲ್ಲಿ 10 ಕೋಟಿ ಮಂದಿ ಪ್ರತಿದಿನ ಟೆಲಿಗ್ರಾಂ ಬಳಸುತ್ತಾರೆ. ಜಾಗತಿಕವಾಗಿ ಈ ಆ್ಯಪ್ ಬಳಸುವವರ ಸಂಖ್ಯೆ ಸುಮಾರು ನೂರು ಕೋಟಿ. ಇದರಲ್ಲಿ ಸಿಂಹಪಾಲು ಭಾರತೀಯರದ್ದು. ಜಗತ್ತಿನ ನಂಬರ್ ಒನ್ ಮೆಸೇಜಿಂಗ್ ಆ್ಯಪ್ ಆಗಿರುವ ವಾಟ್ಸ್ಯಾಪ್‌ನಲ್ಲಿ ಇಲ್ಲದೇ ಇರುವ ಅತ್ಯದ್ಭುತ ಫೀಚರ್‌ಗಳೆಲ್ಲಾ ಟೆಲಿಗ್ರಾಂನಲ್ಲಿ ಇರುವುದರಿಂದ ನಮ್ಮ ಜನ ಮೆಸೇಜ್ ಬಿಟ್ಟು ಉಳಿದೆಲ್ಲಾ ಕೆಲಸಗಳಿಗೆ ಟೆಲಿಗ್ರಾಮನ್ನು ಬಳಸುತ್ತಾರೆ!

ಹೀಗೆ ಕೋಟ್ಯಂತರ ಜನರು ಬಳಸುತ್ತಿರುವ ಈ ಟೆಲಿಗ್ರಾಂ ಆ್ಯಪ್‌ನ ಹಿಂದೆ ಎಷ್ಟೊಂದು ಜನ ಕೆಲಸ ಮಾಡುತ್ತಿರಬಹುದು ಎಂದು ಒಮ್ಮೆ ಯೋಚಿಸಿ. ನಿಮ್ಮ ಯೋಚನೆಯಲ್ಲಿ ಬರುವ ಅಂಕಿಗಳೆಲ್ಲ ಸಾವಿರ ಮೇಲೆ ಇರುವುದಂತು ಖಂಡಿತ. ಆದರೆ, ಅಚ್ಚರಿಯ ವಿಚಾರವೆಂದರೆ ಜಗತ್ತಿನ ಅತ್ಯಂತ ಜನಪ್ರಿಯ ಆ್ಯಪ್‌ಗಳಲ್ಲಿ ಒಂದಾದ ಟೆಲಿಗ್ರಾಂನ ಉದ್ಯೋಗಿಗಳ ಸಂಖ್ಯೆ ಕೇವಲ ನೂರು!

ಹೌದು, ಮಾಹಿತಿಗಳ ಪ್ರಕಾರ ಟೆಲಿಗ್ರಾಂನಲ್ಲಿ ಮೂವತ್ತರಿಂದ ನಲ್ವತ್ತರಷ್ಟು ಕೋರ್ ಎಂಜಿನಿಯರ್‌ಗಳಿದ್ದು, ಒಟ್ಟು ಉದ್ಯೋಗಿಗಳ ಸಂಖ್ಯೆ ನೂರರಷ್ಟಿದೆ. ಸಿಇಒ ಪಾವೆಲ್ ದುರೋವ್ ಪ್ರಾಡಕ್ಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ದುಬೈನಲ್ಲಿ ಹೆಸರಿಗಷ್ಟೇ ಆಫೀಸ್ ಇಟ್ಟುಕೊಂಡಿರುವ ಟೆಲಿಗ್ರಾಂ, ಸರಕಾರಿ ಹಸ್ತಕ್ಷೇಪ ಹಾಗೂ ರಾಜಕೀಯ ಲಾಬಿಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ತನ್ನ ಕಾರ್ಯಾಚರಣೆಯ ಸ್ಥಳಗಳನ್ನು ರಹಸ್ಯವಾಗಿಟ್ಟಿದೆ. ಕೆಲಸ ಮಾಡುತ್ತಿರುವ ಉದ್ಯೋಗಿಗಳು ಪ್ರಪಂಚದ ವಿವಿಧ ದೇಶಗಳಲ್ಲಿ 'ವರ್ಕ್ ಫ್ರಂ ನೋವೇರ್' ಮಾಡುತ್ತಿದ್ದಾರೆ.

ಚಟಾಕಿ: ಸರಕಾರಿ ಕಚೇರಿಯಲ್ಲಿ ಕಾಣೆಯಾದ ಫೈಲ್ ಹುಡುಕುವುದಕ್ಕೇ ನೂರಕ್ಕಿಂತ ಹೆಚ್ಚು ಜನ ಬೇಕು!

ಸೋರಿಕೆ ಇಲ್ಲಷ್ಟೇ ಅಲ್ಲ, ಆಕಾಶದಲ್ಲೂ



ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 2019ರಿಂದ ಗಾಳಿ ಸೋರಿಕೆ ಒಂದು ಸಮಸ್ಯೆಯಾಗಿಬಿಟ್ಟಿದೆ. ರಷ್ಯಾದ ಮಾಡ್ಯುಲನ್ನು ಡಾಕಿಂಗ್ ಪೋರ್ಟ್‌ಗೆ ಸಂಪರ್ಕಿಸುವ ಟನಲ್‌ನ ಜಾಗದಲ್ಲಿ ಗಾಳಿ ಸೋರಿಕೆಯಾಗುತ್ತಿದೆ. ಸುದೀರ್ಘ ಕಾಲದ ಬಳಕೆಯಿಂದಾಗಿ ಅಲ್ಲಿ ಒಂದಷ್ಟು ಸಣ್ಣ ಸಣ್ಣ ಬಿರುಕುಗಳೂ ಮೂಡಿವೆ. ಇದು ದೊಡ್ಡದಾದರೆ ಇಡೀ ನಿಲ್ದಾಣವೇ ಬಾಹ್ಯಾಕಾಶದ ಕತ್ತಲಲ್ಲಿ ಚೆದುರಿಹೋಗಬಹುದು. ಹಾಗಾಗಿ, ಮೊನ್ನೆ ಅಂದರೆ ಜೂನ್ 4 ಮತ್ತು 5ರಂದು ಈ ಸೋರಿಕೆಯನ್ನು ಸರಿಪಡಿಸಲು ರಷ್ಯಾದ ಬಾಹ್ಯಾಕಾಶ ಸಂಸ್ಥೆ ಅತ್ಯಂತ ಅಪಾಯಕಾರಿ ಕೆಲಸಕ್ಕೆ ಮುಂದಾಗಿತ್ತು. ಬಿರುಕನ್ನು ಸರಿಪಡಿಸಬೇಕಾಗದೆ ಡ್ರಿಲ್ಲಿಂಗ್ ಮಷಿನ್ ಮತ್ತು ಗರಸಗಸ ಬಳಸಬೇಕು ಎಂದು ರಷ್ಯಾ ಹೇಳಿತು. ಆದರೆ, ರಿಪೇರಿ ಆಗುವವರೆಗೆ ಆಚೆಗಿರುತ್ತೇವೆ ಎನ್ನಲು ಐಎಸ್‌ಎಸ್ ಇರುವುದು ಬಾಹ್ಯಾಕಾಶದಲ್ಲಿರುವ ನಿಲ್ದಾಣವೇ ಹೊರತು, ಹೈವೇ ಪಕ್ಕದಲ್ಲಿರುವ ನಿಲ್ದಾಣವಲ್ಲ. ಹಾಗಾಗಿ, ರಷ್ಯಾದ ಯೋಜನೆ ಕೇಳಿ ನಾಸಾ ಬೆಚ್ಚಿಬಿದ್ದಿತ್ತು. ಕೂಡಲೇ ತನ್ನ ಐವರು ಗಗನಯಾತ್ರಿಗಳಿಗೆ ಸ್ಪೇಸ್ ಎಕ್ಸ್‌ನ ಡ್ರಾಗನ್ ಕ್ಯಾಪ್ಸೂಲ್‌ನ ಒಳಗೆ ಸೇರಿಕೊಳ್ಳಿ ಎಂದು ಆದೇಶಿಸಿತು. ಆದರೆ, ರಷ್ಯಾದ ರಿಪೇರಿ ಕೆಲಸ ಇಡೀ ಬಾಹ್ಯಾಕಾಶ ನಿಲ್ದಾಣವನ್ನೇ ಅಪಾಯಕ್ಕೆ ತಳ್ಳುವ ಸಾಧ್ಯತೆ ಇರುವುದರಿಂದ ನಾಸಾ 'ನೋ ಥ್ಯಾಂಕ್ಸ್' ಎಂದಿದೆ. ಪರಿಣಾಮವಾಗಿ ರಷ್ಯಾ ತನ್ನ ಐಡಿಯಾವನ್ನು ಕೈಬಿಟ್ಟು ಲೀಕ್ ಆಗುತ್ತಿದ್ದ ಟನಲ್ ಅನ್ನೇ ಸಂಪೂರ್ಣವಾಗಿ ಬಂದ್ ಮಾಡುವುದಕ್ಕೆ ಒಪ್ಪಿಕೊಂಡಿದೆ.

ಚಟಾಕಿ: 'ಸೋರಿಕೆ'ಯನ್ನು ನೀಟಾಗಿ ತಡೆಯುವುದೇ ಸದ್ಯದ ದೊಡ್ಡ ಸಮಸ್ಯೆ. ಅದೂ ದೊಡ್ಡ 'ಪರೀಕ್ಷೆ'!

dheeraj.d@timesofindia.com

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. **ಕಚೇರಿ ವಿಳಾಸ:-** ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 170
ಶನಿವಾರ,20 ಜೂನ್ 2026 | ಪುಟಗಳು: 20+4+4 | ಬೆಲೆ: ₹ 5.00

VK ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ತಡೆರಹಿತ ಪಾಸ್‌ಪೋರ್ಟ್ ಸೇವೆ ವಿಕಸಿತ ಭಾರತಕ್ಕೆ ಚಾಲಕ ಶಕ್ತಿಯಾಗಿದೆ: ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್

ಬಲರಾಮನ ದಿನಗಳು
ಕಥೆಯಲ್ಲ ಮಹಾಕಾವ್ಯ!
»ಲವಲVK ನೋಡಿ

ಆತ್ಮಹತ್ಯೆಗೆ ಶರಣಾದ ನೀಟ್ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ 1 ಕೋಟಿ ರೂ. ಪರಿಹಾರ ನೀಡಿ: ಪಿಎಂಗೆ ಸಿಜೆಪಿ ಪತ್ರ

Bennett & Coleman THE TIMES OF INDIA

ಸಂಪಾದಕೀಯ EDITORIAL

ನಿರ್ಭೀತ ನಡಿಗೆಯೇ ಅಭಿವೃದ್ಧಿ

ಪಾದಚಾರಿ ಮಾರ್ಗಗಳು ಕಣ್ಮರೆಯಾಗದಿರಲಿ

ಪಾದಚಾರಿ ಮಾರ್ಗವಿಲ್ಲದ ರಸ್ತೆಯಲ್ಲಿ ತಂದೆಯೊಡನೆ ಹೊರಟಿದ್ದ ಐದು ವರ್ಷದ ಬಾಲಕನೊಬ್ಬ ಟ್ರಕ್‌ಗೆ ಬಲಿಯಾದ ಕರುಣಾಜನಕ ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ''ಗುರುತಿಸಲಾದ ಪಾದಚಾರಿ ಮಾರ್ಗದಲ್ಲಿ ನಡೆಯುವುದು ಸಂವಿಧಾನದ ವಿಧಿ 19 ಮತ್ತು 21ರ ಅಡಿಯಲ್ಲಿ ರಕ್ಷಿಸಲಾದ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು'' ಎಂದು ಅತ್ಯಂತ ಸ್ಪಷ್ಟವಾಗಿ ತಿಳಿಹೇಳಿದೆ. ವಾಹನಗಳ ಭರಾಟೆಯಲ್ಲಿ ಮನುಷ್ಯನ ಜೀವಕ್ಕೆ, ಆತನ ಹೆಜ್ಜೆಗೆ ಬೆಲೆಯೇ ಇಲ್ಲದಂತಾಗಿರುವ ಇಂದಿನ ನಗರ ಯೋಜನೆಗಳ ಕರಾಳ ಮುಖವನ್ನು ನ್ಯಾಯಪೀಠವು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸಿದೆ. ಎಲ್ಲಿ ರಸ್ತೆ ಇರುತ್ತದೆಯೋ, ಅಲ್ಲಿ ಪಾದಚಾರಿ ಮಾರ್ಗ ಇರಲೇಬೇಕು; ಅದನ್ನು ನಿರ್ಮಿಸಿ, ನಿರ್ವಹಿಸಿ, ಜನರ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡುವುದು ಸ್ಥಳೀಯ ಆಡಳಿತಗಳ ಕಡ್ಡಾಯ ಜವಾಬ್ದಾರಿ ಎಂದು ನ್ಯಾಯಾಲಯ ಎಚ್ಚರಿಸಿದೆ. ಇಂದಿನ ನಗರಾಭಿವೃದ್ಧಿ ಎಂದರೆ ಕೇವಲ ಫ್ಲೈಓವರ್‌ಗಳು, ಅಂಡರ್‌ಪಾಸ್‌ಗಳ ನಿರ್ಮಾಣ ಎಂಬ ಭ್ರಮೆಗೆ ಆಡಳಿತ ವ್ಯವಸ್ಥೆ ಸಿಲುಕಿರುವುದರಿಂದ, ರಸ್ತೆ ಅಗಲೀಕರಣದ ನೆಪದಲ್ಲಿ ಮೊದಲ ಬಲಿಯಾಗುತ್ತಿರುವುದೇ ಪಾದಚಾರಿ ಮಾರ್ಗಗಳು ಎಂಬಂಥ ಸ್ಥಿತಿ ದೇಶದುದ್ದಗಲವಿದೆ.

ಈಗಿನ ನಗರಗಳ ದುಸ್ಥಿತಿಯನ್ನು ನೋಡಿದಾಗ, ಶತಮಾನದ ಹಿಂದಿನ ನಮ್ಮದೇ ನೆಲದ ದೂರದೃಷ್ಟಿಯ ನಾಯಕರು ನೆನಪಾಗುತ್ತಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರಿನಲ್ಲಿ 100 ಅಡಿ ಅಗಲದ ರಸ್ತೆಗಳನ್ನು ನಿರ್ಮಿಸುವಾಗಲೇ, ವಾಹನಗಳಿಗಿಂತ ಮನುಷ್ಯನಿಗೆ ಹೆಚ್ಚಿನ ಆದ್ಯತೆ ನೀಡಿ, ಪಾದಚಾರಿಗಳಿಗಾಗಿ ಅತ್ಯಂತ ವಿಶಾಲವಾದ ಪಥವನ್ನು ರೂಪಿಸಿದ್ದರು. ಆದರೆ, ಆ ಕಾಲದ ಆಡಳಿತಗಾರರಿಗಿದ್ದ ಜನಪರ ಕಾಳಜಿಯನ್ನು ಇಂದಿನ ವ್ಯವಸ್ಥೆ ಮರೆತಂತಿದೆ. ವಾಹನ ದಟ್ಟಣೆ ಕಡಿಮೆ ಮಾಡುವ ನೆಪದಲ್ಲಿ ಉಳಿದುಕೊಂಡಿರುವ ಪುಟ್ಟ ಪಾದಚಾರಿ ಮಾರ್ಗಗಳೂ ಅತಿಕ್ರಮಣಕ್ಕೋ ಅಥವಾ ಒತ್ತುವರಿಗೋ ಬಲಿಯಾಗಿವೆ. ಪರಿಣಾಮವಾಗಿ, ಮಕ್ಕಳು, ವೃದ್ಧರು, ಗರ್ಭಿಣಿಯರು ರಸ್ತೆಯ ಬದಿಯಲ್ಲಿ ಜೀವ ಕೈಯಲ್ಲಿ ಹಿಡಿದು ವಾಹನಗಳ ನಡುವೆಯೇ ನಡೆಯುವಂಥ ಭಯಾನಕ ಪರಿಸ್ಥಿತಿ ನಿರ್ಮಾಣವಾಗಿದೆ. ನಾಗರಿಕರಿಗೆ ನೆಮ್ಮದಿಯಿಂದ ಕಾಲಿಡಲು ಜಾಗ ನೀಡದಿರುವುದು ಆಡಳಿತ ಯಂತ್ರದ ಅಮಾನವೀಯತೆಗೆ ಸಾಕ್ಷಿಯಾಗಿದೆ.

ಪಾದಚಾರಿ ಮಾರ್ಗಗಳಿಲ್ಲದ ರಸ್ತೆಯಲ್ಲಿ ಅಪಘಾತ ಸಂಭವಿಸಿದರೆ ಅಥವಾ ಮೂಲಭೂತ ಹಕ್ಕಿನ ಉಲ್ಲಂಘನೆಯಾದರೆ, ಅದಕ್ಕೆ ನೇರವಾಗಿ ಸ್ಥಳೀಯ ಆಡಳಿತದ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ ಮತ್ತು ಅವರಿಂದಲೇ ಪರಿಹಾರ ವಸೂಲಿ ಮಾಡಬಹುದು ಎಂಬ ಸುಪ್ರೀಂ ಕೋರ್ಟ್‌ನ ನಿಲುವು ನಿಜಕ್ಕೂ ನ್ಯಾಯಯುತ. ನಗರಗಳು ಇರುವುದು ಮನುಷ್ಯರ ಬದುಕಿಗಾಗಿ ಮತ್ತು ಅವರ ಸುರಕ್ಷಿತ ಓಡಾಟಕ್ಕಾಗಿಯೇ ಹೊರತು, ಕೇವಲ ಯಂತ್ರಗಳ ಓಟಕ್ಕಲ್ಲ ಎಂಬ ಕಣ್ತೆರೆಸುವ ಸಂಗತಿಯನ್ನು ಈ ತೀರ್ಪು ಎತ್ತಿ ಹಿಡಿದಿದೆ. ಈ ಸಂದರ್ಭದಲ್ಲಿ ಸಾಹಿತಿ ಡಾ. ಯು.ಆರ್. ಅನಂತಮೂರ್ತಿಯವರು ಒಮ್ಮೆ ಸುಸ್ಥಿರ ಅಭಿವೃದ್ಧಿಯ ಕುರಿತು ಆಡಿದ ಮಾತೊಂದು ನೆನಪಾಗುತಿದೆ: ''ಅಭಿವೃದ್ಧಿಯೆಂದರೆ ಗಂಟೆಗೆ ನೂರಾರು ಕಿ.ಮೀ. ವೇಗದಲ್ಲಿ ಚಲಿಸುವ ರಸ್ತೆಗಳನ್ನು ನಿರ್ಮಿಸುವುದಲ್ಲ; ಯಾವ ನಗರದ ಮಾರ್ಗದಲ್ಲಿ ಪಾದಚಾರಿ ನಿರ್ಭೀತನಾಗಿ ನಡೆಯುತ್ತಾನೋ, ಅದೇ ನೈಜ ಅಭಿವೃದ್ಧಿ''! ಈ ಮಾತು ಪ್ರಸ್ತುತವಾಗುವುದು ಎಂದು? ಕಡೇಪಕ್ಷ ಸುಪ್ರೀಂ ಕೋರ್ಟ್ ಈಗ ಬೀಸಿದ ಚಾಟಿಯಿಂದಲಾದರೂ ಆಡಳಿತ ವ್ಯವಸ್ಥೆ ಎಚ್ಚೆತ್ತುಕೊಂಡು, ಮನುಷ್ಯನ ನಿರ್ಭೀತ ಹೆಜ್ಜೆಗೆ ಬೆಲೆ ಕೊಡುವ ಮೂಲಕ ನೈಜ ಅಭಿವೃದ್ಧಿಯತ್ತ ಮುಖ ಮಾಡಬೇಕಿದೆ.

ಬೋಧಿ ವೃಕ್ಷ

ಹಣತೆ ಬೇರೆಯಾದರೂ ಬೆಳಗುವ ಜ್ಯೋತಿ ಒಂದೇ



ಈ ಜಗತ್ತು ಕತ್ತಲೆ ಬೆಳಕು ಸಿಹಿ- ಕಹಿ, ಪಾಪ- ಪುಣ್ಯ, ಒಳಿತು- ಕೆಡಕುಗಳ ಸಮ್ಮಿಶ್ರಣ. ಮನುಷ್ಯ ಎಷ್ಟೇ ಒಳಿತಾದ ವಸ್ತು ತೆಗೆದುಕೊಂಡರೂ ಅದರಲ್ಲಿ ಸ್ವಲ್ಪವಾದರೂ ಕೆಡಕು ಇದ್ದೇ ಇರುತ್ತದೆ. ಆದರೆ, ಮನುಷ್ಯನು ಹೆಚ್ಚಾಗಿ ಕಾಣುವುದು ಒಳಿತನ್ನಲ್ಲ, ಕೆಡುಕನ್ನೇ ಕಾಣುತ್ತಾನೆಂಬ ಮಾತು ಸತ್ಯ. ಹಣತೆ ಚಿನ್ನದ್ದಾದರೇನು, ಮಣ್ಣಿನದಾದರೇನು... ಅದರಲ್ಲಿ ಬೆಳಗುವ ಜ್ಯೋತಿ ಒಂದೇಯಾಗಿರುತ್ತದೆ. ರಾಜ ರೈತರಲ್ಲಿ, ಬಡವ ಬಲ್ಲಿದರಲ್ಲಿ ಇರುವ ಪ್ರಾಣ ಜ್ಯೋತಿ ಒಂದೇ. ಮಣ್ಣಿನ ಹಣತೆಯಲ್ಲಿರುವ ಜ್ಯೋತಿ ನಾ ಬಡವನೆಂದು ಕೊರಗದು. ಚಿನ್ನದ ಹಣತೆಯಲ್ಲಿರುವ ಜ್ಯೋತಿ 'ನಾ ಸಿರಿವಂತ' ಎಂದು ಬೀಗಲಾರದು. ಹಣತೆಯಲ್ಲಿರುವ ಎಣ್ಣೆ ಇರುವವರೆಗೆ ಎರಡೂ ಜ್ಯೋತಿ ಒಂದೇ ಕಳೆಯಿಂದ ತೇಜಪುಂಜದಿಂದ ಬೆಳಗುತ್ತವೆ. ಮಾನವ ಜೀವನವೆಂಬ ಜ್ಯೋತಿಯು ಎಂಥ ಕಠಿಣ ಪ್ರಸಂಗದಲ್ಲಿಯೂ ಸಹ ಉತ್ಸಾಹದಿಂದ ಬಾಳುವುದನ್ನು ಮರೆಯಬಾರದು. ಬಂಗಾರದ ಆಭರಣಕ್ಕೆ ಬೆಲೆ ಬಹಳ ಆದರೆ ಆಕರ್ಷಣೆ ಕಡಿಮೆ.

ಬಂಗಾರದಂಥ ಬಣ್ಣದಲ್ಲಿ ಮಾಡಿದ ನಕಲಿ ಆಭರಣಕ್ಕೆ ಬೆಲೆ ಕಡಿಮೆ ಆದರೆ ಆಕರ್ಷಣೆ ಬಹಳ. ಆಕರ್ಷಣೆಗೆ ಮನಸೋತವರು ಹೊರಗೆ ಸಿರಿವಂತನಾದರೂ ಒಳಗೆ ಬಡವರು. ಬಡವರಾಗಿದ್ದರೂ ಹೃದಯ ಸಿರಿವಂತರಾಗಲು ಪ್ರಯತ್ನಿಸಬೇಕು. ಪ್ಲಾಸ್ಟಿಕ್ ಹೂ ಎಂದಿಗೂ ಬಾಡದು. ಸದಾ ಅರಳಿದಂತೆಯೇ ಇರುತ್ತದೆ. ನೈಜ ಹೂವಿಗಿಂತ ಸುಂದರ ಬಲು ಆಕರ್ಷಕ. ಆದರೊಳಗೆ ಯಾವುದೇ ಸುಗಂಧ ಮಕರಂದ ಇರುವುದಿಲ್ಲ, ಅಂದೇ ಹುಟ್ಟಿ ಅಂದೇ ಬಾಡುವ ನೈಜ ಹೂವಿನ ಸಿರಿಯೇ ಬೇರೆ. ಪ್ಲಾಸ್ಟಿಕ್ ಹೂ ಆಡಂಬರದ ಸಂಕೇತವಾದರೆ ನೈಜ ಹೂ ನಿರಾಡಂಬರದ ಸಂಕೇತವಾಗಿದೆ. ವಿಶ್ವಾಸವುಳ್ಳ ಜನರು ಬಂಧು ಬಾಂಧವರು ಮಿತ್ರರು ಬದುಕಿನಲ್ಲಿ ದೊರಕಿದರೆ ಅದೊಂದು ಮಹಾ ಭಾಗ್ಯ. ಆದರಿಂದ ಜೀವನದಲ್ಲಿ ಶಾಂತಿ ಸಂತೃಪ್ತಿ ಸಮಾಧಾನ ಪ್ರಾಪ್ತಿ. ವ್ಯಕ್ತಿ ಸಮಾಜ ಕುಟುಂಬ ಮತ್ತು ದೇಶ ಎಲ್ಲದರ ಕಲ್ಯಾಣಕ್ಕೆ ಕಾರಣ ವಿಶ್ವಾಸ ಎಂಬುದನ್ನು ಮರೆಯಲಾಗದು.

ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು, ಬಾಳೆಹೊನ್ನೂರು

ವಿಕ ತಗೋ ಕನ್ನಡ

ಚಂದ್ರೋದಯ

ಇದರ ಅರ್ಥ 'ಚಂದ್ರ ಕಾಣಿಸಿಕೊಂಡ' ಎಂದಾದರೂ ಸಾಮಾನ್ಯವಾಗಿ 'ಪೂರ್ಣಚಂದ್ರ ಮೂಡಿದ' ಎನ್ನುವುದನ್ನು ಸೂಚಿಸುತ್ತದೆ. 'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ' ಎನ್ನುವ ಜನಪ್ರಿಯ ಬಸವಣ್ಣನವರ ವಚನದಲ್ಲಿ ವೈಜ್ಞಾನಿಕ ವಿಚಾರವೊಂದು ಸುವ್ಯಕ್ತವಾಗಿ, ಕೊನೆಗೆ 'ಜಗದ ನೆಂಟ ಯಾರು?' ಎಂಬುದನ್ನು ತೆರೆದಿಡುತ್ತದೆ. ಇದನ್ನು ಕುಮಾರವ್ಯಾಸನು '...ನಾಸಿಕದೆರಲ ಚಂದ್ರೋದಯವನೀಕ್ಷಿಸಿ ದೇವ ಹೊರವಂಟ' ಎಂದು ಪ್ರಯೋಗಿಸಿದ್ದಾನೆ (ಉದ್ಯೋಗ ಪರ್ವ, 7-5). ಕೌರವರೊಡನೆ ಸಂಧಾನಕ್ಕೆ ಶ್ರೀಕೃಷ್ಣ ಹೊರಟ ಸಂದರ್ಭವಿದು. ತನ್ನ ಕರತಳವನ್ನು ಮೂಗಿನ ಹತ್ತಿರ ತಂದು, ಎಡಹೊಳ್ಳೆಯಿಂದ ಚಂದ್ರಸ್ವರವೆಂಬ ವಾಯುವು ಹೊರಬರುತ್ತಿರುವುದನ್ನು (ಚಂದ್ರೋದಯವನ್ನು) ಗಮನಿಸಿದ. ಚಂದ್ರಸ್ವರವೆಂದರೆ ಯೋಗದ ಅಂಗವಾದ ಪ್ರಾಣಾಯಾಮದ 'ಇಡಾ ನಾಡಿ'. ಅದರಂತೆ ದೂರಪ್ರಯಾಣಕ್ಕೆ ಹೊರಟಾಗ ಎಡಹೊಳ್ಳೆಯಿಂದ 'ಚಂದ್ರಸ್ವರ'ವು ಬಂದರೆ ಅದು ಸೂಕ್ತವಾದ ಸಮಾಧಾನದ ಸ್ಥಿತಿಯನ್ನು ಸೂಚಿಸುತ್ತದೆ. ಹೀಗೆ ಯೋಗೇಶ್ವರನಾದ ಶ್ರೀಕೃಷ್ಣನು 'ಚಂದ್ರೋದಯವನೀಕ್ಷಿಸಿ' ಹೊರಟದ್ದನ್ನು ಕುಮಾರವ್ಯಾಸ ನಾಟಕೀಯವಾಗಿ ಚಿತ್ರಿಸಿದ್ದಾನೆ.

- ಜಿ.ವಿ. ಅರುಣ

- ಪದ ಸೂಚಿಸಿದವರು: ರಮ್ಯಾ ಕಿರಣ್ ಬೆಂಗಳೂರು

ಬತ್ತಳಿಕೆ



ವಿಕ ಜೋಕ್ FALLS

ಹುಡುಗಿ: ಬೆಳಗ್ಗೆಯಿಂದ ನನಗೆ ತಲೆ ಸುತ್ತುತ್ತಿದೆ.
ಡಾ. ಸಂಗ್ಯಾ: ನಿಮ್ಮ ನಾಡಿಮಿಡಿತ ಸರಿಯಾಗಿ ಓಡುತ್ತಿದೆ, ಗಡಿಯಾರದಂತೆಯೇ.
ಹುಡುಗಿ: ಸಾರಿ ಡಾಕ್ಟ್ರೇ... ನೀವು ನಾಡಿಯ ಬದಲು ನನ್ನ ವಾಚ್‌ನ ಮೇಲೆ ಕೈ ಇಟ್ಕೊಂಡಿದ್ದೀರಿ!

ತರಗತಿಗಳ ನಡುವಿನ ವಿರಾಮದಲ್ಲಿ ವಿದ್ಯಾರ್ಥಿನಿಯರು ತುಟಿಗೆ ಲಿಪ್‌ಸ್ಟಿಕ್ ಬಳಿದುಕೊಳ್ಳುವುದು, ಮೇಕಪ್ ಮಾಡಿಕೊಳ್ಳುವ ವರ್ತನೆಯಿಂದ ಕೇರಳದ ಕೊಲ್ಲಂನ ಶಾಲೆಯೊಂದು ಎಚ್ಚೆತ್ತುಕೊಂಡಿದೆ. ಮಕ್ಕಳು ಬಳಸುವ ಸೌಂದರ್ಯವರ್ಧಕಗಳ ಬಳಕೆ ವಿರುದ್ಧ ಕೇರಳ ಮಕ್ಕಳ ಕಲ್ಯಾಣ ಸಮಿತಿ ಆಂದೋಲನ ಆರಂಭಿಸಿದ್ದು, 'ಲಿಪ್‌ಸ್ಟಿಕ್ ಮುಕ್ತ ಕ್ಯಾಂಪಸ್' ಘೋಷಿಸಿದೆ. ನಿಜಕ್ಕೂ, ಮಕ್ಕಳಿಗೆ ಕಾಸ್ಮೆಟಿಕ್ಸ್ ಅಪಾಯಕಾರಿಯೇ? ಏನೆನ್ನುತ್ತಾರೆ ತಜ್ಞರು?

ಲಿಪ್‌ಸ್ಟಿಕ್ ಯುದ್ಧ

ಮಕ್ಕಳ ಮುಖಕ್ಕೆ ಕಾಸ್ಮೆಟಿಕ್ಸ್... ಇದು ಅಂದವೋ, ಆಪತ್ತೋ?

● ಡಾ. ಗುರುರಾಜ ಅರಕೇರಿ

ಅದೊಂದು ಸಂಜೆ. ಕ್ಲಿನಿಕ್‌ನ ಕೆಲಸಗಳನ್ನೆಲ್ಲ ಮುಗಿಸಿ ಬಂದು, ಲಿವಿಂಗ್ ರೂಮಿನಲ್ಲಿ ವಿಶ್ರಾಂತವಾಗಿ ಕುಳಿತು ಪೇಪರ್ ಓದುತ್ತಿದ್ದ ನನಗೆ ಇದ್ದಕ್ಕಿದ್ದಂತೆ ಆಶ್ಚರ್ಯ ಕಾದಿತ್ತು! ನನ್ನ ಹನ್ನೆರಡು ವರ್ಷದ ಹಿರಿಯ ಮಗಳು ಮತ್ತು ಎಂಟು ವರ್ಷದ ಕಿರಿಯ ಮಗಳು ಇಬ್ಬರೂ ಒಟ್ಟಿಗೆ ಕುಳಿತು ಅತ್ಯಂತ ಗಂಭೀರವಾಗಿ ಏನೋ ಸಮಾಲೋಚನೆ ನಡೆಸುತ್ತಿದ್ದರು. ಕುತೂಹಲ ತಡೆಯಲಾಗದೆ ಹತ್ತಿರ ಹೋಗಿ ನೋಡಿದರೆ, ಇಬ್ಬರ ಕೈಯಲ್ಲೂ ರಂಗುರಂಗಿನ ಲಿಪ್‌ಸ್ಟಿಕ್‌ಗಳು! ಹಿರಿಯ ಮಗಳು ಗಾಢ ಕೆಂಪು ಬಣ್ಣದ ಲಿಪ್‌ಸ್ಟಿಕ್ ಲೇಪನ ಮಾಡಿಕೊಳ್ಳುತ್ತಿದ್ದರೆ, ಕಿರಿಯ ಮಗಳು ಅದನ್ನೇ ನೋಡಿ ಸಂಭ್ರಮಿಸುತ್ತಿದ್ದಳು.

''ಏನಮ್ಮಾ ಇದು? ಇಷ್ಟು ಚಿಕ್ಕ ವಯಸ್ಸಿಗೆ ಲಿಪ್‌ಸ್ಟಿಕ್ ಯಾಕೆ?,'' ಎಂದು ಪ್ರೀತಿಯಿಂದಲೇ ಕೇಳಿದೆ.

ಅದಕ್ಕೆ ಹಿರಿಯ ಮಗಳು ತಕ್ಷಣ, ''ಅಯ್ಯೋ ಅಪ್ಪ, ಇವತ್ತು ಫ್ರೆಂಡ್ ಬರ್ತ್‌ಡೇ ಪಾರ್ಟಿ ಇದೆಯಲ್ಲ, ಅದಕ್ಕೆ ಹಚ್ಚಿಕೊಳ್ತಿದ್ದೀನಿ,'' ಎಂದು ಸಮರ್ಥಿಸಿಕೊಂಡಳು.

ಆದರೆ, ಪಕ್ಕದಲ್ಲೇ ಇದ್ದ ಕಿರಿಯ ಮಗಳು ಅಕ್ಕನ ರಹಸ್ಯ ಬಿಟ್ಟು ಕೊಡುವಂತೆ, ''ಹೌದು ಪಪ್ಪಾ... ಯೂಟ್ಯೂಬಲ್ಲಿ 'ಗೆಟ್ ರೆಡಿವಿತ್ ಮಿ' ಅಂತ ರೀಲ್ಸ್ ಬರುತ್ತವಲ್ಲ, ಅದರಲ್ಲಿ ಎಲ್ಲರೂ ಹೀಗೆ ಬಣ್ಣ ಹಚ್ಚಿಕೊಂಡು ರೆಡಿಯಾಗ್ತಾರೆ. ಅದನ್ನೇ ನೋಡಿ ನಾವೂ ಟ್ರೈ ಮಾಡ್ತಿದ್ದೀವಿ. ಎಲ್ಲರೂ ಇದನ್ನು ಮಾಡ್ತಾರೆ ಪಪ್ಪಾ...,'' ಅಂದಳು ಮುಗ್ಧವಾಗಿ.

ನನಗೆ ತಕ್ಷಣ ನೆನಪಾಗಿದ್ದು ನೆರೆರಾಜ್ಯ ಕೇರಳದ ಇತ್ತೀಚಿನ ಸುದ್ದಿ. ಅಲ್ಲಿನ ಸರಕಾರಿ ಶಾಲೆಗಳಲ್ಲಿ ಮತ್ತು ಬಾಲ ಕಲ್ಯಾಣ ಮಂಡಳಿಗಳಲ್ಲಿ ವಿದ್ಯಾರ್ಥಿನಿಯರು ಲಿಪ್‌ಸ್ಟಿಕ್ ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಕೆಲವು ಶಾಲೆಗಳ ಗೋಡೆಗಳ ಮೇಲಂತೂ ಮಕ್ಕಳು ಲಿಪ್‌ಸ್ಟಿಕ್ ಹಚ್ಚಿದ ಮುದ್ರೆಗಳನ್ನು ಒತ್ತಿ ಇಡೀ ಕ್ಲಾಸ್‌ರೂಮ್‌ಗಳನ್ನೇ ರಂಗುರಂಗಾಗಿಸಿದ್ದರು! ವಿಷಯ ಕೇವಲ ಗೋಡೆ ಹಾಳಾಗುವುದಲ್ಲ; ಮಕ್ಕಳ ಈ ಮೇಕಪ್ ಗೀಳಿನ ಹಿಂದೆ ಅಡಗಿರುವ ಗಂಭೀರ ಆರೋಗ್ಯದ ಅಪಾಯಗಳು ಮತ್ತು ಮನಸ್ಸಿನ ಆಪತ್ತುಗಳು ತುಂಬಾನೇ ಇವೆ.

ಹಾಗಾಗಿಯೇ, ಆ ಇಬ್ಬರನ್ನು ನನ್ನ ಹತ್ತಿರ ಕರೆದು ಪ್ರೀತಿಯಿಂದ ಬೆನ್ನು ಸವರಿ ಹೇಳಿದೆ, ''ಅಮ್ಮಾ... ನೀವು ಹೀಗೆಯೇ ತುಂಬಾ ಮುದ್ದಾಗಿ ಕಾಣಿಸುತ್ತಿದ್ದೀರಾ. ಆದ್ರೆ, ಈ ರೀತಿ ಕೃತಕ ರಾಸಾಯನಿಕ ಬಣ್ಣಗಳನ್ನು ಹಚ್ಚಿಕೊಳ್ಳೋದ್ರಿಂದ ನಿಮ್ಮ ಪುಟ್ಟ ದೇಹದೊಳಗೆ ಏನೆಲ್ಲಾ ಆಗುತ್ತೆ ಗೊತ್ತಾ?''.

ಕಿರಿಯ ಮಗಳು ಕಣ್ಣರಳಿಸಿ ನೋಡಿದಳು. ದೊಡ್ಡವಳು ಕೂಡ ಫೋನ್ ಪಕ್ಕಕ್ಕಿಟ್ಟು ಕಿವಿಗೊಟ್ಟಳು.

ಕೇರಳದಂತೆ ನಮ್ಮಲ್ಲಿಯೂ ಕಿಡ್ಸ್ ಮೇಕಪ್‌ಗೆ ನಿಷೇಧ ಬೇಕೆ?

ವಿಕ ಸೈನ್ಸ್ ಕೆಫೆ

ಮುಖದ ಕ್ರೀಮ್, ಕಣ್ಣಿನ ಶ್ಯಾಡೋ ಹಿಂದಿನ ಅಸಲಿ ಸತ್ಯ!

''ಲಿಪ್‌ಸ್ಟಿಕ್ ಒಂದೇ ಅಲ್ಲ ಕಣೋ,'' ಅಂದೆ. ''ಬೇರೆ ಮೇಕಪ್‌ಗಳಲ್ಲೂ ಎಚ್ಚರ ಬೇಕು. ಸಾಮಾನ್ಯವಾಗಿ ಒಳ್ಳೆಯ ಪ್ರತಿಷ್ಠಿತ ಬ್ರ್ಯಾಂಡ್‌ಗಳು ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸಿ ಸುರಕ್ಷಿತ ವಸ್ತುಗಳನ್ನೇ ಬಳಸುತ್ತವೆ. ಆದರೆ, ಮಾರುಕಟ್ಟೆಯಲ್ಲಿ ಯಥೇಚ್ಛವಾಗಿ ಸಿಗುವ ಕಳಪೆ ಗುಣಮಟ್ಟದ ಅಥವಾ ನಕಲಿ ಉತ್ಪನ್ನಗಳಲ್ಲಿ ಸುವಾಸನೆಗಾಗಿ ನಿಯಮ ಮೀರಿ ಹಾಕುವ ವಸ್ತುಗಳು ಮತ್ತು ಕ್ರೀಮ್‌ಗಳು ಹಾಳಾಗದಂತೆ ಕಾಪಾಡಲು ಬಳಸುವ ರಾಸಾಯನಿಕಗಳು ಇರಬಹುದು. ಇವು ನಮ್ಮ ದೇಹದ ಹಾರ್ಮೋನುಗಳ ಮೇಲೆ ಪರಿಣಾಮ ಬೀರಬಹುದು. ಬೆಳೀತಾ ಇರೋ ಮಕ್ಕಳಿಗೆ ಇವು ಬಹಳ ಮುಖ್ಯ.

ಇನ್ನು ಬೀದಿಬದಿಯ ಅಗ್ಗದ ಫೇರ್‌ನೆಸ್ ಕ್ರೀಮ್‌ಗಳಲ್ಲಿ ಹಾನಿಕಾರಕ ಅಂಶಗಳಿರುತ್ತೆ. ಇವು ಚರ್ಮವನ್ನು ಕೆಡಿಸುತ್ತವೆ. ಕಣ್ಣಿಗೆ ಹಚ್ಚುವ ಕಳಪೆ ಗುಣಮಟ್ಟದ ಐ-ಶ್ಯಾಡೋಗಳಲ್ಲಿ ಸೀಸ ಇರುತ್ತೆ. ಇದು ಕಣ್ಣಿನ ಸೂಕ್ಷ್ಮ ಪೊರೆಗೆ ತೊಂದರೆ ಕೊಡುತ್ತೆ. ಅಷ್ಟೇ ಯಾಕೆ, ಕೆಲವು ಕೂದಲಿನ ಜೆಲ್‌ಗಳಲ್ಲಿ ಕೃತಕ ಅಂಶಗಳಿರುತ್ತೆ, ಇದು ಕೂದಲಿನ ಆರೋಗ್ಯಕ್ಕೆ ಒಳ್ಳೆಯದಲ್ಲ. ನಿಯಮ ಪಾಲಿಸದ ಇಂಥ ಅಗ್ಗದ ವಸ್ತುಗಳಲ್ಲೇ ಕಲಬೆರಕೆ ಜಾಸ್ತಿ ಇರುತ್ತೆ''.

ನನ್ನ ಮಾತುಗಳನ್ನು ಕೇಳುತ್ತಿದ್ದ ಕಿರಿಯ ಮಗಳು ಮುಗ್ಧವಾಗಿ ಕೇಳಿದಳು, ''ಹಾಗಾದ್ರೆ ಪಪ್ಪಾ, ಪಾರ್ಟಿಯಲ್ಲಿ ಎಲ್ಲರೂ ಇದನ್ನು ಮಾಡ್ತಾರಲ್ಲ, ನಮಗೂ ಹಚ್ಚಿಕೊಳ್ಬೇಕು ಅನ್ನೋದು ತಪ್ಪಾ?''.

''ಇಲ್ಲಮ್ಮಾ... ಭಯಪಡೋ ಅಗತ್ಯವಿಲ್ಲ, ಮೇಕಪ್ ಅಂದ್ರೆ ವಿಷ ಅಲ್ಲ. ಯಾವಾಗಲೋ ಒಮ್ಮೆ ಹಬ್ಬ, ಮದುವೆ ಅಥವಾ ಫ್ಯಾನ್ಸಿಡ್ರೆಸ್‌ಗೆ ಸ್ವಲ್ಪ ಹಚ್ಚಿಕೊಂಡ್ರೆ ಆಕಾಶವೇನೂ ಉರುಳಿ ಬೀಳಲ್ಲ, ಆದ್ರೆ, ಸಮಸ್ಯೆ ಇರೋದು ಎರಡು ಕಡೆ. ಒಂದು, ಪ್ರತಿದಿನ ಪದೇಪದೆ ಹಚ್ಚಿಕೊಳ್ಳುವುದು; ಹೀಗೆ ಸ್ವಲ್ಪ ಸ್ವಲ್ಪವೇ ದಿನಾಲೂ ದೇಹ ಸೇರಿದರೆ ಅದು ಆಪತ್ತು. ಎರಡು, ಬೀದಿಬದಿಯ ಬ್ರ್ಯಾಂಡ್ ಅಲ್ಲದ ಅಗ್ಗದ ಲಿಪ್‌ಸ್ಟಿಕ್‌ಗಳು; ಇವುಗಳಲ್ಲೇ ಹಾನಿಕಾರಕ ಅಂಶಗಳು ಜಾಸ್ತಿ ಇರುತ್ತೆ ಮತ್ತು ಇವು ಮಕ್ಕಳ ಸೂಕ್ಷ್ಮ ಚರ್ಮಕ್ಕೆ ಅಲರ್ಜಿ ತರುತ್ತವೆ, ಅಷ್ಟೇ.''

(ಲೇಖಕರು: ವೈದ್ಯಕೀಯ ತಜ್ಞರು)

ಬಾಯಿಗೆ ಹತ್ತಿರವಿರುವ ಅಪಾಯ!

''ಮಕ್ಳೇ... ಲಿಪ್‌ಸ್ಟಿಕ್ ಮುಖಕ್ಕೆ ಹಚ್ಚೋದು ಸರಿ, ಆದರೆ, ಅದು ನಮ್ಮ ಬಾಯಿಗೆ ಎಷ್ಟು ಹತ್ತಿರ ಗೊತ್ತಾ? ನಾವು ಮಾತಾಡ್ತಾ, ತಿಂತಾ, ನಗುತ್ತಾ ಇದ್ದಾಗ ಸ್ವಲ್ಪ ಸ್ವಲ್ಪವೇ ಲಿಪ್‌ಸ್ಟಿಕ್ ಹೊಟ್ಟೆಗೇ ಹೋಗ್ಬಿಡುತ್ತೆ. ವಿಜ್ಞಾನದ ಲೆಕ್ಕಾಚಾರದ ಪ್ರಕಾರ, ಲಿಪ್‌ಸ್ಟಿಕ್ ಬಳಸುವವರು ತಮ್ಮ ಜೀವಮಾನದಲ್ಲಿ ತಮಗೆ ತಿಳಿಯದಂತೆ ಸುಮಾರು 3ರಿಂದ 4 ಕಿಲೋದಷ್ಟು ಲಿಪ್‌ಸ್ಟಿಕ್ಕನ್ನು ಹೊಟ್ಟೆಯೊಳಗೆ ಸೇರಿಸಿಕೊಂಡಿರ್ತಾರೆ!''

ನನ್ನ ಈ ಮಾತನ್ನು ಕೇಳಿ ಇಬ್ಬರೂ ಬೆಚ್ಚಿಬಿದ್ದರು! ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತಾ ಕೈಯಲ್ಲಿದ್ದ ಲಿಪ್‌ಸ್ಟಿಕ್ ಕಡೆಗೆ ಆತಂಕದಿಂದ ನೋಡಲಾರಂಭಿಸಿದರು.

ಮುಂದುವರಿದು ಹೇಳಿದೆ, ''ವಿಷಯ ಕೇವಲ ನುಂಗುವುದಷ್ಟೇ ಅಲ್ಲ, ಆ ಬಣ್ಣದ ಹಿಂದೆ ಅಡಗಿರುವ 'ಭಾರೀ ಲೋಹಗಳು' ಮತ್ತಷ್ಟು ಆಪತ್ತು ತರುತ್ತವೆ. ಕೆಲವು ಲಿಪ್‌ಸ್ಟಿಕ್‌ಗಳಲ್ಲಿ ಮುಖ್ಯವಾಗಿ ಅವುಗಳಿಗೆ ಆಕರ್ಷಕ ಬಣ್ಣ ಕೊಡಲು ಹಾಕುವ ವಸ್ತುಗಳಲ್ಲಿನ ಸೀಸ, ಕ್ಯಾಡ್ಮಿಯಂ, ಕ್ರೋಮಿಯಂ ಥರದ ಭಾರ ಲೋಹಗಳ ಸಣ್ಣ ಪ್ರಮಾಣ ಇರುತ್ತೆ. ಅದರಲ್ಲೂ ಸೀಸ ತುಂಬಾ ಅಪಾಯಕಾರಿ. ಅದಕ್ಕೆ 'ಸುರಕ್ಷಿತ ಪ್ರಮಾಣ' ಅನ್ನೋದೇ ಇಲ್ಲ! ಅದು ಎಷ್ಟು ಕಡಿಮೆ ಇದ್ದರೂ ದೇಹಕ್ಕೆ ಒಳ್ಳೆಯದಲ್ಲವೇ ಅಲ್ಲ. ಅದು ನಿಧಾನಕ್ಕೆ ದೇಹದಲ್ಲಿ ಸೇರಿಕೊಳ್ಳುತ್ತಾ ಹೋದರೆ ಮಕ್ಕಳ ಮಿದುಳಿನ ಬೆಳವಣಿಗೆ, ಕಲಿಯುವ ಶಕ್ತಿ ಮತ್ತು ಜ್ಞಾಪಕ ಶಕ್ತಿಯ ಮೇಲೆ ಗಂಭೀರ ಪರಿಣಾಮ ಬೀರಬಹುದು.''

''ಅಷ್ಟೊಂದು ಡೇಂಜರಾ ಪಪ್ಪಾ ಇದು? ಆದ್ರೆ, ಯೂಟ್ಯೂಬಲ್ಲಿ ದೊಡ್ಡವರೆಲ್ಲ ಹಚ್ಚಿಕೊಳ್ತಾರಲ್ಲ?,'' ಎಂದು ಹಿರಿಯ ಮಗಳು ಆತಂಕದಿಂದ ಕೇಳಿದಳು.

ನಾನು ಅವಳ ತಲೆ ಸವರಿ ಹೇಳಿದೆ, ''ಅಮ್ಮಾ, ದೊಡ್ಡವರ ಚರ್ಮ ಈ ಕೆಮಿಕಲ್‌ಗಳನ್ನು ತಡೆಯುವಷ್ಟು ಬಲಿಷ್ಠವಾಗಿರುತ್ತದೆ. ಆದರೆ, ನಿಮ್ಮಂಥ ಮಕ್ಕಳ ದೇಹ ಇನ್ನೂ ಬೆಳೀತಾ ಇದೆ. ನಿಮ್ಮ ಚರ್ಮ ತುಂಬಾ ತೆಳ್ಳಗಿದೆ, ಸೂಕ್ಷ್ಮವಾಗಿದೆ, ಯಾವುದೇ ರಾಸಾಯನಿಕವನ್ನು ದೊಡ್ಡವರಿಗಿಂತ ಬೇಗ ಮತ್ತು ಜಾಸ್ತಿ ಹೀರಿಕೊಳ್ಳುತ್ತೆ! ಅದರಲ್ಲೂ ಇವತ್ತು ಹತ್ತು- ಇಪ್ಪತ್ತು ರೂಪಾಯಿಗೆ ಸಿಗುವ ಅಗ್ಗದ ಲಿಪ್‌ಸ್ಟಿಕ್‌ಗಳಲ್ಲಿ ಕಳಪೆ ಗುಣಮಟ್ಟದ ಕೈಗಾರಿಕಾ ಬಣ್ಣಗಳು ಮತ್ತು ಹಾನಿಕಾರಕ ರಾಸಾಯನಿಕಗಳನ್ನೇ ಬಳಸಲಾಗುತ್ತದೆ. ಇದು ನಿಮ್ಮ ಕೋಮಲ ಚರ್ಮಕ್ಕೆ ದೊಡ್ಡ ಆಘಾತ.

ಹಾಗಾದ್ರೆ ಈಗ ದಾರಿ ಏನು?

ಮಕ್ಕಳು ಆತಂಕದಿಂದಲೇ ಕೇಳಿದವು. ನಾನು ಹೀಗೆ ಹೇಳಿದೆ....

1. ಕಾಸ್ಮೆಟಿಕ್ಸನ್ನು ನಿಯಮಿತ ಬಳಸ್ಬೇಡಿ; ತುಟಿ ಒಣಗಿದ್ರೆ, ಬಣ್ಣದ ಲಿಪ್‌ಸ್ಟಿಕ್ ಬದಲು ಒಳ್ಳೆಯ ಪ್ಲೇನ್ ಲಿಪ್ ಬಾಮ್ ಬಳಸಿ.
2. ಬೀದಿಬದಿಯ ಅಗ್ಗದ, ಅನಧಿಕೃತ ಅಥವಾ ಅವಧಿ ಮುಗಿಯುವ ಹಂತದಲ್ಲಿರೋ ಯಾವುದೇ ಮೇಕಪ್ ವಸ್ತುಗಳನ್ನು ಖರೀದಿಸ್ಬೇಡಿ.
3. ಮೇಕಪ್ ಹಾಕಿಕೊಂಡರೆ ಕೆಲಸ ಮುಗಿದ ತಕ್ಷಣವೇ ಅದನ್ನು ತೆಗೆದುಹಾಕಿ, ಮುಖವನ್ನು ಚೆನ್ನಾಗಿ ತೊಳೆದುಬಿಡಿ.
4. ಮೇಕಪ್ ಹಾಕಿದರನೇ ಅಂದ ಅನ್ನೋ ಯೋಚನೆ ತಪ್ಪು, ನೀವು ಹಾಗೆ ತುಂಬಾ ಚೆಂದ ಇದ್ದೀರಾ ಎನ್ನುವ ಸತ್ಯ ಅರಿತುಕೊಳ್ಳಿ,

ಆರ್ಗ್ಯಾನಿಕ್ ಕಾಸ್ಮೆಟಿಕ್ಸ್!

''ಪಪ್ಪಾ... ಹಾಗಾದ್ರೆ ಕೆಮಿಕಲ್ ಇಲ್ಲದ ಆರ್ಗ್ಯಾನಿಕ್ ಲಿಪ್‌ಸ್ಟಿಕ್ ಅಥವಾ ಆರ್ಗ್ಯಾನಿಕ್ ಮೇಕಪ್ ವಸ್ತುಗಳನ್ನು ಹಚ್ಚಿದರೆ ಓಕೆನಾ?,'' ಎಂದು ಹಿರಿಯ ಮಗಳು ಮುಗ್ಧವಾಗಿ ಕೇಳಿದಳು.

ನಾನು ಅವಳ ಕೈಹಿಡಿದು ಸಮಾಧಾನವಾಗಿ ಹೇಳಿದೆ, ''ಅಮ್ಮಾ, ಆರ್ಗ್ಯಾನಿಕ್ ಅಥವಾ ನ್ಯಾಚುರಲ್ ಅಂದ ತಕ್ಷಣ ಅದು ಸಂಪೂರ್ಣ ಸುರಕ್ಷಿತ ಅಂತ ತಿಳಿಯೋದು ತಪ್ಪು. ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳ ಪ್ರಕಾರ, ಆರ್ಗ್ಯಾನಿಕ್ ಕಾಸ್ಮೆಟಿಕ್ಸ್ ಕೂಡ ಸಾಮಾನ್ಯ ಮೇಕಪ್ ವಸ್ತುಗಳಷ್ಟೇ ರಾಸಾಯನಿಕ, ಸೂಕ್ಷ್ಮಾಣು ಜೀವಿಗಳ ಸೋಂಕು ಮತ್ತು ಅಲರ್ಜಿಯ ಅಪಾಯಗಳನ್ನು ಹೊಂದಿರುತ್ತವೆ. ನೈಸರ್ಗಿಕ ಮೂಲದಿಂದ ಬಂದ ತಕ್ಷಣವೇ ಅದರಲ್ಲಿ ಯಾವುದೇ ಆಪತ್ತು ಇಲ್ಲ ಎಂದು ಗ್ಯಾರಂಟಿ ಕೊಡಲು ಬರುವುದಿಲ್ಲ.

ಇವೆಲ್ಲಕ್ಕಿಂತ ಮುಖ್ಯವಾಗಿ, ಸಮಸ್ಯೆ ಕೇವಲ ರಾಸಾಯನಿಕಗಳದ್ದಲ್ಲ, ನಮ್ಮ ಮನಸ್ಸಿನ ಆರೋಗ್ಯದ್ದು ಕೂಡ! ವಸ್ತು ಆರ್ಗ್ಯಾನಿಕ್ ಆಗಿದ್ದರೂ, ಇಷ್ಟು ಚಿಕ್ಕ ವಯಸ್ಸಿನಲ್ಲೇ ದಿನಾಲೂ ಮೇಕಪ್ ಮಾಡೋ ಅಭ್ಯಾಸ ಬೆಳೆದರೆ, ನಿಮ್ಗೆ ನಿಮ್ಮ ನೈಸರ್ಗಿಕ ಮುಖದ ಮೇಲೆಯೇ ಕೀಳರಿಮೆ ಮೂಡಲು ಶುರುವಾಗುತ್ತೆ. 'ನಾನು ಮೇಕಪ್ ಇಲ್ಲದೆ ಸುಂದರವಾಗಿ ಕಾಣ್ಲಲ್ಲ' ಅನ್ನೋ ಆತಂಕ ಕಾಡತೊಡಗುತ್ತೆ. ಕೊನೆಗೆ ಯಾವುದೇ ಮೇಕಪ್ ಇಲ್ಲದೆ ಹೊರಗೆ ಹೋಗಲು ಹಿಂಜರಿಯುವ ಒಂದು ರೀತಿಯ ದಾಸ್ಯಕ್ಕೆ ಒಳಗಾಗುತ್ತೀರಾ. ನಿಮ್ಮ ಮುಗ್ಧ ಮುಖದ ನೈಜ ಸೌಂದರ್ಯವೇ ಮಾಯವಾಗ್ಬಿಡುತ್ತೆ. ಮೊಬೈಲ್ ರೀಲ್ಸ್ ಮತ್ತು ಶಾರ್ಟ್ ವಿಡಿಯೊಗಳು ಮಕ್ಕಳಲ್ಲಿ ಈ ಮೇಕಪ್ ಗೀಳನ್ನು ಹೆಚ್ಚಿಸುತ್ತಿವೆ''. ಇದನ್ನೆಲ್ಲ ಕೇಳುತ್ತಾ ಮಕ್ಕಳು ಲಿಪ್‌ಸ್ಟಿಕ್ ಬದಿಗಿಟ್ಟವು.

ಬಣ್ಣದ ಹಿಂದೆ ಅಡಗಿವೆ ಭಾರಿ ಲೋಹಗಳು

ಮಾರುಕಟ್ಟೆಯಲ್ಲಿ ಕೇವಲ ಹತ್ತಿಪ್ಪತ್ತು ಅಥವಾ ಐವತ್ತು ರೂಪಾಯಿಗೆ ಸಿಗುವ ಅಗ್ಗದ ಲಿಪ್‌ಸ್ಟಿಕ್‌ಗಳು, ಕಾಡಿಗೆಗಳು ಮತ್ತು ಐ-ಶ್ಯಾಡೋಗಳು ಮಕ್ಕಳ ಬ್ಯಾಗ್ ಸೇರುತ್ತಿವೆ. ಇಷ್ಟೊಂದು ಕಡಿಮೆ ಬೆಲೆಗೆ ಇವುಗಳನ್ನು ತಯಾರಿಸಲು ಕಂಪನಿಗಳು ಬಳಸುವುದಾದರೂ ಏನನ್ನು? ಅತ್ಯಂತ ಕಳಪೆ ಗುಣಮಟ್ಟದ ಕೈಗಾರಿಕಾ ಡೈಗಳು ಮತ್ತು ಸೀಸ, ಕ್ಯಾಡ್ಮಿಯಂ, ಕ್ರೋಮಿಯಂ ಹಾಗೂ ಆರ್ಸೆನಿಕ್‌ನಂಥ ಅಪಾಯಕಾರಿ ಹೆವಿಮೆಟಲ್‌ಗಳನ್ನು ಇವುಗಳಲ್ಲಿ ಬಳಸಲಾಗುತ್ತದೆ.

ಲಿಪ್‌ಸ್ಟಿಕ್‌ನಲ್ಲಿನ ಸೀಸದ ಲೋಹ ನಾಲಿಗೆ ಮೂಲಕ ದೇಹ ಸೇರಿದರೆ ಅದು ರಕ್ತಹೀನತೆ ಮಾತ್ರವಲ್ಲದೆ, ಮಕ್ಕಳ ಮಿದುಳಿನ ಬೆಳವಣಿಗೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಇದು ಮಕ್ಕಳ ಜ್ಞಾಪಕ ಶಕ್ತಿ ಮತ್ತು ಬುದ್ಧಿವಂತಿಕೆಯನ್ನು ಕುಂಠಿತಗೊಳಿಸಬಹುದು. ಪಾಶ್ಚಿಮಾತ್ಯ ದೇಶಗಳಲ್ಲಿ ಮಕ್ಕಳು ಬಳಸುವ ಕಾಡಿಗೆಯಲ್ಲಿ ಸೀಸದ ಪ್ರಮಾಣ ಹೆಚ್ಚಿರುವುದನ್ನು ಪತ್ತೆಹಚ್ಚಿ, ಅದರಿಂದ ಮಕ್ಕಳಲ್ಲಿ 'ಲೆಡ್ ಪಾಯ್ಸನಿಂಗ್' ಆಗುತ್ತಿರುವುದನ್ನು ವೈಜ್ಞಾನಿಕವಾಗಿ ಸಾಬೀತುಪಡಿಸಿದ್ದಾರೆ.

ಪೋಷಕರೇ, ನಮ್ಮ ಜವಾಬ್ದಾರಿ ಏನು?

- **ಸಂವಹನ ನಡೆಸಿ:** ಮಕ್ಕಳನ್ನು ಬೈದು ಮೇಕಪ್ ಕಿಟ್‌ಗಳನ್ನು ಕಿತ್ತುಕೊಳ್ಳಬೇಡಿ. ಅದರ ಬದಲಿಗೆ ಅದರಲ್ಲಿರುವ ಸೈನ್ಸ್ ಮತ್ತು ಹಾನಿಕಾರಕ ಅಂಶಗಳ ಬಗ್ಗೆ ಸ್ನೇಹಪೂರ್ವಕವಾಗಿ ಮಾತನಾಡಿ.
- **ನೈಜ ಸೌಂದರ್ಯ ಗೌರವಿಸಿ:** ''ನೀನು ಮೇಕಪ್ ಇಲ್ಲದೆಯೇ ತುಂಬಾ ಮುದ್ದಾಗಿ ಕಾಣಿಸುತ್ತೀಯಾ,'' ಎಂದು ಮಕ್ಕಳ ನೈಸರ್ಗಿಕ ರೂಪವನ್ನು ಪ್ರಶಂಸಿಸಿ.
- **ಜಾಲತಾಣಗಳ ಮೇಲೆ ನಿಗಾ ಇರಲಿ:** ಇಂಟರ್ನೆಟ್‌ನ ಸುಳ್ಳು ಜಗತ್ತಿನ 'ಫಿಲ್ಟರ್' ಮತ್ತು 'ಮೇಕಪ್ ಸಂಸ್ಕೃತಿ'ಯೇ ಅಂತಿಮವಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಿ.
- **ನೈಜ ಸೌಂದರ್ಯ:** ಮಕ್ಕಳ ಮುಗ್ಧ ನಗು ಮತ್ತು ಆರೋಗ್ಯವೇ ಅವರ ನೈಜ ಸೌಂದರ್ಯ. ಕಾಸ್ಮೆಟಿಕ್ ಬಣ್ಣಗಳ ಕೃತಕ ಹೊಳಪಿಗಿಂತ, ಅವರಲ್ಲಿ ನೈಸರ್ಗಿಕ ಆತ್ಮವಿಶ್ವಾಸದ ಬೆಳಕು ಮೂಡುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ.

ನಮ್ಮಲ್ಲೂ 'ಮೇಕಪ್ ಮುಕ್ತ ಕ್ಯಾಂಪಸ್' ಏಕೆ ಬೇಕು?

- ಶಾಲಾ ಅವಧಿಯಲ್ಲಿ ಲಿಪ್‌ಸ್ಟಿಕ್, ಫೌಂಡೇಷನ್‌ನಂಥ ಕೃತಕ ಕಾಸ್ಮೆಟಿಕ್ಸ್ ಬಳಕೆಯನ್ನು ನಿಷೇಧಿಸುವುದೇ ಒಳಿತು. ಕೇವಲ ಸಾದಾ ಲಿಪ್ ಬಾಮ್ ಅಥವಾ ಮಾಯಿಶ್ಚರೈಸರ್‌ಗೆ ಮಾತ್ರ ಅವಕಾಶ ನೀಡುವುದು ಸೂಕ್ತ.
- ನಿಯಮ ಉಲ್ಲಂಘಿಸುವ ಮಕ್ಕಳನ್ನು ಬಯ್ಯುವ ಬದಲು, ಕಳಪೆ ಗುಣಮಟ್ಟದ ಸೌಂದರ್ಯವರ್ಧಕಗಳಿಂದ ಚರ್ಮ ಮತ್ತು ಆರೋಗ್ಯದ ಮೇಲಾಗುವ ಕೆಟ್ಟ ಪರಿಣಾಮಗಳ ಬಗ್ಗೆ ಶಿಕ್ಷಕರು ಪ್ರೀತಿಯಿಂದ ತಿಳಿಹೇಳುವುದು.
- ಶಾಲಾ ಫ್ಯಾನ್ಸಿ ಡ್ರೆಸ್ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಕೃತಕ ಮೇಕಪ್‌ಗಿಂತ ನೈಸರ್ಗಿಕ ಪ್ರತಿಭೆ ಮತ್ತು ಮುಗ್ಧತೆಗೆ ಹೆಚ್ಚಿನ ಆದ್ಯತೆ ಹಾಗೂ ಅಂಕಗಳನ್ನು ನೀಡುವುದು.
- ಎಐನ 'ಫಿಲ್ಟರ್ ಸಂಸ್ಕೃತಿ' ಮತ್ತು ರೀಲ್ಸ್ ಗೀಳಿನಿಂದ ಮಕ್ಕಳಲ್ಲಿ ಮೂಡುತ್ತಿರುವ ಕೀಳರಿಮೆಯ ಬಗ್ಗೆ ಪೋಷಕರ ಸಭೆಗಳಲ್ಲಿ ಚರ್ಚಿಸಿ, ಜಾಗೃತಿ ಮೂಡಿಸುವುದು.

ಕೋಟ್ಯಂತರ ಬಳಕೆಯ ಟೆಲಿಗ್ರಾಂ ಹಿಂದಿರೋದು ನೂರೇ ಮಂದಿ!

ನೀರು ಕೊಂಡೊಯ್ಯುವುದಕ್ಕೆ ಇನ್ನು ಬಾಟಲ್ ಬೇಕಿಲ್ಲ, ಜಾಕೆಟ್ ಸಾಕು, ನೂರು ಕೋಟಿ ಜನರನ್ನು ಬ್ಯುಸಿಯಾಗಿ ಇಡುವುದಕ್ಕೆ ಕೆಲಸ ಮಾಡುತ್ತಿರುವುದು ನೂರೇ ಜನ! ಸಹಾಯಕ್ಕೆ ಬಂದ ರಷ್ಯನ್ನರಿಗೆ 'ನೀವು ಸುಮ್ಮಿದ್ರೆ ಸಾಕಪ್ಪ' ಎಂದಿದೆ ನಾಸಾ.

ಟೆಕ್ಕೋಪನಿಷತ್

ಧೀರಜ್ ಪೊಯ್ಯೆಕಂಡ

ನೀರು ಕುಡಿಸುವ ಜಾಕೆಟ್

ಅಮೆರಿಕದ 'ಯೂನಿವರ್ಸಿಟಿ ಆಫ್ ಟೆಕ್ಸಾಸ್ ಅಟ್ ಆಸ್ಟಿನ್' ಎಂಜಿನಿಯರ್‌ಗಳು ಗಾಳಿಯಲ್ಲಿರುವ ತೇವಾಂಶವನ್ನು ಹೀರಿಕೊಂಡು, ಅದನ್ನು ನೇರವಾಗಿ ಕುಡಿಯುವ ನೀರನ್ನಾಗಿ ಪರಿವರ್ತಿಸುವ ವಿಶೇಷವಾದ ಜಾಕೆಟ್ ಅಭಿವೃದ್ಧಿಪಡಿಸಿದ್ದಾರೆ.

ಸಾಮಾನ್ಯವಾಗಿ ಗಾಳಿಯಿಂದ ತೇವಾಂಶವನ್ನು ಹೀರಿಕೊಂಡು ಕುಡಿಯುವ ನೀರನ್ನಾಗಿ ಪರಿವರ್ತಿಸುವ ಸಾಧನಗಳು ದೊಡ್ಡದಾಗಿರುತ್ತವೆ. ಅವುಗಳನ್ನು ಒಂದೇ ಕಡೆ ಸ್ಥಾಪಿಸುವುದರಿಂದ ಹೊತ್ತುಕೊಂಡು ಹೋಗುವುದೂ ಅಸಾಧ್ಯ. ಆದರೆ, ಈಗ ವಿಜ್ಞಾನಿಗಳು ಈ ತಂತ್ರಜ್ಞಾನವನ್ನು ಧರಿಸಬಹುದಾದ ಬಟ್ಟೆಯ ರೂಪಕ್ಕೆ ತಂದಿದ್ದಾರೆ. ಈ ಜಾಕೆಟ್‌ನಲ್ಲಿ ಬಳಸಲಾಗಿರುವ ವಿಶೇಷ ಜೈವಿಕ ಹೈಡ್ರೋಜೆಲ್ ಫ್ಯಾಬ್ರಿಕ್ ಗಾಳಿಯಲ್ಲಿರುವ ತೇವಾಂಶವನ್ನು ತ್ವರಿತವಾಗಿ ಹೀರಿಕೊಳ್ಳುತ್ತದೆ. ನಂತರ ಇದರಲ್ಲಿರುವ ಕಳಚಬಹುದಾದ ಭಾಗಗಳನ್ನು ಬಿಸಿ ಮಾಡಿದಾಗ ಅದು ತೇವಾಂಶವನ್ನು ಶುದ್ಧ ಕುಡಿವ ನೀರಾಗಿ ಪರಿವರ್ತಿಸುತ್ತದೆ. ಈ ಜಾಕೆಟ್ ದಿನಕ್ಕೆ ಸುಮಾರು 400ರಿಂದ 900 ಮಿ.ಲೀ.ನಷ್ಟು ಶುದ್ಧ ಕುಡಿವ ನೀರನ್ನು ಉತ್ಪಾದಿಸುತ್ತದೆ. ಚಾರಣಿಗರು, ದುರ್ಗಮ ಪ್ರದೇಶಗಳಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿರುವ ಸೈನಿಕರು, ಕಾರ್ಮಿಕರು, ನೀರಿನ ಅಭಾವವಿರುವ ಮರುಭೂಮಿಯ ಜನರಿಗೆ ಈ ಜಾಕೆಟ್ ಬಹಳ ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿ ಈ ತಂತ್ರಜ್ಞಾನವನ್ನು ಬ್ಯಾಕ್‌ಪ್ಯಾಕ್, ಟೆಂಟ್‌ಗಳಿಗೂ ಅಳವಡಿಸುವ ಬಗ್ಗೆ ಎಂಜಿನಿಯರ್‌ಗಳು ಯೋಚಿಸುತ್ತಿದ್ದಾರೆ.

ಚಟಾಕಿ: ಸ್ವಲ್ಪ ಟ್ರೈ ಮಾಡಿ ಗಾಳಿಯಿಂದ ನೀರನ್ನು ತೆಗೆಯುವಂಥ ಲೋಟವನ್ನೇ ಕಂಡುಹಿಡಿಯಬಹುದಿತ್ತೇನೋ!

ಅಲ್ಲಿರುವುದು ನೂರೇ ಜನ!

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯನ್ನು ತಡೆಗಟ್ಟುವುದಕ್ಕಾಗಿ ಕೇಂದ್ರ ಸರಕಾರ ಟೆಲಿಗ್ರಾಂ ಮೇಲೆ ಜೂನ್ 22ರವರೆಗೆ ನಿಷೇಧ ಹೇರಿದೆ. ಸರಕಾರವನ್ನೇ ಕಂಗೆಡಿಸಿರುವ ಈ ಟೆಲಿಗ್ರಾಂಗೆ ಭಾರತದಲ್ಲಿ ಅಂದಾಜು 15 ಕೋಟಿ ಬಳಕೆದಾರರಿದ್ದಾರೆ. ಇವರಲ್ಲಿ 10 ಕೋಟಿ ಮಂದಿ ಪ್ರತಿದಿನ ಟೆಲಿಗ್ರಾಂ ಬಳಸುತ್ತಾರೆ. ಜಾಗತಿಕವಾಗಿ ಈ ಆ್ಯಪ್ ಬಳಸುವವರ ಸಂಖ್ಯೆ ಸುಮಾರು ನೂರು ಕೋಟಿ. ಇದರಲ್ಲಿ ಸಿಂಹಪಾಲು ಭಾರತೀಯರದ್ದು. ಜಗತ್ತಿನ ನಂಬರ್ ಒನ್ ಮೆಸೇಜಿಂಗ್ ಆ್ಯಪ್ ಆಗಿರುವ ವಾಟ್ಸ್ಯಾಪ್‌ನಲ್ಲಿ ಇಲ್ಲದೇ ಇರುವ ಅತ್ಯದ್ಭುತ ಫೀಚರ್‌ಗಳೆಲ್ಲಾ ಟೆಲಿಗ್ರಾಂನಲ್ಲಿ ಇರುವುದರಿಂದ ನಮ್ಮ ಜನ ಮೆಸೇಜ್ ಬಿಟ್ಟು ಉಳಿದೆಲ್ಲಾ ಕೆಲಸಗಳಿಗೆ ಟೆಲಿಗ್ರಾಮನ್ನು ಬಳಸುತ್ತಾರೆ!

ಹೀಗೆ ಕೋಟ್ಯಂತರ ಜನರು ಬಳಸುತ್ತಿರುವ ಈ ಟೆಲಿಗ್ರಾಂ ಆ್ಯಪ್‌ನ ಹಿಂದೆ ಎಷ್ಟೊಂದು ಜನ ಕೆಲಸ ಮಾಡುತ್ತಿರಬಹುದು ಎಂದು ಒಮ್ಮೆ ಯೋಚಿಸಿ. ನಿಮ್ಮ ಯೋಚನೆಯಲ್ಲಿ ಬರುವ ಅಂಕಿಗಳೆಲ್ಲ ಸಾವಿರ ಮೇಲೆ ಇರುವುದಂತು ಖಂಡಿತ. ಆದರೆ, ಆಶ್ಚರ್ಯ ವಿಚಾರವೆಂದರೆ ಜಗತ್ತಿನ ಅತ್ಯಂತ ಜನಪ್ರಿಯ ಆ್ಯಪ್‌ಗಳಲ್ಲಿ ಒಂದಾದ ಟೆಲಿಗ್ರಾಂನ ಉದ್ಯೋಗಿಗಳ ಸಂಖ್ಯೆ ಕೇವಲ ನೂರು!

ಹೌದು, ಮಾಹಿತಿಗಳ ಪ್ರಕಾರ ಟೆಲಿಗ್ರಾಂನಲ್ಲಿ ಮೂವತ್ತರಿಂದ ನಲ್ವತ್ತರಷ್ಟು ಕೋರ್ ಎಂಜಿನಿಯರ್‌ಗಳಿದ್ದು, ಒಟ್ಟು ಉದ್ಯೋಗಿಗಳ ಸಂಖ್ಯೆ ನೂರರಷ್ಟಿದೆ. ಸಿಇಒ ಪಾವೆಲ್ ದುರೋವ್ ಪ್ರಾಡಕ್ಟ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ದುಬೈನಲ್ಲಿ ಹೆಸರಿಗಷ್ಟೇ ಆಫೀಸ್ ಇಟ್ಟುಕೊಂಡಿರುವ ಟೆಲಿಗ್ರಾಂ, ಸರಕಾರಿ ಹಸ್ತಕ್ಷೇಪ ಹಾಗೂ ರಾಜಕೀಯ ಲಾಬಿಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ತನ್ನ ಕಾರ್ಯಾಚರಣೆಯ ಸ್ಥಳಗಳನ್ನು ರಹಸ್ಯವಾಗಿಟ್ಟಿದೆ. ಕೆಲಸ ಮಾಡುತ್ತಿರುವ ಉದ್ಯೋಗಿಗಳು ಪ್ರಪಂಚದ ವಿವಿಧ ದೇಶಗಳಲ್ಲಿ 'ವರ್ಕ್ ಫ್ರಂ ನೋವೇರ್' ಮಾಡುತ್ತಿದ್ದಾರೆ.



ಚಟಾಕಿ: ಸರಕಾರಿ ಕಚೇರಿಯಲ್ಲಿ ಕಾಣೆಯಾದ ಫೈಲ್ ಹುಡುಕುವುದಕ್ಕೇ ನೂರಕ್ಕಿಂತ ಹೆಚ್ಚು ಜನ ಬೇಕು!

ಸೋರಿಕೆ ಇಲ್ಲಷ್ಟೇ ಅಲ್ಲ, ಆಕಾಶದಲ್ಲೂ



ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 2019ರಿಂದ ಗಾಳಿ ಸೋರಿಕೆ ಒಂದು ಸಮಸ್ಯೆಯಾಗಿಬಿಟ್ಟಿದೆ. ರಷ್ಯಾದ ಮಾಡ್ಯುಲನ್ನು ಡಾಕಿಂಗ್ ಪೋರ್ಟ್‌ಗೆ ಸಂಪರ್ಕಿಸುವ ಟನಲ್‌ನ ಜಾಗದಲ್ಲಿ ಗಾಳಿ ಸೋರಿಕೆಯಾಗುತ್ತಿದೆ. ಸುದೀರ್ಘ ಕಾಲದ ಬಳಕೆಯಿಂದಾಗಿ ಅಲ್ಲಿ ಒಂದಷ್ಟು ಸಣ್ಣ ಸಣ್ಣ ಬಿರುಕುಗಳೂ ಮೂಡಿವೆ. ಇದು ದೊಡ್ಡದಾದರೆ ಇಡೀ ನಿಲ್ದಾಣವೇ ಬಾಹ್ಯಾಕಾಶದ ಕತ್ತಲಲ್ಲಿ ಚೆದುರಿಹೋಗಬಹುದು. ಹಾಗಾಗಿ, ಮೊನ್ನೆ ಅಂದರೆ ಜೂನ್ 4 ಮತ್ತು 5ರಂದು ಈ ಸೋರಿಕೆಯನ್ನು ಸರಿಪಡಿಸಲು ರಷ್ಯಾದ ಬಾಹ್ಯಾಕಾಶ ಸಂಸ್ಥೆ ಅತ್ಯಂತ ಅಪಾಯಕಾರಿ ಕೆಲಸಕ್ಕೆ ಮುಂದಾಗಿತ್ತು. ಬಿರುಕನ್ನು ಸರಿಪಡಿಸಬೇಕಾಗದೆ ಡ್ರಿಲ್ಲಿಂಗ್ ಮಷಿನ್ ಮತ್ತು ಗರಸಗಸ ಬಳಸಬೇಕು ಎಂದು ರಷ್ಯಾ ಹೇಳಿತು. ಆದರೆ, ರಿಪೇರಿ ಆಗುವವರೆಗೆ ಆಚೆಗಿರುತ್ತೇವೆ ಎನ್ನಲು ಐಎಸ್‌ಎಸ್ ಇರುವುದು ಬಾಹ್ಯಾಕಾಶದಲ್ಲಿರುವ ನಿಲ್ದಾಣವೇ ಹೊರತು, ಹೈವೇ ಪಕ್ಕದಲ್ಲಿರುವ ನಿಲ್ದಾಣವಲ್ಲ. ಹಾಗಾಗಿ, ರಷ್ಯಾದ ಯೋಜನೆ ಕೇಳಿ ನಾಸಾ ಬೆಚ್ಚಿಬಿದ್ದಿತ್ತು. ಕೂಡಲೇ ತನ್ನ ಐವರು ಗಗನಯಾತ್ರಿಗಳಿಗೆ ಸ್ಪೇಸ್ ಎಕ್ಸ್‌ನ ಡ್ರಾಗನ್ ಕ್ಯಾಪ್ಸೂಲ್‌ನ ಒಳಗೆ ಸೇರಿಕೊಳ್ಳಿ ಎಂದು ಆದೇಶಿಸಿತು. ಆದರೆ, ರಷ್ಯಾದ ರಿಪೇರಿ ಕೆಲಸ ಇಡೀ ಬಾಹ್ಯಾಕಾಶ ನಿಲ್ದಾಣವನ್ನೇ ಅಪಾಯಕ್ಕೆ ತಳ್ಳುವ ಸಾಧ್ಯತೆ ಇರುವುದರಿಂದ ನಾಸಾ 'ನೋ ಥ್ಯಾಂಕ್ಸ್' ಎಂದಿದೆ. ಪರಿಣಾಮವಾಗಿ ರಷ್ಯಾ ತನ್ನ ಐಡಿಯಾವನ್ನು ಕೈಬಿಟ್ಟು ಲೀಕ್ ಆಗುತ್ತಿದ್ದ ಟನಲ್ ಅನ್ನೇ ಸಂಪೂರ್ಣವಾಗಿ ಬಂದ್ ಮಾಡುವುದಕ್ಕೆ ಒಪ್ಪಿಕೊಂಡಿದೆ.

ಚಟಾಕಿ: 'ಸೋರಿಕೆ'ಯನ್ನು ನೀಟಾಗಿ ತಡೆಯುವುದೇ ಸದ್ಯದ ದೊಡ್ಡ ಸಮಸ್ಯೆ. ಅದೂ ದೊಡ್ಡ 'ಪರೀಕ್ಷೆ'!

dheeraj.d@timesofindia.com

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. **ಕಚೇರಿ ವಿಳಾಸ:-** ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 170
ಶನಿವಾರ,20 ಜೂನ್ 2026 | ಪುಟಗಳು: 20+4+4 | ಬೆಲೆ: ₹ 5.00
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಜಿಯೊ ಪ್ಲಾಟ್‌ಫಾರ್ಮ್ಸ್ ಐಪಿಒಗೆ ಚಾಲನೆ: ಮುಕೇಶ್ ಅಂಬಾನಿ ಘೋಷಣೆ

ಬೆಂಗಳೂರು ದರ: ₹13,370 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ) | ₹14,586 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ) | ₹2,50,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಅಫಘಾನಿಸ್ತಾನ ವಿರುದ್ಧ 3ನೇ ಏಕದಿನ ಪಂದ್ಯ ಇಂದು: ಸರಣಿ ಕ್ಲೀನ್‌ಸ್ವೀಪ್‌ನತ್ತ ಭಾರತ ಚಿತ್ತ

ವಿಕ ಹೊಂಗಿರಣ

ಕಲಿಯುವ ಆಕಾಂಕ್ಷೆ ಇಲ್ಲದಿದ್ದರೆ ಅನುಭವವೂ ಪಾಠ ಕಲಿಸುವುದರಲ್ಲಿ ಸೋಲುತ್ತದೆ.

-ಜಾರ್ಜ್ ಬರ್ನಾಡ್ ಶಾ

SBI The banker to every Indian
ಎಸ್‌ಬಿಐ ಶಿಕ್ಷಣ ಸಾಲಗಳು
- ಭಾರತ ಮತ್ತು ವಿದೇಶಗಳಲ್ಲಿ ಅಧ್ಯಯನಕ್ಕಾಗಿ ಸಾಲಗಳು
- ಮೇಲಾಧಾರ ರಹಿತ ಸಾಲಗಳು
- ವಿದ್ಯಾರ್ಥಿನಿಯರಿಗೆ ರಿಯಾಯಿತಿ ಬಡ್ಡಿದರಗಳು
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 | 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹114/- ಕೋಲಾರ 112/- ತುಮಕೂರು 112/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹154/- ಕೋಲಾರ 152/- ತುಮಕೂರು 152/-
ವಿಥ್ ಸ್ಕಿನ್ ₹217/- ಕೋಲಾರ 214/- ತುಮಕೂರು 214/-
ವಿಥೌಟ್ ಸ್ಕಿನ್ ₹248/- ಕೋಲಾರ 245/- ತುಮಕೂರು 245/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಸ್ಥಿತಿವಂತರು ಯೋಜನೆ ಬಿಟ್ಟುಕೊಟ್ಟರೆ ಪ್ರೋತ್ಸಾಹಿಸಿ | ಅಧಿಕಾರಿಗಳಿಗೆ ಡಿಕೆಶಿ ಸಲಹೆ
ಇನ್ಮುಂದೆ ವೋಟರ್ ಐಡಿಯಲ್ಲಿದ್ದರೆ ಮಾತ್ರ ಗ್ಯಾರಂಟಿ | ಎಸ್‌ಐಆರ್ ಜಾಗೃತಿ ಇರಲಿ
ಬ್ಯಾಂಕ್ ಸಾಲದ ಖಾತೆಗೆ ಜಮೆಯಾಗದಂತೆ ಎಚ್ಚರ | ಗೃಹಲಕ್ಷ್ಮಿಯರಿಗೆ ಸಿಎಂ ಆಸರೆ

ಗ್ಯಾರಂಟಿ ಗಿವ್‌ಅಪ್ ಮಂತ್ರ!

■ **ವಿಕ ಸುದ್ದಿಲೋಕ** ಬೆಂಗಳೂರು

ಅರ್ಹ ಫಲಾನುಭವಿಗಳಿಗೆ ಸರಕಾರದ ಸೌಲಭ್ಯಗಳು ತಲುಪಬೇಕು ಎಂಬ ಸದಾಶಯದೊಂದಿಗೆ, ಆರ್ಥಿಕವಾಗಿ ಸದೃಢರಾಗಿರುವವರು ತಾವಾಗಿಯೇ 'ಗ್ಯಾರಂಟಿ' ಯೋಜನೆಗಳನ್ನು ಬಿಟ್ಟುಕೊಡಲು ಮುಂದೆ ಬಂದರೆ ಅಂಥವರನ್ನು ಪ್ರೋತ್ಸಾಹಿಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಗ್ಯಾರಂಟಿ ಯೋಜನೆಗಳ ಮರುಪರಿಶೀಲನೆ ಕುರಿತು ರಾಜ್ಯಾದ್ಯಂತ ವ್ಯಾಪಕ ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲೇ, ಮುಖ್ಯಮಂತ್ರಿಯವರು ವಿಧಾನಸೌಧದಲ್ಲಿ ಶುಕ್ರವಾರ ಐದೂ ಗ್ಯಾರಂಟಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಈ ವೇಳೆ 'ಗಿವ್ ಅಪ್' ನೀತಿಯನ್ನು ಪ್ರಸ್ತಾಪಿಸಿದ ಅವರು, ''ಉಳ್ಳವರು ಸೌಲಭ್ಯ ತ್ಯಜಿಸಲು ಬಯಸಿದರೆ ಅದಕ್ಕೆ ಅಗತ್ಯ ವ್ಯವಸ್ಥೆ ಮಾಡಿ. ಅದೇ ರೀತಿ, ಅನರ್ಹರು ಯೋಜನೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದಕ್ಕೆ ತಕ್ಷಣವೇ ಬ್ರೇಕ್ ಹಾಕಿ. ಆದರೆ, ಈ ಯಾವುದೇ ಪ್ರಕ್ರಿಯೆಯಿಂದ ಒಬ್ಬನೇ ಒಬ್ಬ ಅರ್ಹ ಫಲಾನುಭವಿಗೂ ತೊಂದರೆಯಾಗಬಾರದು,'' ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಗೃಹಲಕ್ಷ್ಮಿ ದುರುಪಯೋಗಕ್ಕೆ ತಡೆ: ''ಮೃತಪಟ್ಟಿರುವ ಫಲಾನುಭವಿಗಳ ಖಾತೆಗೂ ಗೃಹಲಕ್ಷ್ಮಿ ಯೋಜನೆಯ ಹಣ ಜಮೆಯಾಗುತ್ತಿರುವುದು ಪತ್ತೆಯಾಗಿದೆ. ಇಂತಹ ತಾಂತ್ರಿಕ ಲೋಪಗಳನ್ನು ತಕ್ಷಣವೇ ಸರಿಪಡಿಸಬೇಕು. ಇನ್ಮುಂದೆ ಹಣ ಜಮೆಯಾದ ತಕ್ಷಣ ಫಲಾನುಭವಿಗಳ ಮೊಬೈಲ್‌ಗೆ ಧ್ವನಿ ಸಂದೇಶ (ವಾಯ್ಸ್ ಮೆಸೇಜ್) ಕಳುಹಿಸಿ ಖಚಿತಪಡಿಸಬೇಕು. ಬ್ಯಾಂಕ್ ಸಾಲ ಹೊಂದಿರುವ ಕೆಲವು ಫಲಾನುಭವಿಗಳ ಗೃಹಲಕ್ಷ್ಮಿ ಹಣ ಸಾಲದ ಖಾತೆಗೆ ಕಡಿತವಾಗುತ್ತಿರುವುದು ಗಮನಕ್ಕೆ ಬಂದಿದೆ. ಇದನ್ನು ತಪ್ಪಿಸಲು ಖಾತೆ ಬದಲಾಯಿಸಿಕೊಳ್ಳುವ ಬಡ ಮಹಿಳೆಯರಿಗೆ ಯಾವುದೇ ತೊಂದರೆ ನೀಡಬಾರದು,'' ಎಂದು ಸಿಎಂ ಸೂಚಿಸಿದರು.

ಮೂರು ಲೋಪ ಸರಿಪಡಿಸಿ !

- ಒಂದೇ ಬ್ಯಾಂಕ್ ಖಾತೆಗೆ ಹಲವು ಗೃಹಲಕ್ಷ್ಮಿ ಡಿಬಿಟಿ ಲಿಂಕ್ ಆಗಿರುವುದನ್ನು ಲೆಕ್ಕಪರಿಶೋಧಕರು ಪತ್ತೆಹಚ್ಚಿದ್ದು, ಇದರ ನೈಜತೆ ಪರಿಶೀಲನೆಗೆ ಆದೇಶಿಸಲಾಗಿದೆ.
- ಏರ್‌ಟೆಲ್ ಸಿಮ್ ಬಳಕೆದಾರರ ಯುಪಿಐ ಖಾತೆಗಳ ಮೂಲಕ ಗ್ಯಾರಂಟಿ ಹಣ ಹೊರ ರಾಜ್ಯದವರ ಕೈಸೇರುತ್ತಿರುವ ಶಂಕೆ ವ್ಯಕ್ತವಾಗಿದ್ದು, ಇದಕ್ಕೆ ತಡೆ ಒಡ್ಡಲು ನಿರ್ಧರಿಸಲಾಯಿತು.
- ಕಾಳಸಂತೆಯಲ್ಲಿ ಅನ್ನಭಾಗ್ಯದ ಅಕ್ಕಿ ಮಾರಾಟ ಆಗುತ್ತಿರುವುದನ್ನು ತಡೆಯಲು ಆಹಾರ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ.

ಹೊರರಾಜ್ಯದವರಿಗಿಲ್ಲ ಗ್ಯಾರಂಟಿ

ಗೃಹ ಜ್ಯೋತಿ ಯೋಜನೆಯಡಿ ಮೇ ಅಂತ್ಯದವರೆಗೆ ಒಟ್ಟು 1.65 ಕೋಟಿ ಫಲಾನುಭವಿಗಳು ಸೌಲಭ್ಯ ಪಡೆಯುತ್ತಿದ್ದಾರೆ. ಆದರೆ, ಹೊರರಾಜ್ಯಗಳಿಂದ ಬಂದು ಇಲ್ಲಿ ನೆಲೆಸಿರುವವರೂ ಇದರ ಲಾಭ ಪಡೆಯುತ್ತಿರುವುದು ಚರ್ಚೆಗೆ ಬಂತು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ''ನಮ್ಮ ಗ್ಯಾರಂಟಿಗಳು ಕೇವಲ ನಮ್ಮ ರಾಜ್ಯದವರಿಗೆ ಮಾತ್ರ ಸೀಮಿತವಾಗಿರಬೇಕು. ಹೊರರಾಜ್ಯಗಳ ಮತದಾರರು ಇದರ ಲಾಭ ಪಡೆಯುತ್ತಿರುವುದನ್ನು ಕಟ್ಟುನಿಟ್ಟಾಗಿ ತಡೆಯಿರಿ. ಕರ್ನಾಟಕದ ಮತದಾರರ ಪಟ್ಟಿಯಲ್ಲಿ ಹೆಸರಿರುವವರು ಮಾತ್ರ ಇನ್ಮುಂದೆ ಯೋಜನೆಗಳ ಫಲಾನುಭವಿಗಳಾಗಿರಲಿದ್ದಾರೆ,'' ಎಂದು ಸ್ಪಷ್ಟಪಡಿಸಿದರು.

ಉಳ್ಳವರು ಸೌಲಭ್ಯ ತ್ಯಜಿಸಲು ಬಯಸಿದರೆ ಅದಕ್ಕೆ ಅಗತ್ಯ ವ್ಯವಸ್ಥೆ ಮಾಡಿ. ಅದೇ ರೀತಿ, ಅನರ್ಹರು ಯೋಜನೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವುದಕ್ಕೆ ತಕ್ಷಣವೇ ಬ್ರೇಕ್ ಹಾಕಿ.

-ಡಿ. ಕೆ. ಶಿವಕುಮಾರ್ ಸಿಎಂ

15 ಲಕ್ಷ ಸಸಿ ನೆಡಲಿರುವ ಬಿಡಿಎ

ಬೆಂಗಳೂರು: ನಗರೀಕರಣದ ಪರಿಣಾಮ ಕಾಂಕ್ರೀಟ್ ಕಾಡಾಗಿರುವ ರಾಜಧಾನಿ ಬೆಂಗಳೂರನ್ನು ಮತ್ತೆ ಹಸಿರು ತಾಣವಾಗಿ ರೂಪಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮುಂದಾಗಿದೆ. ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಒಂದೇ ದಿನ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವ ಮೂಲಕ ಗಿನ್ನಿಸ್ ದಾಖಲೆ ನಿರ್ಮಿಸಲು ಸಜ್ಜಾಗಿದೆ.



ನಮ್ಮ ಬೆಂಗಳೂರು ನೋಡಿ

ಗಿನ್ನೆಸ್ ದಾಖಲೆಗೆ ಸಜ್ಜು

ಜೂನ್ 27ರಂದು ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡ ಜಯಂತಿಯ ದಿನವೇ ಲಕ್ಷಾಂತರ ಸಸಿಗಳನ್ನು ನೆಟ್ಟು ಬೆಂಗಳೂರನ್ನು ಹಸಿರುಮಯಗೊಳಿಸಲು ತೀರ್ಮಾನಿಸಲಾಗಿದೆ. ನಾಡಪ್ರಭು ಕೆಂಪೇಗೌಡ ಬಡಾವಣೆ, ಡಾ. ಶಿವರಾಮ ಕಾರಂತ ಬಡಾವಣೆ, ಬನಶಂಕರಿ 6ನೇ ಹಂತ, ಕೆರೆಗಳ ಬಫರ್ ವಲಯ, ರಾಜಕಾಲುವೆಗಳ ಬಫರ್ ವಲಯ, ಉದ್ಯಾನಗಳು ಸೇರಿದಂತೆ 240 ಎಕರೆಯಷ್ಟು ಜಾಗವನ್ನು ಸಸಿ ನೆಡಲು ಗುರುತಿಸಲಾಗಿದೆ. ನಿರಂತರ 12 ಗಂಟೆ ಅಭಿಯಾನ ನಡೆಯಲಿದೆ.

ಇನ್‌ಸ್ಪೆಕ್ಟರ್‌ನಿಂದಲೇ 20 ಲಕ್ಷ ರೂ. ಲೂಟಿ »02
ಪಿಯು ಉಪನ್ಯಾಸಕರಿಗೆ ಹೈಸ್ಕೂಲ್ ಹೊಣೆ »06
ಆಂಧ್ರಪ್ರದೇಶದಲ್ಲಿ ಬೃಹತ್ ಚಿನ್ನದ ನಿಕ್ಷೇಪ ಪತ್ತೆ »06
ಅಮೆರಿಕ-ಇರಾನ್ ಶಾಂತಿ ಮಾತುಕತೆ ಮುಂದಕ್ಕೆ »08
ಮೇಕೆದಾಟು ವಿರೋಧಿಸಿ ತ.ನಾಡು ನಿರ್ಣಯ »11
ಮೆಟ್ರೊ 175 ಕಿ.ಮೀ. ವಿಸ್ತರಣೆಗೆ ಸಂಕಲ್ಪ »15

ಪೊಲೀಸ್ ಇಲಾಖೆ ಮಾನ ಹರಾಜು | ಸರಕಾರಿ ಜೀಪ್ ಜಪ್ತಿ, ಸಿಕ್ಕಿಬಿದ್ದ ಇನ್‌ಸ್ಪೆಕ್ಟರ್

ಸಿಐಡಿ ಇನ್‌ಸ್ಪೆಕ್ಟರ್‌ನಿಂದಲೇ ₹20 ಲಕ್ಷ ಲೂಟಿ

■ **ವಿಕ ಸುದ್ದಿಲೋಕ** ಬೆಂಗಳೂರು

ನಾಗರಿಕರನ್ನು ರಕ್ಷಿಸಬೇಕಾದ ಆರಕ್ಷಕರೇ ಕೇರಳ ಮೂಲದ ಉದ್ಯಮಿಗಳನ್ನು ಬೆದರಿಸಿ ಬರೋಬ್ಬರಿ 20 ಲಕ್ಷ ರೂ. ದೋಚಿ, ರಾಜ್ಯದ ಪೊಲೀಸ್ ಇಲಾಖೆಯ ಮಾನ ಹರಾಜು ಹಾಕಿದ್ದಾರೆ.

ಬಂಧನದ ಬೆದರಿಕೆಯೊಡ್ಡಿ ಕೇರಳ ವ್ಯಾಪಾರಿಗಳ ಹಣ ದೋಚಿದ ಖಾಕಿ

ಮಾಸ್ಟರ್ ಮೈಂಡ್ ಇನ್‌ಸ್ಪೆಕ್ಟರ್

ದರೋಡೆ ಸಂಬಂಧ ಪ್ರಕರಣ ದಾಖಲಾಗುತ್ತಿದ್ದಂತೆ ಬಂಧನ ಭೀತಿಯಲ್ಲಿ ಮೊಬೈಲ್ ಸ್ವಿಚ್ ಆಫ್ ಮಾಡಿ ತಲೆಮರೆಸಿಕೊಂಡಿದ್ದ ಮಹೇಶ್‌ರನ್ನು ಪೊಲೀಸರು ಶುಕ್ರವಾರ ರಾತ್ರಿ ಬಂಧಿಸಿದ್ದಾರೆ. ಇತರೆ ಆರೋಪಿಗಳ ಪತ್ತೆಗೆ ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದೆ. ಉದ್ಯಮಿಗಳು ದೊಡ್ಡ ಮೊತ್ತದ ಹಣವನ್ನು ಎಲ್ಲಿಂದ ತಂದಿದ್ದರು, ಹಣದ ಮೂಲ ಯಾವುದು ಮತ್ತು ಅವರು ಹಣದೊಂದಿಗೆ ಬೆಂಗಳೂರಿಗೆ ಬಂದಿದ್ದ ಬಗ್ಗೆ ಮಹೇಶ್‌ಗೆ ಹೇಗೆ ಮಾಹಿತಿ ಸಿಕ್ಕಿತು ಎಂಬ ಬಗ್ಗೆಯೂ ಪೊಲೀಸರು ವಿಸ್ತೃತ ತನಿಖೆ ನಡೆಸುತ್ತಿದ್ದಾರೆ. ಸಿವಿಲ್ ಇನ್‌ಸ್ಪೆಕ್ಟರ್ ಆಗಿರುವ ಮಹೇಶ್, ಡೆಪ್ಯುಟೇಶನ್ ಮೇಲೆ ಸಿಐಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಮಡಿವಾಳ ದರೋಡೆ ಪ್ರಕರಣದ ತನಿಖೆಗೆ ವಿಶೇಷ ತಂಡ ರಚಿಸಲಾಗಿದೆ. ಪ್ರಕರಣದಲ್ಲಿ ಇನ್‌ಸ್ಪೆಕ್ಟರ್ ಶಾಮೀಲಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟಿದೆ. ದರೋಡೆಯಾದ ಹಣ ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಉದ್ಯಮಿಗಳು ತಂದಿದ್ದ ಹಣದ ಮೂಲವನ್ನೂ ಪತ್ತೆ ಹಚ್ಚಲಾಗುತ್ತಿದೆ.

-ಸೀಮಂತ್‌ಕುಮಾರ್ ಸಿಂಗ್ ನಗರ ಪೊಲೀಸ್ ಆಯುಕ್ತ

ಸಿಐಡಿ ಇನ್‌ಸ್ಪೆಕ್ಟರ್ ಮಹೇಶ್ ಕನಕಗಿರಿ ಮತ್ತು ಸಹಚರರು, ನಗರದ ಸಿಲ್ಕ್‌ಬೋರ್ಡ್ ಬಳಿಯ ಖಾಸಗಿ ಹೋಟೆಲ್‌ನಲ್ಲಿ ತಂಗಿದ್ದ ಕೇರಳದ ಟ್ರೇಡಿಂಗ್ ವ್ಯಾಪಾರಿಗಳನ್ನು ಬೆದರಿಸಿ ಹಣ ದೋಚಿದ್ದಾರೆ. ಗುರುವಾರ ರಾತ್ರಿ ಈ ಘಟನೆ ನಡೆದಿದ್ದು, ಇದರ ಬೆನ್ನಲ್ಲೇ ಮಡಿವಾಳ ಠಾಣೆ ಪೊಲೀಸರು ಇನ್‌ಸ್ಪೆಕ್ಟರ್ ಮಹೇಶ್ ಸೇರಿದಂತೆ ಇಬ್ಬರನ್ನು ಬಂಧಿಸಿದ್ದಾರೆ.

ಟ್ರೇಡಿಂಗ್ (ವ್ಯಾಪಾರ) ಉದ್ದೇಶಕ್ಕೆ ಹಣದೊಂದಿಗೆ ನಗರಕ್ಕೆ ಬಂದಿದ್ದ ಕೇರಳದ ಇಬ್ಬರು ಉದ್ಯಮಿಗಳು ಸಿಲ್ಕ್‌ಬೋರ್ಡ್ ಬಳಿಯ ಹೋಟೆಲ್‌ನಲ್ಲಿ ತಂಗಿದ್ದರು. ಈ ಬಗ್ಗೆ ಮೊದಲೇ ಮಾಹಿತಿ ಪಡೆದಿದ್ದ ಇನ್‌ಸ್ಪೆಕ್ಟರ್ ಮಹೇಶ್, ತನಗೆ ಪರಿಚಯವಿರುವ ಕುಪೇಂದ್ರ, ಕುಮಾರ್, ಷಫಿ, ಶಾನಿ ಮತ್ತು ಹ್ಯಾರಿಸ್ ಎಂಬುವರ ಜೊತೆ ಸೇರಿ ಉದ್ಯಮಿಗಳ ಹಣ ದೋಚಲು ಸಂಚು ರೂಪಿಸಿದ್ದರು. ಆ ಸಂಚಿನಂತೆ ಮಹೇಶ್ ಮತ್ತು ಇತರೆ ಆರೋಪಿಗಳು ಗುರುವಾರ ರಾತ್ರಿ ಪೊಲೀಸ್ ಇಲಾಖೆಯ ಜೀಪಿನಲ್ಲಿ ಉದ್ಯಮಿಗಳು ತಂಗಿದ್ದ ಹೋಟೆಲ್ ಬಳಿ ಹೋಗಿದ್ದರು.

ಮಹೇಶ್, ಹೋಟೆಲ್‌ನ ಮುಂಭಾಗದಲ್ಲಿ ಪೊಲೀಸ್ ಜೀಪಿನಲ್ಲೇ ಕುಳಿತು ಕುಮಾರ್ ಮತ್ತು ಕುಪೇಂದ್ರನನ್ನು ಹೋಟೆಲ್‌ನೊಳಗೆ ಕಳುಹಿಸಿದ್ದರು. ಉದ್ಯಮಿಗಳಿದ್ದ ರೂಂಗೆ ಹೋಗಿದ್ದ ಕುಮಾರ್ ಮತ್ತು ಕುಪೇಂದ್ರ, ತಾವು ಪೊಲೀಸರೆಂದು ಹೇಳಿಕೊಂಡು ಇನ್‌ಸ್ಪೆಕ್ಟರ್ ಮಹೇಶ್‌ರ ಅಧಿಕೃತ ಗುರುತಿನ ಚೀಟಿ ತೋರಿಸಿದ್ದರು. ಅಕ್ರಮವಾಗಿ ಟ್ರೇಡಿಂಗ್ ಮಾಡಲು ಹಣ ತಂದಿದ್ದೀರಿ ಎಂದು ಉದ್ಯಮಿಗಳನ್ನು ಬೆದರಿಸಿದ ಆರೋಪಿಗಳು, ಬಂಧಿಸುವುದಾಗಿ ಹೇಳಿದ್ದರು. ನಂತರ ಉದ್ಯಮಿಗಳಿಂದ 20 ಲಕ್ಷ ರೂ. ಕಸಿದುಕೊಂಡು ಹೋಟೆಲ್‌ನ ಹೊರಗೆ ಕಾಯುತ್ತಿದ್ದ ಮಹೇಶ್‌ರ ಜೊತೆ ಜೀಪಿನಲ್ಲಿ ಪರಾರಿಯಾಗಿದ್ದರು.

ಕೇರಳಿಗರ ಮೊಬೈಲ್‌ನಲ್ಲಿ ಲಾಕ್ ಆದ ಖಾಕಿ ಕೃತ್ಯ!: ಘಟನೆಯ ಆರಂಭದಲ್ಲಿ ಹೆದರಿದ್ದ ಉದ್ಯಮಿಗಳು ನಂತರ ದರೋಡೆಯ ಅನುಮಾನ ಬಂದ ತಕ್ಷಣವೇ ಮಡಿವಾಳ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದರು. ದರೋಡೆ ವೇಳೆ ಉದ್ಯಮಿಗಳು ರಹಸ್ಯವಾಗಿ ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದ ಕುಮಾರ್ ಮತ್ತು ಕುಪೇಂದ್ರರ ಚಲನವಲನದ ವಿಡಿಯೊವನ್ನು ಪೊಲೀಸರಿಗೆ ಕೊಟ್ಟಿದ್ದರು.

ಪೊಲೀಸರು ಉದ್ಯಮಿಗಳು ತಂಗಿದ್ದ ಹೋಟೆಲ್‌ನ ಸಿ.ಸಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಾವಳಿ ಪರಿಶೀಲಿಸಿದಾಗ ಆರೋಪಿ ಕುಪೇಂದ್ರನ ಸುಳಿವು ಸಿಕ್ಕಿತ್ತು. ಈ ಸುಳಿವಿನ ಜಾಡು ಹಿಡಿದು ಹೊರಟ ಪೊಲೀಸರು ರಾತ್ರೋರಾತ್ರಿ ಕಾರ್ಯಾಚರಣೆ ನಡೆಸಿ ಕುಪೇಂದ್ರನನ್ನು ಬಂಧಿಸಿದ್ದಾರೆ. ಕುಪೇಂದ್ರನ ವಿಚಾರಣೆ ನಡೆಸಿದಾಗ ಪ್ರಕರಣದ ಕಿಂಗ್‌ಪಿನ್ ಇನ್‌ಸ್ಪೆಕ್ಟರ್ ಮಹೇಶ್ ಎಂಬ ಅಸಲಿ ಸತ್ಯ ಬಯಲಾಗಿದೆ. ಮಹೇಶ್‌ಗೆ ಇಲಾಖೆಯಿಂದ ಕೊಟ್ಟಿದ್ದ ಸರಕಾರಿ ಜೀಪನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಆರೋಪಿ ಎಸ್‌ಐ ತಮ್ಮನನ್ನು ಬಂಧಿಸಿದ ಪೊಲೀಸರ ಕ್ರಮಕ್ಕೆ ಹೈಕೋರ್ಟ್ ಗರಂ

■ **ವಿಕ ಸುದ್ದಿಲೋಕ** ಬೆಂಗಳೂರು

ಮದುವೆಯಾಗುವುದಾಗಿ ನಂಬಿಸಿ ವಂಚಿಸಿದ ಪ್ರಕರಣದಲ್ಲಿ ಆರೋಪಿ ಪ್ರೊಬೇಷನರಿ ಎಸ್‌ಐ ಬದಲಿಗೆ ಅವರ ತಮ್ಮನನ್ನು ಬಂಧಿಸಿದ ಪೊಲೀಸರ ಕ್ರಮವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಅಲ್ಲದೆ, ಚಿತ್ರದುರ್ಗ ಮಹಿಳಾ ಠಾಣೆ ತನಿಖಾಧಿಕಾರಿ ಖುದ್ದು ಹಾಜರಾಗುವಂತೆ ನ್ಯಾಯಾಲಯ ನಿರ್ದೇಶನ ನೀಡಿದೆ.

ದಾವಣಗೆರೆಯ ಎನ್.ದರ್ಶನ್ ಸಲ್ಲಿಸಿದ್ದ ಅರ್ಜಿಯು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದಿತು.

ಕೆಲ ಕಾಲ ವಾದ ಆಲಿಸಿದ ನ್ಯಾಯಾಲಯ ನಂತರ, ವಿನಾಕಾರಣ ಆರೋಪಿ ಸಹೋದರನ ಬಂಧನ ಆಘಾತಕಾರಿ ಎಂದು ಮೌಖಿಕವಾಗಿ ಹೇಳಿ, ವಿವಾಹಿತ ಮಹಿಳೆಗೆ ಮದುವೆಯಾಗುವುದಾಗಿ ನಂಬಿಸುವುದು ಹೇಗೆ ಎಂದು ಪ್ರಶ್ನಿಸಿತು. ಬಳಿಕ ತನಿಖೆಗೆ ಮಧ್ಯಂತರ ತಡೆ ನೀಡಿತಲ್ಲದೆ, ತಕ್ಷಣವೇ ಬಂಧಿತನ ಬಿಡುಗಡೆ ಮಾಡಬೇಕು ಎಂದು ನಿರ್ದೇಶನ ನೀಡಿತು.

ಅಷ್ಟೇ ಅಲ್ಲ, ಬಂಧಿಸಿದ್ದು ಏಕೆಂದು ಪ್ರಮಾಣಪತ್ರ ಸಲ್ಲಿಸಲು ತನಿಖಾಧಿಕಾರಿಗೆ ಸೂಚನೆ ನೀಡಿದ ನ್ಯಾಯಾಲಯ, ವಿಚಾರಣೆಯನ್ನು ಜೂ.25ಕ್ಕೆ ಮುಂದೂಡಿತು.

ಅರ್ಜಿದಾರರ ಪರ ವಕೀಲ ಭರತ್ ಕುಮಾರ್, ''ಪ್ರಕರಣದಲ್ಲಿ ಎಸ್‌ಐ ವಿರುದ್ಧ ಆರೋಪವಿದೆ. ಆದರೆ, ಇಡೀ ಕುಟುಂಬದವರ ವಿರುದ್ಧ ದೂರು ನೀಡಲಾಗಿದೆ. ಮಹಿಳೆಯ ದೂರು ಆಧರಿಸಿ ಆರೋಪಿಯ ತಮ್ಮನನ್ನು ಪೊಲೀಸರು ಬಂಧಿಸಿರುವುದು ಕಾನೂನು ಬಾಹಿರ ಕ್ರಮ. ಕೂಡಲೇ ಆತನ ಬಿಡುಗಡೆಗೆ ಆದೇಶ ನೀಡಬೇಕು,'' ಎಂದು ಕೋರಿದರು.

ಪ್ರೊಬೇಷನರಿ ಎಸ್‌ಐ ವರುಣ್ ಕುಮಾರ್ ಇನ್‌ಸ್ಟಾಗ್ರಾಂನಲ್ಲಿ ಮಹಿಳೆಯೊಂದಿಗೆ ಸ್ನೇಹ ಬೆಳೆಸಿದ್ದರು. ನಂತರ ಮಹಿಳೆ ಹಾಗೂ ಎಸ್‌ಐ ಇಬ್ಬರೂ ದೈಹಿಕ ಸಂಪರ್ಕ ಬೆಳೆಸಿದ್ದರು. ಬಳಿಕ ಮಹಿಳೆಗೆ ವಿವಾಹವಾಗಿರುವುದು ತಿಳಿದು ಎಸ್‌ಐ ಸಂಬಂಧ ಕಡಿತಗೊಳಿಸಿಕೊಂಡಿದ್ದರು. ಆನಂತರ ಪ್ರೊಬೇಷನರಿ ಎಸ್‌ಐ ವಿರುದ್ಧ ಮಹಿಳೆ ದೂರು ನೀಡಿದ್ದರು. ಆರೋಪಿ ಕುಟುಂಬಸ್ಥರ ವಿರುದ್ಧವೂ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಬಿಜೆಪಿ ವಿರುದ್ಧ ಅವಹೇಳನಕಾರಿ ಪೋಸ್ಟ್: ಸಿಎಂ ಡಿಕೆಶಿಗೆ ರಿಲೀಫ್

■ **ವಿಕ ಸುದ್ದಿಲೋಕ** ಬೆಂಗಳೂರು

ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡ ಬಿಜೆಪಿ ನಾಯಕರ ಚಿತ್ರಗಳನ್ನು ಸಾಮಾಜಿಕ ಜಾಲತಾಣ ಪೋಸ್ಟ್‌ನಲ್ಲಿ ಹಂಚಿಕೊಂಡ ಆರೋಪದ ಮೇರೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಪ್ರಕರಣ ರದ್ದುಗೊಳಿಸಿದ ಹೈಕೋರ್ಟ್

ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದು ಕೋರಿ ಕೆಪಿಸಿಸಿ ಅಧ್ಯಕ್ಷರಾಗಿದ್ದ, ಹಾಲಿ ಸಿಎಂ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠವು ಪುರಸ್ಕರಿಸಿದೆ.

ಶಿವಕುಮಾರ್ ಪರ ವಾದಿಸಿದ ವಕೀಲ ಎಚ್.ವಿ.ಪ್ರವೀಣ್ ಗೌಡ, ''ಶಿವಕುಮಾರ್ ಸಾಮಾಜಿಕ ಜಾಲತಾಣ ಖಾತೆಯ ಮೂಲಕ ಆಕ್ಷೇಪಾರ್ಹ ಪೋಸ್ಟ್‌ಗಳನ್ನು ಹಾಕಲಾಗಿದ್ದಾರೆಂಬ ಏಕೈಕ ಕಾರಣಕ್ಕೆ ಅವರ ವಿರುದ್ಧ ಐಪಿಸಿ ಸೆಕ್ಷನ್‌ಗಳಾದ 153 ಎ, 505(2), 504 ಮತ್ತು 464ರಡಿ ಪ್ರಕರಣ ದಾಖಲಿಸಲಾಗಿದೆ. ಕಾಂಗ್ರೆಸ್ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥರು ಪೋಸ್ಟ್ ಅಪ್‌ಲೋಡ್ ಮಾಡಿದ್ದಾರೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರು ಎಂಬ ಕಾರಣಕ್ಕೆ ಅವರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ,'' ಎಂದರು.

ಪ್ರಕರಣದ ಹಿನ್ನೆಲೆ: ಮೂರು ದಶಕಗಳ ಹಿಂದೆ ರಾಮ ಜನ್ಮಭೂಮಿ ವಿಚಾರವಾಗಿ ಹುಬ್ಬಳ್ಳಿಯಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಶ್ರೀಕಾಂತ್ ಪೂಜಾರಿಯನ್ನು ಅಲ್ಲಿನ ಪೊಲೀಸರು ಬಂಧಿಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ನಡೆ ಖಂಡಿಸಿ ಬಿಜೆಪಿಯು ರಾಜ್ಯಾದ್ಯಂತ ಪ್ರತಿಭಟನೆ ನಡೆಸಿತ್ತು. ಆ ಸಂದರ್ಭದಲ್ಲಿ ಬಿಜೆಪಿ ನಾಯಕರು 'ನಾನು ಕರಸೇವಕ ನನ್ನನ್ನೂ ಬಂಧಿಸಿ' ಎಂಬ ಒಕ್ಕಣೆ ಹೊಂದಿದ್ದ, ಭಿತ್ತಿಪತ್ರ ಹಿಡಿದು ಅಭಿಯಾನ ನಡೆಸಿದ್ದರು.

ಅದನ್ನು ಟೀಕಿಸುವ ಉದ್ದೇಶದಿಂದ ಕಾಂಗ್ರೆಸ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಫೋಟೊ ಬಳಸಿ ನಾನು ಆರ್‌ಟಿಜಿಎಸ್ ಮೂಲಕ ಲಂಚ ಪಡೆದಿದ್ದೇನೆ. 40,000 ಕೋಟಿ ಅಕ್ರಮದಲ್ಲಿ ಪಾಲುದಾರ ನನ್ನನ್ನು ಬಂಧಿಸಿ ಎಂದು ಶಾಸಕ ವಿ.ಸುನೀಲ್ ಕುಮಾರ್ ಫೋಟೊ ಬಳಸಿ 'ನಾನು ಪರಶುರಾಮ ಮೂರ್ತಿ ಕಂಚನ್ನು ಕದ್ದಿದ್ದೇನೆ; ಸಿಮೆಂಟ್ ಕದ್ದಿದ್ದೇನೆ ನನ್ನನ್ನು ಬಂಧಿಸಿ' ಎಂಬ ಒಕ್ಕಣೆಯ ಚಿತ್ರಗಳನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಅಧಿಕೃತ ಫೇಸ್ ಬುಕ್ ಪೇಜ್‌ನಲ್ಲಿ ಪೋಸ್ಟ್ ಮಾಡಲಾಗಿತ್ತು.

ಈ ಹಿನ್ನೆಲೆಯಲ್ಲಿ ಅಂದಿನ ಉಪ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ.ಶಿವಕುಮಾರ್ ಹಾಗೂ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಬಿ.ಆರ್.ನಾಯ್ಡು ವಿರುದ್ಧ ಬಿಜೆಪಿಯ ಯೋಗೇಂದ್ರ ಹೊಡಘಟ್ಟ ನೀಡಿದ್ದ ಖಾಸಗಿ ದೂರು ಆಧರಿಸಿ ಹೈಗ್ರೌಂಡ್ಸ್ ಪೊಲೀಸರು ಐಪಿಸಿ ಸೆಕ್ಷನ್‌ಗಳಾದ 153(ಎ), 504, 505(2), 464ರಡಿ ಪ್ರಕರಣ ದಾಖಲಿಸಿದ್ದರು.

ಬಸನಗೌಡ ಯತ್ನಾಳ್ ವಿರುದ್ಧದ ನಾಲ್ಕು ಕ್ರಿಮಿನಲ್ ಪ್ರಕರಣ ರದ್ದು

ಬೆಂಗಳೂರು: ''ದಿನೇಶ್ ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನ ಇದೆ,'' ಎಂಬುದೂ ಸೇರಿದಂತೆ ಹಲವು ಆಕ್ಷೇಪಾರ್ಹ ಹೇಳಿಕೆ ಹಾಗೂ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇರೆಗೆ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ರಾಜ್ಯದ ವಿವಿಧ ನಾಲ್ಕು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಗಳನ್ನು ಹೈಕೋರ್ಟ್ ಶುಕ್ರವಾರ ರದ್ದುಪಡಿಸಿದೆ.

ತಮ್ಮ ವಿರುದ್ಧ ವಿಜಯಪುರದ ಗಾಂಧಿ ಚೌಕ್, ಬೆಂಗಳೂರಿನ ಸಂಜಯನಗರ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ, ಬಾಗಲಕೋಟೆ ಜಿಲ್ಲೆಯ ಮುಧೋಳ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳು ಹಾಗೂ ಅದಕ್ಕೆ ಸಂಬಂಧಿಸಿದ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದು ಕೋರಿ ಯತ್ನಾಳ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳ ಕುರಿತು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಕೆಲ ಕಾಲ ವಿಚಾರಣೆ ನಡೆಸಿದ ನ್ಯಾಯಪೀಠ, ಅರ್ಜಿಗಳನ್ನು ಮಾನ್ಯ ಮಾಡಿ ಪ್ರಕರಣಗಳನ್ನು ರದ್ದುಪಡಿಸಿ ಆದೇಶಿಸಿತು.

ಅರ್ಜಿದಾರರ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, ''ಪ್ರಕರಣಗಳಲ್ಲಿ ಯಾವುದೇ ಹುರುಳಿಲ್ಲ, ಅರ್ಜಿದಾರರು ಉದ್ದೇಶಪೂರ್ವಕವಾಗಿ ಹೇಳಿಕೆಗಳನ್ನು ನೀಡಿಲ್ಲ, ಮಾತಿನ ಭರಾಟೆಯಲ್ಲಿ ಹೇಳಿಕೆ ನೀಡಿದ್ದಾರೆ. ಇದರಿಂದ ಬೇರೆಯವರಿಗೆ ನೋವು ಉಂಟು ಮಾಡುವುದು ಅವರ ಉದ್ದೇಶವಲ್ಲ,'' ಎಂದು ವಾದಿಸಿದರು.

ಕಳೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ವಿಜಯಪುರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಯತ್ನಾಳ್, 'ದಿನೇಶ್ ಗುಂಡೂರಾವ್ ಮನೆಯಲ್ಲಿ ಅರ್ಧ ಪಾಕಿಸ್ತಾನ ಇದೆ' ಎಂದು ಹೇಳಿದ್ದರು. ಈ ಸಂಬಂಧ ವಿಜಯಪುರದ ಗಾಂಧಿ ಚೌಕ್ ಪೊಲೀಸ್ ಠಾಣೆಯಲ್ಲಿ ಚುನಾವಣಾ ಕರ್ತವ್ಯದಲ್ಲಿದ್ದ ಅಧಿಕಾರಿ 2024ರ ಏಪ್ರಿಲ್‌ನಲ್ಲಿ ದೂರು ದಾಖಲಿಸಿದ್ದರು. ಇದೇ ಪ್ರಕರಣದಲ್ಲಿ ದಿನೇಶ್ ಗುಂಡೂರಾವ್ ಪತ್ನಿ ಟಬು ಗುಂಡೂರಾವ್ ಸಂಜಯನಗರ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ದೂರು ದಾಖಲಿಸಿದ್ದರು.

ಅಲ್ಲದೆ, ಬೈಲಹೊಂಗಲ ಪಟ್ಟಣ ಹಾಗೂ ಮುಧೋಳದಲ್ಲಿ ಹಿಂದೂ ಮಹಾಗಣಪತಿ ವಿಸರ್ಜನೆಯಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇರೆಗೆ 2024ರಲ್ಲಿ ಪ್ರತ್ಯೇಕ 2 ದೂರು ದಾಖಲಿಸಲಾಗಿತ್ತು.

2030ರ ವೇಳೆಗೆ 1 ಲಕ್ಷ ಮನೆಗಳ ನಿರ್ಮಾಣದ ಗುರಿ

ಡಿ.ಎಸ್. ಮ್ಯಾಕ್ಸ್ 20ನೇ ವಾರ್ಷಿಕೋತ್ಸವ

ಲಕ್ಕಿಡ್ರಾ 'ಫ್ಲಾಟ್ ಜತೆ ಭಾಗ್ಯ' ಆಕರ್ಷಕ ಬಹುಮಾನ ವಿತರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ಕೈಗೆಟುಕುವ ದರದಲ್ಲಿ ಗುಣಮಟ್ಟದ ಮನೆಗಳನ್ನು ನಿರ್ಮಿಸಿಕೊಡುವ ಮೂಲಕ ಮನೆಮಾತಾಗಿರುವ ಪ್ರಮುಖ ರಿಯಲ್ ಎಸ್ಟೇಟ್ ಸಂಸ್ಥೆ 'ಡಿ.ಎಸ್ ಮ್ಯಾಕ್ಸ್ ಪ್ರಾಪರ್ಟೀಸ್' ತನ್ನ ಸಾಧನೆಯ 20ನೇ ವರ್ಷದ ವಾರ್ಷಿಕೋತ್ಸವವನ್ನು ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಅದ್ಧೂರಿಯಾಗಿ ಆಚರಿಸಿತು.

ಇದೇ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ವಿಶೇಷ 'ಫ್ಲಾಟ್ ಜತೆ ಭಾಗ್ಯ' (ಲಕ್ಕಿ ಡ್ರಾ) ಯೋಜನೆಯಡಿ ವಿಜೇತ ಗ್ರಾಹಕರಿಗೆ ಉಚಿತವಾಗಿ 2 ಬಿಎಚ್‌ಕೆ ಮನೆ, ಕಾರು, 20 ದ್ವಿಚಕ್ರ ವಾಹನಗಳು, 30 ಗೃಹೋಪಯೋಗಿ ವಸ್ತುಗಳೂ ಸೇರಿದಂತೆ ಹಲವು ಆಕರ್ಷಕ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎಸ್.ಪಿ. ದಯಾನಂದ್, ''ನಮ್ಮ ಸಂಸ್ಥೆ ಸ್ಥಾಪನೆಯಾದ ಎರಡು ದಶಕಗಳಲ್ಲಿ 50 ಸಾವಿರಕ್ಕೂ ಹೆಚ್ಚು ಮನೆಗಳನ್ನು ನಿರ್ಮಿಸಿ ಗ್ರಾಹಕರಿಗೆ ಯಶಸ್ವಿಯಾಗಿ ಹಸ್ತಾಂತರಿಸಿದ್ದೇವೆ. ಪ್ರಸ್ತುತ ಬೆಂಗಳೂರಿನ ನಾಲ್ಕೂ ದಿಕ್ಕುಗಳಲ್ಲಿ ಇನ್ನೂ 25 ಸಾವಿರ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. 2030ರ ವೇಳೆಗೆ ಒಟ್ಟು 1 ಲಕ್ಷ ಮನೆಗಳನ್ನು ನಿರ್ಮಿಸಿ ಹಸ್ತಾಂತರಿಸುವ ದೊಡ್ಡ ಗುರಿ ಹೊಂದಿದ್ದೇವೆ,'' ಎಂದು ಪ್ರಕಟಿಸಿದರು.

20ನೇ ವರ್ಷದ ಸಂಭ್ರಮದ ಅಂಗವಾಗಿ ಗ್ರಾಹಕರಿಗಾಗಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಲಕ್ಕಿ ಡ್ರಾ ಸ್ಪರ್ಧೆಯನ್ನು ಅತ್ಯಂತ ಪಾರದರ್ಶಕವಾಗಿ, ಎಲ್ಲರ ಸಮ್ಮುಖದಲ್ಲೇ ನಡೆಸಲಾಯಿತು. ಸಂಸ್ಥೆಯ 'ಸ್ಕೈ ಸಿಸಿರಾ' ಯೋಜನೆಯಲ್ಲಿ ಮನೆ ಬುಕ್ ಮಾಡಿದ್ದ ಸಾಯಿ ಕೃಷ್ಣ ಅವರಿಗೆ ಲಕ್ಕಿ ಡ್ರಾದಲ್ಲಿ ಮತ್ತೊಂದು 2 ಬಿಎಚ್‌ಕೆ ಮನೆ ಉಚಿತವಾಗಿ ಸಿಕ್ಕಿದ್ದರಿಂದ ಅವರ ಸಂತಸ ಮುಗಿಲು ಮುಟ್ಟಿತ್ತು.

''ಪ್ರತಿಯೊಬ್ಬರಿಗೂ ಸ್ವಂತ ಮನೆ ಹೊಂದುವ ದೊಡ್ಡ ಕನಸಿರುತ್ತದೆ. ಸಾಮಾನ್ಯ ಜನರ ಈ ಸ್ವಂತ ಸೂರಿನ ಕನಸನ್ನು ಡಿ.ಎಸ್. ಮ್ಯಾಕ್ಸ್ ಸಂಸ್ಥೆ ನನಸು ಮಾಡುತ್ತಿದೆ. ಇತ್ತೀಚೆಗೆ ನಾನು ಕೂಡ ನನ್ನ ಸ್ವಂತ ಮನೆಗೆ ಪ್ರವೇಶಿಸಿದಾಗ ಆದ ಸಂತೋಷ ಅಪಾರವಾಗಿತ್ತು,'' ಎಂದು ನಟಿ ಕಾಜಲ್ ಅಗರ್ವಾಲ್ ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಕೇದಾರನಾಥದ ಭೀಮಾಶಂಕರ ಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ''ಡಿ.ಎಸ್. ಮ್ಯಾಕ್ಸ್ ಸಂಸ್ಥೆಯು ಬೆಂಗಳೂರಿನಲ್ಲಿ ಅತ್ಯುತ್ತಮ ಸಾಮಾಜಿಕ ಕಳಕಳಿಯ ಕೆಲಸ ಮಾಡುತ್ತಿದೆ. ಜನಸಾಮಾನ್ಯರ ಸ್ವಂತ ಮನೆಯ ಕನಸನ್ನು ಸಾಕಾರಗೊಳಿಸುತ್ತಿರುವ ಈ ಸಂಸ್ಥೆ ಹಿಮಾಲಯದಷ್ಟು ಎತ್ತರಕ್ಕೆ ಬೆಳೆಯಲಿ,'' ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಡಿ.ಎಸ್. ಮ್ಯಾಕ್ಸ್ ಸಮೂಹ ಸಂಸ್ಥೆಯ ಸಂಸ್ಥಾಪಕ ಹಾಗೂ ಮುಖ್ಯಸ್ಥ ಡಾ. ಕೆ.ವಿ. ಸತೀಶ್ ಉಪಸ್ಥಿತರಿದ್ದರು.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

RNI No. 71653/99
Vol. 27 Issue No.170

ಪ್ರಜ್ವಲ್ ಜಾಮೀನು ಅರ್ಜಿ: ಎಸ್ಐಟಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಮಹಿಳೆಯನ್ನು ವಿವಸ್ತ್ರಗೊಳಿಸಿ ಚಿತ್ರೀಕರಿಸಿದ ಆರೋಪದಡಿ ದಾಖಲಾಗಿರುವ ಪ್ರಕರಣದಲ್ಲಿ ಜಾಮೀನು ಕೋರಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿ ಸಂಬಂಧ ಹೈಕೋರ್ಟ್, ವಿಶೇಷ ತನಿಖಾ ದಳಕ್ಕೆ (ಎಸ್ಐಟಿ) ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ವಿಶೇಷ ನ್ಯಾಯಾಲಯ ಕಳೆದ ಏ.3ರಂದು ಜಾಮೀನು ಅರ್ಜಿ ತಿರಸ್ಕರಿಸಿರುವುದನ್ನು ಪ್ರಶ್ನಿಸಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಅರ್ಜಿಯು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಶುಕ್ರವಾರ ವಿಚಾರಣೆಗೆ ಬಂದಿತು. ಕೆಲಕಾಲ ಅರ್ಜಿದಾರರ ಪರ ವಕೀಲರ ವಾದ ಆಲಿಸಿದ ನ್ಯಾಯಾಲಯ, ಪ್ರತಿವಾದಿ ಎಸ್ಐಟಿಗೆ ನೋಟಿಸ್ ಜಾರಿಗೊಳಿಸಿ ಆಕ್ಷೇಪಣೆಗಳನ್ನು ಸಲ್ಲಿಸಲು ಸೂಚನೆ ನೀಡಿ ವಿಚಾರಣೆಯನ್ನು ಮುಂದೂಡಿತು.

ಪ್ರಕರಣದ ಹಿನ್ನೆಲೆ: 2019ರಲ್ಲಿ ಸಂಸದರ ಕೋಟಾದಲ್ಲಿ ತನ್ನ ಪುತ್ರನಿಗೆ ಕೇಂದ್ರೀಯ ವಿದ್ಯಾಲಯದಲ್ಲಿ ಸೀಟು ಕೊಡಿಸುವಂತೆ ಮಹಿಳೆಯು ಪ್ರಜ್ವಲ್‌ನನ್ನು ಸಂಪರ್ಕಿಸಿದ್ದರು. ಈ ಸಂದರ್ಭದಲ್ಲಿ ಆಕೆಯ ಮೊಬೈಲ್ ನಂಬರ್ ಸಂಗ್ರಹಿಸಿದ್ದ ಪ್ರಜ್ವಲ್, ಆಕೆಗೆ 2019 ಮತ್ತು 2021ರ ನಡುವೆ ಪದೇಪದೆ ಕರೆ ಮಾಡಿ ವಿವಸ್ತ್ರವಾಗಿ ಮೊಬೈಲ್ ಕ್ಯಾಮರಾದ ಮುಂದೆ ಬರುವಂತೆ ಪೀಡಿಸಿದ್ದನು. ಆಕೆ ವಿವಸ್ತ್ರವಾಗಿ ಕ್ಯಾಮೆರಾ ಮುಂದೆ ಬಂದಾಗ ಆಕೆಯ ಅನುಮತಿ ಇಲ್ಲದೇ ವಿಡಿಯೊ ರೆಕಾರ್ಡ್ ಮಾಡಿ, ಫೋಟೊಗಳನ್ನು ಸಂಗ್ರಹಿಸಿದ್ದರು. ತಾನು ಕರೆ ಮಾಡಿದಾಗ ಫೋನ್ ತೆಗೆಯದಿದ್ದರೆ ಅವುಗಳನ್ನು ಬಹಿರಂಗಗೊಳಿಸುವುದಾಗಿ ಬೆದರಿಸಿದ್ದನು.

ಭಾರತೀಯ ದಂಡ ಸಂಹಿತೆ 1860ರ (ಐಪಿಸಿ) ಕಲಂ 354 ಎ (ಲೈಂಗಿಕ ಕಿರುಕುಳ), 354ಬಿ (ವಿವಸ್ತ್ರಗೊಳಿಸಲು ಬೆದರಿಕೆ), 354ಡಿ (ಹಿಂಬಾಲಿಸುವುದು) ಮತ್ತು 506 (ಕ್ರಿಮಿನಲ್ ಬೆದರಿಕೆ) ಜತೆಗೆ ಮಾಹಿತಿ ತಂತ್ರಜ್ಞಾನ ಕಾಯಿದೆಯ 2000 ಕಲಂ 66ಇ ಮತ್ತು 67ರಡಿ ಪ್ರಕರಣ ದಾಖಲಿಸಲಾಗಿದೆ. ಪ್ರಜ್ವಲ್ ವಿರುದ್ಧ ಮೂರು ಅತ್ಯಾಚಾರ ಮತ್ತು ಮಹಿಳೆಯನ್ನು ವಿವಸ್ತ್ರಗೊಳಿಸಿದ ಪ್ರಕರಣವೂ ಸೇರಿದಂತೆ ಒಟ್ಟು ನಾಲ್ಕು ಪ್ರಕರಣ ದಾಖಲಾಗಿವೆ. ಈಗಾಗಲೇ ಒಂದು ಪ್ರಕರಣದಲ್ಲಿ ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

AMITY UNIVERSITY BENGALURU
Powering Progress

B.TECH

Placements That Power Your Future
- Top recruiters include TCS, Cognizant, Infosys, Tata Technologies, Capgemini, JTP, L&T Technology Services, DCB Bank, Hexaware, Euromonitor, Jio BP, DeltaX, Hiveminds, ICICI Lombard, Sheenlac Paints...
- Amity Innovation Incubator on campus to encourage entrepreneurial outlook

Where Industry Meets Education
- Live industry projects and workshops with global tech leaders from EMC², IBM, Oracle, Sun Microsystems & CA Technologies
- Numerous student-led innovations that solve real-world challenges with tangible impact

Cutting Edge Research & Discovery
- Several Govt funded research projects in collaboration with CSIR, DST, BRNS...
- Student special clubs like GitHub, Google Developer, Environmental Awakening...
- 35+ Hi-tech labs with state-of-the-art equipment

Experts Leading Your Learning Journey
- Ranked #1 All India (Emerging Pvt Univ) - TIMES Engineering '26
- 235+ Distinguished faculty, scientists & staff shaping the learning experience
- Faculty credited with many patents, books & chapters and 49 Scopus indexed publications

ENGINEERING
- B.TECH
  - CSE (AI & ML) • CSE
  - CSE-Cloud Comp/Robotics/ Data Analytics/Full Stack Dev
  - CSE-IoT • CSE-DevOps
  - ECE • EEE-EVT
  - Embedded System & VLSI
- M.TECH
  - CSE • Project Mgmt

OTHER PROGRAMMES OFFERED UNDER SCIENCE (MATHS) STREAM

COMPUTER SCIENCE / IT
- B.Sc-AI & ML • BCA
- M.Sc (Cyber Security/Data Sc)
- MCA-AI & ML • MCA

APPLIED SCIENCES
- B.Sc (Computer Sc, Maths & Stats)
- B.Sc (Phy, Maths & Computer Sc)
- B.Sc (Phy, Maths & Chem)
- B.Sc (Eco, Maths & Stats)
- M Sc (Physics/Chemistry/Stats)

Scholarships*	100%	50%	25%
UG Programmes			
12th (agg.)	95%	90%	85%
PG Programmes (Non-MBA)			
12th (agg.)	95%	90%	-
Graduation (agg.)	80%	75%	-
MBA			
CAT/MAT (%ile)	90	85	80
GMAT/GRE (Score)	650/161	600/157	500/152

*Offered in 50+ progs across various disciplines

To apply visit:
amity.edu/bengaluru
by: 24th June 2026
7303-399-000

NH 648, Devanahalli–Doddaballapur Road, Bengaluru | E: admissions.blr@amity.edu

ಅನಂತಕುಮಾರ್ ಹೆಗಡೆ ವಿರುದ್ಧದ ಪ್ರಕರಣಕ್ಕೆ ತಡೆ

ವಿಕ ಸುದ್ದಿಲೋಕ ಬೆಂಗಳೂರು

ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇರೆಗೆ ಕೇಂದ್ರದ ಮಾಜಿ ಸಚಿವ ಅನಂತಕುಮಾರ್ ಹೆಗಡೆ ವಿರುದ್ಧ ದಾಖಲಾದ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಮಂಡ್ಯ ಜಿಲ್ಲೆ ಮದ್ದೂರು ಪಟ್ಟಣದಲ್ಲಿ 2026ರ ಮಾ.23ರಂದು ಸ್ಥಳೀಯ ಹಿಂದೂ ಸಂಘಟನೆಗಳ ಒಕ್ಕೂಟ ಸ್ವಾತಂತ್ರ್ಯ ಸೇನಾನಿಗಳಾದ ಭಗತ್ ಸಿಂಗ್, ರಾಜಗುರು ಹಾಗೂ ಸುಖದೇವ್ ಅವರ ಸ್ಮರಣಾರ್ಥ ಹಮ್ಮಿಕೊಂಡ ಬಲಿದಾನ ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ್ದರು. ಈ ಘಟನೆ ಸಂಬಂಧ ತಮ್ಮ ವಿರುದ್ಧ ಮದ್ದೂರು ಪೊಲೀಸರು ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ದೂರು ಹಾಗೂ ಅದರ ಸಂಬಂಧ ವಿಚಾರಣಾ ಪ್ರಕ್ರಿಯೆ ರದ್ದು ಕೋರಿ ಅನಂತಕುಮಾರ್ ಹೆಗಡೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಶುಕ್ರವಾರ ವಿಚಾರಣೆಗೆ ಬಂದಿತ್ತು. ಕೆಲ ಕಾಲ ಅರ್ಜಿ ಆಲಿಸಿದ ನ್ಯಾಯಪೀಠ, ಪ್ರಕರಣಕ್ಕೆ ಮಧ್ಯಂತರ ತಡೆ ನೀಡಿ ಆದೇಶಿಸಿತು. ಅಲ್ಲದೆ, ಅರ್ಜಿ ಸಂಬಂಧ ಮದ್ದೂರು ಠಾಣಾ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜುಲೈ 10ಕ್ಕೆ ಮುಂದೂಡಿತು. ಅರ್ಜಿದಾರರ ಪರ ವಕೀಲ ಸುಯೋಗ್ ಹೇರಳೆ ವಕಾಲತ್ತು ವಹಿಸಿದ್ದರೆ, ಹಿರಿಯ ವಕೀಲ ಎಂ. ಅರುಣ್ ಶ್ಯಾಮ್ ವಾದ ಮಂಡಿಸಿದರು.





ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ)

ನಮ್ಮ ಭೂಮಿ ನಮ್ಮ ಹಕ್ಕು
ಬಿಡದಿ ಬೃಹತ್ ಪಾದಯಾತ್ರೆ

ನಿಮ್ಮ ಬೆವರಿನ ಈ ಮಣ್ಣನ್ನು ಯಾರೂ ಕಸಿಯಲಾರರು... ನಾವಿದ್ದೇವೆ ನಿಮ್ಮೊಂದಿಗೆ...

- ₹33,562 ಕೋಟಿ ಮೊತ್ತದ ರಿಯಲ್ ಎಸ್ಟೇಟ್ ವ್ಯವಹಾರವನ್ನು ತಡೆದು, ಬಿಡದಿಯ ಹಿತಾಸಕ್ತಿಯನ್ನು ಉಳಿಸಲು!
- 518 ಎಕರೆ ಕೃಷಿ ಭೂಮಿಯ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸಿ, 755 ರೈತ ಕುಟುಂಬಗಳ ಭವಿಷ್ಯವನ್ನು ಉಳಿಸಲು!
- ಹೆಚ್ಚುವರಿ 7,481 ಎಕರೆ ಭೂಸ್ವಾಧೀನ ಪ್ರಕ್ರಿಯೆ ವಿಸ್ತರಿಸುವ ಯೋಜನೆಯನ್ನು ತಡೆದು, ನಮ್ಮ ನೆಲವನ್ನು ಉಳಿಸಲು!
- ಮಾಸಿಕ 6 ಲಕ್ಷ ಲೀಟರ್ ಹಾಲು ಉತ್ಪಾದಿಸುವ ಹೈನುಗಾರಿಕೆ, ರೇಷ್ಮೆ ಹಾಗೂ ತೋಟಗಾರಿಕಾ ರಂಗದ ಜೀವನಾಧಾರವನ್ನು ಉಳಿಸಲು!
- 10 ಲಕ್ಷ ಅತ್ಯಮೂಲ್ಯ ಹಸಿರು ವೃಕ್ಷಗಳನ್ನು ಉಳಿಸಲು!
- ಭೂಮಾಲೀಕರ ಒಪ್ಪಿಗೆಯಿಲ್ಲದ ಈ ಜನವಿರೋಧಿ ಯೋಜನೆಯನ್ನು ಸಂಪೂರ್ಣವಾಗಿ ಕೈಬಿಡಿಸಿ, ಬಿಡದಿಯ ಅಸ್ತಿತ್ವವನ್ನು ಉಳಿಸಲು!

ಬನ್ನಿ, ಜೊತೆಯಾಗಿ ಹೆಜ್ಜೆ ಇಡೋಣ... ಬಿಡದಿಯ ಮಣ್ಣನ್ನು ಉಳಿಸೋಣ!

ಪಾದಯಾತ್ರೆ ಆರಂಭದ ಸ್ಥಳಕ್ಕಾಗಿ ಸ್ಕ್ಯಾನ್ ಮಾಡಿ

1 ಅಂಚಿಪುರ → 2 ಅಂಚಿಪುರ ಕಾಲೋನಿ → 3 ಬನ್ನಿಗಿರಿ → 4 ಮರೇವೇಗೌಡನದೊಡ್ಡಿ → 5 ಗುಂಡುತೋಪು → 6 ಗೊಲ್ಲಹಳ್ಳಿ → 7 ಕೋಡಿಪಾಳ್ಯ → 8 ಹೊಸೂರು (ಬಹಿರಂಗ ಸಭೆ)

21 ಜೂನ್, 2026 | ಭಾನುವಾರ | ಬೆಳಗ್ಗೆ 09:00 | ಅಂಚಿಪುರ ಗ್ರಾಮದಿಂದ ಹೊಸೂರು ವರೆಗೆ

ಇಂದಿನಿಂದ ಮಹಾರಾಜ ಟ್ರೋಫಿ ಟಿ20 ಟೂರ್ನಿ

ಬೆಂಗಳೂರು-ಗುಲ್ಬರ್ಗಾ ತಂಡಗಳಿಗೆ ಜಯದ ನಿರೀಕ್ಷೆ

■ **ವಿಕ ಸುದ್ದಿಲೋಕ** ಮೈಸೂರು

ಚುಟುಕು ಕ್ರಿಕೆಟ್ ಅಭಿಮಾನಿಗಳಿಗೆ ಭರ್ಜರಿ ಮನರಂಜನೆ ನೀಡಲಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಐದನೇ ಆವೃತ್ತಿಗೆ ಶನಿವಾರ ಮೈಸೂರಿನಲ್ಲಿ ಚಾಲನೆ ದೊರೆಯಲಿದೆ. ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ಮತ್ತು ಗುಲ್ಬರ್ಗಾ ಮಿಸ್ಟಿಕ್ಸ್ ತಂಡಗಳು ಉದ್ಘಾಟನಾ ಪಂದ್ಯದಲ್ಲಿ ಸೆಣಸಲಿದ್ದು ಶುಭಾರಂಭದ ನಿರೀಕ್ಷೆಯಲ್ಲಿವೆ. ದಿನದ ಎರಡನೇ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ಮತ್ತು ಮೈಸೂರು ವಾರಿಯರ್ಸ್ ತಂಡಗಳು ಸೆಣಸಲಿವೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಆಯೋಜಿಸಿರುವ ಈ ಪ್ರತಿಷ್ಠಿತ ಟೂರ್ನಿಯ ಪಂದ್ಯಗಳಿಗೆ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ ಸಜ್ಜಾಗಿದೆ. ಮೈಸೂರು, ಹುಬ್ಬಳ್ಳಿ ಹಾಗೂ ಬೆಂಗಳೂರಿನಲ್ಲಿ ಪಂದ್ಯಾವಳಿಗಳು ನಡೆಯಲಿದ್ದು, ಜೂನ್ 20ರಿಂದ 25ರವರೆಗೆ ಮೈಸೂರಿನಲ್ಲಿ 12 ಪಂದ್ಯಗಳು ನಡೆಯಲಿವೆ.

ಪ್ರಸಕ್ತ ಆವೃತ್ತಿಯಲ್ಲಿ ಹಾಲಿ ಚಾಂಪಿಯನ್ ಮೈಸೂರು ವಾರಿಯರ್ಸ್, ಶಿವಮೊಗ್ಗ ಯೋಧಾಸ್, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಕೋಸ್ಟಲ್ ಕಿಂಗ್ಸ್ ಮಂಗಳೂರು, ಗುಲ್ಬರ್ಗಾ ಮಿಸ್ಟಿಕ್ಸ್ ಹಾಗೂ ಹುಬ್ಬಳ್ಳಿ ಟೈಗರ್ಸ್ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ಕೋಸ್ಟಲ್ ಕಿಂಗ್ಸ್ ಮಂಗಳೂರು ಹಾಗೂ ಶಿವಮೊಗ್ಗ ಯೋಧಾಸ್ ತಂಡಗಳು ಮೊದಲ ಬಾರಿಗೆ ಟೂರ್ನಿಯಲ್ಲಿ ಕಣಕ್ಕಿಳಿಯುತ್ತಿರುವುದು ವಿಶೇಷ.

ಆರಂಭಿಕ ಪಂದ್ಯಗಳು ಮೈಸೂರಿನಲ್ಲಿ ನಡೆಯುತ್ತಿರುವುದು ಸ್ಥಳೀಯ ಕ್ರಿಕೆಟ್ ಅಭಿಮಾನಿಗಳಿಗೆ ಹಬ್ಬದ ವಾತಾವರಣ ಸೃಷ್ಟಿಸಿದ್ದು, ವಿಶೇಷವಾಗಿ ಮೈಸೂರು ವಾರಿಯರ್ಸ್ ತಂಡದ ಪಂದ್ಯಗಳು ಹೆಚ್ಚಿನ ಗಮನ ಸೆಳೆಯುವ ನಿರೀಕ್ಷೆಯಿದೆ. ತವರಿನ ಪ್ರೇಕ್ಷಕರ ಬೆಂಬಲದೊಂದಿಗೆ ತಂಡ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದೆ. ಪಂದ್ಯಾವಳಿಗೆ ಮಳೆ ಅಡ್ಡಿಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ವೈದ್ಯಕೀಯ ಸೌಲಭ್ಯ, ಅಗ್ನಿಶಾಮಕ ದಳ ಹಾಗೂ ಪೊಲೀಸ್ ಭದ್ರತೆಯ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಬಹುಮಾನ ಮೊತ್ತ

ಟೂರ್ನಿಯ ವಿಜೇತ ತಂಡಕ್ಕೆ 15 ಲಕ್ಷ ರೂ. ಬಹುಮಾನ ದೊರೆಯಲಿದ್ದು, ರನ್ನರ್-ಅಪ್ ತಂಡಕ್ಕೆ 10 ಲಕ್ಷ ರೂ. ನೀಡಲಾಗುತ್ತದೆ. ಸೆಮಿಫೈನಲ್‌ನಲ್ಲಿ ಸೋತು ಹೊರಬೀಳುವ ತಲಾ ತಂಡಕ್ಕೆ 5 ಲಕ್ಷ ರೂ. ಬಹುಮಾನ ನಿಗದಿಯಾಗಿದೆ.
ಇದಲ್ಲದೆ, ಸರಣಿ ಶ್ರೇಷ್ಠ ಪ್ರಶಸ್ತಿಗೆ 1 ಲಕ್ಷ ರೂ., ಪಂದ್ಯ ಶ್ರೇಷ್ಠ ಪ್ರಶಸ್ತಿಗೆ 25 ಸಾವಿರ ರೂ. ಹಾಗೂ ಅತ್ಯುತ್ತಮ ಬ್ಯಾಟರ್, ಬೌಲರ್ ಮತ್ತು ಫೀಲ್ಡರ್‌ಗಳಿಗೆ ತಲಾ 75 ಸಾವಿರ ರೂ. ಬಹುಮಾನ ನೀಡಲಾಗುತ್ತದೆ.

ಟಿಕೆಟ್ ದರ

ಮೈಸೂರಿನಲ್ಲಿ ನಡೆಯುವ ಪಂದ್ಯಗಳ ವೀಕ್ಷಣೆಗೆ ಸಾರ್ವಜನಿಕರಿಗೆ ಟಿಕೆಟ್ ವ್ಯವಸ್ಥೆ ಮಾಡಲಾಗಿದ್ದು, 100 ರೂ., 200 ರೂ. ಹಾಗೂ 250 ರೂ. ದರ ನಿಗದಿಪಡಿಸಲಾಗಿದೆ.

ಮೂರನೇ ಪ್ರಶಸ್ತಿಗೆ ವಾರಿಯರ್ಸ್ ತುಡಿತ

ವೈಶಾಖ್ ನಾಯಕತ್ವದಲ್ಲಿ ಕಣಕ್ಕಿಳಿಯಲು ಸಜ್ಜಾದ ಮೈಸೂರು ತಂಡ

ಮೈಸೂರು: ಹಿಂದಿನ ಹನ್ನೆರಡು ಆವೃತ್ತಿಗಳಲ್ಲಿ ಎರಡು ಬಾರಿ ಚಾಂಪಿಯನ್ ಸೇರಿದಂತೆ ಹಲವು ಏರಿಳಿತ ಕಂಡಿರುವ ಮೈಸೂರು ವಾರಿಯರ್ಸ್ ತಂಡ ಶನಿವಾರ ಮೈಸೂರಿನಲ್ಲಿ ಆರಂಭವಾಗಲಿರುವ 2026ರ ಮಹಾರಾಜ ಟ್ರೋಫಿ ಟಿ20 ಟೂರ್ನಿಯಲ್ಲಿ ಮೂರನೇ ಬಾರಿ ಟ್ರೋಫಿ ಗೆಲ್ಲುವ ಅದಮ್ಯ ಉತ್ಸಾಹದೊಂದಿಗೆ ಕಣಕ್ಕಿಳಿಯುತ್ತಿದೆ.

2014ರಲ್ಲಿ ಆರಂಭವಾದ ಕರ್ನಾಟಕ ಪ್ರೀಮಿಯರ್ ಲೀಗ್‌ನಲ್ಲಿ ಸಿಎಂ ಗೌತಮ್ ಸಾರಥ್ಯದಲ್ಲಿ ಆಡಿದ ಮೈಸೂರು ವಾರಿಯರ್ಸ್ ಪದಾರ್ಪಣೆ ಆವೃತ್ತಿಯಲ್ಲಿಯೇ ಚಾಂಪಿಯನ್ ಪಟ್ಟ ಅಲಂಕರಿಸಿ ಟೂರ್ನಿಯಲ್ಲಿ ತನ್ನ ಪ್ರಭುತ್ವ ಸಾಧಿಸಿದೆ. ಅಲ್ಲಿಂದ ಇದುವರೆಗೂ ನಡೆದ ಟೂರ್ನಿಯಲ್ಲಿ ಸತತವಾಗಿ ಪಾಲ್ಗೊಂಡಿರುವ ವಾರಿಯರ್ಸ್, ರಾಷ್ಟ್ರೀಯ ತಂಡಕ್ಕೆ ಪ್ರತಿಭಾನ್ವಿತ ಆಟಗಾರರನ್ನು ಉಡುಗೊರೆಯಾಗಿ ನೀಡಿದೆ. ಪದಾರ್ಪಣೆ ಟೂರ್ನಿಯಿಂದಲೂ ರಾಜ್ಯದ ಪ್ರತಿಭೆಗಳನ್ನು ಪೋಷಿಸುತ್ತಿರುವ ಮೈಸೂರು ತಂಡ, ಈ ಬಾರಿಯು ಅದೇ ಗುರಿಯನ್ನು ಹೊಂದಿದೆ. ಮೈಸೂರು ತಂಡವನ್ನು ಪ್ರತಿನಿಧಿಸಿದ ಅನೇಕ ಆಟಗಾರರು ರಾಷ್ಟ್ರ ಮಟ್ಟದಲ್ಲಿ ಮಿಂಚುತ್ತಿರುವುದು ತಂಡದ ಪ್ರತಿಭಾನ್ವೇಷಣೆಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದೆ.

ಎರಡು (2014 ಮತ್ತು 2024) ಬಾರಿ ಚಾಂಪಿಯನ್ ಮತ್ತು ಒಮ್ಮೆ ರನ್ನರ್ ಅಪ್ (2023) ಆಗಿರುವ ವಾರಿಯರ್ಸ್ ಟೂರ್ನಿಯಲ್ಲಿ ಅತ್ಯಂತ ಯಶಸ್ವಿ ತಂಡಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. ಕೆಪಿಎಲ್ ಟೂರ್ನಿಯು 2022ರಲ್ಲಿ 'ಮಹಾರಾಜ ಟ್ರೋಫಿ ಟಿ20 ಟೂರ್ನಿ' ಎಂದು ಮರು ನಾಮಕರಣಗೊಂಡ ನಂತರ ಸ್ಥಿರ ಪ್ರದರ್ಶನ ನೀಡಿದ ಅಗ್ರ ತಂಡಗಳಲ್ಲಿ ಒಂದಾಗಿರುವ ಮೈಸೂರು ತಂಡ, ಹಿಂದಿನ ನಾಲ್ಕು ವರ್ಷಗಳ ಪೈಕಿ ಮೂರು ಆವೃತ್ತಿಗಳಲ್ಲಿ ಕ್ರಮವಾಗಿ ಪ್ಲೇಆಫ್ ರನ್ನರ್ ಅಪ್ ಮತ್ತು ಚಾಂಪಿಯನ್ ಆಗಿದೆ. ಆದರೆ ಹಿಂದಿನ ಆವೃತ್ತಿಯಲ್ಲಿ ಲೀಗ್ ಹಂತದಲ್ಲೇ ನಿರ್ಗಮಿಸಿದ್ದ ಮೈಸೂರು ತಂಡ ಐದನೇ ಆವೃತ್ತಿಯಲ್ಲಿ ರಾಜ್ಯ ರಣಜಿ ತಂಡದ ವೇಗಿ ವೈಶಾಖ್ ವಿಜಯ್ ಕುಮಾರ್ ಸಾರಥ್ಯದಲ್ಲಿ ಹೊಸ ಅವತಾರದೊಂದಿಗೆ ಹಿಂದಿನ ಚಾಂಪಿಯನ್ ವೈಭವವನ್ನು ಮರುಕಳುಹಿಸಲು ಸಜ್ಜಾಗಿದೆ.

ಟೀಮ್ ಇಂಡಿಯಾ ಪರ ಟೆಸ್ಟ್, ಏಕದಿನ ಮತ್ತು ಟಿ20 ಪಂದ್ಯಗಳನ್ನಾಡಿದ ಅನುಭವ ಹೊಂದಿರುವ ಐಪಿಎಲ್ ಸ್ಫೋಟಕ ಬ್ಯಾಟರ್ ದೇವದತ್ ಪಡಿಕ್ಕಲ್ ಮೊದಲ ಸಲ ವಾರಿಯರ್ಸ್ ತಂಡವನ್ನು ಪ್ರತಿನಿಧಿಸುತ್ತಿದ್ದು, ತಂಡದ ಬ್ಯಾಟಿಂಗ್ ಬೆನ್ನೆಲುಬಾಗಿದ್ದಾರೆ. ಹಾಗೆಯೇ ಐದನೇ ಬಾರಿ ತಂಡವನ್ನು ಪ್ರತಿನಿಧಿಸುತ್ತಿರುವ ವೈಶಾಖ್ ನೇತೃತ್ವದಲ್ಲಿ ಅಖಾಡಕ್ಕಿಳಿಯುತ್ತಿರುವ ವಾರಿಯರ್ಸ್ ಪ್ರಶಸ್ತಿ ಗೆಲ್ಲುವ ಫೇವರಿಟ್ ತಂಡಗಳಲ್ಲಿ ಒಂದಾಗಿದೆ.

ಫ್ರಾಂಚೈಸಿಯು ನಿರಂತರವಾಗಿ ಪ್ರತಿಭೆಗಳನ್ನು ಪೋಷಿಸಿದೆ ಮತ್ತು ಬಲವಾದ ಕ್ರಿಕೆಟ್ ಸಂಸ್ಕೃತಿಯನ್ನು ನಿರ್ಮಿಸಿದೆ. ಇಂತಹ ಪ್ರತಿಭಾವಂತ ಮತ್ತು ಬದ್ಧತೆಯ ಆಟಗಾರರ ಗುಂಪನ್ನು ಮುನ್ನಡೆಸುವ ಜವಾಬ್ದಾರಿ ವಹಿಸಲು ನನಗೆ ಹೆಮ್ಮೆ ಇದೆ.

- ವೈಶಾಖ್ ವಿಜಯ್ ಕುಮಾರ್
ಮೈಸೂರು ವಾರಿಯರ್ಸ್ ತಂಡದ ನಾಯಕ

ಛಾಪು ಮೂಡಿಸಲು ಉತ್ಸುಕರಾಗಿರುವ ಯುವ ಮತ್ತು ಅನುಭವಿ ಆಟಗಾರರ ತಂಡವನ್ನು ನಾವು ಹೊಂದಿದ್ದೇವೆ. ತಂಡವು ಉನ್ನತ ಮಟ್ಟದಲ್ಲಿ ಸ್ಪರ್ಧಿಸುವ ಕೌಶಲ ಮತ್ತು ದೃಢತೆಯನ್ನು ಹೊಂದಿದೆ ಎಂದು ನಾವು ಭಾವಿಸುತ್ತೇವೆ.

- ಅರ್ಜುನ್ ರಂಗ ಮೈಸೂರು ವಾರಿಯರ್ಸ್ ತಂಡದ ಮಾಲೀಕ

ಸಿಡಬ್ಲ್ಯುಜಿ: ಭಾರತದಿಂದ 125-130 ಅಥ್ಲೀಟ್ಸ್ ಕಣಕ್ಕೆ

ಹೊಸದಿಲ್ಲಿ: ಜುಲೈ-ಆಗಸ್ಟ್‌ನಲ್ಲಿ ನಡೆಯಲಿರುವ ಗ್ಲಾಸ್ಗೊ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತವನ್ನು 125 ರಿಂದ 130 ಕ್ರೀಡಾಪಟುಗಳು ಪ್ರತಿನಿಧಿಸಲಿದ್ದಾರೆ ಎಂದು ಭಾರತೀಯ ಒಲಿಂಪಿಕ್ ಅಸೋಸಿಯೇಷನ್‌ನ (ಐಒಎ) ಸಿಇಒ ರಘುರಾಮ್ ಅಯ್ಯರ್ ಶುಕ್ರವಾರ ಹೇಳಿದ್ದಾರೆ.

ಜುಲೈ 23 ರಿಂದ ಆಗಸ್ಟ್ 2 ರವರೆಗೆ ನಿಗದಿಯಾಗಿರುವ 2026ರ ಕಾಮನ್‌ವೆಲ್ತ್ ಕ್ರೀಡಾಕೂಟವು ಕೇವಲ 10 ಸಾಮಾನ್ಯ ಮತ್ತು ಆರು ವಿಶೇಷ ಚೇತನರ ಕ್ರೀಡೆಗಳನ್ನು ಒಳಗೊಂಡಿರುತ್ತದೆ. ಹೆಚ್ಚುತ್ತಿರುವ ವೆಚ್ಚದಿಂದಾಗಿ ಆಸ್ಟ್ರೇಲಿಯಾದ ವಿಕ್ಟೋರಿಯಾ ರಾಜ್ಯದಿಂದ ಹೊರಬಂದ ನಂತರ ಗ್ಲಾಸ್ಗೋ ಕೂಟಕ್ಕೆ ಆತಿಥ್ಯ ಕಲ್ಪಿಸಿದೆ. ''ನಾವು ಒಟ್ಟು 125-130 ಕ್ರೀಡಾಪಟುಗಳನ್ನು ಹೊಂದಿದ್ದೇವೆ. 3ನೇ ಒಂದು ಭಾಗದಷ್ಟು ಕ್ರೀಡಾಪಟುಗಳು ಸಹಾಯಕ ಸಿಬ್ಬಂದಿಯಾಗಿರುತ್ತಾರೆ,'' ಎಂದು ರಘುರಾಮ್ ತಿಳಿಸಿದ್ದಾರೆ.

ರಾಷ್ಟ್ರೀಯ ಈಜು: ತನಿಷಿ, ತಾನ್ಯಾ ದಾಖಲೆ

■ **ವಿಕ ಸುದ್ದಿಲೋಕ** ಬೆಂಗಳೂರು

ತನಿಷಿ ಗುಪ್ತಾ

ತಾನ್ಯ ಷಡಾಕ್ಷರಿ

ಕರ್ನಾಟಕದ ತಾನ್ಯಾ ಷಡಾಕ್ಷರಿ ಅಹಮದಾಬಾದ್‌ನಲ್ಲಿ ನಡೆಯುತ್ತಿರುವ ಹಿರಿಯರ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಮಹಿಳೆಯರ 400 ಮೀ. ಮೆಡ್ಲೆ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಬಂಗಾರದ ಪದಕ ಜಯಿಸಿದ್ದಾರೆ. ಇದೇ ವೇಳೆ ತನಿಷಿ ಗುಪ್ತಾ ಮಹಿಳೆಯರ 100 ಮೀ.ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನಕ್ಕೆ ಕೊರಳೊಡ್ಡಿದರು.

ಶುಕ್ರವಾರ ನಡೆದ ಸ್ಪರ್ಧೆಯಲ್ಲಿ ತಾನ್ಯಾ 4:56.78 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ಮುಟ್ಟಿದರು. ಇದರೊಂದಿಗೆ 2018ರಲ್ಲಿ ರಿಚಾ ಮಿಶ್ರಾ ನಿರ್ಮಿಸಿದ್ದ 4:59.17 ಸೆ.ಗಳ ದಾಖಲೆಯನ್ನು ಅಳಿಸಿ ಹಾಕಿದರು. ಪುರುಷರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ರಾಜ್ಯದ ಅನೀಶ್ ಗೌಡ (1:50.65) ಮತ್ತು ದರ್ಶನ್ ಎಸ್ (1:51.85 ಸೆ.) ಕ್ರಮವಾಗಿ ಮೊದಲೆರಡು ಸ್ಥಾನಗಳನ್ನು ಹಂಚಿಕೊಂಡರು.

100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ತನಿಷಿ 1:00.07 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ, ಫೈನಲ್ ಸ್ಪರ್ಧೆಗೂ ಮುನ್ನ ತಾವೇ ನಿರ್ಮಿಸಿದ್ದ ದಾಖಲೆಯನ್ನು ತಿದ್ದಿ ಬರೆದರು. ಕರ್ನಾಟಕ ಒಟ್ಟು 13 ಚಿನ್ನ ಸೇರಿ 30 ಪದಕಗಳನ್ನು ಜಯಿಸಿದೆ.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಆಸ್ತಿಗಳು PROPERTY

BANGALORE PROPERTIES

INTERNATIONAL AIRPORT - AROUND

19602 Sq.ft Converted EKhata 15AC Furnished Rooms Garden 21KSFt-Builtup 4Km Before Prestige Golfshire NandiHills 15Cr NoNego Ph:9677002197 OM

RT NAGAR

COMMERCIAL building for sale 4950 sqft g/f super market 2nd floor gym rental income 6 to 7 lakh near Sriram apartments Hebbal Contact 9448046717

FOR SALE

BANGALORE

SITE sale 35x50 west face, Rashi Gateway near D-mart, Nelamangala-Tumkur Toll. Ph-9880093622

PROPERTY ANCILLARIES

LEASE & RENT

SAHAKARANAGAR
FOR RENT
Houses For Rent 2/3 BHK
Call: 9449987986

DEE ENCLAVE 2 BHK Independent House, with car Parking avble for rent Rs. 30K also 2 BHK houses Rs.20K to 25K. 9449987986

ಪ್ರವಾಸ TRAVEL

TOURS & TRAVELS

15-07-26 5 ದಿನ ಹೊರನಾಡು, ಕೊಲ್ಲೂರು, ಗೋಕರ್ಣ,ಧರ್ಮಸ್ಥಳ 22-07-26 5 ದಿನ ಅಹೋಬಿಲ, ಶ್ರೀಶೈಲ, ಮಂತ್ರಾಲಯ, ಯಾಗಂಟಿ ಶ್ರೀವಿನಾಯಕ ಟ್ರಾವಲ್ಸ್9972500645

14/8/2026 ರಿಂದ 4 ದಿನಗಳು ವಿಮಾನದಲ್ಲಿ ಕಾಮಕ್ಯದೇವಿ ವಿಐಪಿ ದರ್ಶನ ಮೇಘಾಲಯ ಶಿಲ್ಲೊಂಗ್ ಚಿರಪುಂಜಿ ರೂ 37000/ ಶ್ರೀ ರಾಮ್ ಟೂರ್ಸ್ 9108933383 /9606600383

ಉದ್ಯೋಗ RECRUITMENT

SITUATION VACANT

MARKETING, ADVERTISING & SALES

GENERAL

ಎಳನೀರು ಕತ್ತರಿಸುವ ಕಾರ್ಮಿಕರು ಬೇಕಾಗಿದ್ದಾರೆ
ಬೆಂಗಳೂರಿನಾದ್ಯಂತ ಮಳಿಗೆಗಳಿಗೆ
ಎಳನೀರು ಕತ್ತರಿಸುವ ಕಾರ್ಮಿಕರು (ಅನುಭವವಿರುವವರು) ಬೇಕಾಗಿದ್ದಾರೆ / ಕುಟುಂಬಕ್ಕೆ ಆದ್ಯತೆ. ಪಾರ್ಟ್ ಟೈಮ್ ವಿದ್ಯಾರ್ಥಿಗಳಿಗೂ ಅವಕಾಶ. ವಾಸತಿಯೊಂದಿಗೆ ಉತ್ತಮ ಸಂಬಳ ಜೊತೆಗೆ ಇನ್ಸೆಂಟಿವ್ಸ್ ಇರುತ್ತದೆ. 8884488887 / 9035813667

OTHER VACANCIES

GENERAL

ಉಡುಪಿಯಲ್ಲಿ ಬ್ಯೂಟಿಸೆಲೂನ್‌ಗೆ ಜಂಟ್ಸ್ ಬ್ಯೂಟಿಷನ್, ಲೇಡಿಸ್ ಬ್ಯೂಟಿಷನ್, ಲೇಡಿಸ್ ರಿಸಪ್ಶನಿಸ್ಟ್ ಬೇಕಾಗಿದ್ದಾರೆ. ಉತ್ತಮ ವೇತನ, ಕಮಿಷನ್, ಉಚಿತ ವಸತಿ ಸೌಲಭ್ಯವಿದೆ. ಸಂಪರ್ಕಿಸಿರಿ: 9900250666, 9481269415.

MULTIPLE VACANCIES

ಬೆಂಗಳೂರಿನಲ್ಲಿ ಕೆಲಸ ಮಾಡಲು 18 ವರ್ಷ ಮೇಲ್ಪಟ್ಟ ಯುವಕರು ಬೇಕಾಗಿದ್ದಾರೆ. Drivers(Goods)-18k, Electrician-18k, Carpenter-18k, Helpers-15k ಉಚಿತ ವಸತಿ Contact:9845026220

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

WORK FROM HOME

ಮನೆಯಿಂದಲೇ ಮಾಡುವ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ, ಪ್ಯಾಕಿಂಗ್ ಪೀಕಿಂಗ್, ಡೇಟಾ ಎಂಟ್ರಿ, ಅಪ್ಲಿಕೇಶನ್ ಫೆಲ್ಲಿಂಗ್, ಬಡವರಿಗೆ ಮಾತ್ರ: 8951835051, 8951874031

JOB WANTED

WANTED General Manager, Branch Manager & Project Manager with Real Estate Exp. Any qualif salary upto Rs.60k, Age 30+ yrs, Male or Female. Kannada,English,Hindi speak knowledge. Corporate ofc at Jayanagar, Branch ofc Sahakarnagar,Call: 7676302393

tender & notices

TENDERS

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ
ಒಳ್ಳೆಯ ಜನ, ಒಳ್ಳೆಯ ಬ್ಯಾಂಕ್
ಟೆಂಡರ್ ಪ್ರಕಟಣೆ
ಸಾರ್ವಜನಿಕ ವಲಯದ ಅಗ್ರಗಣ್ಯ ಬ್ಯಾಂಕುಗಳಲ್ಲಿ ಒಂದಾದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ತನ್ನ ಜ್ಞಾನ ಕೇಂದ್ರದಲ್ಲಿ ಹೌಸ್‌ಕೀಪಿಂಗ್, ಕಾರ್ಪೆಂಟ್ರಿ, ಎಲೆಕ್ಟ್ರಿಕಲ್ , ಗಾರ್ಡನಿಂಗ್, ಪ್ಲಂಬಿಂಗ್, STP ಆಪರೇಟರ್, ಹೈನುಗಾರಿಕೆ, ಕೃಷಿ ಚಟುವಟಿಕೆ ಮತ್ತು ಸಂಬಂಧಿತ ನಿರ್ವಹಣೆ ಕಾರ್ಯಗಳಿಗಾಗಿ ಏಜೆನ್ಸಿ / ಗುತ್ತಿಗೆದಾರರ ಆಯ್ಕೆಗಾಗಿ RFP ಅನ್ನು ಆಹ್ವಾನಿಸುತ್ತದೆ. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು https://unionbankofindia.bank.in ಅಥವಾ ಸರ್ಕಾರೀ ಜಾಲತಾಣ https://gem.gov.in ಸಂದರ್ಶಿಸುವುದು. ಬಿಡ್ ಸಲ್ಲಿಸಲು ಕೊನೆಯ ದಿನಾಂಕ 07.07.2026 ಸಂಜೆ 4.00 ಗಂಟೆಯ ವರೆಗೆ.

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ / ಇಮೇಲ್ / ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ / ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ / ಎನ್‌ಇಎಫ್‌ಟಿ / ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ಇರ್ಫಾನ್ ಶೇಖ್ 8088815336
irfan.shekh@timesofindia.com

personal

CHANGE OF NAME

I, PRIYA PRAMOD NANDAGAWALI D/o Shaik Moulali, R/o 20/1a-4-60/2, Gadham Rasaiah Nagar, Kothur Revenue Sabwad Road No 3, Andhra Pradesh-524004. I have changed my name to SHAIK SADIQUNNISA vide affidavit dated: 06/06/2026 Before Notary C.Sharada, Bengaluru.

WE, M. Yalla Muralikrishna S/o Simhachalam aged 38 years & Mrs. Dandagala Tirumala, W/o Yalla Muralikrishna aged 33 Years. R/o F11,Prabhavathi Paramount,Kammasandra B'lore-100.my son name mentioned as Sekhar Yalla Instead of Yalla Sekhar in Birth certificate Vide Affidavit dt 19/6/26. Henceforth, My son shall be known as Yalla Sekhar Further for all Purposes. We Further request that the names of the parents in the birth certificate be Recorded exactly as mentioned per Aadhaar cards Notary BM.Chandrasekar Bangalore

I, Mohamad Shakil Akhtar S/o Mohamad Habibur Rahaman, aged 49 years, R/o FF1, 1st Floor, Orchid Residency, 1st Cross, Aradhana Layout, Arekere MICO Layout, Bangalore - 560076, declare that Mohamad Shakil Akhtar, MD Shakil Akhtar & Mohamad Shakil Akthar are one and the same person. Henceforth I shall be known as Mohamad Shakil Akhtar vide Affidavit dated 15June2026 before Notary Neha Baddi, Bangalore.

I ASHWINI DEVARAJ, W/o K.N. Ajit Simha, aged 51 years, R/at No.170/A Preethi Nakshatra, A7, 5th Main, Ist Phase, 1st Stage, Manjunathanagar, Bangalore 560010 do hear by declare that my correct name is ASHWINI DEVARAJ, but in my passport my name is shown as ASHWINI AJIT SIMHA instead of ASHWINI DEVARAJ, hence I would like to change my name as ASHWINI DEVARAJ, Vide affidavit dated 10th June 2026, sworn before Advocate and Notary PUTTARAMAIAH at Bangalore.

I, VIJAYAKUMAR PARTHIHALLY VENKATARAO Having Address # 86/1 1st Main Road Pushpagirinagar Near Hebbar Condiments Hosakerehalli Banashankari 3rd Stage Bangaluru-560085. I hereby Declare That the names VIJAYAKUMAR PARTHIHALLY VENKATARAO and VIJAY KUMAR One And Same Person., Vide Affidavit Dated 17/03/2026 Sworn To Before ARUNA V Advocate And Notary Bangalore

ನಾನು ನೇವಲ್ ಅಗರವಾಲ್ ಬಿನ್ ಗುಲಾಬ್‌ರಾಯ್, ನಂ. 2594, ಬನಶಂಕರಿ 2ನೇ ಹಂತ, ಬೆಂಗಳೂರು-560070ನಲ್ಲಿ ವಾಸಿಸುತ್ತಿದ್ದೇನೆ. ಭವಿಷ್ಯದ ಎಲ್ಲಾ ಉದ್ದೇಶಗಳಿಗಾಗಿ ನಾನು ನನ್ನ ಹೆಸರನ್ನು ನೇವಲ್ ಕುಮಾರ್ ಗುಲಾಬ್‌ರಾಯ್ ಅಗರವಾಲ್ ನಿಂದ ನೇವಲ್ ಅಗರವಾಲ್ ಎಂದು ಬದಲಾಯಿಸಿಕೊಂಡಿದ್ದೇನೆ. ಎಸ್. ಎನ್. ಮಧು ನೋಟರಿ, ಬೆಂಗಳೂರು ಇವರ ಮುಂದೆ ಪ್ರಮಾಣೀಕರಿಸಿದ್ದೇನೆ.

I, SYEDA RESHMA JAINAB, R/a. 3159, Budikote Road, Bangarpet, KGF Kolar-563114. in my Children Education and other documents my name was mention as RESHMA ZAINAB, I, further state that both name i.e. SYEDA RESHMA JAINAB and RESHMA ZAINAB. the both name belongs to me only. Vide affidavit, dated 17/06/2026 Sworn before Notary: Meer Hassan Bangalore

I, NITEESHA GRANTAKOTE RAMESHKUMAR S/o Nagaraja Ramesh Kumar aged about 18 years R/At Flat No. 305,3rd Floor,Tirumala Homes, Kodipalya Main Rd,Kengeri, B'luru-560060 have changed my name to NITEESHA GRANDIKOTA RAMESH KUMAR vide affidavit dtd:17/06/2026 sworn before notary Uday Kumar K, B'luru.

I, RAJ KUMAR SHANTAPPA EARNEST, S/o. Late Earnest Shantappa, R/a No. 692, 11th Cross, M.C Layout, Vijayanagar, Bengaluru-560 040, have changed my name from RAJ KUMAR SHANTAPPA EARNEST to RAJKUMAR EARNEST SHANTAPPA, vide affidavit dated 19.06.2026, sworn before Notary Deepa M, Bengaluru.

"I, Pala Leela Rani, R/o 4E, SVM Paradise Apt, B Narayanapura, Satya Colony, Bangalore-560016, have changed my name to Bora Leela Rani vide affidavit dated 18/06/2026 sworn before Notary J.Anand Kumar at Bangalore."

I, Megha Yelkur W/o Vasantha Kumar Huligi R/o No 22 Krupanidhi, 2nd Floor, Subramanyapura Road, Churuch Cross Road Uttarahalli Bengaluru- 560061 have changed my name to Megha Huligi for all purposes

I, Rizwana Sultana R/A No.50A, 4th Main, Ward No.22, 3rd Block, 2nd Stage, Kottipura, Ramanagaram-562159, have changed my name as RIZUANA SULTHANA, vide affidavit dated 18/06/26 sworn bfr notary Mamatha N K, Blr.

I, MEHAK PRAFULL SANCHETI, Residing at No 111, 3rd Main, 4th Block, Rajajinagar, Bangalore-560010, Have changed my name to MEHAK PRAFULL vide affidavit dated 18/06/2026 sworn before Notary Aravind Patil G.G Bangalore

I, Mubeen Taj Mohammed Ali W/o Akbar Ali R/o #37 1st Floor, 4th Cross Sonnathammanahalli T C Palya K R Puram B'luru-560016 have changed my name to Mubeen Taj for all purposes.

I, Kajalben Viramgami W/o 6507147M, Sep/ASH, Ajay Pal Singh of 1 ATC changed my name Kajalben Viramgami to Kajalben Atulbhai Viramgamiya, for all Purpose.

I, Bheemesh Sagar R/o.No 11-9-52,Bresthwar pet, Raichur 584101. Karnataka have changed my name to Bheemesh Sagar.Y for all purposes.

I, JC-677374N, Nb Sub, P Sampath Kumar of 1 ATC changed my son's name P Vikram Adithya to Paili Vikram Adithya for all purpose

I, TASNEEM SHAIKH W/o. Nasir Pasha, R/a No16/1, 2nd Flr, Ahmed Sait Rd,Mosque Rd, Frazer Town Bengaluru-05, I, have Changed my minor son name will be change from SYED ZAHEED to SYED TALHA, Vide affidavit dated 16/06/2026 Sworn before Notary R Basavaraja Bangalore

I, GIRISH, Residing At Flat No. A-808, A Block, Brigade 7 Gardens Apt, Sy 37/1, Uttarahalli, Subramanyapura, Bangalore - 560061, have changed my name to GIRISH NAKOD, vide affidavit dated 17/06/2026, sworn before notary Venkataraju H G, Bangalore.

I, Supriyo Mukherjee resident of Flat no 201, Salarpuria Cambridge Residency, 32/2 Someswarapura,1st cross, Cambridge Layout Bangalore-8 have changed my name to Supriyo Mukhopadhyay & henceforth, I shall be known as Supriyo Mukhopadhyay for all purposes.

I, MOHAMMED TAHER, R/a.#108,3rd Floor 5th Cross, Chandni Chowk Road, Shivajinagar Bangalore-51. I, have Changed my name to MOHAMED TAHER vide affidavit dated 09/06/2026 Sworn before Notary G Dayananda Bangalore

I, RAVIKUMARA S M, S/o Marigowda, R/o No. 3153, 9th Cross, C Block, Gayathri Nagar, Bangalore North Bengaluru - 560021, Karnataka have changed my name to RAVIKUMAR SRIRAMANAHALLY MARIGOWDA for all purposes.

I, RAHMATULLA SHARIFF & RAHAMATHULLA SHARIEF, R/a. No.3227,Kumbar Road, Bangarpet-563114. I, have changed my name to RAHAMATHULLA SHARIFF, Vide affidavit dated 18/06/2026 Sworn before Notary Meer Hassan Bangalore

I, Aditi D/o Virender Goel R/o C-307, Godrej Ecity, Bengaluru-100 have changed my name to Aditi Gupta for all purposes.

I, P Vanaja W/o JC-677374N, Nb Sub, P Sampath Kumar of 1 ATC changed my name P Vanaja to Paili Vanaja, for all Purpose.

I, JC-677374N, Nb Sub, P Sampath Kumar of 1 ATC changed my daughter's name P Chaitra to Paili Chaitra, for all purpose.

I, KUMAR SWAMI, Residing at No. E/4/69/6, Peth Ammapur Tq, Shorapur, Yadgir – 585224, have changed my name to GUDDADAGI KUMARSWAMY, vide affidavit dated 08/06/2026, sworn before notary Venkataraju H G, Bangalore.

I, Rekha Huligi W/o Bharath Balakundi (Late) No 22 Krupanidhi, 1st Floor, Subramanyapura Road, Church Cross Road Uttarahalli, Bengaluru- 560061 have changed my name to Rekha Balakundi for all purposes

I, SRINIVASA, S/o N R Srinivas, R/o 107, Niduvalli, Chikkamangaluru, Karnataka-577182. I have changed my name to NIKHIL KUMAR S vide affidavit dated: 06/06/2026 Before Notary C.Sharada, Bengaluru.

I,SONY RIJUL W/O, RIJUL KUNJAN R/O Flat No 201, 2nd Floor, Sai Brindavan Enclave Channasandra, RR Nagar, Bengaluru-560098 currently holding the passport no P4291456 have changed my name to SONY VENUGOPAL.

I, 6507147M, Sep/ASH, Viramgami Atul Chhanabhai of 1 ATC my father changed name Viramgami Chhanabhai Shamjibhai to Viramgamiya Chhanabhai Shamjibhai, for all purpose.

VERTIKA D/o Hari Shankar Shukla, 28 yrs, at Flat 004, Vaswani Golf Vista, Domlur, B-17 have changed my Name Vertika Shukla Affidavit Rajendra Advocate Dt: 19-6-2026

I, 6507147M, Sep/ASH, Viramgami Atul Chhanabhai of 1 ATC my mother changed name Viramgami Lalitaben to Viramgamiya Valiben Chhanabhai, for all purpose.

I, Aaditya Udayan Shah R/o F102 Nishant Darpan Apt Nehrunagar MN RD Seshadripuram Blore-20 Have Changed My Name To Aaditya Shah

I Rajendra Prasad R/o No 15 2nd floor 7th Cross Ganapathy Nagar Blore-26 Have Changed My Name To Rajendra Prasad Ananthappa

LOST & FOUND

I, Sri. V. RAMANJINAYA alias RAMANJANEYALU.V alias V. RAMANJANEYA has lost original Registered Document No. BLN-1-06484/2006-07,Book-I, Recorded in C.D. No. BLND260 dtd. 29.04.2006 registered in the office of Sub-registrar Bangalore North Taluk, in respect of Site No. 16, Katha No. 17, Assessment No.76 situated at Ganigarahalli Village, Yeshwanthapura Hobli, Bangalore North Taluk, while shifting my house LIC Colony to Mohanakumar Nagar, Yeshwanthapur. If any person found Call 9739374836.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು / ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

CAUTION NOTICE
Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

GALLERIA

Unique Handicrafts & Handlooms Exhibition displayed under one roof
RAJASTHAN CRAFT & WEAVES
SHOPPING FESTIVAL
Exhibition Cum Sale
19-06-2026 to 02-08-2026
10.30 am to 9.30 pm
Venue : Open Exhibition Ground
Near to Vasavi Mahal Kalayana Mantapa, Opp. Shell Petrol Pump
Raja Rajeshwari Nagara, Bengaluru
SCAN ME
BENGALURU BOOK FESTIVAL
BOOKS AT ₹99/- SALE!! ONLY FOR FEW DAYS
₹150/-| ₹199/- | ₹250/- | ₹299/-
* Upto 50% Less on Brand New Books
SELL YOUR OLD BOOKS
50000+ New & pre-owned books | Premium Collection
National & International bestsellers | Free bookmarks as per books
10%-50% OFF ON BESTSELLER BOOKS
FOLLOW US ON BESTSELLERBOOKS123 BESTSELLERBOOKS123
HAPPY SHOPPING KEEP READING ! KEEP EXPLORING !
Entry & Parking Free | All Credit-Debit Cards & E-Payments Accepted
Call : 9590402020, 7892455765 : rcw.in
Award Winning Artisans & Weavers Regd. by : Ministry of Textiles (Govt. of India) Organised by : Rajasthan Craft & Weaves

GET NOTICED

THE SOUQ (Market)
Entry Free
Arts, Crafts and Handlooms Exhibition
19th to 28th June 2026
10:30 AM to 7:00 PM
70+ Stalls | 40+ Craftsman | 10 Days Exhibition
For Details Contact : 6364685716
Karnataka Chitrakala Parishath
(Lawn Area and 7 Galleries)
Kumara Krupa Road, Near Shivananda Circle, Bengaluru
Handicraft | Handlooms | Clothings | Fashion Accessories | Home Decore & More

ಕೆಪಿಸಿಸಿ ಅಧ್ಯಕ್ಷರಾದ
... ಸನ್ಮಾನ್ಯ ...
ಶ್ರೀ ಬಿ.ಕೆ. ಹರಿಪ್ರಸಾದ್
ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು
ಸಂಕಲ್ಪ ಸಮಾವೇಶ
ಸಿದ್ಧಾಂತ • ಸಂಘಟನೆ • ಸಮರ್ಪಣೆ
ಎಲ್ಲರಿಗೂ ಸ್ವಾಗತ
ಹೊಸ ಜವಾಬ್ದಾರಿ
ಹೊಸ ಸಂಕಲ್ಪ
21 ಜೂನ್ 2026, ಭಾನುವಾರ
ಬೆಳಿಗ್ಗೆ 10 ಗಂಟೆಗೆ
ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಂಗಳೂರು.
ಸ್ವಾಗತ ಕೋರುವವರು
ಶ್ರೀ ಪ್ರದೀಪ್ ಈಶ್ವರ್
ಶಾಸಕರು, ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರ

ವಿಕ ಮನಿ
From The House of THE ECONOMIC TIMES
ಕನ್ನಡದ ಏಕೈಕ ಹಣಕಾಸು ವಾರಪತ್ರಿಕೆ

ಸಣ್ಣ ಉದ್ಯಮಕ್ಕೆ ಬಿಗ್ ಶಾಕ್

ದೇಶದ ಎಂಎಸ್ಎಂಇಗಳಿಗೆ ಈಗ ಅಳಿವು, ಉಳಿವಿನ ಹೋರಾಟ. ಕರ್ನಾಟಕದಲ್ಲೂ ಲಕ್ಷಾಂತರ ಎಂಎಸ್ಎಂಇಗಳ ಭವಿಷ್ಯ ಯಾವ ದಿಕ್ಕಿನಲ್ಲಿದೆ? ಕವರ್ ಸ್ಟೋರಿ

ಬಿಸಿನೆಸ್ ಕೆಫೆ
Time = Money: ಈ ಸೂತ್ರ ಮರೆತವರಿಗೆ ಸೋಲೇ ಫ್ರೆಂಡು! **ಜಿ.ಕೆ.ಪ್ರಮೋದ್** ಒಳನೋಟ

ಮನಿ ಮಂಥನ
ಹೂಡಿಕೆಗೆ ಜಪಾನಿ ಮಂತ್ರ; ಕೈಜೆನ್ ತತ್ವದಲ್ಲಿದೆ ಆರ್ಥಿಕ ಸ್ವಾತಂತ್ರ್ಯದ ರಹಸ್ಯ: **ಶರತ್ ಎಂ.ಎಸ್.** ಕಾಲಂ

ಮಸ್ತ್ ಮಸ್ಕ್
ಎಲಾನ್ ಮಸ್ಕ್, ಸೋಲಿನ ಬೂದಿಯಿಂದ ಎದ್ದ ಫೀನಿಕ್ಸ್: **ರಂಗಸ್ವಾಮಿ ಮೂಕನಹಳ್ಳಿ** ಅಂಕಣ

ಸಂಚಿಕೆಯ ಹೈಲೈಟ್ಸ್

- ಎಐ ಯುಗದಲ್ಲಿ ಭಾರತದ್ದು 'ಹೊಸ ಸ್ವಾತಂತ್ರ್ಯ ಹೋರಾಟ' ಹೇಗೆ? **ವಸಂತ್ ಶೆಟ್ಟಿ** ಲೇಖನ
- **ಯೋಗ ದಿನ ಸ್ಪೆಷಲ್:** ಯೋಗದ ಮಾರುಕಟ್ಟೆ ಮೌಲ್ಯವೀಗ 13 ಲಕ್ಷ ಕೋಟಿ ರೂ.
- **ಬ್ಯಾಂಕ್ ಸ್ಟ್ರೀಟ್:** ಬ್ಯಾಂಕಿಂಗ್ ಪಿಂಚಣಿ ಪರಿಷ್ಕರಣೆ; ಹೋರಾಟಕ್ಕೆ ಅಂತ್ಯ ಯಾವಾಗ? **ಗೋಪಾಲಕೃಷ್ಣ ಭಟ್ ಬಿ.** ಲೇಖನ
- **ಲಾಕರ್‌ನಲ್ಲಿ ಇಟ್ಟರೆ ಸಾಕೇ?** ನಿಮ್ಮ ಹಕ್ಕುಗಳು, ಬ್ಯಾಂಕಿನ ಜವಾಬ್ದಾರಿಗಳ ಬಲ್ಲಿರಾ? **ಉಲ್ಲಾಸ ರಾಮ ಗುನಗಾ** ಗೈಡೆನ್ಸ್
- **ಅಮೆರಿಕದಲ್ಲಿ ಇಂಡಿಯನ್ ಫ್ಲ್ಯಾಗ್:** ಫೋರ್ಬ್ಸ್ 'ಟಾಪ್ 250' ವಲಸಿಗರ ಪಟ್ಟಿಯಲ್ಲಿ 27 ಭಾರತ ಮೂಲದ ಸಾಧಕರು

ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ
ಬೆಲೆ ₹5
ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಜಿಯೊ ಪ್ಲಾಟ್‌ಫಾರ್ಮ್ಸ್ ಐಪಿಒ ಪ್ರವೇಶ

ಆರ್‌ಐಎಲ್ ವಾರ್ಷಿಕ ಮಹಾಸಭೆಯಲ್ಲಿ ಮುಕೇಶ್ ಅಂಬಾನಿ ಘೋಷಣೆ

ಮುಂಬಯಿ: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ತನ್ನ ಅಂಗಸಂಸ್ಥೆಯಾದ ಜಿಯೊ ಪ್ಲಾಟ್‌ಫಾರ್ಮ್ಸ್‌ನ ಐಪಿಒಗೆ ಅಧಿಕೃತ ಚಾಲನೆ ನೀಡಿದೆ.

ಶುಕ್ರವಾರ ಆರ್‌ಐಎಲ್ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರನ್ನು ಉದ್ದೇಶಿಸಿ ಮಾತನಾಡಿದ ಮುಕೇಶ್ ಅಂಬಾನಿ ಅವರು ಜಿಯೊ ಪ್ಲಾಟ್‌ಫಾರ್ಮ್ಸ್ ಐಪಿಒಗೆ ಸೆಬಿ ಬಳಿ ಡಿಆರ್‌ಎಚ್‌ಪಿಯನ್ನು ಸಲ್ಲಿಸುತ್ತಿರುವುದಾಗಿ ತಿಳಿಸಿದ್ದಾರೆ. ಐಪಿಒಗೆ ಜಿಯೊ ಪ್ಲಾಟ್‌ಫಾರ್ಮ್ಸ್ ಲಿಮಿಟೆಡ್ ಆಡಳಿತ ಮಂಡಳಿ ಅನುಮೋದನೆ ನೀಡಿದೆ ಎಂದೂ ಘೋಷಿಸಿದ್ದಾರೆ.

''ಈ ಐಪಿಒ ಪ್ರಕ್ರಿಯೆಯನ್ನು ತಮ್ಮ ಮಕ್ಕಳಾದ ಆಕಾಶ್, ಇಶಾ ಮತ್ತು ಅನಂತ್ ಮುನ್ನಡೆಸುತ್ತಿದ್ದಾರೆ. ತನ್ನ ಗ್ರಾಹಕರನ್ನು 2030 ರ ವೇಳೆಗೆ ಸಂಪೂರ್ಣವಾಗಿ 5ಜಿಗೆ ವರ್ಗಾಯಿಸುವ ಗುರಿಯನ್ನು ಜಿಯೊ ಹೊಂದಿದೆ,'' ಎಂದು ಮುಕೇಶ್ ಅಂಬಾನಿ ತಿಳಿಸಿದ್ದಾರೆ.

27 ಕೋಟಿ ಷೇರುಗಳನ್ನು ವಿತರಿಸುವ ಮೂಲಕ ಜಿಯೊ ಪ್ಲಾಟ್‌ಫಾರ್ಮ್ಸ್ ಭಾರಿ ಪ್ರಮಾಣದ ಬಂಡವಾಳವನ್ನು ಸಂಗ್ರಹಿಸಲು ಸಜ್ಜಾಗಿದೆ. ಒಂದು ಅಂದಾಜಿನ ಪ್ರಕಾರ ಈ ಐಪಿಒ ಮೌಲ್ಯ 37,000 ಕೋಟಿ ರೂ. ಇರಲಿದೆ. ಇದು ಭಾರತದ ಷೇರು ಮಾರುಕಟ್ಟೆ ಇತಿಹಾಸದಲ್ಲೇ ಅತಿದೊಡ್ಡ ಐಪಿಒ ಎಂಬ ದಾಖಲೆಗೆ ಪಾತ್ರವಾಗಬಹುದು.

ಮಾರುಕಟ್ಟೆಯಲ್ಲಿ ಸಂಚಲನ: ಜಿಯೊದಂತಹ ಬೃಹತ್ ಸಂಸ್ಥೆಯ ಐಪಿಒ ಮಾರುಕಟ್ಟೆಯಲ್ಲಿ ದೊಡ್ಡ ಸಂಚಲನ ಮೂಡಿಸುವ ನಿರೀಕ್ಷೆಯಿದೆ. ಇದು ಡಿಜಿಟಲ್ ಮತ್ತು ಟೆಲಿಕಾಂ ವಲಯದ ಹೂಡಿಕೆದಾರರ ಪಾಲಿಗೆ ಪ್ರಮುಖ ಅವಕಾಶವಾಗಲಿದೆ. ತಂತ್ರಜ್ಞಾನ ಮತ್ತು ಡಿಜಿಟಲ್ ಸೇವೆಗಳ ಬೇಡಿಕೆ ಹೆಚ್ಚುತ್ತಿರುವುದ 'ರಿಂದ, ಜಿಯೊ ಪ್ಲಾಟ್‌ಫಾರ್ಮ್ಸ್‌ನ ಈ ಐಪಿಒ ಮೇಲೆ ಹೂಡಿಕೆದಾರರು ಮತ್ತು ಮಾರುಕಟ್ಟೆ ವಿಶ್ಲೇಷಕರು ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಕಂಪನಿಯು ನೇರವಾಗಿ ಹೊಸ ಷೇರುಗಳನ್ನು ಮಾರುಕಟ್ಟೆಗೆ ಬಿಡುತ್ತಿದೆ. ಇದರಿಂದ ಬರುವ ಹಣವನ್ನು ಕಂಪನಿಯು ತನ್ನ ಮುಂದಿನ ಅಭಿವೃದ್ಧಿ ಕಾರ್ಯಗಳು ಮತ್ತು ಕಾರ್ಯಾಚರಣೆಯ ಅಗತ್ಯಗಳಿಗಾಗಿ ಬಳಸಿಕೊಳ್ಳಲಿದೆ.

ಜಿಯೊ ಹಿರಿಮೆ: ಪ್ರಸ್ತುತ ಜಿಯೊ 52.4 ಕೋಟಿಗೂ ಅಧಿಕ ಗ್ರಾಹಕರನ್ನು ಹೊಂದಿದ್ದು 26.8 ಕೋಟಿಗೂ ಹೆಚ್ಚು 5ಜಿ ಬಳಕೆದಾರರನ್ನು ಹೊಂದಿದೆ. ಜಿಯೋ ಏರ್‌ಫೈಬರ್‌ಸೇವೆ ಈಗಾಗಲೇ 1.3 ಕೋಟಿ ಮನೆಗಳಿಗೆ ತಲುಪಿದ್ದು, ಜಿಯೊ ವಿಶ್ವದ ಅತಿದೊಡ್ಡ ವೈರ್‌ಲೆಸ್ ಬ್ರಾಡ್ ಬ್ಯಾಂಡ್ ಆಪರೇಟರ್ ಆಗಿ ಹೊರಹೊಮ್ಮಿದೆ.

ಶುಕ್ರವಾರ ಆರ್‌ಐಎಲ್ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರನ್ನು ಉದ್ದೇಶಿಸಿ ಮಾತನಾಡಿದ ಮುಕೇಶ್ ಅಂಬಾನಿ ಅವರು ಜಿಯೋ ಐಪಿಒ ಪ್ರಕ್ರಿಯೆಯನ್ನು ತಮ್ಮ ಮಕ್ಕಳಾದ ಆಕಾಶ್, ಇಶಾ ಮತ್ತು ಅನಂತ್ ಮುನ್ನಡೆಸಲಿದ್ದಾರೆ ಎಂದು ಘೋಷಿಸಿದರು.

ದೈನಂದಿನ ಆಡಳಿತ ಹೊಣೆ ಮಕ್ಕಳಿಗೆ ವಹಿಸಿದ ಮುಕೇಶ್

ರಿಲಯನ್ಸ್ ಉದ್ಯಮ ಸಾಮ್ರಾಜ್ಯದ ಅಧಿಪತಿ ಮುಕೇಶ್ ಅಂಬಾನಿ ತಮ್ಮ ಮಕ್ಕಳಿಗೆ ಅಧಿಕಾರವನ್ನು ಹಸ್ತಾಂತರಿಸುವ ಘೋಷಣೆ ಮಾಡಿದ್ದಾರೆ. ''ರಿಲಯನ್ಸ್ ಇಂಡಸ್ಟ್ರೀಸ್‌ನ ದೈನಂದಿನ ನಿರ್ವಹಣಾ ಜವಾಬ್ದಾರಿಗಳನ್ನು ನನ್ನ ಮಕ್ಕಳಿಗೆ ವರ್ಗಾಯಿಸುವ ಪ್ರಕ್ರಿಯೆಯು ಬಹುತೇಕ ಪೂರ್ಣಗೊಂಡಿದೆ,'' ಎಂದು ಮುಕೇಶ್ ಅಂಬಾನಿ ಶುಕ್ರವಾರ ಘೋಷಿಸಿದ್ದಾರೆ.

ಕಂಪನಿಯ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ''ಆಕಾಶ್, ಇಶಾ ಮತ್ತು ಅನಂತ್ ಈಗ ರಿಲಯನ್ಸ್ ಸಮೂಹದ ಪ್ರಮುಖ ವ್ಯವಹಾರಗಳ ನೇತೃತ್ವ ವಹಿಸುತ್ತಿದ್ದಾರೆ. ದೂರಸಂಪರ್ಕ, ಚಿಲ್ಲರೆ ವ್ಯಾಪಾರ, ಡಿಜಿಟಲ್ ಸೇವೆಗಳು ಮತ್ತು ನವೀನ ಇಂಧನ (ನ್ಯೂ ಎನರ್ಜಿ) ವಲಯಗಳಲ್ಲಿ ಮುಂದಿನ ಹಂತದ ಬೆಳವಣಿಗೆಯನ್ನು ಮುನ್ನಡೆಸಲಿದ್ದಾರೆ. ನಿಮ್ಮ ಕಂಪನಿಯ ಭವಿಷ್ಯ ಅಭಯ ಹಸ್ತಗಳಲ್ಲಿದೆ, ಈ ಹಸ್ತಗಳು ರಿಲಯನ್ಸ್ ಅನ್ನು ಇನ್ನಷ್ಟು ಉನ್ನತ ಸ್ತರಕ್ಕೆ ಕೊಂಡೊಯ್ಯುತ್ತವೆ ಎನ್ನುವ ಭರವಸೆ ನನಗಿದೆ,'' ಎಂದು ಹೇಳಿದರು. ಕಳೆದ ವರ್ಷದಂತೆಯೇ ಈ ಬಾರಿ ಕೂಡ ಮುಕೇಶ್ ಅಂಬಾನಿ ಅವರ ಮಕ್ಕಳಾದ ಆಕಾಶ್ ಮತ್ತು ಇಶಾ ಟೆಲಿಕಾಂ ಮತ್ತು ಚಿಲ್ಲರೆ (ರಿಟೇಲ್) ವಿಭಾಗಗಳ ವ್ಯವಹಾರ ಯೋಜನೆಯನ್ನು ಮಂಡಿಸಿದರು ಎಂಬುದು ಗಮನಾರ್ಹ. ತಮ್ಮ 20 ನೇ ವಯಸ್ಸಿನಲ್ಲಿ ಕಂಪನಿಯ ಮಂಡಳಿಯನ್ನು ಸೇರಿದ್ದ ಮುಕೇಶ್ ಅಂಬಾನಿ, 2002ರಲ್ಲಿ ಸಂಸ್ಥಾಪಕ ಧೀರೂಭಾಯಿ ಅಂಬಾನಿ ಅವರ ನಿಧನದ ನಂತರ ಸಮೂಹದ ನೇತೃತ್ವ ವಹಿಸಿಕೊಂಡರು. ಆದರೆ, ಅವರ ತಂದೆ ಯಾವುದೇ ಮರಣಶಾಸನವನ್ನು (ವಿಲ್) ಬರೆಯದೇ ಹೋಗಿದ್ದರಿಂದ, ಮುಕೇಶ್ ಅಂಬಾನಿ ಅವರು ತಮ್ಮ ಕಿರಿಯ ಸಹೋದರನೊಂದಿಗೆ ಸಮೂಹದ ನಿಯಂತ್ರಣಕ್ಕಾಗಿ ಸುದೀರ್ಘ ವಿವಾದವನ್ನು ಎದುರಿಸಬೇಕಾಗಿತ್ತು.

ಬ್ಯಾಂಕ್‌ಗಳಿಂದ ಪೇಪರ್, ಪೆನ್ನಿಗೆ ₹3,870 ಕೋಟಿ!

ಹೊಸದಿಲ್ಲಿ: ಕಳೆದ ಹಣಕಾಸು ವರ್ಷದಲ್ಲಿ ದೇಶದ ಬ್ಯಾಂಕ್‌ಗಳು ಮುದ್ರಣ, ಪೆನ್ನು ಮತ್ತು ಕಾಗದಂತಹ ಸ್ಟೇಷನರಿ ವಸ್ತುಗಳಿಗೆ ಬರೋಬ್ಬರಿ 3,870 ಕೋಟಿ ರೂ. ಖರ್ಚು ಮಾಡಿವೆ. ಎಸ್‌ಬಿಐ 986 ಕೋಟಿ ರೂ. ಖರ್ಚು ಮಾಡಿ ಮೊದಲ ಸ್ಥಾನದಲ್ಲಿದೆ. ''ಎಚ್‌ಡಿಎಫ್‌ಸಿ ಬ್ಯಾಂಕ್ 922.5 ಕೋಟಿ ರೂ. ವ್ಯಯ ಮಾಡಿ ನಂತರ ಸ್ಥಾನದಲ್ಲಿದೆ. ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ತನ್ನ ಲಾಭದ ಶೇ.8ರಷ್ಟನ್ನು ಇಂತಹ ಸಾಮಗ್ರಿಗಳಿಗೆ ವೆಚ್ಚ ಮಾಡಿದೆ. ವ್ಯವಹಾರಗಳು ಡಿಜಿಟಲೀಕರಣಗೊಳ್ಳುತ್ತಿದ್ದರೂ ಬ್ಯಾಂಕ್‌ಗಳು ಮಾತ್ರ ಚೆಕ್ ಬುಕ್, ಪಾಸ್ ಬುಕ್, ಪೆನ್ನು, ಪೇಪರ್‌ಗಳಿಗೆ ಬಹಳ ಖರ್ಚು ಮಾಡುತ್ತಿವೆ,'' ಎಂದು ಆರ್ಥಿಕ ವಿಶ್ಲೇಷಣಾ ಸಂಸ್ಥೆ ಗ್ರೋ ಎಕ್ಸ್ ಹೇಳಿದೆ. ಐಸಿಐಸಿಐ ಬ್ಯಾಂಕ್ ಶೇ. 0.58ರಷ್ಟು ಅಂದರೆ 318.5 ಕೋಟಿ ರೂ. ಖರ್ಚು ಮಾಡಿದೆ. ಎಕ್ಸಿಸ್ ಬ್ಯಾಂಕ್ ಶೇ. 1.33ರಷ್ಟು ಅಂದರೆ 373.8 ಕೋಟಿ ರೂ. ಖರ್ಚು ಮಾಡಿದೆ. ಎಂದು ಸಂಸ್ಥೆಯ ವರದಿ ತಿಳಿಸಿದೆ.

ಜೋಯಾಲುಕ್ಕಾಸ್ ರಕ್ತದಾನ ಶಿಬಿರ



ತ್ರಿಶ್ಯೂರ್: ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜೋಯಾಲುಕ್ಕಾಸ್ ಗ್ರೂಪ್ ಇತ್ತೀಚೆಗೆ ದೇಶಾದ್ಯಂತ ಇರುವ ತನ್ನ ಶೋರೂಮ್‌ಗಳಲ್ಲಿ ರಕ್ತದಾನ ಶಿಬಿರಗಳನ್ನು ನಡೆಸಿತು. ತ್ರಿಶ್ಯೂರ್‌ನಲ್ಲಿರುವ ಜೋಯಾಲುಕ್ಕಾಸ್ ಕಾರ್ಪೊರೇಟ್ ಕಚೇರಿಯಲ್ಲಿ ನಡೆದ ರಕ್ತದಾನ ಶಿಬಿರವನ್ನು ಜೋಯಾಲುಕ್ಕಾಸ್ ಗ್ರೂಪ್ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಜೋಯ್ ಆಲುಕ್ಕಾಸ್ ಉದ್ಘಾಟಿಸಿದರು. ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಬ್ಲಡ್ ಬ್ಯಾಂಕ್ ನಿರ್ದೇಶಕ ಡಾ. ಗೋಪಿನಾಥ್, ಐಎಂಎ ಜಿಲ್ಲಾ ಸಂಚಾಲಕ ಡಾ. ಜೋಸೆಫ್ ಜೋರ್ಜ್, ಜೋಯಾಲುಕ್ಕಾಸ್ ಗ್ರೂಪ್ ನಿರ್ದೇಶಕ ಜೋಲಿ ಜೋಯ್ ಆಲುಕ್ಕಾಸ್ ಉಪಸ್ಥಿತರಿದ್ದರು.

ಆಂಧ್ರಪ್ರದೇಶದಲ್ಲಿ ಬೃಹತ್ ಚಿನ್ನದ ನಿಕ್ಷೇಪ ಪತ್ತೆ

ಹೊಸದಿಲ್ಲಿ: ದೇಶದ ಚಿನ್ನದ ಉದ್ಯಮ ಬೆಳವಣಿಗೆಗೆ ಹೊಸ ಆಶಾಕಿರಣ ಗೋಚರಿಸಿದೆ. ವಿದೇಶಗಳ ಮೇಲಿನ ಹಳದಿ ಲೋಹದ ಆಮದು ಅವಲಂಬನೆ ಕಡಿಮೆ ಮಾಡುವ ಕಾಲ ಸನ್ನಿಹಿತವಾಗಿದೆ. ಆಂಧ್ರಪ್ರದೇಶದಲ್ಲಿ ಪತ್ತೆಯಾಗಿರುವ ಬೃಹತ್ ಚಿನ್ನದ ನಿಕ್ಷೇಪ, ದೇಶದ ಚಿನ್ನದ ಉದ್ಯಮದಲ್ಲಿ ಹೊಸ ಸಂಚಲನ ಸೃಷ್ಟಿಸಿದೆ.

ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಜೊನ್ನಗಿರಿಯಲ್ಲಿ 50 ಟನ್ ಚಿನ್ನದ ನಿಕ್ಷೇಪ ಪತ್ತೆಯಾಗಿದೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸರ್ವೇಕ್ಷಣೆಯಲ್ಲಿ ಒಂದೇ ಪ್ರದೇಶದಲ್ಲಿ ಬೃಹತ್ ಪ್ರಮಾಣದ ನಿಕ್ಷೇಪವನ್ನು ಗುರುತಿಸಲಾಗಿದೆ. ಚಿನ್ನದ ಗಣಿಗಾರಿಕೆಗೆ ರಾಜ್ಯ ಸರಕಾರ, ರಾಮಗಿರಿ, ಜವ್ವಕುಲ, ಚಿಗುರುಕುಂಟಾ, ಬಿಸ್ನಾಟಂ ಪ್ರದೇಶಗಳನ್ನು ಗಣಿಗಾರಿಕೆ ಪ್ರದೇಶವಾಗಿ ಗುರುತಿಸಿದೆ.

ಕರ್ನಾಟಕದ ಕೆಜಿಎಫ್ ಮುಚ್ಚಿದ ಬಳಿಕ ದೇಶಿಯ ಮಟ್ಟದಲ್ಲಿ ಕುಸಿದಿದ್ದ ಚಿನ್ನದ ಉತ್ಪಾದನೆ ಹೆಚ್ಚಳಕ್ಕೆ ಹೊಸದಾಗಿ ಪತ್ತೆಯಾಗಿರುವ ನಿಕ್ಷೇಪ ಸಹಕಾರಿಯಾಗಲಿದೆ. ಗ್ರಾಹಕರ ಚಿನ್ನದ ಬೇಡಿಕೆ ಪೂರೈಸಲು ವಿದೇಶಿ ಆಮದು ಅವಲಂಬಿಸಿದ್ದ ಭಾರತಕ್ಕೆ, ಹೊಸ ಚಿನ್ನದ ನಿಕ್ಷೇಪ, ಹಳದಿ ಲೋಹದ ಗಣಿಗಾರಿಕೆಗೆ ಹೊಸ ಆಯಾಮ ನೀಡಲಿದೆ.

ಆಂಧ್ರಪ್ರದೇಶ ಸರಕಾರ ಜೊನ್ನಗಿರಿ ಚಿನ್ನದ ಯೋಜನೆ ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಿದೆ. ಖಾಸಗಿ ಸಂಸ್ಥೆ ಜಿಯೊಮೈಸೂರ್ ಸರ್ವಿಸ್ ಇಂಡಿಯಾ ಪ್ರೈವೇಟ್ ಇಂಡಿಯಾ ಲಿಮಿಟೆಡ್ ಕಂಪನಿ 400 ಕೋಟಿ ರೂ. ಬಂಡವಾಳ ಹೂಡಿಕೆಯೊಂದಿಗೆ ಯೋಜನೆ ಕೈಗೆತ್ತಿಕೊಂಡಿದೆ. 598 ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆ ನಡೆಯಲಿದ್ದು, ವಾರ್ಷಿಕವಾಗಿ 1 ಸಾವಿರ ಕೆ.ಜಿ ಚಿನ್ನ ಸಂಸ್ಕರಿಸುವ ಗುರಿ ಹೊಂದಲಾಗಿದೆ. ದೇಶದ ಚಿನ್ನದ ಬೇಡಿಕೆಗೆ ಪೂರಕವಾಗಿ ಹೊಸ ಗಣಿ ಸಂಸ್ಥೆ ಕೆಲಸ ಮಾಡಲಿದೆ.

ಐಟಿ ಆಘಾತ, ಷೇರುಪೇಟೆ ತತ್ತರ

ಮುಂಬಯಿ: ಜಾಗತಿಕವಾಗಿ ಐಟಿ ವಲಯದ ದೈತ್ಯ ಕಂಪನಿ ಆಕ್ಸೆಂಚರ್ ತನ್ನ ವಾರ್ಷಿಕ ವಹಿವಾಟಿನ ಮುನ್ನೋಟದಲ್ಲಿ ಆದಾಯ ಗಳಿಕೆಯನ್ನು ಕಡಿತಗೊಳಿಸಿದ್ದರಿಂದ ಐಟಿ ಕಂಪನಿಗಳ ಷೇರುಗಳ ಮಾರಾಟದ ಭರಾಟೆ ಹೆಚ್ಚಿತು. ಇದರಿಂದ ಸತತ ಐದು ವಹಿವಾಟು ದಿನಗಳಲ್ಲಿ ಏರಿಕೆಯನ್ನು ಕಾಯ್ದುಕೊಂಡಿದ್ದ ಷೇರುಪೇಟೆ ವಾರಾಂತ್ಯದಲ್ಲಿ ಇಳಿಕೆ ಕಂಡಿತು.

ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' ಶುಕ್ರವಾರ 607.08 ಅಂಕ ಕುಸಿದು 76,802.90ರಲ್ಲಿ ವಹಿವಾಟು ಮುಗಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' ದಿನಾಂತ್ಯದಲ್ಲಿ 154.90 ಅಂಕ ಇಳಿಕೆಯೊಂದಿಗೆ 24,013.10 ರಲ್ಲಿ ಸ್ಥಿರವಾಯಿತು. ಇನ್ಫೋಸಿಸ್ ಷೇರುಗಳು ಶೇ.6.69, ಟಿಸಿಎಸ್ ಶೇ. 3.53, ಎಚ್‌ಸಿಎಲ್ ಟೆಕ್ ಶೇ. 2.74. ಟೆಕ್ ಮಹೀಂದ್ರಾ ಶೇ.2.45ರಷ್ಟು ಇಳಿಕೆ ಕಂಡವು. ಒಟ್ಟಾರೆ ಐಟಿ ಸೂಚ್ಯಂಕ ಶೇ. 3.57 ರಷ್ಟು ಕುಸಿಯಿತು.

''ಭಾರತೀಯ ಐಟಿ ಸಂಸ್ಥೆಗಳು ತಂತ್ರಜ್ಞಾನ ಯೋಜನೆಗಳಿಗಾಗಿ ಜಾಗತಿಕ ಮಾರುಕಟ್ಟೆಯನ್ನು ಅವಲಂಬಿಸಿವೆ. ಆಕ್ಸೆಂಚರ್ ಮುನ್ನೋಟ ವರದಿ ಈ ವಲಯಕ್ಕೆ ದೊಡ್ಡ ಎಚ್ಚರಿಕೆಯ ಗಂಟೆಯಂತೆ ಇತ್ತು. ಹೀಗಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾದರು,'' ಎಂದು ಹೂಡಿಕೆ ತಂತ್ರಜ್ಞ ವಿಜಯ್‌ಕುಮಾರ್ ವಿಶ್ಲೇಷಿಸಿದ್ದಾರೆ. ಏಷ್ಯಾದ ಮಾರುಕಟ್ಟೆಗಳ ಪೈಕಿ ದಕ್ಷಿಣ ಕೊರಿಯಾದ ಕೊಸ್ಪಿ ಕೊಂಚ ಇಳಿಕೆಯಾದರೆ, ಜಪಾನ್‌ನ ನಿಕ್ಕೈ 225 ಇಂಡೆಕ್ಸ್ ಏರು ಹಾದಿಯಲ್ಲಿತ್ತು. ಐರೋಪ್ಯ ಹಾಗೂ ಅಮೆರಿಕ ಮಾರುಕಟ್ಟೆಗಳು ಏರಿಕೆ ಹಾದಿಯಲ್ಲಿದ್ದವು.

ಕಚ್ಚಾ ತೈಲ ಬೆಲೆ ಇಳಿಕೆ: ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇ.0.58ರಷ್ಟು ಇಳಿದು ಬ್ಯಾರೆಲ್‌ಗೆ 79.39 ಡಾಲರ್ ಆಗಿದೆ. ಇದರಿಂದ ರೂಪಾಯಿ ಮೌಲ್ಯದಲ್ಲಿನ ಏರಿಕೆ ಶುಕ್ರವಾರಕ್ಕೂ ವಿಸ್ತರಿಸಿತು. 7 ಪೈಸೆ ಹೆಚ್ಚಿ 94.33 ರೂ. ಆಗಿದೆ.

9,10ನೇ ತರಗತಿಗೂ ಬೋಧನೆ ಕಡ್ಡಾಯ, ವಿಶೇಷ ರಾಜ್ಯಪತ್ರ ಪ್ರಕಟ

ಪಿಯು ಉಪನ್ಯಾಸಕರಿಗೆ ಹೈಸ್ಕೂಲ್ ಹೊಣೆ

- ಹೈಸ್ಕೂಲ್ ಶಿಕ್ಷಕರ ಕೊರತೆ ನೀಗಿಸಲು ಉಪನ್ಯಾಸಕರ ವೃಂದ ನಿಯಮಕ್ಕೆ ತಿದ್ದುಪಡಿ
- ಸರಕಾರದ ನಿಯಮಕ್ಕೆ ಪದವಿಪೂರ್ವ ಉಪನ್ಯಾಸಕರ ಅಸಮಾಧಾನ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಸರಕಾರಿ ಪ್ರೌಢಶಾಲೆಗಳಲ್ಲಿ ದೀರ್ಘಕಾಲದಿಂದ ಕಾಡುತ್ತಿರುವ ಶಿಕ್ಷಕರ ಕೊರತೆ ಸರಿದೂಗಿಸಲು ಶಿಕ್ಷಣ ಇಲಾಖೆ ಭಾರಿ ಕಸರತ್ತು ನಡೆಸಿದೆ. ಇದರ ಭಾಗವಾಗಿ ಪದವಿ ಪೂರ್ವ(ಪಿಯು) ಕಾಲೇಜುಗಳ ಉಪನ್ಯಾಸಕರಿಗೆ ಹೆಚ್ಚುವರಿ ಹೊಣೆಗಾರಿಕೆ ನೀಡಲು ಸರಕಾರ ಮುಂದಾಗಿದೆ. ಇನ್ಮುಂದೆ ಪಿಯು ಉಪನ್ಯಾಸಕರು ತಮಗಿಷ್ಟವಿರಲಿ, ಇಲ್ಲದಿರಲಿ 9 ಮತ್ತು 10ನೇ ತರಗತಿಗಳಿಗೂ ಕಡ್ಡಾಯವಾಗಿ ಬೋಧನೆ ಮಾಡಬೇಕೆಂದು ಸರಕಾರ ವಿಶೇಷ ರಾಜ್ಯಪತ್ರ ಹೊರಡಿಸಿದೆ. ಇದು ನೇರ ನೇಮಕಾತಿ ಮತ್ತು ಬಡ್ತಿ ಹೊಂದಿದ ಸಾವಿರಾರು ಉಪನ್ಯಾಸಕರಿಗೆ ದೊಡ್ಡ ಆಘಾತ ನೀಡಿದೆ.

'ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) ನಿಯಮಗಳು -2013 ಕ್ಕೆ ಸರಕಾರ ಮಹತ್ವದ ತಿದ್ದುಪಡಿ ತಂದಿದೆ. ಇದರ ಅನ್ವಯ, ಸರಕಾರ ನಿಗದಿಪಡಿಸುವ ಶಿಕ್ಷಣ ಸಂಸ್ಥೆಗಳಲ್ಲಿ ಪಿಯು ಉಪನ್ಯಾಸಕರು ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕಾಗುತ್ತದೆ. ಈ ಕರಡು ನಿಯಮಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು 7 ದಿನಗಳ ಕಾಲಾವಕಾಶ ನೀಡಲಾಗಿದೆ.

> ಶಿಕ್ಷಣ ತಜ್ಞರ ಸಲಹೆ ಪಡೆಯದೇ, ಉಪನ್ಯಾಸಕರ ಸಂಘದ ಪದಾಧಿಕಾರಿಗಳ ಜತೆ ಯಾವುದೇ ಸಭೆ ನಡೆಸದೇ ಏಕಾಏಕಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಈಗಾಗಲೇ 16 ಗಂಟೆ ಇದ್ದ ಕಾರ್ಯಭಾರದ ಅವಧಿಯನ್ನು 20 ಗಂಟೆಗೆ ಹೆಚ್ಚಿಸಲಾಗಿದೆ. ಈಗ 9 ಹಾಗೂ 10ನೇ ತರಗತಿಗೆ ಬೋಧನೆ ಮತ್ತಷ್ಟು ಹೊರೆಯಾಗಲಿದೆ. ಈ ಬಗ್ಗೆ ಉಪನ್ಯಾಸಕರು ಪ್ರತಿಭಟನೆ ನಡೆಸಲಿದ್ದೇವೆ.
>
> -**ಎ.ಎಚ್. ನಿಂಗೇಗೌಡ** ಅಧ್ಯಕ್ಷ, ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ

ಹಳೆಯ ನಿಯಮಾವಳಿಗಳ ಪ್ರಕಾರ, ಪಿಯು ಉಪನ್ಯಾಸಕರಿಗೆ ಕೇವಲ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳಿಗೆ ಮಾತ್ರ ಬೋಧಿಸುವ ಹಕ್ಕು ಮತ್ತು ಜವಾಬ್ದಾರಿ ಇತ್ತು. ಆದರೆ ಈಗಿನ ತಿದ್ದುಪಡಿಯಿಂದಾಗಿ ಹೈಸ್ಕೂಲ್ ಹಂತಕ್ಕೂ ಅವರ ಸೇವೆ ವಿಸ್ತರಣೆಯಾಗಲಿದೆ. ಸರಕಾರದ ಈ ನಿಯಮಕ್ಕೆ ಪದವಿಪೂರ್ವ ಉಪನ್ಯಾಸಕರ ಸಂಘ ತೀವ್ರ ವಿರೋಧ ವ್ಯಕ್ತಪಡಿಸಿದ್ದು, ನಿಯಮವನ್ನು ಪುನರ್ ಪರಿಶೀಲಿಸುವಂತೆ ಆಗ್ರಹಿಸಿದೆ. ನಿಯಮ ಜಾರಿಯಾದರೆ, ಈಗಾಗಲೇ ಪ್ರೌಢಶಾಲೆಗಳಿಗೆ ನೇಮಕವಾದ ಶಿಕ್ಷಕರಿಗೆ ಕೆಲಸ ಕೈತಪ್ಪುವ ಸಾಧ್ಯತೆಯಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

ಉಪನ್ಯಾಸಕರ ಆಕ್ಷೇಪ: ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರು 9 ಹಾಗೂ 10ನೇ ತರಗತಿಗೆ ಬೋಧಿಸಿದರೆ ಶೈಕ್ಷಣಿಕ ಹಂತಗಳ ವೈಜ್ಞಾನಿಕ ವಿನ್ಯಾಸಕ್ಕೆ ಧಕ್ಕೆ ಉಂಟಾಗಲಿದೆ ಎಂದು ಪಿಯು ಉಪನ್ಯಾಸಕರ ಸಂಘ ಅಭಿಪ್ರಾಯಪಟ್ಟಿದೆ. ಪದವಿಪೂರ್ವ ಉಪನ್ಯಾಸಕರು ಸ್ನಾತಕೋತ್ತರ ಪದವಿ ಹಾಗೂ ಬಿ.ಇಡಿ ಕೋರ್ಸ್ ವಿದ್ಯಾರ್ಹತೆ ಹೊಂದಿದ್ದು, ಗೆಜೆಟೆಡ್-ಬಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರೌಢಶಾಲಾ ಶಿಕ್ಷಕರು ಪದವಿ ಮತ್ತು ಬಿ.ಇಡಿ ಆಧಾರದಲ್ಲಿ ಗ್ರೂಪ್-ಸಿ ಹುದ್ದೆಯಲ್ಲಿದ್ದಾರೆ. ಈ ಎರಡು ಹುದ್ದೆಗಳ ನೇಮಕಾತಿ, ವೇತನ ಶ್ರೇಣಿ ಹಾಗೂ ಆಡಳಿತಾತ್ಮಕ ಹಕ್ಕುಗಳಲ್ಲಿ ವ್ಯತ್ಯಾಸಗಳಿದ್ದು, ಇದು ಉಪನ್ಯಾಸಕರ ವೃತ್ತಿಜೀವನದ ಗೌರವಕ್ಕೆ ಧಕ್ಕೆ ತರುತ್ತದೆ ಎಂಬ ಆಕ್ಷೇಪ ಕೇಳಿ ಬಂದಿದೆ.

ಕೆಪಿಎಸ್ ಶಾಲೆಗಳ ಬಲವರ್ಧನೆಗೆ ಸ್ಕೆಚ್!

2026-27ನೇ ಸಾಲಿನಲ್ಲಿ ಸರಕಾರ 1,100 ಶಾಲೆಗಳನ್ನು ಕೆಪಿಎಸ್ ಶಾಲೆಗಳಾಗಿ ಪರಿವರ್ತಿಸಲು ಮುಂದಾಗಿದೆ. ಕೆಪಿಎಸ್ ಶಾಲೆಗಳಲ್ಲಿ ಸಿಬಿಎಸ್‌ಇ, ಐಸಿಎಸ್‌ಇ ಮಾದರಿಯಲ್ಲಿ ಒಂದೇ ಕ್ಯಾಂಪಸ್‌ನಲ್ಲಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು ತರಗತಿಗಳು ನಡೆಯಲಿದ್ದು, ಪದವಿಪೂರ್ವ ಕಾಲೇಜುಗಳು ಉಪನ್ಯಾಸಕರ ಮೂಲಕವೇ 9 ಹಾಗೂ 10ನೇ ತರಗತಿಗಳನ್ನು ನಿರ್ವಹಣೆ ಮಾಡುವ ಸಾಧ್ಯತೆಯಿದೆ. ಅಲ್ಲದೆ, ಕೆಲ ಪ್ರೌಢಶಾಲೆಗಳನ್ನು ಪದವಿಪೂರ್ವ ಕಾಲೇಜುಗಳಾಗಿ ಉನ್ನತೀಕರಣ ಮಾಡಲಾಗಿದೆ. ಇಂತಹ ಶಿಕ್ಷಣ ಸಂಸ್ಥೆಗಳಲ್ಲಿ ಪ್ರೌಢಶಾಲಾ ಹಂತದ ಬೋಧನೆಗೆ ಪಿಯು ಉಪನ್ಯಾಸಕರನ್ನು ಬಳಸಿಕೊಳ್ಳುವ ಸಾಧ್ಯತೆ ಕೂಡ ಇದೆ. ಸದ್ಯ ರಾಜ್ಯಪತ್ರದಲ್ಲಿ ಸರಕಾರ ನಿಗದಿಪಡಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಪಿಯು ಉಪನ್ಯಾಸಕರು 9 ಹಾಗೂ 10ನೇ ತರಗತಿಗೆ ಬೋಧನೆ ಮಾಡಬೇಕು ಎಂದು ಸೂಚಿಸಲಾಗಿದೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ಸಿ.ಎ ನಿವೇಶನ ಖಾತೆ ನಂ. 31-511-371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110.

ಸಂ. ಬಿಐಎಪಿಎ/ಟಿಪಿ/ಭೂಉನಿ/02/2026-27/822 | ದಿನಾಂಕ: 18.06.2026

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ : 27.01.2009 ಮತ್ತು ತಿದ್ದುಪಡಿ ಆದೇಶ ದಿನಾಂಕ : 29.01.2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸ.ನಂ.	ವಿಸ್ತೀರ್ಣ ಎ-ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1	ಶ್ರೀ ಮೇವರಾಮ್ ರಾಮಲಾಲ್ ಷಾ ಬಿನ್ ರಮಲಾಲ ಜಿ	ದೇವನಹಳ್ಳಿ	ಕಸಬಾ	ಚಿಕ್ಕಸಣ್ಣೆ	49/1	3-06 ಗು ಪೈಕಿ 0ಎ-10.08ಗು	ಉದ್ಯಾನವನ / ಬಯಲುಜಾಗ	ವಸತಿ
						3-06 ಗು ಪೈಕಿ 2ಎ-28.08ಗು	ಸಾರ್ವಜನಿಕ / ಅರೆಸಾರ್ವಜನಿಕ	ವಸತಿ

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/ಎಎಎ/1262/2026-27

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ಸಿ.ಎ ನಿವೇಶನ ಖಾತೆ ನಂ. 31-511-371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110.

ಸಂ. ಬಿಐಎಪಿಎ/ಟಿಪಿ/ಭೂಉನಿ/08/2026-27/825 | ದಿನಾಂಕ : 18.06.2026

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ : 27-01-2009 ಮತ್ತು ತಿದ್ದುಪಡಿ ಆದೇಶ ದಿನಾಂಕ : 29-01-2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಾಣಿಜ್ಯ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಭೂಉಪಯೋಗ ನಿಗದಿಪಡಿಸಲು ಕೋರಿರುವ ಉದ್ದೇಶ
1	ಶ್ರೀಮತಿ ಜಯ ಆನಂದ್ ಕೋಂ ಎಂ.ಆನಂದ್	ದೇವನಹಳ್ಳಿ	ಕಸಬಾ	ಪ್ರಸನ್ನಹಳ್ಳಿ	3/1	02-02	ಉದ್ಯಾನವನ / ಬಯಲುಜಾಗ	ವಾಣಿಜ್ಯ

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/1267/ಆಕಾರ್/2026-27

ಆಟೋ ರಾಜ ದೊಡ್ಮನ್ಸ ಆಗಬಾರದೇ?

ದೊಡ್ಮನ್ಸ

ಸಿನಿ ವಿಮರ್ಶೆ
■ ಕಿರಣ್ ಚಂದ್ರ

ಶಿವು ಅಪ್ಪಟ ರಂಗಭೂಮಿ ಕಲಾವಿದ. ರಂಗತಂಡದಲ್ಲಿ ಅವನೇ ಎಲ್ಲರ ನೆಚ್ಚಿನ ಕಲಾವಿದ. ಆತನ ಅಭಿನಯ ಕಂಡ ಗೆಳೆಯರು ಬೆಳ್ಳಿತೆರೆ ಅಥವಾ ಕಿರುತೆರೆಯಲ್ಲಿ ಯಾಕೆ ನಟಿಸಲು ಪ್ರಯತ್ನ ಮಾಡಬಾರದೆಂದು ಹೇಳುತ್ತಿರುತ್ತಾರೆ. ಆದರೆ ಯಾವುದೇ ಹಣಕಾಸಿನ ಬೆಂಬಲ, ಹಿನ್ನೆಲೆ ಇರದ ಕಾರಣ ಶಿವು ಸುಮ್ಮನಾಗುತ್ತಾನೆ. ಒಂದು ದಿನ ಒಬ್ಬ ರಂಗ ನಿರ್ದೇಶಕರು ಆತನ ನಟನೆ ಕಂಡು ಬೆಂಗಳೂರಿಗೆ ತೆರಳಿ ಅಲ್ಲಿ ಸಿನಿಮಾ ನಿರ್ದೇಶಕರನ್ನು ಭೇಟಿಯಾಗುವಂತೆ ತಿಳಿಸುತ್ತಾರೆ. ಹೀರೊ ಆಗುವ ಆಸೆ ಹೊತ್ತು ಬೆಂಗಳೂರಿಗೆ ಬರುವ ಶಿವುಗೆ ಸಿಗುವುದು ಅವಮಾನ ಮತ್ತು ನಿರಾಸೆ. ಬಳಿಕ ಆತ ಸಿನಿಮಾದಿಂದ ದೂರವಾಗಿ ಜೀವನಕ್ಕಾಗಿ ಆಟೋ ಚಾಲಕನಾಗುತ್ತಾನೆ. ಸಿನಿಮಾ ಹೀರೊ ಆಗಬೇಕೆಂಬ ಶಿವು ಹೀರೊ ಆಗುತ್ತಾನಾ? ಸಿನಿಮಾವನ್ನು ಇಂದಿಗೂ ಮೊದಲಿನಂತೆಯೆ ಪ್ರೀತಿಸಿ, ಆರಾಧಿಸುವ ಆಟೋ ಚಾಲಕರ ಪ್ರತಿನಿಧಿಯಾಗಿ ಸಿನಿಮಾ ಸ್ಟಾರ್ ಆಗುತ್ತಾನಾ ಎನ್ನುವುದೇ ಸಿನಿಮಾದ ಸ್ಟೋರಿ. ಸಾಮಾನ್ಯ ವ್ಯಕ್ತಿಯೊಬ್ಬ ಹೀರೊ ಆಗುವ ಕಥೆಗಳು ಹಲವು ಬಂದಿವೆ. ಅದೇ ಹಾದಿಯಲ್ಲಿ ಶರತ್ ಕೃಷ್ಣ ನಿರ್ದೇಶನದ 'ದೊಡ್ಮನ್ಸ' ಕೂಡ ಮೂಡಿಬಂದಿದೆ. ಶರತ್ ಕೃಷ್ಣ ನಟನೆ ಜತೆಗೆ ನಿರ್ದೇಶನದ ಜವಾಬ್ದಾರಿ ಸಮರ್ಥವಾಗಿ ನಿಭಾಯಿಸಿದ್ದಾರೆ. ಹೀರೋಯಿಸಂಗೆ ಹೆಚ್ಚು ಆದ್ಯತೆ ನೀಡಿದಂತಿದ್ದರೂ, ಈ ಶೈಲಿಯ ಸಾಕಷ್ಟು ಸಿನಿಮಾಗಳು ಬಂದಿದ್ದರೂ, ಎಂಟರ್‌ಟೈನ್‌ಮೆಂಟ್‌ನ ಜತೆಗೆ ಹೇಳಿರುವ ಕತೆ ನೋಡಿಸಿಕೊಂಡು ಹೋಗುತ್ತದೆ. ಶರತ್ ಕೃಷ್ಣ ಚೆನ್ನಾಗಿ ಅಭಿನಯಿಸಿದ್ದರೂ ಡಾನ್ಸ್, ಸ್ಟಂಟ್ಸ್‌ನಲ್ಲಿ ಪಳಗಬೇಕಿದೆ. ರೇಷ್ಮಾ ಲಿಂಗರಾಜಪ್ಪ ಸರಳ ನಟನೆ ಮೂಲಕ ಮತ್ತೊಮ್ಮೆ ಗಮನ ಸೆಳೆಯುತ್ತಾರೆ. ಹುಲಿ ಕಾರ್ತಿಕ್ ಸೇರಿದಂತೆ ಸಿನಿಮಾದಲ್ಲಿನ ಸಾಕಷ್ಟು ಹೊಸ ಕಲಾವಿದರು ಕೊಟ್ಟ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಆನಂದ್ ಇಳಯರಾಜ ಕ್ಯಾಮೆರಾ ವರ್ಕ್ ಗಮನ ಸೆಳೆಯುತ್ತದೆ. ಪೌಲ್ ಅಲೆಕ್ಸ್ ಹಾಡುಗಳು ಮನದ ಲ್ಲುಳಿಯುತ್ತವೆ. ಹೊಸಬರನ್ನು ಪ್ರೋತ್ಸಾಹಿಸುವ ಜತೆಗೆ ಒಂದು ಎಂಟರ್‌ಟೇನಿಂಗ್ ಸಿನಿಮಾ ನೋಡಲು ಬಯಸುವವರಿಗೆ ಸೂಕ್ತವಾದ ಆಯ್ಕೆ ಇದು.

ತಾರಾಗಣ: ಶರತ್ ಕೃಷ್ಣ, ರೇಷ್ಮಾ ಶಿವಲಿಂಗಪ್ಪ, ಹುಲಿ ಕಾರ್ತಿಕ್, ಬಲರಾಜವಾಡಿ. **ನಿರ್ದೇಶನ:** ಶರತ್ ಕೃಷ್ಣ
ಸಂಗೀತ ನಿರ್ದೇಶನ: ಪೌಲ್ ಅಲೆಕ್ಸ್ **ಛಾಯಾಗ್ರಹಣ:** ಆನಂದ್ ಇಳಯರಾಜ. **ಸ್ಟಾರ್:** ★★★

Rating Scale: TRASH * | BELOW AVERAGE ** | AVERAGE **1/2 | ABOVE AVERAGE *** GOOD ***1/2 VERY GOOD **** | OUTSTANDING ****1/2 | MASTERPIECE *****

ಬೆಳ್ಳಿ ದರ ಕೆ.ಜಿ ಗೆ ರೂ.10,000 ಇಳಿಕೆ

ಹೊಸದಿಲ್ಲಿ: ಸತತ ನಾಲ್ಕು ದಿನಗಳಿಂದ ಚಿನ್ನ ಹಾಗೂ ಬೆಳ್ಳಿಯ ಬೆಲೆ ಇಳಿಕೆಯತ್ತಲೇ ಸಾಗುತ್ತಿದೆ. ಷೇರುಪೇಟೆ ಸತತ ಏರು ಹಾದಿಯಲ್ಲಿದ್ದರಿಂದ ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿ ಖರೀದಿಯಲ್ಲಿ ಹೆಚ್ಚು ಆಸಕ್ತಿ ತೋರಿಸಲಿಲ್ಲ. ಬೆಂಗಳೂರಿನಲ್ಲಿ ಶುಕ್ರವಾರ ಬೆಳ್ಳಿ ಬೆಲೆ ಕೆ.ಜಿ ಗೆ 10 ಸಾವಿರ ರೂ. ಕುಗ್ಗಿ 2,50,000 ರೂ. ಆಗಿದೆ. ಅಪರಂಜಿ ಚಿನ್ನ 10 ಗ್ರಾಂಗೆ 3,650 ರೂ. ಕಡಿಮೆಯಾಗಿ 1,45,860 ರೂ. ತಲುಪಿದೆ. ಇಷ್ಟೇ ತೂಕದ ಆಭರಣ ಚಿನ್ನದ ಧಾರಣೆಯಲ್ಲಿ 3,350 ರೂ. ಇಳಿದು 1,33,700 ರೂ. ಆಗಿದೆ. ಇನ್ನು ಹೊಸದಿಲ್ಲಿ ಚಿನಿವಾರಪೇಟೆಯಲ್ಲಿ ಅಪರಂಜಿ ಚಿನ್ನದ ಬೆಲೆ 10 ಗ್ರಾಂಗೆ 2,840 ರೂ. ಕಡಿಮೆಯಾಗಿ 1.53,440 ರೂ.ಗೆ ಮುಟ್ಟಿದೆ. ಬೆಳ್ಳಿ ಧಾರಣೆ ಕೆ.ಜಿಗೆ 8,040 ರೂ. ಕುಗ್ಗಿ 2,40,700 ರೂ. ಆಗಿದೆ. ಇದು 2 ತಿಂಗಳಲ್ಲೇ ಕನಿಷ್ಠ ಧಾರಣೆಯಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆಯಲ್ಲಿ ಶೇ. 1.44ರಷ್ಟು ಇಳಿದು ಔನ್ಸ್‌ಗೆ 4,148.45 ಡಾಲರ್ ಆಗಿದೆ. ಬೆಳ್ಳಿ ಬೆಲೆ ಶೇ.1.51ರಷ್ಟು ಕಡಿಮೆಯಾಗಿದೆ.

ಬಂಡಾಯ ಶಮನಕ್ಕಾಗಿ ಉದ್ಧವ್ ಠಾಕ್ರೆ ರಾಜೀನಾಮೆ ಪ್ರಸ್ತಾಪ?



ಮುಂಬಯಿ: ಆರು ಸಂಸದರು ಬಂಡಾಯವೆದ್ದು ಶಿಂಧೆ ಬಣವನ್ನು ಸೇರುವುದನ್ನು ತಪ್ಪಿಸಲು ಶಿವಸೇನೆ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ ಪ್ರಸ್ತಾಪವನ್ನು ಪಕ್ಷದ ಹಿರಿಯ ಮುಖಂಡರ ಎದುರು ಇರಿಸಿದ್ದಾರೆ ಎನ್ನಲಾಗಿದೆ. ''ಪಕ್ಷದ ಕಾರ್ಯಕರ್ತರ ವಿಶ್ವಾಸ ಗಳಿಸಲು ಯಾವುದೇ ಹಂತಕ್ಕೆ ಬೇಕಾದರೂ ಹೋಗುತ್ತೇನೆ. ಶಿವಸೇನೆ ಕಾರ್ಯಕರ್ತರಿಗೆ ನನ್ನ ನೇತೃತ್ವದ ಸಂಘಟನೆ ಮೇಲೆ ಭರವಸೆ ಉಳಿಯುವುದು ಮುಖ್ಯ,'' ಎಂದು ಉದ್ಧವ್ ಹೇಳಿದ್ದಾರೆ.

ಶಿವಸೇನೆ ಸಂಸ್ಥಾಪನಾ ದಿನವಾದ ಶುಕ್ರವಾರ ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣ ಮಾಡಿದ ಉದ್ಧವ್,'' ಶಿವಸೇನೆ ಅಧ್ಯಕ್ಷ ಸ್ಥಾನಕ್ಕೆ ನಾನು ಸರಿಯಲ್ಲ ಎಂದು ನೀವೆಲ್ಲರೂ ನಿರ್ಧರಿಸಿದ ದಿನದಂದು ಸಂತೋಷವಾಗಿ ರಾಜೀನಾಮೆ ನೀಡುತ್ತೇನೆ. ಯಾರನ್ನು ಬೇಕಾದರೂ ನನ್ನ ಸ್ಥಾನಕ್ಕೆ ತಂದು ಕೂರಿಸಿ.

ಆದರೆ, ಪಕ್ಷದ ಸಿದ್ಧಾಂತದಲ್ಲಿ ಎಂದಿಗೂ ರಾಜಿಯಾಗಲ್ಲ, ನಮಗೆ ಯಾರು ಮೋಸ ಮಾಡುತ್ತಾರೆಯೋ ಅಂಥವರನ್ನು ಬಿಡಬೇಡಿರಿ ಎಂದು ಬಾಳಾಸಾಹೇಬ್ ಠಾಕ್ರೆ ಅವರು ಹಿಂದೊಮ್ಮೆ ಕರೆ ಕೊಟ್ಟಿದ್ದರು. ಅದನ್ನು ಸ್ಮರಿಸಿಕೊಳ್ಳಿ,'' ಎಂದು ಪರೋಕ್ಷವಾಗಿ ಬಂಡಾಯ ಸಂಸದರಿಗೆ ಎಚ್ಚರಿಕೆ ರವಾನಿಸಿದ್ದಾರೆ.

ಗುರುವಾರದಂದು ಉದ್ಧವ್ ಕರೆದಿದ್ದ ಪಕ್ಷದ ಸಂಸದೀಯ ಸಭೆಗೆ 9 ಸಂಸದರ ಪೈಕಿ 6 ಮಂದಿ ಗೈರುಹಾಜರಾಗಿದ್ದರು. ಇವರಿಗೆ ಈಗಾಗಲೇ ಉದ್ಧವ್ ಶೋಕಾಸ್ ನೋಟಿಸ್ ನೀಡಿದ್ದಾರೆ.

ಶ್ರೀ ಎನ್.ಎಸ್.ತಿಮ್ಮೇಗೌಡ
(ನೊಸಂತಿ)
(03.10.1947- 20.06.2006)

ನೀವಿಲ್ಲದೆ ಉರುಳಿದ್ದು ಎರಡು ದಶಕ,
ಕಳೆದಿದ್ದು ಬಹಳಷ್ಟು,
ತುಂಗೆಯಲಿ ಹರಿದು ಹೋದ ನೀರದೆಷ್ಟೋ,
ಬದುಕಿನ ಬಂಡಿ ಸಾಗಿ ಬಂದ ದೂರವೆಷ್ಟೋ,
ನಾವು ಮಾತ್ರ ನಿಂತಲ್ಲೇ, ನೀವಿಲ್ಲದ ಶೂನ್ಯದಲ್ಲಿ,
ನಿಮ್ಮ ಪುಸ್ತಕಗಳ ಪ್ರತಿಯೊಂದು ಹಾಳೆ, ಅಕ್ಕರಗಳ ಅಕ್ಕರೆಯ ಓದು,
ಪ್ರತಿಯೊಂದು ಪಾಠ, ಮಾತು - ಹರಟೆ- ನಗು
ನೆನಪಿನ ಸೆಲೆಯಾಗಿ ನಮ್ಮೊಳಗೆ ಭದ್ರ, ನಾವಿರುವಷ್ಟೂ ಕಾಲ.

ನೀವು ಸದಾ ನಮ್ಮೊಂದಿಗೆ, ನಾವು ಸದಾ ನಿಮ್ಮೊಂದಿಗೆ,
ನಿಮ್ಮ ಪ್ರೀತಿಯ
ಉಮಾ ನೊಸಂತಿ, ಸಹನಾ ಪ್ರಿಯದರ್ಶಿನಿ,
ರಾಘವೇಂದ್ರ ಸಿ. ಎನ್, ಸಾರಾ ಉನ್ನತಿ, ಸಿರಿ ಸಂಭ್ರಮ
ಮತ್ತು ಸ್ನೇಹಿತರು

सत्यमेव जयते
भारत सरकार

नमामि गंगे

ಗಂಗೆಯ ಉದ್ದಕ್ಕೆ ಬದಲಾಗಿರುವುದು ಮೇಲ್ನೋಟಕ್ಕೆ ಕಾಣುವುದನ್ನೂ ಮೀರಿದೆ...

ಜನರ ವಿಶ್ವಾಸವನ್ನು ಪುನಃಸ್ಥಾಪಿಸಲಾಗಿದೆ.

ನಮಾಮಿ ಗಂಗೆ

ಸ್ವಚ್ಛತೆಗೆ ಬದ್ಧತೆ | ಪ್ರಗತಿಯ ಭರವಸೆ | ಜನರ ಆಂದೋಲನ



ರಾಷ್ಟ್ರೀಯ ಅಭಿಯಾನದಿಂದ ಜಾಗತಿಕ ಸ್ಫೂರ್ತಿವರೆಗೆ
ವಿಶ್ವಸಂಸ್ಥೆಯು ನಮಾಮಿ ಗಂಗೆಯನ್ನು "ವಿಶ್ವದ ಶ್ರೇಷ್ಠ 10 ಪ್ರಮುಖ ಪುನಃಸ್ಥಾಪನೆ"ಗಳಲ್ಲಿ ಒಂದಾಗಿ ಗುರುತಿಸಿದೆ.

ಪ್ರಗತಿಪರ ಪರಿಸರ, ಆರೋಗ್ಯಕರ ಗಂಗೆ
ಗಂಗೆಯ ಡಾಲ್ಫಿನ್ ಸಂಖ್ಯೆ ಬಹುತೇಕ ದ್ವಿಗುಣಗೊಂಡಿದೆ, ಮೊಸಳೆಗಳು ಮತ್ತು ಆಮೆಗಳ ಸಂರಕ್ಷಣಾ ಪ್ರಯತ್ನಗಳು ವಿಸ್ತರಿಸಿವೆ ಮತ್ತು 205 ಲಕ್ಷಕ್ಕೂ ಹೆಚ್ಚು ಮೀನು ಮರಿಗಳನ್ನು ಗಂಗಾ ನದಿಗೆ ಬಿಡಲಾಗಿದೆ.

ಜನರಿಂದ ನಡೆಸಲ್ಪಡುವ ಅಭಿಯಾನ
139 ಜಿಲ್ಲೆಯ ಗಂಗಾ ಸಮಿತಿಗಳು, 50,000 ಸ್ವಯಂಸೇವಕರು ಮತ್ತು ಲಕ್ಷಾಂತರ ಯುವಕರು ಭಾಗವಹಿಸುವಿಕೆಯೊಂದಿಗೆ ಈ ಅಭಿಯಾನವು ದೇಶಾದ್ಯಂತ ಸಾಮೂಹಿಕ ಕ್ರಿಯೆಗೆ ಪ್ರೇರಣೆಯಾಗಿದೆ.

ಹಸಿರು ಗಂಗೆ, ಪ್ರಬಲ ಪರಿಸರ
33,000 ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿನ ಅರಣ್ಯೀಕರಣವು ಗಂಗಾ ನದಿಯ ಉದ್ದಕ್ಕೂ ಪರಿಸರವನ್ನು ಬಲಪಡಿಸಿದೆ ಮತ್ತು ಜೀವವೈವಿಧ್ಯತೆಯನ್ನು ಸಮೃದ್ಧಗೊಳಿಸಿದೆ.

ತ್ಯಾಜ್ಯನೀರು ಸಂಸ್ಕರಣೆಯಲ್ಲಿ ಪರಿವರ್ತನಾತ್ಮಕ ಪ್ರಗತಿ
ಸಂಸ್ಕರಣಾ ಸಾಮರ್ಥ್ಯವು ಸುಮಾರು 110 ಎಂಎಲ್‌ಡಿಯಿಂದ 4,153 ಎಂಎಲ್‌ಡಿಗೆ ಏರಿಕೆಯಾಗಿದ್ದು , ಸುಮಾರು 38 ಪಟ್ಟು ಹೆಚ್ಚಾಗಿದೆ. ಗಂಗಾ ನದಿಯ ಕಲುಷಿತ ನೀರಿನ ಹರಿವು ಗಣನೀಯವಾಗಿ ಕಡಿಮೆಯಾಗಿದೆ.

ವಿಶ್ವಾಸ ಮತ್ತು ಸ್ವಚ್ಛತೆಯ ಐತಿಹಾಸಿಕ ಸಂಗಮ
2025ರ ಪ್ರಯಾಗ್‌ರಾಜ್ ಮಹಾಕುಂಭದಲ್ಲಿ 660 ದಶಲಕ್ಷಕ್ಕೂ ಹೆಚ್ಚಿನ ಭಕ್ತರು ಪರಿಶುದ್ಧ ಮತ್ತು ಪುನರುಜ್ಜೀವನಗೊಂಡ ಗಂಗಾ ನದಿಯ ಆಧ್ಯಾತ್ಮಿಕ ಮಹತ್ವವನ್ನು ಕಣ್ತುಂಬಿಕೊಂಡರು.

ಮಾದರಿಯ ನಾಯಕತ್ವ
ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ತಮ್ಮ ಸ್ಮರಣಿಕೆಗಳ ಹರಾಜಿನಿಂದ ಬಂದ ಹಣವನ್ನು ನಮಾಮಿ ಗಂಗೆ ಅಭಿಯಾನಕ್ಕೆ ಅರ್ಪಿಸಿದರು.

"ಗಂಗಾನದಿ ಭಾರತದ ಜೀವನಾಡಿ.
ಗಂಗಾ ನದಿಯನ್ನು ಸಂರಕ್ಷಿಸುವುದೆಂದರೆ,
ಭಾರತದ ಭವಿಷ್ಯವನ್ನು ರಕ್ಷಿಸುವುದು."

- ನರೇಂದ್ರ ಮೋದಿ, ಪ್ರಧಾನಮಂತ್ರಿ

CBC 45125/13/0002/2627

12 साल विश्वास के, विकास के, जनकल्याण के

For more information: visit https://nmcg.nic.in/

ಅಮೆರಿಕ-ಇರಾನ್ ಶಾಂತಿ ಮಾತುಕತೆ ಮುಂದಕ್ಕೆ

ಲೆಬನಾನ್ ಮೇಲೆ ಮತ್ತೆ ದಾಳಿ ನಡೆಸಿದ ಇಸ್ರೇಲ್ | 47 ಮಂದಿ ಸಾವು | ಪಶ್ಚಿಮ ಏಷ್ಯಾದಲ್ಲಿ ನಿಲ್ಲದ ಆತಂಕ

ಟೆಹರಾನ್/ಜೆರುಸಲೇಂ: ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗಾಣಿಸಲು ಅಮೆರಿಕ ಮತ್ತು ಇರಾನ್ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿರುವ ಬೆನ್ನಲ್ಲೇ, ಇಸ್ರೇಲ್ ಸೇನೆಯು ಹೆಜ್ಬೊಲ್ಲಾ ಬಂಡುಕೋರರ ನೆಲೆಗಳನ್ನು ಗುರಿಯಾಗಿಸಿಕೊಂಡು ಲೆಬನಾನ್ ಮೇಲೆ ಮತ್ತೆ ವೈಮಾನಿಕ ದಾಳಿ ನಡೆಸಿದೆ. ಇದರ ಬೆನ್ನಲ್ಲೇ ವಾಷಿಂಗ್ಟನ್-ಟೆಹರಾನ್ ನಡುವಿನ ಶಾಂತಿ ಒಪ್ಪಂದದಡಿ ಶುಕ್ರವಾರ ಸ್ವಿಟ್ಜರ್ಲೆಂಡ್‌ನ ಜಿನೀವಾದಲ್ಲಿ ನಡೆಯಬೇಕಿದ್ದ ಮಾತುಕತೆ ಮುಂದೂಡಿಕೆಯಾಗಿದೆ.

ಇಸ್ರೇಲ್ ವಾಯುಪಡೆಯು ಬೆಕಾ ಕಣಿವೆ ಹಾಗೂ ದಕ್ಷಿಣ ಲೆಬನಾನ್‌ನ ತೈರ್ ನಗರದ ಜಬಲ್ ಅಮೆಲ್ ಆಸ್ಪತ್ರೆ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ. ಈ ದಾಳಿಯಲ್ಲಿ 47 ಜನರು ಮೃತಪಟ್ಟಿದ್ದಾರೆ ಎಂದು ಲೆಬನಾನ್ ಆರೋಗ್ಯ ಸಚಿವಾಲಯ ಹೇಳಿದೆ. ಲೆಬನಾನ್‌ನ ಪ್ರತಿದಾಳಿಯಲ್ಲಿ ಇಸ್ರೇಲ್ ಸೇನೆಯ ಒಬ್ಬ ಕಮಾಂಡರ್ ಸೇರಿ ಐವರು ಯೋಧರು ಮೃತಪಟ್ಟಿರುವುದು ವರದಿಯಾಗಿದೆ.

ಇಸ್ರೇಲ್‌ನ ಈ ವೈಮಾನಿಕ ದಾಳಿಯ ಬೆನ್ನಲ್ಲೇ ಇರಾನ್ ನಿಯೋಗದ ಉದ್ದೇಶಿತ ಜಿನೀವಾ ಪ್ರವಾಸ ರದ್ದುಗೊಂಡಿದೆ. ಹಾಗೆಯೇ ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಕೂಡ ಜಿನೀವಾ ಭೇಟಿ ರದ್ದುಗೊಳಿಸಿದ್ದು, ಇದು ಮಧ್ಯಪ್ರಾಚ್ಯದಲ್ಲಿ ಮತ್ತೆ ಬಿಕ್ಕಟ್ಟಿನ ಪರಿಸ್ಥಿತಿ ನಿರ್ಮಿಸಿದೆ. ಇರಾನ್‌ನ ವಿವಾದಿತ ಪರಮಾಣು ಕಾರ್ಯಕ್ರಮವನ್ನು ಹೇಗೆ ನಿರ್ಬಂಧಿಸಬೇಕು ಎಂಬುದೂ ಸೇರಿದಂತೆ 14 ಅಂಶಗಳ ಕರಡಿನ ಕುರಿತು ಚರ್ಚಿಸಲು ಜಿನೀವಾ ಸಭೆ ನಿಗದಿಯಾಗಿತ್ತು. ಅಮೆರಿಕ-ಇರಾನ್ ನಡುವಿನ ಶಾಂತಿ ಒಪ್ಪಂದದ ಪ್ರಕಾರ ಲೆಬನಾನ್ ಸೇರಿದಂತೆ ಸಂಘರ್ಷ ಪೀಡಿತ ಎಲ್ಲಾ ಪ್ರದೇಶಗಳಲ್ಲಿ ತಕ್ಷಣದ ಕದನ ವಿರಾಮ ಜಾರಿಯಾಗಬೇಕು. ಲೆಬನಾನ್‌ನ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಕಾಪಾಡಬೇಕು ಎಂಬ ಅಂಶದ ಉಲ್ಲೇಖವಿದೆ. ಹರ್ಮುಜ್ ಜಲಸಂಧಿ ವಿಚಾರದಲ್ಲಿ ಇರಾನ್‌ನ ಹೊಸ ಪ್ರಾಧಿಕಾರವು ಶುಕ್ರವಾರ ಮಾರ್ಗಸೂಚಿ ಹೊರಡಿಸಿದ್ದು, ಪ್ರಸ್ತುತ ಜಲಮಾರ್ಗದಲ್ಲಿ ಹಡಗುಗಳ ಸಾಗಣೆಯು ಉಚಿತವಾಗಿದ್ದರೂ ತಮ್ಮ ಬಳಿ ನೋಂದಾಯಿಸಿಕೊಳ್ಳುವಂತೆ ಸೂಚಿಸಿದೆ. ಇದು ತೆರಿಗೆ/ಶುಲ್ಕ ವಿಧಿಸಲು ಪ್ರಾರಂಭಿಸುವ ಟೆಹರಾನ್‌ನ ಉದ್ದೇಶವನ್ನು ಸೂಚಿಸುತ್ತದೆ.

ಮಧ್ಯಸ್ಥಿಕೆ ವಹಿಸುವಂತೆ ಮೋದಿಗೆ ಆಗ್ರಹ
ಅಮೆರಿಕ-ಇರಾನ್ ನಡುವಿನ ಮಾತುಕತೆ ದಿಢೀರ್ ರದ್ದಾದ ಹೊತ್ತಲ್ಲೇ, ಮಧ್ಯಸ್ಥಿಕೆ ವಹಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪ್ಯಾಲೆಸ್ತೀನ್ ಆಗ್ರಹಿಸಿದೆ. ಎಎನ್‌ಐ ಸುದ್ದಿಸಂಸ್ಥೆಗೆ ನೀಡಿದ ವಿಶೇಷ ಸಂದರ್ಶನದಲ್ಲಿ, ಈ ಪ್ರಮುಖ ಬೆಳವಣಿಗೆ ಕುರಿತು ಮಾತನಾಡಿದ ಭಾರತದಲ್ಲಿನ ರಾಯಭಾರಿ ಅಬ್ದುಲ್ಲಾ ಶವೇಶ್, ''ಅಮೆರಿಕ ಮತ್ತು ಇರಾನ್ ನಡುವೆ ಸಹಿ ಹಾಕಲಾದ ಮಹತ್ವದ ಶಾಂತಿ ಒಪ್ಪಂದದ ನಂತರ ಆರಂಭವಾಗಬೇಕಿದ್ದ ರಾಜತಾಂತ್ರಿಕ ಮಾತುಕತೆಗಳು ದಿಢೀರ್ ರದ್ದಾಗಿವೆ. ಶಾಂತಿ ಎಲ್ಲರಿಗೂ ಮುಖ್ಯವಾಗಿದೆ. ಈ ವಿಚಾರದಲ್ಲಿ ಭಾರತವು ಮಧ್ಯಸ್ಥಿಕೆ ವಹಿಸಬೇಕು. ಆದನ್ನು ಭಾರತ ಮಾಡುತ್ತದೆ ಎಂಬ ಭರವಸೆ ನನಗಿದೆ,'' ಎಂದು ಹೇಳಿದರು.

ಕದನ ವಿರಾಮಕ್ಕೆ ಇಸ್ರೇಲ್-ಹೆಜ್ಬೊಲ್ಲಾ ಒಪ್ಪಿಗೆ

ಇಸ್ರೇಲ್ ಮತ್ತು ಹೆಜ್ಬೊಲ್ಲಾ ಬಂಡುಕೋರ ಪಡೆಯು ಶುಕ್ರವಾರ ಲೆಬನಾನ್‌ನಲ್ಲಿ ಕದನ ವಿರಾಮಕ್ಕೆ ಸಮ್ಮತಿಸಿವೆ ಎಂದು ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಲೆಬನಾನ್‌ನ ಸ್ಥಳೀಯ ಕಾಲಮಾನ ಸಂಜೆ 4 ಗಂಟೆಗೆ ಸ್ವಲ್ಪ ಮೊದಲು ಕದನ ವಿರಾಮ ಜಾರಿಗೆ ಬಂದಿದೆ ಎಂದು ಅಧಿಕಾರಿಯೊಬ್ಬರ ಹೇಳಿಕೆ ಉಲ್ಲೇಖಿಸಿ ಆಂಗ್ಲ ಮಾಧ್ಯಮವೊಂದು ವರದಿ ಮಾಡಿದೆ. ಇರಾನ್‌ನ ನೆರವಿನೊಂದಿಗೆ ಅಮೆರಿಕ ಮತ್ತು ಕತಾರ್‌ನ ಸಂಧಾನಕಾರರು ಒಪ್ಪಂದವನ್ನು ಅಂತಿಮಗೊಳಿಸಲು ಸಹಾಯ ಮಾಡಿದ್ದಾರೆಂದು ವರದಿಯಾಗಿದೆ.

ಇರಾನ್‌ಗೆ 10 ಪೈಸೆಯೂ ನೀಡಲ್ಲ: ಟ್ರಂಪ್ ಗುಡುಗು

ವಾಷಿಂಗ್ಟನ್: ''ಸಮರದಿಂದ ಇರಾನ್ ಸಂಪೂರ್ಣ ನಾಶವಾಗಿದೆ. ಅವರ ಬಳಿಕ ವಾಯುಪಡೆಯೇ ಉಳಿದಿಲ್ಲ. ನಾವು ಉಳಿದ 60 ದಿನಗಳಲ್ಲಿ ಇರಾನ್‌ಗೆ 10 ಪೈಸೆಯನ್ನೂ ಕೂಡ ಕೊಡಲ್ಲ. ಅವರ ಕತೆ ಮುಗಿಯಿತು,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ಟ್ರುಥ್' ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ಆಕ್ರೋಶ ಹೊರಹಾಕಿದ್ದಾರೆ. ''ಕಳೆದ 4 ತಿಂಗಳಿಂದ ನಡೆದ ಯುದ್ಧದ ನಂತರವೂ ಇರಾನ್ ಸಮೃದ್ಧವಾಗಿದೆ ಎಂದು ಪ್ರತಿಪಕ್ಷ ಡೆಮಾಕ್ರೆಟಿಕ್ ಸಂಸದರು ಹೇಳುತ್ತಿದ್ದಾರೆ. ಅವರಷ್ಟು ಮೂರ್ಖರು ಯಾರೂ ಇಲ್ಲ. ಇರಾನ್ ಅಂಗಲಾಚಿದ್ದರಿಂದ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ ಎನ್ನುವುದನ್ನು ಯಾರೂ ಮರೆಯಕೂಡದು,'' ಎಂದು ಪೋಸ್ಟ್ ಮಾಡಿದ್ದಾರೆ.

ಹರ್ಮುಜ್ ಮುಚ್ಚಿಲ್ಲ: ಇರಾನ್ ಸಚಿವಾಲಯ ಸ್ಪಷ್ಟನೆ

ಸಹಜ ಸ್ಥಿತಿಯಲ್ಲಿ ಹಡಗು ಸಂಚಾರ: ಸಚಿವ ಎಸ್ಮಾಯಿಲ್ ಬಘೈ ಸ್ಪಷ್ಟನೆ

ಟೆಹರಾನ್: ಜಾಗತಿಕ ಪ್ರಮುಖ ಜಲಮಾರ್ಗ ಹರ್ಮುಜ್ ಜಲಸಂಧಿಯನ್ನು ಮುಚ್ಚಲಾಗಿದೆ ಎಂಬ ವರದಿಗಳನ್ನು ಇರಾನ್ ತಳ್ಳಿ ಹಾಕಿದೆ. ಅಮೆರಿಕ ಜತೆಗೆ ಸಹಿ ಹಾಕಿದ ಒಪ್ಪಂದದ ಅನುಸಾರ ಸಂಕೀರ್ಣ ಜಲಮಾರ್ಗದಲ್ಲಿ ವಾಣಿಜ್ಯ ಹಡಗುಗಳ ಸಂಚಾರ ಯಥಾಸ್ಥಿತಿಯಲ್ಲಿ ಮುಂದುವರಿದಿದೆ ಎಂದು ಸ್ಪಷ್ಟನೆ ನೀಡಿದೆ.

''ಹರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದೆ. ಹಡಗುಗಳ ಸಂಚಾರ ನಿರ್ಬಂಧಿಸಲಾಗಿದೆ ಎಂಬ ವರದಿಗಳು ಆಧಾರ ರಹಿತ. ಒಪ್ಪಂದಕ್ಕೆ ಸಹಿ ಹಾಕಿದ ಬಳಿಕ ಸುರಕ್ಷಿತ ಹಾಗೂ ಅಡೆತಡೆ ಇಲ್ಲದ ರೀತಿಯಲ್ಲಿ ಹಡಗುಗಳ ಸಂಚಾರ ಖಾತರಿಪಡಿಸಲಾಗುತ್ತಿದೆ. ಪ್ರಸ್ತುತ ಹಡಗುಗಳ ಸಂಚಾರ ಸಹಜ ಸ್ಥಿತಿಯಲ್ಲಿದೆ,'' ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘೈ ಹೇಳಿದ್ದಾರೆ.

ತಿಳಿವಳಿಕೆ ಒಪ್ಪಂದದ ಅಂಶಗಳನ್ನು ಅಮೆರಿಕ ಉಲ್ಲಂಘಿಸಿದ ಆರೋಪದ ಮೇಲೆ ಜಲಸಂಧಿಯನ್ನು ಇರಾನ್ ಮುಚ್ಚಿದೆ ಎಂಬ ವದಂತಿಗಳಿಗೆ ಸ್ಪಷ್ಟನೆ ನೀಡಿರುವ ವಿದೇಶಾಂಗ ಸಚಿವಾಲಯ, ಹಡಗುಗಳ ಸುರಕ್ಷಿತ ಸಂಚಾರ ಖಾತರಿಪಡಿಸಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ,'' ಎಂದು ತಿಳಿಸಿದೆ.

ಜಲಸಂಧಿ ಬಳಸಿಕೊಂಡು ಸಾಗುವ ಹಡಗುಗಳು 48 ಗಂಟೆಗಳ ಮೊದಲು ಸಂಚಾರದ ಕುರಿತು ಮಾಹಿತಿ ನೀಡಬೇಕು ಎಂಬ ಇರಾನ್ ಕರಾವಳಿ ಕಡಲು ಪ್ರಾಧಿಕಾರದ ಆದೇಶ ಗೊಂದಲಕ್ಕೆ ಕಾರಣವಾಗಿತ್ತು. ಅಮೆರಿಕ-ಇರಾನ್ ಅಧ್ಯಕ್ಷರ ಡಿಜಿಟಲ್ ಸಹಿಯೊಂದಿಗೆ ಶಾಂತಿ ಒಪ್ಪಂದ ಜಾರಿಗೆ ಬಂದಿದ್ದು, ಮೂರುವರೆ ತಿಂಗಳ ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಂಡಿದೆ.

ಹಡಗು ಸಂಚಾರ ಸಹಜ
ಅಮೆರಿಕ-ಇರಾನ್ ಸಂಘರ್ಷ ಅಂತ್ಯಗೊಂಡ ಬೆನ್ನಿಗೆ ಹರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗುಗಳ ಸಂಚಾರ ಪೂರ್ಣ ಪ್ರಮಾಣದಲ್ಲಿ ಪುನಾರಂಭಗೊಂಡಿದೆ. ಒಂದೇ ದಿನ 25 ಹಡಗುಗಳು ಜಲಸಂಧಿ ದಾಟಿವೆ ಎಂದು ವರದಿಯಾಗಿದೆ. ಫೆ.28ರಂದು ಯುದ್ಧ ಆರಂಭವಾದ ಬಳಿಕ ಸಂಘರ್ಷ ಪೀಡಿತ ಜಲಮಾರ್ಗದಲ್ಲಿ ಹಡಗುಗಳ ಸಂಚಾರವನ್ನು ಭಾಗಶಃ ನಿರ್ಬಂಧಿಸಲಾಗಿತ್ತು. ಇದೇ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಹಡಗುಗಳು ಜಲಮಾರ್ಗ ದಾಟಿವೆ. 14 ಅಂಶಗಳ ಶಾಂತಿ ಒಪ್ಪಂದಕ್ಕೆ ಅಮೆರಿಕ-ಇರಾನ್ ಸಹಿ ಹಾಕಿದ ಬಳಿಕ ಜಲಮಾರ್ಗವನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

ಗುಜರಾತ್ ತಲುಪಿದ ದಿಶಾ

ಎಲ್‌ಪಿಜಿ, ಕಚ್ಚಾತೈಲ, ತೈಲ ಉತ್ಪನ್ನಗಳು, ರಸಗೊಬ್ಬರ, ಡ್ರೈ ಫ್ರೂಟ್ಸ್ ದಾಸ್ತಾನು ಹೊತ್ತ 25 ಬೃಹತ್ ಟ್ಯಾಂಕರ್‌ಗಳು, ಹಡಗುಗಳು ಜಲಮಾರ್ಗ ದಾಟಿವೆ. 8 ದಶಲಕ್ಷ ಕಚ್ಚಾ ತೈಲ ಹೊತ್ತ 4 ಸೂಪರ್ ಟ್ಯಾಂಕರ್‌ಗಳು ಸಹ ಜಲಸಂಧಿ ದಾಟಿ ಜಪಾನ್, ದಕ್ಷಿಣ ಕೊರಿಯಾ, ಫ್ರಾನ್ಸ್‌ನತ್ತ ಪ್ರಯಾಣ ಬೆಳೆಸಿವೆ. ರಸಗೊಬ್ಬರ ಹೊತ್ತ ಒಂದು ಹಡುಗು ಭಾರತಕ್ಕೆ ಮತ್ತೊಂದು ಹಡಗು ಚೀನಾದತ್ತ ಪ್ರಯಾಣಿಸಿದೆ. ಈ ನಡುವೆ ಅಮೆರಿಕ-ಇರಾನ್ ಶಾಂತಿ ಒಪ್ಪಂದ ಘೋಷಣೆಯಾದ ಬಳಿಕ ಹರ್ಮುಜ್ ಜಲಸಂಧಿ ದಾಟಿದ್ದ ಮೊದಲ ಹಡಗು ಭಾರತದ ದಿಶಾ ಸುರಕ್ಷಿತವಾಗಿ ಗುಜರಾತ್‌ನ ದಹೇಜ್ ಬಂದರು ತಲುಪಿದೆ.
ಕತಾರ್‌ನ ರಾಸ್ ಲಫಾನ್ ಟರ್ಮಿನಲ್‌ನಲ್ಲಿ 62,370 ಮೆಟ್ರಿಕ್ ಟನ್ ಎಲ್‌ಜಿಪಿ ಭರ್ತಿ ಮಾಡಿಕೊಂಡು ಹೊರಟ ದಿಶಾ ಹಡಗು, ಮಂಗಳವಾರ ಪ್ರಯಾಣ ಆರಂಭಿಸಿತ್ತು. ಬುಧವಾರ ಜಲಸಂಧಿ ದಾಟಿದ ಹಡಗು, ಗುರುವಾರ (ಜೂನ್ 18) ಸಂಜೆ ದಹೇಜ್ ಬಂದರು ತಲುಪಿದೆ ಎಂದು ಬಂದರು, ಹಡಗು, ಜಲಮಾರ್ಗಗಳ ಸಚಿವಾಲಯ ಮಾಹಿತಿ ನೀಡಿದೆ.

ವದಂತಿ ನಂಬದಿರಿ: ನೀಟ್ ಆಕಾಂಕ್ಷಿಗಳಿಗೆ ಮನವಿ

ಧೈರ್ಯಗೆಡಬೇಡಿ, ಈ ಸಲ ಯಾವುದೇ ಲೋಪ ಉಂಟಾಗದು: NTA

ಹೊಸದಿಲ್ಲಿ: ನೀಟ್ ಮರುಪರೀಕ್ಷೆ ಬರೆಯುವ ವಿದ್ಯಾರ್ಥಿಗಳು, ಪೋಷಕರು ಆತಂಕಗೊಳ್ಳುವುದು ಬೇಡ. ಲೋಪ ಉಂಟಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಭರವಸೆ ನೀಡಿದೆ.

ನೀಟ್ ಮರುಪರೀಕ್ಷೆಗೂ (ಜೂನ್ 21) ಎರಡು ದಿನ ಇರುವಾಗ ಆಕಾಂಕ್ಷಿಗಳಿಗೆ ಧೈರ್ಯ ತುಂಬುವ ಸಲಹೆ, ಸೂಚನೆ, ಮಾರ್ಗದರ್ಶನ ನೀಡಿರುವ ಎನ್‌ಟಿಎ, ಪರೀಕ್ಷೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗೆ ಎನ್‌ಟಿಎನ ಅಧಿಕೃತ ವೆಬ್‌ಸೈಟ್ ಮಾತ್ರ ಪರಿಶೀಲಿಸಬೇಕು ಎಂದು ಕಿವಿಮಾತು ಹೇಳಿದೆ.

ಮರುಪರೀಕ್ಷೆಗೆ ಮಾರ್ಗಸೂಚಿ ಒಳಗೊಂಡ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಪುನರ್ ಸಂದೇಶ ನೀಡಿರುವ ಎನ್‌ಟಿಎ, ವಂಚನೆಯ

ಸಂದೇಶಗಳು, ನಕಲಿ ಸಂವಹನ ಸಂದೇಶಗಳ ವಿಷಯದಲ್ಲಿ ಎಚ್ಚರಿಕೆ ವಹಿಸುವಂತೆ ಸೂಚಿಸಿದೆ. ಪ್ರವೇಶಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಇ-ಮೇಲ್, ಎಸ್‌ಎಂಎಸ್ ಮೂಲಕ ರಿಮೈಂಡರ್ ಸಂದೇಶ ನೀಡಲಾಗಿದೆ.

ಜೂನ್ 21ರಂದು ದೇಶದ 551 ನಗರಗಳ ಸುಮಾರು 5,500ಕ್ಕೂ ಹೆಚ್ಚು ಹಾಗೂ ವಿದೇಶದ 14 ಕೇಂದ್ರಗಳಲ್ಲಿ ಮರು ಪರೀಕ್ಷೆ ನಡೆಯಲಿದೆ. ಒಟ್ಟು 22.27 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ.

ವಿದ್ಯಾರ್ಥಿಗಳಿಗೆ ಕಿವಿಮಾತು

- ಎನ್‌ಟಿಎ ಯಾವುದೇ ರೀತಿಯಲ್ಲೂ ಹಣ ಪಾವತಿಯನ್ನು ಕೇಳುವುದಿಲ್ಲ
- ಪ್ರಶ್ನೆಪತ್ರಿಕೆ ಅಥವಾ ಕೀ ಉತ್ತರ ಅಥವಾ ಸೋರಿಕೆಯಾದ ಮಾಹಿತಿ ಹಂಚಿಕೊಳ್ಳುವುದಿಲ್ಲ
- ಯಾವುದೇ ಲಿಂಕ್ ಮೂಲಕ ಪ್ರವೇಶಪತ್ರವನ್ನು ಹಂಚಿಕೊಳ್ಳುತ್ತಿಲ್ಲ. ಇಂಥ ಮಾಹಿತಿ ಆಧಾರಿತ ಯಾವುದೇ ಸಂದೇಶ ಬಂದರೂ ಸ್ವೀಕರಿಸಬೇಡಿ ಅಥವಾ ತೆರೆಯಲು ಪ್ರಯತ್ನಿಸಬೇಡಿ ಅಥವಾ ಕ್ಲಿಕ್ ಮಾಡಬೇಡಿ
- ಪರೀಕ್ಷೆಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ಎನ್‌ಟಿಎನ ಅಧಿಕೃತ ವಾಟ್ಸ್‌ಆ್ಯಪ್ ಚಾನೆಲ್ ಮೂಲಕ ರವಾನಿಸಲಾಗುವುದು
- ಪರೀಕ್ಷೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿಗೆ ಎನ್‌ಟಿಎನ ಅಧಿಕೃತ ವೆಬ್ ಸೈಟ್ ಮಾತ್ರ ಪರಿಶೀಲಿಸಬೇಕು

19 ವರ್ಷದ ವ್ಯಕ್ತಿ ಬಂಧನ

ಟೆಲಿಗ್ರಾಂ ಚಾನೆಲ್ ಮೂಲಕ ನೀಟ್ ಮರು ಪರೀಕ್ಷೆಯ ನಕಲಿ ಪ್ರಶ್ನೆಪತ್ರಿಕೆ ಮಾರಾಟಕ್ಕೆ ಯತ್ನಿಸಿದ 19 ವರ್ಷದ ವ್ಯಕ್ತಿಯನ್ನು ರಾಜಸ್ಥಾನದ ಭಿಲ್ವಾರಾದಲ್ಲಿ ಬಂಧಿಸಲಾಗಿದೆ.

ಬಂಧಿತ ಆರೋಪಿಯನ್ನು ಆಕಾಶ್ ಚೌಧರಿ ಎಂದು ಗುರುತಿಸಲಾಗಿದೆ.

ವಿದ್ಯಾರ್ಥಿನಿಯರ ಆತ್ಮಹತ್ಯೆ: ನೀಟ್ ಮರುಪರೀಕ್ಷೆಯ ಒತ್ತಡ ಹಾಗೂ ಪ್ರಶ್ನೆಪತ್ರಿಕೆ ಸೋರಿಕೆ ಭಯದಲ್ಲಿ ಮತ್ತಿಬ್ಬರು ವಿದ್ಯಾರ್ಥಿಗಳು ಶುಕ್ರವಾರ ಸಾವಿಗೆ ಶರಣಾಗಿದ್ದಾರೆ. ಉತ್ತರ ಪ್ರದೇಶದ ಲಖನೌದಲ್ಲಿ 17 ವರ್ಷದ ವಿದ್ಯಾರ್ಥಿನಿ, ಮಧ್ಯಪ್ರದೇಶದ ಇಂದೋರ್‌ನಲ್ಲಿ 19 ವರ್ಷದ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಟೆಲಿಗ್ರಾಂ ನಿರ್ಬಂಧ ಕ್ರಮ ಎತ್ತಿ ಹಿಡಿದ ಹೈಕೋರ್ಟ್

ಹೊಸದಿಲ್ಲಿ: ನೀಟ್ ಮರು ಪರೀಕ್ಷೆ ಹಿನ್ನೆಲೆಯಲ್ಲಿ ಟೆಲಿಗ್ರಾಂ ಆ್ಯಪ್ ಬಳಕೆಗೆ ತಾತ್ಕಾಲಿಕ ನಿಷೇಧ ವಿಧಿಸಿದ್ದ ಕೇಂದ್ರ ಸರಕಾರದ ಕ್ರಮವನ್ನು ದಿಲ್ಲಿ ಹೈಕೋರ್ಟ್ ಶುಕ್ರವಾರ ಎತ್ತಿ ಹಿಡಿದಿದೆ.

ಕೇಂದ್ರ ಸರಕಾರದ ಕ್ರಮ ಪ್ರಶ್ನಿಸಿ ಟೆಲಿಗ್ರಾಂ ಸಂಸ್ಥೆ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಗುರುವಾರ ಪೂರ್ಣಗೊಳಿಸಿದ್ದ ಹೈಕೋರ್ಟ್, ಶುಕ್ರವಾರ ತೀರ್ಪು ಪ್ರಕಟಿಸಿತು. ನಿಷೇಧ ಕ್ರಮ ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿದೆ. ಐಟಿ ಕಾಯಿದೆಯ ಸೆಕ್ಷನ್ 69ಎ ಅಡಿಯಲ್ಲಿ ಇಡೀ ಆ್ಯಪ್ ನಿಷೇಧಿಸುವ ಅಧಿಕಾರ ಕೇಂದ್ರ ಸರಕಾರಕ್ಕಿದೆ ಎಂದು ತಿಳಿಸಿದೆ.



ತೀರ್ಪು ಪ್ರಕಟಿಸಿದ ನ್ಯಾ.ತೇಜಸ್ ಕರಿಯಾ, ''ಐಟಿ ಕಾಯಿದೆಯ ಸೆಕ್ಷನ್ 2(1) (ವಿ) ವ್ಯಾಪ್ತಿಯಿಂದ ಟೆಲಿಗ್ರಾಂ ಆ್ಯಪ್ ಹೊರಗಿಡಲು ಯಾವುದೇ ಸರಕಾರಣಗಳಿಲ್ಲ,'' ಎಂದು ತೀರ್ಪಿನಲ್ಲಿ ಹೇಳಿದ್ದಾರೆ.

ಹೈಕೋರ್ಟ್‌ಗೆ ಗುರುವಾರ ಅಫಿಡವಿಟ್ ಸಲ್ಲಿಸಿದ್ದ ಕೇಂದ್ರ ಸರಕಾರ, ಟೆಲಿಗ್ರಾಂ ಆ್ಯಪ್ ಸೈಬರ್ ಅಪರಾಧ, ಹಣಕಾಸು ವಂಚನೆ, ಭಯೋತ್ಪಾದನೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆಯಂತಹ ಕಾನೂನು ಬಾಹಿರ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ಹೇಳಿತ್ತು.

ಇಂದು ಅಣಕು ಪರೀಕ್ಷೆ, ಭಾರಿ ಭದ್ರತೆ

ನೀಟ್ ಮರು ಪರೀಕ್ಷೆಯ ಮುನ್ನಾ ದಿನ ಪರೀಕ್ಷಾ ಸಿದ್ಧತೆ, ಭದ್ರತೆ, ಪ್ರಶ್ನೆಪತ್ರಿಕೆಗಳ ಸಾಗಣೆಯಲ್ಲಿ ಪಾರದರ್ಶಕತೆ ಖಚಿತಪಡಿಸಿಕೊಳ್ಳಲು ಎನ್‌ಟಿಎ ದೇಶಾದ್ಯಂತ ಶನಿವಾರ ಅಣಕು ಪರೀಕ್ಷೆ ನಡೆಸಲಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳು, ಪೊಲೀಸರ, ಅರೆಸೇನಾ ಪಡೆಗಳ ಸಿಬ್ಬಂದಿ ಸೇರಿದಂತೆ 15 ಸಾವಿರ ಮಂದಿ ಅಣಕು ಪರೀಕ್ಷೆ ಪ್ರಕ್ರಿಯೆ ಕೈಗೊಳ್ಳಲಿದ್ದಾರೆ. ಮರು ಪರೀಕ್ಷೆ ನಡೆಯುವ 551 ಸ್ಥಳಗಳಲ್ಲಿ ಅಣಕು ಪರೀಕ್ಷೆ ನಡೆಯಲಿದೆ. ಬೆಳಗ್ಗೆ 9 ಗಂಟೆಯಿಂದ ಸಂಜೆ 7 ಗಂಟೆಯ ತನಕ ಮುಂದುವರಿಯಲಿದೆ.
ಮೂರು ಹಂತದ ಭದ್ರತೆ: ಮರು ಪರೀಕ್ಷೆ ನಡೆಯುವ ಪರೀಕ್ಷಾ ಕೇಂದ್ರಗಳನ್ನು ಸ್ವಾಧೀನಕ್ಕೆ ಪಡೆದಿರುವ ಎನ್‌ಟಿಎ, ಮೂರು ಹಂತದ ಭದ್ರತೆ ಒದಗಿಸಿದೆ. ಪ್ರಶ್ನೆಪತ್ರಿಕೆ, ಉತ್ತರ ಪತ್ರಿಕೆ ಹೊತ್ತು ಬರುವ ಅಧಿಕಾರಿಗಳಿಗೆ ಪ್ರತ್ಯೇಕ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ. ಪರೀಕ್ಷಾ ಕೇಂದ್ರಗಳಿಗೆ ಸಿಸಿಟಿವಿ ಕ್ಯಾಮೆರಾ ಹಾಗೂ ಭದ್ರತಾ ಸಿಬ್ಬಂದಿ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ.

ವಿಕ ಈ ದಿನ ವಿಶೇಷ — ಜೂನ್ 20

ಜನುಮ ದಿನ
ದ್ರೌಪದಿ ಮುರ್ಮು

- ಭಾರತದ ಈಗಿನ ರಾಷ್ಟ್ರಪತಿ. ಈ ಹುದ್ದೆಗೇರಿದ ಬುಡಕಟ್ಟು ಸಮುದಾಯಕ್ಕೆ ಸೇರಿದ ಮೊದಲ ಹಾಗೂ ರಾಷ್ಟ್ರಪತಿ ಹುದ್ದೆ ಅಲಂಕರಿಸಿದ 2ನೇ ಮಹಿಳೆ. ಒಡಿಶಾದ ಉಪರಬೇಡ 'ಸಂತಾಲಿ' ಕುಟುಂಬದಲ್ಲಿ 1958ರ ಜೂನ್ 20ರಂದು ಜನಿಸಿದರು. ಭಾರತದ ಸ್ವಾತಂತ್ರ್ಯ ನಂತರ ಜನಿಸಿದ ಮೊದಲ ರಾಷ್ಟ್ರಪತಿ ಎಂಬ ಹೆಗ್ಗಳಿಕೆ. ಬಿಜೆಪಿ ಸದಸ್ಯರಾಗಿದ್ದ ಇವರು, ಇದಕ್ಕೂ ಮುನ್ನ ಜಾರ್ಖಂಡ್‌ನ ರಾಜ್ಯಪಾಲರಾಗಿದ್ದರು.

ಭಾರತ-ಚೀನಾ ಜಲವಿದ್ಯುತ್ ಸಮರ

ಹೊಸದಿಲ್ಲಿ: ಗಲ್ವಾನ್ ಕಣಿವೆ ಸಂಘರ್ಷದ ಬಳಿಕ ಸುಧಾರಣೆ ಹಾದಿಯಲ್ಲಿದ್ದ ಭಾರತ-ಚೀನಾ ನಡುವಿನ ಬಾಂಧವ್ಯಕ್ಕೆ ಜಲ ವಿದ್ಯುತ್ ಉತ್ಪಾದನೆಗೆ ರೂಪಿಸಲಾದ ಪ್ರಸ್ತಾಪಿತ ಜಲಾಶಯ ನಿರ್ಮಾಣ ಯೋಜನೆ ಹೊಸ ಸವಾಲಾಗುವ ಸಾಧ್ಯತೆಗಳಿವೆ.

ಅರುಣಾಚಲ ಪ್ರದೇಶದ ಗಡಿಯಿಂದ 50 ಕಿ.ಮೀ ಅನತಿ ದೂರದಲ್ಲಿ ಜಲ ವಿದ್ಯುತ್ ಉತ್ಪಾದಿಸಲು ವಿಶ್ವದ ಅತಿದೊಡ್ಡ ಜಲಾಶಯ ನಿರ್ಮಾಣ ಕಾರ್ಯವನ್ನು ಚೀನಾ ಕೈಗೆತ್ತಿಕೊಂಡಿದೆ. ಟಿಬೆಟ್ ಪ್ರಾಂತ್ಯದಲ್ಲಿ ಹರಿಯುವ ಯಾರ್ಲುಂಗ್ ತ್ಯಾಂಗ್ಪೊ ನದಿಗೆ ಅಡ್ಡಲಾಗಿ ಜಲಾಶಯ ನಿರ್ಮಾಣ ಮಾಡಲಾಗುತ್ತಿದೆ. 60 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಗುರಿಯೊಂದಿಗೆ ಡ್ಯಾಂ ನಿರ್ಮಾಣ ಮಾಡಲಾಗುತ್ತಿದೆ.

ಹಿಮಾಲಯ ತಪ್ಪಲಿನಲ್ಲಿ ಹುಟ್ಟುವ ಯಾರ್ಲುಂಗ್ ತ್ಯಾಂಗ್ಪೊ ನದಿ ಟಿಬೆಟ್ ಮೂಲಕ ಹರಿದು ಅರುಣಾಚಲ ಪ್ರದೇಶದ ಸಿಯಾಂಗ್ ನದಿ ಸೇರುತ್ತದೆ. ಬಳಿಕ ಬ್ರಹ್ಮಪುತ್ರ ನದಿಯಲ್ಲಿ ವಿಲೀನಗೊಳ್ಳುತ್ತದೆ. ಚೀನಾದ ಉದ್ದೇಶಿತ ಡ್ಯಾಂ ನಿರ್ಮಾಣದಿಂದ ನದಿಯ ಕೆಳ ಭಾಗದಲ್ಲಿ ನೀರಿನ ಅಭಾವ ಉಂಟಾಗಬಹುದು. ಸ್ಥಳೀಯ ಪರಿಸರ ವ್ಯವಸ್ಥೆಗೆ ಹಾನಿಯಾಗಲಿದೆ. ದೇಶದ ಪಶ್ಚಿಮ ಹಾಗೂ ಈಶಾನ್ಯ ಭಾರತದ ಕೃಷಿ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.

ಭಾರತದ ಕಾರ್ಯತಂತ್ರ, ಜಲಾಶಯ: ಚೀನಾದ ಜಲಾಶಯಕ್ಕೆ ಪ್ರತಿಯಾಗಿ ಭಾರತ ಸರಕಾರ ಸಹ ಅರುಣಾಚಲ ಪ್ರದೇಶದಲ್ಲಿ ವಿವಿಧೋದ್ದೇಶದ ಜಲ ವಿದ್ಯುತ್ ಯೋಜನೆಗೆ ಜಲಾಶಯ ನಿರ್ಮಿಸಲು ಮುಂದಾಗಿದೆ. ಸಿಯಾಂಗ್ ನದಿಗೆ ಅಡ್ಡಲಾಗಿ ಡ್ಯಾಂ ಕಟ್ಟುವ ಮೂಲಕ 11 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಯೋಜನೆ ರೂಪಿಸಿದೆ. ಉದ್ದೇಶಿತ ಯೋಜನೆಯಡಿ ವಾರ್ಷಿಕವಾಗಿ 47 ಶತಕೋಟಿ ಯುನಿಟ್ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಸುಮಾರು 1.50 ಲಕ್ಷ ಕೋಟಿ ರೂ. ವೆಚ್ಚವಾಗುವ ನಿರೀಕ್ಷೆಯಿದೆ. ಚೀನಾದ ಪ್ರತಿಯೊಂದು ಚಟುವಟಿಕೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಭಾರತ ಸರಕಾರ, ಕಾರ್ಯತಂತ್ರ ಪ್ರತಿಕ್ರಿಯೆ ಭಾಗವಾಗಿ ಹೊಸ ಜಲಾಶಯ ನಿರ್ಮಿಸಲು ಉದ್ದೇಶಿಸಿದೆ. ಆರ್ಥಿಕ ಮೌಲ್ಯಕ್ಕಿಂತ ಭೌಗೋಳಿಕ ರಾಜಕೀಯ ಹಿತಾಸಕ್ತಿ ರಕ್ಷಿಸಿಕೊಳ್ಳುವುದು ಕೇಂದ್ರದ ಉದ್ದೇಶವಾಗಿದೆ.



- ಅರುಣಾಚಲ ಗಡಿಯಿಂದ 50 ಕಿ.ಮೀ ದೂರದಲ್ಲಿ ಚೀನಾದಿಂದ ವಿಶ್ವದ ಅತಿದೊಡ್ಡ ಜಲಾಶಯ

ತಾನೇ ಸೃಷ್ಟಿಸಿದ ರಾಕ್ಷಸನಿಗೆ ಸ್ವಯಂ ಬಲಿಯಾಗುತ್ತಿರುವ ಪಾಕಿಸ್ತಾನ

ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಯಿಂದ ತೀವ್ರ ತಪರಾಕಿ

ನ್ಯೂಯಾರ್ಕ್: ಜಾಗತಿಕ ವೇದಿಕೆಯಲ್ಲಿ ಮತ್ತೊಮ್ಮೆ ಕಾಶ್ಮೀರದ ವಿಚಾರವನ್ನು ಪ್ರಸ್ತಾಪಿಸಿದ ಪಾಕಿಸ್ತಾನಕ್ಕೆ ಭಾರತ ತಿರುಗೇಟು ನೀಡಿದೆ. ಪಾಕಿಸ್ತಾನವನ್ನು 'ಫ್ರಾಂಕೆನ್‌ಸ್ಟೀನ್ ಸ್ಟೇಟ್' (ತಾನೇ ಸೃಷ್ಟಿಸಿದ ರಕ್ಕಸನಿಗೆ ತಾನೇ ಬಲಿಯಾಗುವ ದೇಶ) ಎಂದು ಕರೆದಿರುವ ಭಾರತ, ''ತಾನು ಸಾಕಿ ಬೆಳೆಸಿದ ಭಯೋತ್ಪಾದನೆ ಎಂಬ ರಕ್ಕಸ ತನಗೇ ಕಚ್ಚಿದಾಗ ಪಾಕಿಸ್ತಾನ ಆಶ್ಚರ್ಯ ಪಡುತ್ತದೆ,'' ಎಂದು ಲೇವಡಿ ಮಾಡಿದೆ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯುಕ್ತರ ವಾರ್ಷಿಕ ವರದಿಯ ಮೇಲಿನ ಚರ್ಚೆಯ ವೇಳೆ ಪಾಕಿಸ್ತಾನದ ಪ್ರತಿನಿಧಿ ಜಮ್ಮು ಮತ್ತು ಕಾಶ್ಮೀರದ ವಿಷಯ ಪ್ರಸ್ತಾಪಿಸಿದ್ದರು. ಇದಕ್ಕೆ ಭಾರತದ ಪರವಾಗಿ ಪ್ರತ್ಯುತ್ತರ ನೀಡಿದ ಭಾರತದ ರಾಜತಾಂತ್ರಿಕ ಅಧಿಕಾರಿ ಅನುಪಮಾ ಸಿಂಗ್, ''ಜಮ್ಮು ಮತ್ತು ಕಾಶ್ಮೀರವು ಎಂದಿಗೂ ಭಾರತದ ಅವಿಭಾಜ್ಯ ಮತ್ತು ಬೇರ್ಪಡಿಸಲಾಗದ ಅಂಗವಾಗಿತ್ತು. ಹಾಗೆಯೇ ಇದೆ ಮತ್ತು ಮುಂದೆಯೂ ಇರಲಿದೆ. ಅಲ್ಲಿರುವ ಏಕೈಕ ಬಗೆಹರಿಯದ ಸಮಸ್ಯೆಯೆಂದರೆ, ಭಾರತದ ಭೂಭಾಗಗಳನ್ನು ಪಾಕಿಸ್ತಾನ ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿರುವುದು ಮತ್ತು ಅದನ್ನು ತಕ್ಷಣವೇ ನಮಗೆ ಹಿಂತಿರುಗಿಸುವುದೆಯೇ ತಕರಾರು ಮಾಡುತ್ತಿರುವುದು ಎಂಬ ಅಂಶವು ಎಲ್ಲರಿಗೂ ತಿಳಿದಿದೆ,'' ಎಂದು ಕುಟುಕಿದರು.

''ಪಿಒಕೆಯ ರಾವಲ್‌ಕೋಟ್‌ನಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರ, ನೂರಾರು ನಾಗರಿಕರ ಕೊಲೆ ಹಾಗೂ ದಬ್ಬಾಳಿಕೆಯು ಪಾಕಿಸ್ತಾನದ ಆಕ್ರಮಣಕಾರಿ ಹಾಗೂ ಹಿಂಸಾತ್ಮಕ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ಪಿಒಕೆಯಲ್ಲಿ ದಶಕಗಳಿಂದ ಮೂಲಭೂತ ಹಕ್ಕುಗಳ ದಮನ ಮಾಡಲಾಗುತ್ತಿದೆ. ಜನಸಾಮಾನ್ಯರು ಅನ್ನ, ವಿದ್ಯುತ್ ಮತ್ತು ಘನತೆಗಾಗಿ ಹಕ್ಕೊತ್ತಾಯ ಮಂಡಿಸಿದರೆ ಅವರಿಗೆ ಬುಲೆಟ್‌ಗಳು ಮತ್ತು ಕ್ರೌರ್ಯದ ಮೂಲಕ ಉತ್ತರಿಸಲಾಗುತ್ತಿದೆ,'' ಎಂದು ಪಾಕ್ ಸರಕಾರದ ವಿರುದ್ಧ ಸಿಂಗ್ ಅವರು ಆಕ್ರೋಶ ಹೊರಹಾಕಿದರು. ಇತ್ತೀಚೆಗೆ ರಾವಲಾಕೋಟ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ನಾಲ್ವರು ಪೊಲೀಸರು ಸೇರಿದಂತೆ 11 ಮಂದಿ ಸಾವನ್ನಪ್ಪಿದ್ದರು.

> ಪಾಕಿಸ್ತಾನದ ರಕ್ಷಣಾ ಸಚಿವರೇ ಭಯೋತ್ಪಾದನೆಯನ್ನು ಸರಕಾರದ ನೀತಿಯನ್ನಾಗಿ ಬಳಸಿಕೊಳ್ಳುವುದಾಗಿ ಸಾರ್ವಜನಿಕವಾಗಿ ಕೊಚ್ಚಿಕೊಳ್ಳುತ್ತಾರೆ. ಆದರೂ ಪಾಕಿಸ್ತಾನ ತಾನು ಭಯೋತ್ಪಾದನೆಯ ಸಂತ್ರಸ್ತ ಎಂದು ಹೇಳಿಕೊಳ್ಳುವುದು ದೊಡ್ಡ ವಿಪರ್ಯಾಸ.
> – **ಅನುಪಮಾ ಸಿಂಗ್** ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿ

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು-560009
ದೂ: 080-22220672, e-mail: digr@karnataka.gov.in
ಸಂಖ್ಯೆ: ಸಿಬ್ಬಂದಿ-2-16/2026-27/96162 ದಿನಾಂಕ: 19-06-2026
ಟೆಂಡರ್ ಪ್ರಕಟಣೆ
ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆಯ ಕೇಂದ್ರ ಕಛೇರಿಗೆ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಕಲ್ಪಿಸಲು ಆಸಕ್ತಿ ಹೊಂದಿರುವ ಏಜೆನ್ಸಿಗಳಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್: https://kppp.karnataka.gov.in ನಲ್ಲಿ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: 06-07-2026ರ ಸಂಜೆ 5.30 ಗಂಟೆವರೆವಿಗೂ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ನೋಂದಣಿ ಉಪ ಮಹಾಪರಿವೀಕ್ಷಕರು (ಆಡಳಿತ ಮತ್ತು ಕಾನೂನು), ಬೆಂಗಳೂರು (ದೂ: 080-22220672, e-mail: digr@karnataka.gov.in). ಇವರನ್ನು ಸಂಪರ್ಕಿಸಿ.
ಸಹಿ/- ನೋಂದಣಿ ಉಪ ಮಹಾಪರಿವೀಕ್ಷಕರು (ಆಡಳಿತ ಮತ್ತು ಕಾನೂನು), ಬೆಂಗಳೂರು
DIPR/CP/YC/1253/2026-27

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
ಬಿಎಂಸಿ&ಆರ್‌ಐ (ಹಳೇ ಕಟ್ಟಡ), 1ನೇ ಮಹಡಿ, ಫೋರ್ಟ್, ಕೆ.ಆರ್. ರಸ್ತೆ, ಬೆಂಗಳೂರು - 560002. ಫೋನ್: 080-22870060, ಫ್ಯಾಕ್ಸ್: 080-22875798
ಇ-ಮೇಲ್: dmekarnataka@yahoo.com
No: ME/Tender/02/2026-27 Date: 19-06-2026
ಮರು ಇ-ಟೆಂಡರ್ ಅಧಿಸೂಚನೆ – ಎರಡು ಕವರ್ ಪದ್ಧತಿ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಮತ್ತು ವಿಜಯಪುರ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ರೇಡಿಯಾಲಜಿ ವಿಭಾಗಕ್ಕೆ ಅವಶ್ಯವಿರುವ CT SCAN 128 Slice ಉಪಕರಣವನ್ನು ಖರೀದಿಸಲು ಮರು ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಫಾರಂ, ಇಎಂಡಿ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: https://www.kppp.karnataka.gov.in ನಲ್ಲಿ ವೀಕ್ಷಿಸಿ, ಡೌನ್‌ಲೋಡ್ ಮಾಡಿ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು.
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 19-06-2026.
ಪೂರ್ವಭಾವಿ ಸಮಿತಿ ಸಭೆ ದಿನಾಂಕ: 06-07-2026 ಪೂರ್ವಾಹ್ನ 11.30 ಗಂಟೆಗೆ.
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 20-07-2026 ಅಪರಾಹ್ನ 5.00 ಗಂಟೆಗಿಂತಲೂ ಮುಂಚಿತವಾಗಿ.
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 21-07-2026 ಅಪರಾಹ್ನ 5.00 ಗಂಟೆಗೆ.
ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬಿಎಂಸಿ&ಆರ್‌ಐ (ಹಳೇ ಕಟ್ಟಡ), 1ನೇ ಮಹಡಿ, ಫೋರ್ಟ್, ಕೆ.ಆರ್. ರಸ್ತೆ, ಬೆಂಗಳೂರು – 560002 ಇವರನ್ನು ಸಂಪರ್ಕಿಸಬಹುದು.
ಸಹಿ/- ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
ವಾಸಾಸಂಇ/ವಾ.ಪ್ರ/1260/ಅಡ್ವರ್ಟೋರ್/2026-27

ಬೆಂಗಳೂರು ಪೂರ್ವ ನಗರ ಪಾಲಿಕೆ
ಸಹಾಯಕ ನಿರ್ದೇಶಕರು (ಪಶುಪಾಲನೆ)ರವರ ಕಚೇರಿ, ನೆಲ ಮಹಡಿ, ಮಹದೇವಪುರ ಬಿಇಸಿಸಿ ಉಪವಿಭಾಗ ಕಚೇರಿ, ಕೆಆರ್ ಪುರಂ, ಬೆಂಗಳೂರು-560036.
ಪ್ರಸ್ತಾವನೆಗಾಗಿ ವಿನಂತಿ
ಬೆಂಗಳೂರು ಪೂರ್ವ ನಗರ ಪಾಲಿಕೆ ಮಹದೇವಪುರ ವಲಯ (ವಲಯ-1) ರಲ್ಲಿ ಸಾಮೂಹಿಕ ನಾಯಿ ಲಸಿಕೆ (ಎಆರ್‌ವಿ ಮತ್ತು ಸಂಯೋಜಿತ) ಅನುಷ್ಠಾನಕ್ಕೆ ಅಲ್ಪಾವಧಿಯ ಆಸಕ್ತಿ ಅಭಿವ್ಯಕ್ತಿ ಪಡಿಸುವಿಕೆ.
RFP ವೇಳಾಪಟ್ಟಿ

1.	RFP ಪ್ರಸ್ತಾವನೆಯ ಸಂಖ್ಯೆ : BECC/2026-27/SE0070/CALL-2
2.	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ http://kppp.karnataka.gov.in ನಿಂದ RFP ದಾಖಲೆಯ ಡೌನ್‌ಲೋಡ್ ಪ್ರಾರಂಭದ ದಿನಾಂಕ : 19.06.2026 ರಿಂದ
3.	ಟೆಂಡರ್ ಆಹ್ವಾನಿಸುವ ಪ್ರಾಧಿಕಾರ : ಸಹಾಯಕ ನಿರ್ದೇಶಕರು (ಪಶುಪಾಲನೆ), ಬಿಇಸಿಸಿ
4.	ಟೆಂಡರ್ ಸ್ವೀಕಾರ ಪ್ರಾಧಿಕಾರ : ಆಯುಕ್ತರು, ಬಿಇಸಿಸಿ
5.	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 22.06.2026 ಸಂಜೆ 5.00 ಗಂಟೆವರಗೆ
6.	ಪ್ರೀ ಬಿಡ್ ಮೀಟಿಂಗ್‌ನ ದಿನಾಂಕ ಮತ್ತು ಸಮಯ : 22.06.2026 ಮಧ್ಯಾಹ್ನ 12.30 ಗಂಟೆಗೆ ಸ್ಥಳ : ಸನಿ(ಪಪಾ) ಕಚೇರಿ, ನೆಲ ಮಹಡಿ, ಮಹದೇವಪುರ ಬಿಇಸಿಸಿ ಉಪವಿಭಾಗ ಕಚೇರಿ, ಕೆಆರ್ ಪುರಂ, ಬೆಂಗಳೂರು-560036
7.	ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ RFP ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 29.06.2026 ಸಂಜೆ 5.00 ಗಂಟೆಯವರೆಗೆ.
8.	ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ RFP ಅರ್ಜಿಗಳನ್ನು ಆನ್‌ಲೈನ್ ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ : 30.06.2026, ಸಂಜೆ 5.10 ಗಂಟೆಗೆ.
9.	RFP ಅರ್ಜಿಗಳನ್ನು ತೆರೆಯುವ ಸ್ಥಳ : ಆನ್‌ಲೈನ್ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್
10.	ಮಾಹಿತಿ ವಿಳಾಸ : ಸ್ಥಳ : ಸನಿ(ಪಪಾ) ಕಚೇರಿ, ನೆಲ ಮಹಡಿ, ಮಹದೇವಪುರ ಬಿಇಸಿಸಿ ಉಪವಿಭಾಗ ಕಚೇರಿ, ಕೆಆರ್ ಪುರಂ, ಬೆಂಗಳೂರು-560036. ಫೋನ್ : 8296184712, ಇಮೇಲ್ : adahkrp01@gmail.com

ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್ ಪ್ರಶ್ನೆಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ. ಪತ್ರಗಳು, ಇಮೇಲ್‌ಗಳು ಅಥವಾ ಯಾವುದೇ ಇತರ ವಿಧಾನದ ಮೂಲಕ ಕಳುಹಿಸಲಾದ ಪ್ರಶ್ನೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/- ಸಹಾಯಕ ನಿರ್ದೇಶಕರು (ಪಶುಪಾಲನೆ), ಬಿಇಸಿಸಿ.

ಪ್ರಧಾನ ಇಂಜಿನಿಯರ್ ರವರ ಕಛೇರಿ
ಪಿ.ಆರ್.ಎ.ಎಂ.ಸಿ.,
ಪಿ.ಡಬ್ಲ್ಯೂ.ಡಿ., ಬೆಂಗಳೂರು-560001
ಸಂ.: ಪ್ರಇಂ/ಲೋಇ/10/ಪಿಆರ್ ಎಎಂಸಿ/2026-27/367 ದಿನಾಂಕ: 19.06.2026
ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ)
ರಾಜ್ಯದ ವಿವಿದೆಡೆ ಕಟ್ಟಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕೆಪಿಪಿ ಪೋರ್ಟಲ್ (www.kppp.karnataka.gov.in) ನಿಂದ ದಿನಾಂಕ: 19.06.2026 ರಂದು ಅಪರಾಹ್ನ 05:30ರ ನಂತರ ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್ ಪಿಆರ್‌ಎಂಸಿ, ಲೋ.ಇ, ಬೆಂಗಳೂರು.
DIPR/CP/1258/SA/2026-27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀನಿಯರರು ವಿದ್ಯೂತ್, ಸಂಪರ್ಕ ಮತ್ತು ಕಟ್ಟಡ ಲೋಕೋಪಯೋಗಿ ಇಲಾಖೆ ಈಶಾನ್ಯ ವಲಯ ಕಛೇರಿ, ಕಲಬುರಗಿ
ಸಂ.ಕಾನಿಇ/ಲೋಇ/ಈವ-ವಿದ್ಯೂತ್-ತಾಶಾ/ಟೆಂಡರ್ ಅಧಿಸೂಚನೆ/2026-27/05 ದಿನಾಂಕ: 18.06.2026
:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::
1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಇಂಜೀನಿಯರರು ವಿದ್ಯೂತ್, ಸಂಪರ್ಕ ಮತ್ತು ಕಟ್ಟಡ ಲೋಕೋಪಯೋಗಿ ಇಲಾಖೆ ಈಶಾನ್ಯ ವಲಯ ಕಛೇರಿ, ಕಲಬುರಗಿ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿಯಲ್ಲಿ ಮಂಜೂರಾದ (ಒಟ್ಟು 03) ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 36700, 36615, 36677. 2) ಕಾಮಗಾರಿ ಅಂದಾಜು ಮೊತ್ತ: ಕನಿಷ್ಠ ರೂ. 756.00 ಲಕ್ಷಗಳು ಗರಿಷ್ಠ ರೂ. 999.00 ಲಕ್ಷಗಳು, 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು – SPV Factory License/MNRE Registration Certificate/ Company Establishment Certificate & Udyam Certificate/Incorporation Certificate & Udyam Certificate. 4) ಇ ಎಮ್ ಡಿ ಮೊತ್ತ: ಕನಿಷ್ಠ ರೂ. 950000.00 ಗರಿಷ್ಠ ರೂ. 1258000.00, 5) ಪ್ರೀ ಬಿಡ್ ಮೀಟಿಂಗ್: 25-06-2026 (11.00 ಗಂಟೆ), 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 29-06-2026 (17.30 ಗಂಟೆ), 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 03-07-2026 (16.00 ಗಂಟೆ), 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04-07-2026 (16.30 ಗಂಟೆ), 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: 06-07-2026 (11.30 ಗಂಟೆ), 11) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀನಿಯರರು ವಿದ್ಯೂತ್, ಸಂಪರ್ಕ ಮತ್ತು ಕಟ್ಟಡ ಲೋ.ಇ. ಈಶಾನ್ಯ ವಲಯ, ಕಛೇರಿ ಕಲಬುರಗಿ, 12) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು, 13) ಅಂತರ್ಜಾಲ ತಾಣದ ವಿಳಾಸ: WWW.kppp.Karnatak.gov.in 14) ಗಮನಿಸಬೇಕಾದ ಅಂಶಗಳು: ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವೂದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮೂಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವೂದೆ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯೂನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/- ಮುಖ್ಯ ಇಂಜೀನಿಯರರು, ಸಂಪರ್ಕ ಮತ್ತು ಕಟ್ಟಡ ಲೋ.ಇ. ಈಶಾನ್ಯ ವಲಯ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/229/ಕೆ.ಎಸ್.ಎಂ.ಸಿ.&ಎ/2026-27

ಕರ್ನಾಟಕ ಸರ್ಕಾರ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ -585401.
Email: eokvafsu@gmail.com, ಕಛೇರಿ ದೂರವಾಣಿ: 08482-245361
ಸಂ: ಆ.ಅ/ಕಪಪಮೀವಿವಿ/ಟೆ.ನಂ-148-Call-2/ಹೊ.ಗು /2026-27 ದಿನಾಂಕ: 18.06.2026
ಅಲ್ಪಾವಧಿ ಟೆಂಡರ ಪ್ರಕಟಣೆ
1) ಸೇವೆಯ ವಿವರ Engaging non-teaching service personnel for Veterinary College, Puttur through outsourcing. 2) ಸೇವೆಯ ಅಂದಾಜು ಮೊತ್ತ Rs.70,31,480.00 ವರ್ಷಕ್ಕೆ, 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿನಮೂದಿಸಿದಂತೆ, 4) ಸೇವೆಯ ಟೆಂಡರ ಮೊತ್ತದ ವಿವರ Rs.70,31,480.00 ವರ್ಷಕ್ಕೆ, 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಮ್.ಡಿ ಮೊತ್ತದೆ ವಿವರ e-portal ನಲ್ಲಿನಮೂದಿಸಿದಂತೆ, 6) ಪೂರ್ವ ಬಿಡ ಸಭೆ-ಆಸ್ತಿ ಅಧಿಕಾರಿಗಳವರ ಕಛೇರಿ, ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ, ವಿಶ್ವವಿದ್ಯಾಲಯ, ನಂದಿನಗರ, ಬೀದರ- 585226 24.06.2026 ರಂದು 11.00 ಗಂಟೆಗೆ, 7) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ 06.07.2026 up to 5.00 PM, 8) ತಾಂತ್ರಿಕ ಬಿಡ ಟೆಂಡರ್ ತೆರೆಯುವ ದಿನಾಂಕ 08.07.2026 at 11.30 AM, 9) ಮೂಲ ಟೆಂಡರ ದಾಖಲೆಗಳೊಂದಿಗೆ ಅಪ್‌ಲೋಡ ಮಾಡಿದ ಟೆಂಡರ ದಾಖಲೆಗಳ ಪರಿಶೀಲನೆ ಮತ್ತು ಸಂಸ್ಥೆಗಳು / ಏಜೆನ್ಸಿಗಳಿಂದ ಕೆಲಸದ ವಿಧಾನದ ಪ್ರಸ್ತುತಿ. ಟೆಂಡರ ವೈಯಕ್ತಿಕವಾಗಿ ಮೂಲ ಟೆಂಡರ ದಾಖಲೆಗಳೊಂದಿಗೆ ಬರಬೇಕು ಮತ್ತು ಅದರ ಒಂದು ನೋಟರೈಸ್ಡ್ ಪ್ರತಿಗಳನ್ನು ಆಸ್ತಿ ವಿಭಾಗ, ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯ, ನಂದಿನಗರ, ಬೀದರ 585226 ಕ್ಕೆ ಸಲ್ಲಿಸಬೇಕು. (ಒಂದು ವೇಳೆ ಅಂದು ರಜೆ ಘೋಷಣೆಯಾದರೆ, ಮರುದಿನ ಕೆಲಸದ ಸಮಯನ್ನು ಪರಿಗಣಿಸಲಾಗುವುದು). ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಏಜೆನ್ಸಿಗಳು ತಪ್ಪಿದಲ್ಲಿ ಅಂತಹ ಏಜೆನ್ಸಿಗಳ ಟೆಂಡರನ್ನು ತಿರಸ್ಕರಿಸಲಾಗುವುದು. 09.07.2026 at 11.00 AM (In case the above date is declared as a holiday, verification will done on next working day) 10) ಫೈನಾನ್ಸಿಯಲ ಬಿಡ ಟೆಂಡರ ತೆರೆಯುವ ದಿನಾಂಕ 13.07.2026 at 11.30 AM, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ ವಿಳಾಸ, ದೂರವಾಣಿ ಸಂಖ್ಯೆ ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ 08482-245446, 12) ಅಂತರ್ಜಾಲ ತಾಣದ ವಿಳಾಸ e-procurement portal- https://kppp.karnataka.gov.in
ಸಹಿ/- ಆಸ್ತಿ ಅಧಿಕಾರಿಗಳು, ಕಪಪಮೀವಿವಿ, ಬೀದರ.
ವಾ.ಸಾ.ಸಂ.ಇ/ಬೀದರ/68/ಕೆಎಸ್‌ಎಂಸಿ&ಎ/2026-27

ವಿಜಯ ಕರ್ನಾಟಕ
ನಮ್ಮ ಬೆಂಗಳೂರು
ಶನಿವಾರ,20 ಜೂನ್ 2026
ಇಂದಿನ ತಾಪಮಾನ 22° ಕನಿಷ್ಠ 30° ಗರಿಷ್ಠ
X.com /vijaykarnataka facebook.com/vijaykarnataka www.vijaykarnataka.com

ಆರ್‌ಆರ್ ನಗರದಲ್ಲಿ ಬೀದಿ ಬದಿ ವ್ಯಾಪಾರಿಗಳ ತೆರವು ವೇಳೆ ಜಿಬಿಎ ಅಧಿಕಾರಿಗಳು ಮತ್ತು ವ್ಯಾಪಾರಿಗಳ ನಡುವೆ ವಾಗ್ವಾದ ನಡೆಯಿತು.

ಇಂದೋರ್‌ನ 12 ಲಕ್ಷ ಸಸಿಯ ದಾಖಲೆ ಹಿಂದಿಕ್ಕಲು ಮಾಸ್ಟರ್ ಪ್ಲಾನ್ | ಮತ್ತೆ ಗಾರ್ಡನ್ ಸಿಟಿ ನಿರ್ಮಾಣಕ್ಕೆ ಪಣ
ಗಿಡ ನೆಡಲು ಬಡಾವಣೆ, ಉದ್ಯಾನಗಳು, ಬಫರ್ ವಲಯಗಳ ಆಯ್ಕೆ | ಸಸಿ ನೆಡಲು 244 ಎಕರೆ ಗುರುತು

ಒಂದೇ ದಿನ 15 ಲಕ್ಷ ಸಸಿ ನೆಡಲು ಬಿಡಿಎ ಸಜ್ಜು

■ **ವಿಕ ಸುದ್ದಿಲೋಕ** ಬೆಂಗಳೂರು

ಕಾಂಕ್ರೀಟ್ ಕಾಡಾಗಿರುವ ರಾಜಧಾನಿ ಬೆಂಗಳೂರನ್ನು ಮತ್ತೆ ಹಸಿರು ತಾಣವಾಗಿ ರೂಪಿಸಲು ನಿರ್ಧರಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ನಾಡಪ್ರಭು ಕೆಂಪೇಗೌಡ ಜಯಂತಿ ಅಂಗವಾಗಿ ಒಂದೇ ದಿನ 15 ಲಕ್ಷ ಸ್ಥಳೀಯ ಸಸಿಗಳನ್ನು ನೆಡುವ ಮೂಲಕ ಗಿನ್ನೆಸ್ ದಾಖಲೆ ನಿರ್ಮಿಸಲು ಸಜ್ಜಾಗಿದೆ.

ಜೂ. 27ರಂದು ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಜಯಂತಿಯ ದಿನವೇ ಲಕ್ಷಾಂತರ ಸಸಿಗಳನ್ನು ನೆಟ್ಟು ಬೆಂಗಳೂರನ್ನು ಹಸಿರುಮಯವಾಗಿಸಲು ತೀರ್ಮಾನಿಸಲಾಗಿದೆ. 15 ಲಕ್ಷ ಸಸಿಗಳನ್ನು ನೆಡುವ ಈ ಬೃಹತ್ ಕಾರ್ಯಕ್ರಮವು ಬೆಂಗಳೂರಿನ ಹಸಿರು ಹೊದಿಕೆಯನ್ನು ವಿಸ್ತರಿಸುವ ಜತೆಗೆ ಹೆಚ್ಚುತ್ತಿರುವ ತಾಪಮಾನವನ್ನು ಪರಿಣಾಮಕಾರಿಯಾಗಿ ತಗ್ಗಿಸಲಿದೆ. ಮಾತ್ರವಲ್ಲದೆ, ಜೀವ ವೈವಿಧ್ಯತೆಯೂ ಹೆಚ್ಚಲಿದೆ.

ಎಪ್ಪತ್ತು-ಎಂಬತ್ತರ ದಶಕದಲ್ಲಿ ಬೆಂಗಳೂರಿನಲ್ಲಿ ಕಣ್ಣು ಹಾಯಿಸಿದಲ್ಲೆಲ್ಲಾ ಮರ-ಗಿಡಗಳು ಕಂಗೊಳಿಸುತ್ತಾ, ತಂಗಾಳಿ ಬೀಸುತ್ತಿತ್ತು. ಅವು ಕಣ್ಣಿಗೂ, ಮನಸ್ಸಿಗೂ ಹಿತ ನೀಡುತ್ತಿತ್ತು. ಆದರೆ, ಕ್ರಮೇಣ ಬೆಂಗಳೂರಿನಲ್ಲಿ ಕಟ್ಟಡಗಳು ಹೆಚ್ಚಾದವು. ಮರ-ಗಿಡಗಳಿಗೆ ಕೊಡಲಿ ಪೆಟ್ಟು ಬೀಳಲಾರಂಭಿಸಿದವು. ಇದೀಗ ಕಣ್ಣು ಹಾಯಿಸಿದಲ್ಲೆಲ್ಲಾ ಗಗನಚುಂಬಿ ಕಟ್ಟಡಗಳು ಕಾಣುತ್ತಿವೆ. ದೇಶದ ನಾನಾ ಭಾಗಗಳಿಂದ ಉದ್ಯೋಗ ಅರಸಿ ಬಂದವರು ಇಲ್ಲಿಯೇ ನೆಲೆಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಆಯುಕ್ತ ಪಿ. ಮಣಿವಣ್ಣನ್, ಕಾರ್ಮಿಕ ಇಲಾಖೆ ಆಯುಕ್ತ ಗೋಪಾಲಕೃಷ್ಣ.

ಈ ಅಭಿಯಾನವು ಸುಸ್ಥಿರ ನಗರಾಭಿವೃದ್ಧಿಯತ್ತ ಬಿಡಿಎ ಬದ್ಧತೆ ಪ್ರದರ್ಶಿಸುತ್ತದೆ. ಬೆಂಗಳೂರಿನಾದ್ಯಂತ ಬೃಹತ್ ಪ್ರಮಾಣದ ಹಸಿರು ಪ್ರದೇಶಗಳು ಹಾಗೂ ಪರಿಸರ ಸಂರಕ್ಷಣಾ ವಲಯಗಳನ್ನು ನಿರ್ಮಿಸುವ ಮೂಲಕ ನಗರದ ದೀರ್ಘಕಾಲಿಕ ಪರಿಸರ ವೃದ್ಧಿಗೆ ಹೂಡಿಕೆ ಮಾಡುತ್ತಿದ್ದೇವೆ.
-ಮೇಜರ್ ಪಿ. ಮಣಿವಣ್ಣನ್
ಬಿಡಿಎ ಆಯುಕ್ತ

ಎಲ್ಲಿ-ಎಷ್ಟು ಪ್ರದೇಶ?

- ಡಾ.ಶಿವರಾಮ ಕಾರಂತ ಬಡಾವಣೆ- 80 ಸ್ಥಳ (135 ಎಕರೆ)
- ಬನಶಂಕರಿ ಬಡಾವಣೆ- 10 ಸ್ಥಳ (20 ಎಕರೆ)
- ನಾಡಪ್ರಭು ಕೆಂಪೇಗೌಡ ಬಡಾವಣೆ- 41 ಸ್ಥಳ (89 ಎಕರೆ)
- ಗಿಡ ನೆಡುವ ಒಟ್ಟು ಸ್ಥಳ 244 ಎಕರೆ

ಕಾರ್ಯಕ್ರಮವಲ್ಲ, ಜನಾಂದೋಲನ

15 ಲಕ್ಷ ಸಸಿಗಳನ್ನು ನೆಡುವುದು ಕೇವಲ ಒಂದು ಕಾರ್ಯಕ್ರಮವಲ್ಲ, ಬದಲಿಗೆ ಬೆಂಗಳೂರು ನಗರದ ಭವಿಷ್ಯ ಸುರಕ್ಷಿತಗೊಳಿಸುವ ಜನಾಂದೋಲನವಾಗಿದ್ದು, ಶಾಶ್ವತ ಹಸಿರು ಪರಂಪರೆ ನಿರ್ಮಾಣದ ಹೆಜ್ಜೆಯಾಗಿದೆ. ಹೆಚ್ಚುತ್ತಿರುವ ತಾಪಮಾನ, ಜೀವವೈವಿಧ್ಯತೆಯ ಕುಸಿತ ಹಾಗೂ ಹವಾಮಾನ ಬದಲಾವಣೆಯಂತಹ ಸವಾಲು ಎದುರಿಸುತ್ತಿದ್ದೇವೆ. ಆದ್ದರಿಂದ ಪ್ರತಿಯೊಬ್ಬ ನಾಗರಿಕರೂ ಈ ಅಭಿಯಾನದಲ್ಲಿ ಪಾಲ್ಗೊಂಡು ಬೆಂಗಳೂರು ಭಾರತದ ಉದ್ಯಾನ ನಗರಿ ಎಂಬ ಗುರುತು ಮರು ಸ್ಥಾಪಿಸಲು ಕೈಜೋಡಿಸಬೇಕು ಎಂದು ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಮನವಿ ಮಾಡಿದರು.

ಜನಸಂಖ್ಯೆ ಮತ್ತು ವಾಹನಗಳ ಸಂಖ್ಯೆಯೂ ಹೆಚ್ಚಾಗಿದೆ. ಕ್ರಮೇಣ ಕಟ್ಟಡಗಳೂ ಹೆಚ್ಚಾದವು. ಹೀಗಾಗಿ, ಮರಗಳ ಮಾರಣ ಹೋಮವಾಯಿತು. ಇದೀಗ ಮತ್ತೆ ಸಸಿಗಳನ್ನು ಹೆಚ್ಚಿಸಿ, ಗಾರ್ಡನ್ ಸಿಟಿ ನಿರ್ಮಿಸುವ ಮೂಲಕ ಆಮ್ಲಜನಕದ ಪ್ರಮಾಣವನ್ನು ಹೆಚ್ಚಿಸಲು ಪ್ರಾಧಿಕಾರ ಗುರಿ ಹಾಕಿಕೊಂಡಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಆಯೋಜಿಸಿದ್ದ ಪತ್ರಿಕಾ ಸಂಪಾದಕರ ದುಂಡು ಮೇಜಿನ ಸಭೆಯ ನಂತರ ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್ ಹಾಗೂ ಆಯುಕ್ತ ಮೇಜರ್ ಪಿ. ಮಣಿವಣ್ಣನ್ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

''ಒಂದೇ ದಿನ 15 ಲಕ್ಷ ಗಿಡಗಳನ್ನು ನೆಡುವುದು ಸವಾಲಿನ ಕೆಲಸ. ಈ ಹಿನ್ನೆಲೆಯಲ್ಲಿ ಬೇರೆ ಬೇರೆ ನರ್ಸರಿಗಳಿಂದಲೂ ಸಸಿಗಳನ್ನು ಪಡೆಯಲು ಪ್ರಯತ್ನಿಸಲಾಗಿದೆ. ನೆಟ್ಟಂತಹ ಪ್ರತಿ ಗಿಡವನ್ನು ಮೂರು ವರ್ಷಗಳ ಕಾಲ ನಿರ್ವಹಣೆ ಮಾಡಲಾಗುತ್ತದೆ. ಜಿಯೊ ಟ್ಯಾಗಿಂಗ್ ಮೂಲಕ ನಿಗಾ ವಹಿಸಲಾಗುತ್ತದೆ. ಸಿಎಂ ಡಿ.ಕೆ. ಶಿವಕುಮಾರ್ ಮಾರ್ಗದರ್ಶನದಲ್ಲಿ ಈ ಬೃಹತ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುತ್ತಿದೆ. ಈ ಸಂಬಂಧ ಪರಿಸರ ತಜ್ಞರು ಹಾಗೂ ಸಂಘ- ಸಂಸ್ಥೆಗಳ ಸಲಹೆಯನ್ನೂ ಪಡೆಯಲಾಗಿದೆ,'' ಎಂದು ಅವರು ವಿವರಿಸಿದರು.

''ಬೆಂಗಳೂರಿನ ಬಡಾವಣೆಗಳಲ್ಲಿ ಕಾಂಕ್ರೀಟ್ ಕಟ್ಟಡಗಳನ್ನು ನಿರ್ಮಿಸುವುದಷ್ಟೇ ಬಿಡಿಎ ಕೆಲಸವಲ್ಲ. ಈ ಹಿಂದೆಯೂ ಪ್ರಾಧಿಕಾರದ ಅನೇಕ ಬಡಾವಣೆಗಳಲ್ಲಿ ಉದ್ಯಾನಗಳನ್ನು ನಿರ್ಮಿಸಲಾಗಿದೆ. ಆದರೆ, ಒಂದೇ ದಿನದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಗಿಡಗಳನ್ನು ನೆಡುತ್ತಿರುವುದು ಇದು ದಾಖಲೆ. ಕಬ್ಬನ್‌ಪಾರ್ಕ್, ಲಾಲ್‌ಬಾಗ್‌ನಂತಹ ದೊಡ್ಡ ಉದ್ಯಾನಗಳನ್ನು ನಿರ್ಮಿಸಲು ಪ್ರಾಧಿಕಾರ ಉದ್ದೇಶಿಸಿತ್ತು. ಆದರೆ, ಜಾಗದ ಕೊರತೆ ಹಿನ್ನೆಲೆಯಲ್ಲಿ ಬೇರೆ ಬೇರೆ ಬಡಾವಣೆಗಳಲ್ಲಿ ಗಿಡ ನೆಡುವ ಬೃಹತ್ ಆಂದೋಲನ ಕೈಗೊಳ್ಳಲಾಗಿದೆ. ಈ ಮೂಲಕ ಜಾಗತಿಕ ತಾಪಮಾನ ಹೆಚ್ಚುತ್ತಿರುವ ಸಂದರ್ಭದಲ್ಲಿ ರಾಜಧಾನಿಯನ್ನು ಹಸಿರು ಬೆಂಗಳೂರನ್ನಾಗಿ ಪರಿವರ್ತಿಸುವುದು ನಮ್ಮ ಧ್ಯೇಯವಾಗಿದೆ. ಇದರೊಂದಿಗೆ ಮಾಲಿನ್ಯ ಪ್ರಮಾಣ ಕೂಡ ಕಡಿಮೆಯಾಗಲಿದೆ,'' ಎಂದರು.

ನಿರಂತರ 12 ಗಂಟೆಗಳ ಅಭಿಯಾನ: ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆ, ಡಾ. ಶಿವರಾಮ ಕಾರಂತ ಬಡಾವಣೆ, ಬನಶಂಕರಿ 6ನೇ ಹಂತ, ಕೆರೆಗಳ ಬಫರ್ ವಲಯಗಳು, ರಾಜಕಾಲುವೆಗಳ ಬಫರ್ ವಲಯಗಳು, ಉದ್ಯಾನಗಳು ಮತ್ತು ಇತರೆ ಸಾರ್ವಜನಿಕ ಸ್ಥಳಗಳೂ ಸೇರಿದಂತೆ 240 ಎಕರೆಯಷ್ಟು ಜಾಗವನ್ನು ಸಸಿ ನೆಡಲು ಗುರುತಿಸಲಾಗಿದೆ. ಈ ಅಭಿಯಾನದಲ್ಲಿ 50 ಸಾವಿರಕ್ಕೂ ಹೆಚ್ಚು ನಾಗರಿಕರು, ಸ್ವಯಂಸೇವಕರು, ವಿದ್ಯಾರ್ಥಿಗಳು, ಕಾರ್ಪೊರೇಟ್ ಸಂಸ್ಥೆಗಳು, ಸಂಘ-ಸಂಸ್ಥೆಗಳ ಸದಸ್ಯರು, ಸರಕಾರೇತರ ಸಂಸ್ಥೆಗಳು ಹಾಗೂ ಸರಕಾರಿ ಇಲಾಖೆಗಳು ಭಾಗವಹಿಸಲಿವೆ. »10

ಎಸ್‌ಟಿಪಿಗೆ ಬಿದ್ದು ಇಬ್ಬರ ಸಾವು: ತನಿಖೆಗೆ ಸಮಿತಿ ರಚನೆ

ಬೆಂಗಳೂರು: ಜಲಮಂಡಳಿಯ ವರ್ತೂರು ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಗುರುವಾರ ರಾತ್ರಿ ಆಯತಪ್ಪಿ ಬಿದ್ದು, ಇಬ್ಬರು ಮೃತಪಟ್ಟ ಘಟನೆಯ ಸಮಗ್ರ ತನಿಖೆಗೆ ಮೂವರು ಎಂಜಿನಿಯರ್‌ಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದೆ.

ಮುಖ್ಯ ಎಂಜಿನಿಯರ್ ಕೆ.ಎನ್. ರಾಜೀವ್, ಹೆಚ್ಚುವರಿ ಮುಖ್ಯ ಎಂಜಿನಿಯರ್ ಕೆ.ಎಸ್. ರೇಣುಕುಮಾರ್ ಹಾಗೂ ಎಂಜಿನಿಯರ್ ಡಿ.ಎಸ್. ವಿನುತಾ ಸಮಿತಿಯಲ್ಲಿದ್ದಾರೆ. ಜೂನ್ 20ರಂದು ವರದಿ ಸಲ್ಲಿಸಬೇಕೆಂದು ಜಲಮಂಡಳಿ ಅಧ್ಯಕ್ಷೆ ಡಾ.ಎನ್.ಮಂಜುಳಾ ಅವರು ಸಮಿತಿಯಲ್ಲಿರುವ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಘಟನೆಯಲ್ಲಿ ಬಿಹಾರದ ಬ್ರಿಜೇಶ್ ಮತ್ತು ತಮಿಳುನಾಡಿನ ಅಖಿಲೇಶ್ ಮೃತಪಟ್ಟಿದ್ದಾರೆ. ಈ ದುರ್ಘಟನೆ ಬಗ್ಗೆ ಸಮಗ್ರ ತನಿಖೆ ನಡೆಸಿ, ನಿರ್ಲಕ್ಷ್ಯ ತೋರಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಜಲಮಂಡಳಿ ಅಧ್ಯಕ್ಷೆ ಎಚ್ಚರಿಸಿದ್ದಾರೆ.

ಅಖಿಲೇಶ್ ಎಂಜಿನಿಯರ್ ಆಗಿದ್ದರೆ, ಬ್ರಿಜೇಶ್ ಟೆಕ್ನೀಶಿಯನ್ ಆಗಿ ಕೆಲಸ ಮಾಡುತ್ತಿದ್ದರು. ಗುರುವಾರ ಸಂಜೆ 6ರ ಸುಮಾರಿಗೆ ವರ್ತೂರಿನ ಬೆಳಗೆರೆಯ ಜಲಮಂಡಳಿಯ 40 ಅಡಿ ಆಳದ ತ್ಯಾಜ್ಯ ನೀರು ಸಂಸ್ಕರಣಾ (ಎಸ್‌ಟಿಪಿ) ಟ್ಯಾಂಕ್ ಬಳಿ ಗುತ್ತಿಗೆ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಆ ವೇಳೆ ಬ್ರಿಜೇಶ್ ಮತ್ತು ಅಖಿಲೇಶ್ ಆಯತಪ್ಪಿ ಎಸ್‌ಟಿಪಿ ಒಳಗೆ ಬಿದ್ದಿದ್ದರು. ಮತ್ತೊಬ್ಬ ಕಾರ್ಮಿಕನನ್ನು ಅಲ್ಲೇ ಕೆಲಸ ಮಾಡುತ್ತಿದ್ದವರು ರಕ್ಷಿಸಿ, ಆಸ್ಪತ್ರೆಗೆ ದಾಖಲಿಸಿದ್ದರು.

ಮೃತದೇಹಕ್ಕೆ ಶೋಧ: ಗುರುವಾರ ರಾತ್ರಿ ಹಾಗೂ ಶುಕ್ರವಾರ ದಿನವಿಡೀ ಶೋಧ ನಡೆಸಿದ್ದರೂ ಮೃತದೇಹಗಳು ಇನ್ನೂ ಪತ್ತೆಯಾಗಿಲ್ಲ. ಘಟನಾ ಸ್ಥಳಕ್ಕೆ ಬೆಂಗಳೂರು ಜಲಮಂಡಳಿ ಅಧ್ಯಕ್ಷೆ ಡಾ.ಎನ್. ಮಂಜುಳಾ ಭೇಟಿ ನೀಡಿ ಶೋಧ ಕಾರ್ಯ ಪರಿಶೀಲಿಸಿದರು. ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ವಿಷಾನಿಲ ತುಂಬಿರುವುದು ಹಾಗೂ ನೀರಿನ ರಭಸ ಹೆಚ್ಚಾಗಿರುವ ಕಾರಣಕ್ಕೆ ಶೋಧ ಕಾರ್ಯಕ್ಕೆ ಅಡ್ಡಿಯಾಗಿದೆ. ಸ್ಥಳದಲ್ಲಿ ಎನ್‌ಡಿಆರ್‌ಎಫ್, ಅಗ್ನಿಶಾಮಕ ಮತ್ತು ತುರ್ತು ಸೇವಾ ದಳದ ಸಿಬ್ಬಂದಿ, ವರ್ತೂರು ಠಾಣೆಯ ಪೊಲೀಸರು ಹಾಗೂ ಜಲಮಂಡಳಿಯ ಸಿಬ್ಬಂದಿ ಬೀಡು ಬಿಟ್ಟಿದ್ದಾರೆ.

ಹಣಕ್ಕಾಗಿ ಬೆದರಿಕೆ: ಪತ್ನಿ ವಿರುದ್ಧವೇ ದೂರು

■ **ವಿಕ ಸುದ್ದಿಲೋಕ** ಬೆಂಗಳೂರು

ಎಚ್‌ಐವಿ ಸೋಂಕಿನ ವದಂತಿ ಹಬ್ಬಿಸುವ ಬೆದರಿಕೆ

50 ಲಕ್ಷ ರೂ. ಕೊಡದಿದ್ದರೆ ಎಚ್‌ಐವಿ ಸೋಂಕು ಇರುವುದಾಗಿ ವದಂತಿ ಹಬ್ಬಿಸಿ ಮಾನಹಾನಿ ಮಾಡುವುದಾಗಿ ಬೆದರಿಸುತ್ತಿದ್ದ ಪತ್ನಿಯ ವಿರುದ್ಧ ಉದ್ಯಮಿಯೊಬ್ಬರು ಮಾರತ್‌ಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮಾರತ್‌ಹಳ್ಳಿಯಲ್ಲಿ ಕಂಪ್ಯೂಟರ್ ತರಬೇತಿ ಸಂಸ್ಥೆ ನಡೆಸುತ್ತಿರುವ ಉದ್ಯಮಿಗೆ ಪತ್ನಿ ಸ್ವಾತಿ, 50 ಲಕ್ಷ ರೂ. ಹಣಕ್ಕಾಗಿ ಬೆದರಿಕೆ ಹಾಕುತ್ತಿದ್ದರು. ಹಣ ಕೊಡದಿದ್ದರೆ ಉದ್ಯಮಿಗೆ ಎಚ್‌ಐವಿ ಸೋಂಕು ತಗಲಿರುವುದಾಗಿ ಸುಳ್ಳು ಸುದ್ದಿ ಹಬ್ಬಿಸುತ್ತೇನೆ ಎಂದು ಸ್ವಾತಿ ಬೆದರಿಸಿದ್ದರು. ಇದರಿಂದ ರೋಸಿ ಹೋದ ಉದ್ಯಮಿಯು ಪತ್ನಿ ವಿರುದ್ಧ ದೂರು ಕೊಟ್ಟಿದ್ದಾರೆ. ಸ್ವಾತಿ ವಿರುದ್ಧ ವಂಚನೆ, ನಂಬಿಕೆ ದ್ರೋಹ, ಕಳವು, ಸುಲಿಗೆ, ಮಾನಹಾನಿ, ಬೆದರಿಕೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

2021ರ ಅಕ್ಟೋಬರ್‌ನಲ್ಲಿ ವೈವಾಹಿಕ ಜಾಲತಾಣದ ಮೂಲಕ ಸ್ವಾತಿಯ ಪರಿಚಯವಾಗಿತ್ತು. ಸ್ವಾತಿಗೆ ಮದುವೆಯಾಗಿ ಒಬ್ಬ ಮಗನಿದ್ದರೂ 2022ರ ಫೆಬ್ರವರಿಯಲ್ಲಿ ಆಕೆಯನ್ನು 2ನೇ ಮದುವೆಯಾಗಿದ್ದೆ. ಮದುವೆ ಬಳಿಕ ಸ್ವಾತಿಯು ಮಗನ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಿದ್ದೆ. »10

ಕುಮಾರಕೃಪಾ ರಸ್ತೆಯ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ 'ದಿ ಸೌಕ್ ಮಾರ್ಕೆಟ್' ಶೀರ್ಷಿಕೆಯಡಿ ಆಯೋಜಿಸಿರುವ ಕರಕುಶಲ ವಸ್ತುಗಳು, ಫ್ಯಾಷನ್ ಉಡುಪುಗಳ ಪ್ರದರ್ಶನ, ಮಾರಾಟ ಮೇಳಕ್ಕೆ ನಟಿ, ರೂಪದರ್ಶಿ ಪ್ರಿಯಾಂಕಾ ಅರೋರಾ ಶುಕ್ರವಾರ ಚಾಲನೆ ನೀಡಿದರು. ಪ್ರದರ್ಶನವು ಜೂ.28ರವರೆಗೆ ನಡೆಯಲಿದೆ.

ಪ್ರಧಾನಮಂತ್ರಿ ವಿಕಸಿತ ಭಾರತ ರೋಜ್‌ಗಾರ್ ಯೋಜನೆಯ ಫಲಾನುಭವಿಗಳಿಗೆ ಪ್ರಧಾನಿ ನರೇಂದ್ರಮೋದಿ ಸುಮಾರು 2,400 ಕೋಟಿ ರೂ. ಪ್ರೋತ್ಸಾಹಧನ ವಿತರಿಸಿದರು. ದಿಲ್ಲಿಯ ವಿಜ್ಞಾನ ಭವನದಲ್ಲಿ ನಡೆದ ಕಾರ್ಯಕ್ರಮದ ವರ್ಚುವಲ್ ನೇರ ಪ್ರಸಾರವನ್ನು ಇಂದಿರಾನಗರದ ಇಪಿಎಫ್‌ಒ ಕಚೇರಿಯಲ್ಲಿ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹಾಗೂ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ್ ವೀಕ್ಷಿಸಿದರು. ಬಿಜೆಪಿ ಮುಖಂಡರು, ಫಲಾನುಭವಿಗಳು ಉಪಸ್ಥಿತರಿದ್ದರು.

ಪುನರ್ವಸತಿ ಕೇಂದ್ರದ ಮಾಲೀಕನ ಕೊಲೆ

ಬೆಂಗಳೂರು: ಚಂದ್ರಾ ಲೇಔಟ್ ಬಳಿಯ ಬಿಸಿಸಿ ಬಡಾವಣೆಯಲ್ಲಿರುವ ನ್ಯೂ ಲೈಫ್ ಪುನರ್ವಸತಿ ಕೇಂದ್ರದ ಮಾಲೀಕ ಶಿವಲಿಂಗಯ್ಯ (60) ಅವರನ್ನು ದುಷ್ಕರ್ಮಿಗಳು ಕೊಲೆ ಮಾಡಿದ್ದು, ಪರಿಚಿತರೇ ಈ ದುಷ್ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

ಹಲವು ವರ್ಷಗಳಿಂದ ಪುನರ್ವಸತಿ ಕೇಂದ್ರ ನಡೆಸುತ್ತಿರುವ ಶಿವಲಿಂಗಯ್ಯ, ಕೆಲ ತಿಂಗಳ ಹಿಂದೆ ನಿತಿನ್ ಎಂಬಾತನನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದರು. ನಿತಿನ್, ದಿನ ಕಳೆದಂತೆ ಶಿವಲಿಂಗಯ್ಯರ ನಂಬಿಕೆ ಗಿಟ್ಟಿಸಿಕೊಂಡು ಕೇಂದ್ರವನ್ನು ಸಂಪೂರ್ಣವಾಗಿ ಆತನೇ ನೋಡಿಕೊಳ್ಳುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪುನರ್ವಸತಿ ಕೇಂದ್ರದಲ್ಲಿ ಶುಕ್ರವಾರ ಮಧ್ಯಾಹ್ನ ನಿತಿನ್ ಮತ್ತು ಶಿವಲಿಂಗಯ್ಯ ನಡುವೆ ಯಾವುದೋ ವಿಚಾರಕ್ಕೆ ಜಗಳವಾಗಿದೆ. ನಂತರ ಜಗಳ ವಿಕೋಪಕ್ಕೆ ಹೋಗಿ ನಿತಿನ್, ತನ್ನ ಸಹಚರರಾದ ಕಾರ್ತಿಕ್ ಮತ್ತು ಸೋಹೆಲ್ ಪಾಷಾ ಎಂಬುವರ ಜತೆ ಸೇರಿ ಶಿವಲಿಂಗಯ್ಯ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾನೆ. ಪರಿಣಾಮ ಶಿವಲಿಂಗಯ್ಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಘಟನೆ ಬಳಿಕ ನಿತಿನ್ ಮತ್ತು ಸಹಚರರು ಶಿವಲಿಂಗಯ್ಯ ಅವರಿಗೆ ಸೇರಿದ ಕಾರು ಹಾಗೂ ಬೈಕ್ ತೆಗೆದುಕೊಂಡು ಪರಾರಿಯಾಗಿದ್ದಾರೆ. ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಚಂದ್ರಾ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರೀಮಿಯಂ ಎಫ್‌ಎಆರ್ ಪರವಾಗಿ ಹೈಕೋರ್ಟ್ ತೀರ್ಪು | ನಗರ ಪಾಲಿಕೆಗಳಿಂದ 2 ಸಾವಿರ ಕೋಟಿ ರೂ. ಆದಾಯ ನಿರೀಕ್ಷೆ

ಮಾರ್ಗಸೂಚಿ ದರದ ಶೇ. 28ರಷ್ಟು ಶುಲ್ಕ ನಿಗದಿ | ಶುಲ್ಕ ಪಾವತಿಸಿ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳಲು ಅವಕಾಶ

ಪ್ರೀಮಿಯಂ ಎಫ್‌ಎಆರ್‌ಗೆ ಅಸ್ತು!

■ ನಾಗಪ್ಪ ನಾಗನಾಯಕನಹಳ್ಳಿ ಬೆಂಗಳೂರು
nagappa.naraynappa@timesofindia.com

ಮಹಾನಗರದಲ್ಲಿ ಶುಲ್ಕ ಪಾವತಿಸಿ ಕಟ್ಟಡಗಳಲ್ಲಿ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸುವ ಪ್ರೀಮಿಯಂ ಎಫ್‌ಎಆರ್ (ಫ್ಲೋರ್ ಏರಿಯಾ ರೇಷಿಯೋ) ಯೋಜನೆ ಜಾರಿಗೆ ಹೈಕೋರ್ಟ್ ಅಸ್ತು ಎಂದಿದೆ. ಸರಕಾರದ ಅಧಿಸೂಚನೆ ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಜಾಗೊಳಿಸಿದೆ.

ಪ್ರೀಮಿಯಂ ಎಫ್‌ಎಆರ್ ಜಾರಿ ಸಂಬಂಧ ನಗರಾಭಿವೃದ್ಧಿ ಇಲಾಖೆ ಹೊರಡಿಸಿದ್ದ ಅಧಿಸೂಚನೆ ಪ್ರಶ್ನಿಸಿ, ಸಿಟಿಜನ್ ಆ್ಯಕ್ಷನ್ ಫೋರಂ, ಬಿಲ್ಡರ್‌ಗಳು ಹಾಗೂ ಇತರರು ಸಲ್ಲಿಸಿದ್ದ ರಿಟ್ ಅರ್ಜಿ ಹಾಗೂ ಮೇಲ್ಮನವಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಪೂಣಚ್ಚ ಅವರಿದ್ದ ವಿಭಾಗೀಯ ಪೀಠ ವಜಾಗೊಳಿಸಿದೆ.

ಪ್ರೀಮಿಯಂ ಎಫ್‌ಎಆರ್ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸಲು ಜಾರಿಗೊಳಿಸುತ್ತಿರುವ ಯೋಜನೆಯಲ್ಲ, ಅಕ್ರಮ ಕಟ್ಟಡಗಳನ್ನು ಕಾನೂನುಬದ್ಧಗೊಳಿಸುವುದಿಲ್ಲ, ಬದಲಿಗೆ ವಲಯ ನಿಯಮಾವಳಿಗಳ ಅಡಿಯಲ್ಲಿ ಅನುಮತಿಸಲಾದ ವಿಸ್ತೀರ್ಣಕ್ಕೆ ಅನುಗುಣವಾಗಿ ಕಟ್ಟಡ ನಿರ್ಮಿಸಲು ಅವಕಾಶ ನೀಡುವುದಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯಿದೆಯಡಿ ಪ್ರೀಮಿಯಂ ಎಫ್‌ಎಆರ್ ಜಾರಿಗೊಳಿಸಲು ಸರಕಾರಕ್ಕೆ ಸಂಪೂರ್ಣ ಹಕ್ಕಿದೆ. ಇದು ಸಂವಿಧಾನದ ವಿಧಿ 14ರ (ಸಮಾನತೆಯ ಹಕ್ಕು) ಉಲ್ಲಂಘನೆಯಾಗುವುದಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಇದರಿಂದ ನಗರಾಭಿವೃದ್ಧಿ ವಲಯದಲ್ಲಿ ತೀವ್ರ ಕುತೂಹಲ ಕೆರಳಿಸಿದ್ದ ಕಾನೂನು ಹೋರಾಟಕ್ಕೆ ತೆರೆ ಬಿದ್ದಂತಾಗಿದೆ. ಪ್ರೀಮಿಯಂ ಎಫ್‌ಎಆರ್ ಯೋಜನೆಯು ಜಿಬಿಎ ವ್ಯಾಪ್ತಿಯ 5 ನಗರ ಪಾಲಿಕೆಗಳಲ್ಲೂ ಜಾರಿಯಾಗಲಿದೆ. ಅಷ್ಟೇ ಅಲ್ಲ; ಇಡೀ ರಾಜ್ಯಕ್ಕೆ ಅನ್ವಯವಾಗಲಿದೆ.

ಶೇ. 28ರಷ್ಟು ಶುಲ್ಕ ನಿಗದಿ: ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ 2015ರ ಸೆಕ್ಷನ್ 13 'ಇ'ಗೆ ತಿದ್ದುಪಡಿ ತರಲಾಗಿದ್ದು, ಪ್ರೀಮಿಯಂ ಎಫ್‌ಎಆರ್‌ಗಾಗಿ ಪರಿಷ್ಕೃತ ಮಾಸ್ಟರ್ ಪ್ಲಾನ್ 2015ರ ವಲಯ ನಿಯಮಗಳನ್ನು ಬದಲಾಯಿಸಲಾಗಿದೆ. 2025ರ ಜ.4ರಂದು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಸಾರ್ವಜನಿಕರ ಆಕ್ಷೇಪಣೆಗಳನ್ನು ಪರಿಗಣಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಇದನ್ನು ಪ್ರಶ್ನಿಸಿ ಹಲವರು ನ್ಯಾಯಾಲಯದ ಮೆಟ್ಟಿಲೇರಿದ್ದರು.

ಭೂ ಮಾಲೀಕರು, ಅಭಿವೃದ್ಧಿದಾರರು ಮತ್ತು ನಿರ್ಮಾಣದಾರರು ನಿವೇಶನದ ಮಾರ್ಗಸೂಚಿ ದರದ ಶೇ. 28ರಷ್ಟು ಶುಲ್ಕವನ್ನು ಪಾವತಿಸಿ ಪ್ರೀಮಿಯಂ ಎಫ್‌ಎಆರ್ (ಪಿಎಫ್‌ಎಆರ್) ಅನ್ನು ಖರೀದಿಸಬಹುದಾಗಿದೆ. ಬಳಿಕ ಇದನ್ನು ಬಳಸಿಕೊಂಡು ಹೆಚ್ಚುವರಿ ಅಂತಸ್ತುಗಳನ್ನು ಕಟ್ಟಿಕೊಳ್ಳಬಹುದಾಗಿದೆ.

ಕಟ್ಟಡ ನಿರ್ಮಿಸುವವರು ನಿವೇಶನದ ಮುಂಭಾಗದ ರಸ್ತೆಯ ಅಗಲಕ್ಕೆ ಅನುಗುಣವಾಗಿ ಪಿಎಫ್‌ಎಆರ್ ಪಡೆದುಕೊಳ್ಳಬಹುದು. ಜತೆಗೆ, ವರ್ಗಾಯಿಸಬಹುದಾದ ಅಭಿವೃದ್ಧಿ ಹಕ್ಕುಗಳನ್ನೂ (ಟಿಡಿಆರ್/ ಡಿಸಿಆರ್) ಬಳಸಿಕೊಂಡು ಇನ್ನಷ್ಟು ಹೆಚ್ಚಿನ ಅಂತಸ್ತುಗಳನ್ನು ನಿರ್ಮಿಸಬಹುದಾಗಿದೆ. ನಿವೇಶನದ ವಿಸ್ತೀರ್ಣಕ್ಕೆ ಅನುಗುಣವಾಗಿ ಟಿಡಿಆರ್, ಪಿಎಫ್‌ಎಆರ್ ನಿಗದಿಯಾಗುತ್ತದೆ.

9 ಮೀಟರ್‌ನಿಂದ 12 ಮೀಟರ್‌ವರೆಗಿನ ಅಗಲದ ರಸ್ತೆಗೆ ಹೊಂದಿಕೊಂಡಿರುವ ಕಟ್ಟಡಗಳ ನಿರ್ಮಿತಿ ಪ್ರದೇಶಕ್ಕೆ ಅನುಗುಣವಾಗಿ ಟಿಡಿಆರ್ ನೊಂದಿಗೆ ಶೇ. 60ರಷ್ಟು ಪ್ರೀಮಿಯಂ ಎಫ್‌ಎಆರ್ ನೀಡಲಾಗುತ್ತದೆ. 12 ಮೀಟರ್ ಮೇಲ್ಪಟ್ಟ ಅಗಲದ ರಸ್ತೆ ಹೊಂದಿರುವ ಕಟ್ಟಡಗಳಿಗೆ ಟಿಡಿಆರ್ ಹೊರತುಪಡಿಸಿ, ಶೇ. 40ರಷ್ಟು ಗರಿಷ್ಠ ಪ್ರೀಮಿಯಂ ಎಫ್‌ಎಆರ್ ಪಡೆಯಬಹುದು ಎಂದು ನಿಯಮಗಳಲ್ಲಿ ವಿವರಿಸಲಾಗಿದೆ.

ಪ್ರೀಮಿಯಂ ಎಫ್‌ಎಆರ್ ಪಡೆದರೂ, ಕಟ್ಟಡದ ಅನುಮೋದಿತ ವಿಸ್ತೀರ್ಣಕ್ಕಿಂತ ಶೇ. 40ರಷ್ಟು ಮಾತ್ರ ಹೆಚ್ಚುವರಿಯಾಗಿ ನಿರ್ಮಿಸಬಹುದು. ಉಳಿದಿದ್ದನ್ನು ಟಿಡಿಆರ್ ಪಡೆಯುವುದಕ್ಕೆ ಅವಕಾಶವಿದ್ದು, ಇದನ್ನು ಮಾರಾಟ ಮಾಡಿಕೊಳ್ಳುವುದಕ್ಕೆ ಹೊಸ ನಿಯಮದಲ್ಲಿ ಅನುವು ಮಾಡಿಕೊಡಲಾಗಿದೆ.

ಕಟ್ಟಡ ನಿರ್ಮಿಸುವವರು ಮಾರ್ಗಸೂಚಿ ದರದನ್ವಯ ಶುಲ್ಕ ಪಾವತಿಸಿ ಪ್ರೀಮಿಯಂ ಎಫ್‌ಎಆರ್‌ಗಳನ್ನು ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಪಡೆದುಕೊಳ್ಳಬಹುದು. ಈ ಮೂಲಕ ಕಟ್ಟಡದ ನಿವೇಶನದ ಅಳತೆಗೆ ನಿಗದಿಪಡಿಸಿದ ಎಫ್‌ಎಆರ್‌ಗಿಂತ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳಬಹುದು. ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವ ಸಕ್ಷಮ ಪ್ರಾಧಿಕಾರದ ಅನುಮೋದಿತ ಮಾಸ್ಟರ್ ಪ್ಲಾನ್‌ನ ವಲಯ ನಿಯಮಗಳ ಅನ್ವಯವೇ ಪ್ರೀಮಿಯಂ ಎಫ್‌ಎಆರ್‌ಗೆ ಅನುಮತಿ ನೀಡುತ್ತದೆ.

ಪ್ರತಿ ಅಂತಸ್ತಿಗೂ ಶೇ. 28ರಷ್ಟು ಶುಲ್ಕ: ಪ್ರತಿ ಅಂತಸ್ತನ್ನು ಹೆಚ್ಚುವರಿಯಾಗಿ ನಿರ್ಮಿಸಲು ಶೇ. 28ರಷ್ಟು ಮಾರ್ಗಸೂಚಿ ದರವನ್ನು ಶುಲ್ಕವಾಗಿ ಪಾವತಿಸಬೇಕಾಗುತ್ತದೆ. ಕಟ್ಟಡ ನಿರ್ಮಾಣಕ್ಕೆ ಅನುಮತಿ ಕೋರಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲೇ ಶುಲ್ಕ ಪಾವತಿಸಿ, ನಕ್ಷೆ ಮಂಜೂರಾತಿ ಪಡೆದುಕೊಳ್ಳಬೇಕು.

ಟಿಡಿಆರ್ ಹಾಗೂ ಹೊಸ ಪ್ರೀಮಿಯಂ ಎಫ್‌ಎಆರ್ ನಿಯಮಗಳು ಜಾರಿಯಲ್ಲಿರುತ್ತವೆ. ಭೂಮಾಲೀಕರು, ಬಿಲ್ಡರ್‌ಗಳು ತಮ್ಮಿಷ್ಟದ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಪ್ರೀಮಿಯಂ ಎಫ್‌ಎಆರ್‌ನಿಂದ ಬೆಂಗಳೂರಿನಂತಹ ಮಹಾನಗರಗಳಲ್ಲಿ ಲಂಬ ಮಾದರಿಯ ನಗರಾಭಿವೃದ್ಧಿಗೆ ಅನುಕೂಲವಾಗಲಿದೆ. ಬಿಲ್ಡರ್‌ಗಳಿಗೆ ಹೆಚ್ಚಿನ ವಿಸ್ತೀರ್ಣದ ಕಟ್ಟಡ ನಿರ್ಮಿಸಲು ಅವಕಾಶ ಸಿಗಲಿದೆ. ಜತೆಗೆ ಸರಕಾರದ ಆದಾಯ ಮೂಲವೂ ಗಣನೀಯವಾಗಿ ಹೆಚ್ಚಾಗಲಿದೆ.

ಹೊಸದಾಗಿ ನಿರ್ಮಿಸುವ ಕಟ್ಟಡಗಳಲ್ಲಷ್ಟೇ ಅಲ್ಲ; ನಿಯಮಾನುಸಾರ ನಕ್ಷೆ ಮಂಜೂರಾತಿ ಪಡೆದು ನಿರ್ಮಿಸಿರುವ ಹಳೆಯ ಕಟ್ಟಡಗಳಲ್ಲೂ ಪ್ರೀಮಿಯಂ ಎಫ್‌ಎಆರ್ ಬಳಸಿಕೊಂಡು ಹೆಚ್ಚುವರಿ ಮಹಡಿಗಳನ್ನು ಕಟ್ಟಿಕೊಳ್ಳಬಹುದಾಗಿದೆ.

ನಗರದ ರಸ್ತೆಗಳ ವಿವರ

ರಸ್ತೆಗಳ ಅಗಲ (ಮೀ.ಗಳಲ್ಲಿ)	ರಸ್ತೆಗಳ ಸಂಖ್ಯೆ
9-12	85,000
12-15	7,742
15-18	1,105
18-24	4,961
24-30	5,052
30-45	1,245
45 ಮೀ. ಮೇಲ್ಪಟ್ಟು	3,135
ಒಟ್ಟು	1,08,233

ಯಾರಿಗೆ ಎಷ್ಟು ಪ್ರೀಮಿಯಂ ಎಫ್‌ಎಆರ್?

ನಿವೇಶನದ ಮುಂದಿನ ರಸ್ತೆ	ಟಿಡಿಆರ್‌ನೊಂದಿಗೆ ಪ್ರೀಮಿಯಂ ಎಫ್‌ಎಆರ್	ಟಿಡಿಆರ್ ಹೊರತುಪಡಿಸಿ ಹೆಚ್ಚುವರಿ ಎಫ್‌ಎಆರ್
9 ಮೀ.ನಿಂದ 12 ಮೀ	ಶೇ 0.60	--
12 ಮೀ. ನಿಂದ ಮೇಲ್ಪಟ್ಟು	ಶೇ 0.60	ಶೇ 40

ಹಾಲಿ ಕಟ್ಟಡಗಳಿಗೆ ಶೇ. 25ರಷ್ಟು ರಿಯಾಯಿತಿ

''ನಗರದಲ್ಲಿ ಈಗಾಗಲೇ ನಿರ್ಮಾಣವಾಗಿರುವ ಕಟ್ಟಡಗಳೂ ಪ್ರೀಮಿಯಂ ಎಫ್‌ಎಆರ್ ಪಡೆದುಕೊಳ್ಳಬಹುದು. ಆ ಕಟ್ಟಡಗಳ ಸೆಟ್‌ಬ್ಯಾಕ್‌ನಲ್ಲಿ ಶೇ. 25ರಷ್ಟು ರಿಯಾಯಿತಿ ನೀಡಲಾಗುತ್ತದೆ. ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳಲು ಬಯಸುವ ಕಟ್ಟಡದ ಮಾಲೀಕರು, ಅದಕ್ಕೆ ಅನುಗುಣವಾದ ಸೆಟ್‌ಬ್ಯಾಕ್ ಅನ್ನು ಹೊಂದಿರಬೇಕು. ಪಾರ್ಕಿಂಗ್ ಸೌಲಭ್ಯವು ನಿಯಮಗಳಂತೆಯೇ ಇರಬೇಕು. ಈ ಯೋಜನೆಯಿಂದ ಸುಮಾರು 2000 ಕೋಟಿ ರೂ. ಆದಾಯ ನಿರೀಕ್ಷಿಸಲಾಗಿದೆ,'' ಎಂದು ಜಿಬಿಎ ನಗರ ಯೋಜನೆ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದರು.

ಏನಿದು ಪ್ರೀಮಿಯಂ ಎಫ್‌ಎಆರ್?

9 ಮೀಟರ್‌ನಿಂದ 12 ಮೀಟರ್‌ವರೆಗೆ ರಸ್ತೆ ಹೊಂದಿರುವ ನಿವೇಶನದಲ್ಲಿ ಐದು ಅಂತಸ್ತುಗಳನ್ನು ಕಟ್ಟಿದ್ದರೆ, ಅವರಿಗೆ ಇನ್ನೂ ಒಂದು ಅಂತಸ್ತು ಕಟ್ಟಿಕೊಳ್ಳಲು ಅವಕಾಶ ನೀಡುವುದೇ ಪ್ರೀಮಿಯಂ ಎಫ್‌ಎಆರ್. ಹೆಚ್ಚುವರಿ ಅಂತಸ್ತುಗಳಿಗೆ ಅನುಗುಣವಾಗಿ ಸೆಟ್ ಬ್ಯಾಕ್, ಪಾರ್ಕಿಂಗ್ ಜಾಗ ಬಿಡಬೇಕಾಗುತ್ತದೆ. ರಸ್ತೆಯ ಅಗಲ ಹೆಚ್ಚಾಗುತ್ತಿದ್ದಂತೆಯೇ ಪ್ರೀಮಿಯಂ ಎಫ್‌ಎಆರ್ ಪ್ರಮಾಣವೂ ಅಧಿಕವಾಗುತ್ತದೆ. ನಿಗದಿತ ಶುಲ್ಕ ಪಾವತಿಸಿ ಖರೀದಿಸಿರುವ ಪ್ರೀಮಿಯಂ ಎಫ್‌ಎಆರ್ ಪ್ರಮಾಣಪತ್ರವನ್ನು ವರ್ಗಾಯಿಸಲು ಅವಕಾಶವಿರುವುದಿಲ್ಲ, ಯಾವ ಕಟ್ಟಡಕ್ಕೆ ಪಡೆಯಲಾಗಿರುತ್ತದೆಯೋ, ಅದೇ ಕಟ್ಟಡಕ್ಕೆ ಬಳಸಬೇಕು.

ಸಂಗೀತ ಕಲಿಕಾ ಶಿಬಿರ ನಾಳೆ

ಬೆಂಗಳೂರು: ವಿಶ್ವಸಂಗೀತ ದಿನದ ಅಂಗವಾಗಿ ಅನುರಾಗ್ಸ್ ಸಂಗೀತ ಗುರುಕುಲವು ಹಿರಿಯ ಗಾಯಕಿ ರತ್ನಮಾಲಾ ಪ್ರಕಾಶ್ ಅವರಿಂದ ಸುಗಮ ಸಂಗೀತ ಕಲಿಕಾ ಶಿಬಿರ ಆಯೋಜಿಸಿದೆ. ಶಿಬಿರವು ಜೂನ್ 21ರಂದು ಬೆಳಗ್ಗೆ10 ರಿಂದ ಸಂಜೆ 4ರವರೆಗೆ ನಡೆಯಲಿದೆ. ಜತೆಗೆ ಅವರು ತಮ್ಮ ಗಾಯನದ ಅನುಭವವನ್ನೂ ಹಂಚಿಕೊಳ್ಳಲಿದ್ದಾರೆ. ಡಾ. ಎಂ. ಚಿದಾನಂದ ಮೂರ್ತಿ ಸಭಾಂಗಣ, ವಿಜಯನಗರ ಮೆಟ್ರೊ ನಿಲ್ದಾಣದ ಹತ್ತಿರ.

ನಗರ ಪಾಲಿಕೆಗಳಿಗೆ 750 ಕೋಟಿ ಅನುದಾನ ಬಿಡುಗಡೆ

ಬೆಂಗಳೂರು: ರಾಜ್ಯ ಸರಕಾರವು 2026-27ನೇ ಸಾಲಿನ ಆಯವ್ಯಯದಲ್ಲಿ ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಿಗೆ ಘೋಷಿಸಿರುವ 3,000 ಕೋಟಿ ರೂ. ಅನುದಾನದ ಪೈಕಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನವಾಗಿ 750 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯಡಿ 750 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು ಬಂಡವಾಳ ಯೋಜನೆಯ ಕಾಮಗಾರಿಗಳಿಗೆ ಮಾತ್ರ ಬಳಸಬೇಕು. ಸರಕಾರದಿಂದ ಅನುಮೋದನೆ ನೀಡಿರುವ ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಹೊರತುಪಡಿಸಿ, ಅನ್ಯ ಉದ್ದೇಶಕ್ಕೆ ಬಳಸಿದರೆ ಸಂಬಂಧಪಟ್ಟ ಮುಖ್ಯ ಲೆಕ್ಕಾಧಿಕಾರಿಗಳನ್ನು ಹೊಣೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ನೀಟ್ ಮರು ಪರೀಕ್ಷೆ: ನಿಷೇಧಾಜ್ಞೆ

ಬೆಂಗಳೂರು: ರಾಜಧಾನಿಯಲ್ಲಿ ಭಾನುವಾರ (ಜೂ.21) ನೀಟ್ (ಯುಜಿ)-2026 ಮರು ಪರೀಕ್ಷೆ ನಡೆಯಲಿರುವ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಮುನ್ನೆಚ್ಚರಿಕೆ ಕ್ರಮವಾಗಿ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ. ಯಾವುದೇ ಪರೀಕ್ಷಾ ಅಕ್ರಮಗಳಿಗೆ ಅವಕಾಶವಿಲ್ಲದಂತೆ ಸುಸೂತ್ರವಾಗಿ ಪರೀಕ್ಷೆ ನಡೆಸುವ ಉದ್ದೇಶಕ್ಕಾಗಿ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಅಲ್ಲದೆ, ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್, ಸೈಬರ್ ಸೆಂಟರ್‌ಗಳನ್ನು ಬಂದ್ ಮಾಡುವಂತೆ ಸೂಚಿಸಲಾಗಿದೆ.

ಒಂದೇ ದಿನ 15 ಲಕ್ಷ ಸಸಿ ನೆಡಲು ಬಿಡಿಎ ಸಜ್ಜು

» ನಮ್ಮ ಮೊದಲ ಪುಟದಿಂದ

ಸಸಿ ನೆಡುವ ಅಭಿಯಾನ ಅಂದು ಬೆಳಗ್ಗೆ 6ಕ್ಕೆ ಆರಂಭವಾಗಿ ನಿರಂತರವಾಗಿ 12 ಗಂಟೆಗಳ ಕಾಲ ನಡೆಯಲಿದೆ. ಮಧ್ಯಪ್ರದೇಶದ ಇಂದೋರ್‌ನಲ್ಲಿ ಒಂದೇ ದಿನ 12 ಲಕ್ಷ ಸಸಿಗಳನ್ನು ನೆಟ್ಟಿರುವುದು ಈವರೆಗಿನ ದಾಖಲೆಯಾಗಿದೆ. ಪ್ರಸ್ತುತ ಬಿಡಿಎ 15 ಲಕ್ಷ ಮರಗಳನ್ನು ನೆಡುವ ಮೂಲಕ ಗಿನ್ನೆಸ್ ದಾಖಲೆ ನಿರ್ಮಿಸಲು ಸಜ್ಜಾಗಿದೆ.

350 ಬಗೆಯ ಸಸಿಗಳು, ಜಿಯೊ ಟ್ಯಾಗಿಂಗ್: ಬೆಂಗಳೂರಿನ ಪರಿಸರ ವ್ಯವಸ್ಥೆಗೆ ಸೂಕ್ತವಾದ ಸ್ಥಳೀಯ ಮರಗಳ ಜಾತಿಗಳು ಹಾಗೂ ಔಷಧೀಯ ಸಸ್ಯಗಳಿಗೆ ಆದ್ಯತೆ ನೀಡಲಾಗಿದೆ. ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳುವ ಮತ್ತು ದೀರ್ಘಕಾಲ ಬಾಳಿಕೆ ಬರುವ ಸಸಿಗಳ ಬಗ್ಗೆ ಪರಿಸರ ತಜ್ಞರ ಅಭಿಪ್ರಾಯ ಸಂಗ್ರಹಿಸಿರುವ ಬಿಡಿಎ, ಅಪರೂಪದ ಹಾಗೂ ವಿರಳವಾದ ಸುಮಾರು 350 ಬಗೆಯ ಸ್ಥಳೀಯ ಸಸಿಗಳನ್ನು ನೆಡಲು ಸಜ್ಜಾಗಿದೆ. ಪ್ರತಿಯೊಂದು ಸಸಿಗೂ ಜಿಯೊ ಟ್ಯಾಗಿಂಗ್ ಮಾಡಲಾಗುತ್ತದೆ. ಹೀಗೆ, ಪೊದೆಗಳು ಮತ್ತು ಔಷಧ ಸಸ್ಯಗಳನ್ನು ಒಳಗೊಂಡ ಬಹು-ಪದರದ ಅರಣ್ಯ ರಚನೆಗೆ ನಿರ್ಧರಿಸಿದೆ. ನೆಟ್ಟ ಸಸಿಗಳನ್ನು ಮೂರು ವರ್ಷಗಳವರೆಗೆ ಬಿಡಿಎ ನಿರ್ವಹಣೆ ಮಾಡಲಿದೆ. ಇದೆಲ್ಲವೂ ಆಡಿಟ್ ಆಗಲಿದೆ.

ಈ ಅಭಿಯಾನಕ್ಕೆ ಸ್ವಯಂಸೇವಕರ ಅಗತ್ಯವಿದ್ದು, ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಇದರಲ್ಲಿ ಭಾಗವಹಿಸುವವರಿಗೆ ಡಿಜಿಟಲ್ ಪ್ರಮಾಣಪತ್ರವನ್ನೂ ನೀಡಲಾಗುತ್ತದೆ. ಅಲ್ಲದೆ, ಪ್ರತಿ ಸ್ವಯಂಸೇವಕರು 25-30 ಸಸಿಗಳನ್ನು ನೆಡಬೇಕಿದೆ. ನಿ ಡ ವೇಳೆ ಸ್ವಯಂಸೇವಕರಿಗೆ ತೆರಳು ಅಗತ್ಯವಿರುವ ಸಾರಿಗೆ, ಸಾಮಗ್ರಿಗಳು, ಊಟ-ತಿಂಡಿಯ ವ್ಯವಸ್ಥೆಯನ್ನು ಬಿಡಿಎ ಮಾಡಲಿದೆ. ಹೆಚ್ಚಿನ ಮಾಹಿತಿಗೆ: 9483166622 ನಂಬರ್‌ಗೆ ಸಂಪರ್ಕಿಸಬಹುದು. greenbengal-urubybda.in ಇಲ್ಲಿ ನೋಂದಣಿಗೆ ಅವಕಾಶ ಕಲ್ಪಿಸಿದೆ.

ಎಸ್‌ಐಆರ್: ಇಂದು ಪ್ರತಿಭಟನಾ ಸಮಾವೇಶ

■ ವಿಕ ಸುದ್ದಿಲೋಕ ಬೆಂಗಳೂರು

ಸಿಎಂ, ಮಾಜಿ ಸಿಎಂ ಭಾಗಿ

ರಾಜ್ಯದಲ್ಲಿ ಕೈಗೊಳ್ಳುತ್ತಿರುವ ಅಸಾಂವಿಧಾನಿಕ, ಅವೈಜ್ಞಾನಿಕ, ದುರುದ್ದೇಶಪೂರಿತ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ಜಾತ್ಯತೀತ ಪಕ್ಷಗಳು, ಜನಪರ ಸಂಘಟನೆಗಳ ಒಕ್ಕೂಟ ಜೂ. 20ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನಾ ಸಮಾವೇಶವನ್ನು ಹಮ್ಮಿಕೊಂಡಿದೆ.

''ಈ ಸಮಾವೇಶದಲ್ಲಿ ಬಿಜೆಪಿ, ಜೆಡಿಎಸ್ ಮತ್ತು ಸಂಘ ಪರಿವಾರ ಹೊರತುಪಡಿಸಿ ಸುಮಾರು 230 ಸಂಘಟನೆಗಳು, ರಾಜಕೀಯ ಪಕ್ಷಗಳು ಭಾಗವಹಿಸಲಿವೆ. ಎಸ್‌ಐಆರ್ ಕುರಿತು ನಾಗರಿಕರ ಅತಿ ಪ್ರಮುಖ ಪ್ರಶ್ನೆಗಳಿಗೆ ಉತ್ತರ ಒದಗಿಸುವಂತೆ ಒತ್ತಾಯಿಸಿ ರಾಜ್ಯ ಚುನಾವಣಾ ಆಯೋಗ ಮತ್ತು ರಾಜ್ಯ ಸರಕಾರವನ್ನು ಪ್ರತಿಭಟನಾ ಸಮಾವೇಶಕ್ಕೆ ಆಹ್ವಾನಿಸಲಾಗಿದೆ,'' ಎಂದು ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ಕರ್ನಾಟಕ ಜನಶಕ್ತಿಯ ನೂರ್ ಶ್ರೀಧರ್, ರೈತ ಸಂಘದ ಜೆ.ಎಂ. ವೀರಸಂಗಯ್ಯ, ಜಮಾತೆ ಇಸ್ಲಾಮಿ ಸಂಘಟನೆಯ ಮುಹಮ್ಮದ್ ಯೂಸಫ್ ಕನ್ನಿ, 'ಎದ್ದೇಳು ಕರ್ನಾಟಕ'ದ ತಾರಾ ರಾವ್ ಶುಕ್ರವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

''ಸಮಾವೇಶಕ್ಕೆ ಪೂರಕವಾಗಿ ಜೂ. 13ರಿಂದ 'ಎದ್ದೇಳು ಕರ್ನಾಟಕ' ಸಹಯೋಗದೊಂದಿಗೆ ಐದು ಮಾರ್ಗಗಳಲ್ಲಿ ರಾಜ್ಯ ವ್ಯಾಪಿ ಜಾಥಾ ಸಂಘಟಿಸಿ, ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಈ ಅವಧಿಯಲ್ಲಿ ರಾಜ್ಯದ ಎಲ್ಲ ತಾಲೂಕು ಕೇಂದ್ರಗಳಿಗೂ ಭೇಟಿ ನೀಡಲಾಗಿದೆ. ಈ ವೇಳೆ ಸುಮಾರು 170ಕ್ಕೂ ಹೆಚ್ಚು ವಿವಿಧ ರೀತಿಯ ಜಾಗೃತಿ ಚಟುವಟಿಕೆಗಳು ನಡೆದಿವೆ. ಜನರು ಎಸ್‌ಐಆರ್‌ನ ಅಪಾಯ ಹಾಗೂ ಅದರ ಹಿಂದಿನ ಷಡ್ಯಂತ್ರವನ್ನು ಅರ್ಥಮಾಡಿಕೊಳ್ಳುತ್ತಿದ್ದಾರೆ,'' ಎಂದು ಹೋರಾಟಗಾರರು ವಿವರಿಸಿದರು.

''ಸಮಾವೇಶದಲ್ಲಿ ನಾವು ಚುನಾವಣಾ ಆಯೋಗದ ಮುಂದೆ ಆರು ಪ್ರಶ್ನೆಗಳನ್ನು ಮತ್ತು ನಾಲ್ಕು ಪ್ರಸ್ತಾಪಗಳು ಮತ್ತು ರಾಜ್ಯದ ಮತದಾರರ ಹಿತ ಕಾಯಬೇಕಾದರೆ ಸರಕಾರ ತೆಗೆದುಕೊಳ್ಳಲೇಬೇಕಾದ ಅತ್ಯಗತ್ಯ ಐದು ಕ್ರಮಗಳ ಪ್ರಸ್ತಾಪ ಮುಂದಿಡಲಾಗುತ್ತಿದೆ. ಕರ್ನಾಟಕದ ಎಲ್ಲ ಸಂವಿಧಾನ ಪ್ರೇಮಿಗಳು ದೊಡ್ಡ ಸಂಖ್ಯೆಯಲ್ಲಿ ಸಮಾವೇಶಕ್ಕೆ ಆಗಮಿಸಬೇಕು,'' ಎಂದು ತಿಳಿಸಿದರು.

''ಸಮಾವೇಶಕ್ಕೆ ಸರ್ವಧರ್ಮೀಯರ ಪ್ರತಿನಿಧಿಗಳಾಗಿ ಡಾ. ಶಿವಾಚಾರ್ಯ ಶಿವಮೂರ್ತಿ ಸ್ವಾಮಿ, ರೆವರೆಂಡ್ ಪೀಟರ್ ಮಚಾಡೋ, ರೆವರೆಂಡ್ ಬಿ.ಪಿ. ಸುಸೈನಾಥನ್, ಮೈತ್ರೇಯಿ ಮಾತಾಜಿ, ಬಲಜಿತ್ ಸಿಂಗ್, ಮೌಲಾನ ಜುಲ್ಫಿ ಖಾರ್‌ನೂರಿ, ರಾಜ್ಯ ಸರಕಾರದ ಪ್ರತಿನಿಧಿಗಳಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದ ಸುಮಾರು 230ಕ್ಕೂ ಹೆಚ್ಚು ಸಂಘಟನೆಗಳ ಮುಖ್ಯಸ್ಥರು ಭಾಗವಹಿಸಲಿದ್ದಾರೆ,'' ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ 'ಎದ್ದೇಳು ಕರ್ನಾಟಕ'ದ ಅಮ್ಜದ್ ಪಾಷಾ, ವಿಚಾರ ವೇದಿಕೆಯ ನಾಗೇಶ್ ಅರಳಕುಪ್ಪೆ ಹಾಜರಿದ್ದರು.

ತಿರುಚಿದ ಫೋಟೊ ಪೋಸ್ಟ್: ಬಂಧನ

ಬೆಂಗಳೂರು: ಚಿತ್ರನಟಿ ರುಕ್ಮಿಣಿ ವಸಂತ್ ಅವರ ತಿರುಚಿದ ಅಶ್ಲೀಲ ಫೋಟೊ ಮತ್ತು ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದ ಆರೋಪಿಗಳನ್ನು ಸೈಬರ್ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಚಿಲಕಮುಖಿ ಗ್ರಾಮದ ರವಿಕುಮಾರ್ (24), ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಚಂದ್ರಕಾಂತ್ (33) ಮತ್ತು ನಗರದ ಮಹಾಲಕ್ಷ್ಮೀ ಲೇಔಟ್‌ನ ರಂಜಿತ್ (25) ಬಂಧಿತರು. ಆರೋಪಿಗಳು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ, ನಟಿ ರುಕ್ಮಿಣಿ ವಸಂತ್ ಅವರ ಮಾನ ಹಾನಿಯಾಗುವಂತೆ ಫೋಟೊ ಮತ್ತು ವಿಡಿಯೊಗಳನ್ನು ತಿರುಚಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ಗಳನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ 3 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಾಗಲೂರು ಗ್ರಾಮ ಪಂಚಾಯಿತಿಯ 2026-27ನೇ ಸಾಲಿನ ಮೊದಲ ಸುತ್ತಿನ ಗ್ರಾಮಸಭೆಯಲ್ಲಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಪ್ರೋತ್ಸಾಹಧನ, ವಿಕಲಚೇತನರಿಗೆ ಕ್ರೀಡಾ ಸಾಮಗ್ರಿ ವಿತರಿಸಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆಂಪೇಗೌಡ , ಪಿಡಿಒ ಆರ್.ನರಸಿಂಹಮೂರ್ತಿ ಹಾಗೂ ಸದಸ್ಯರು ಇದ್ದರು.

32 ಕೆರೆಗಳ ನೀರಿನ ಗುಣಮಟ್ಟ ಸುಧಾರಣೆಗೆ ರಾವ್ ಸೂಚನೆ

■ ವಿಕ ಸುದ್ದಿಲೋಕ ಬೆಂಗಳೂರು

ಜಿಬಿಎ ವ್ಯಾಪ್ತಿಯಲ್ಲಿ 'ಇ' ವರ್ಗದಲ್ಲಿರುವ 32 ಕೆರೆಗಳ ನೀರಿನ ಗುಣಮಟ್ಟ ಸುಧಾರಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಬಿಎ ವ್ಯಾಪ್ತಿಯ ಕೆ-100 ರಾಜಕಾಲುವೆ, 'ಇ' ವರ್ಗಕ್ಕೆ ಸೇರಿರುವ ಕೆರೆಗಳು ಹಾಗೂ ರಸ್ತೆಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಶುಕ್ರವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ''ಪಾಲಿಕೆಗಳ ಒಡೆತನದ 182 ಕೆರೆಗಳಿದ್ದು, ಈ ಪೈಕಿ 32 ಕೆರೆಗಳ ನೀರಿನ ಗುಣಮಟ್ಟವು ಕ್ಲಾಸ್ 'ಇ' ವರ್ಗಕ್ಕೆ ಸೇರಿದೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಏಪ್ರಿಲ್‌ನಲ್ಲಿ ನೀಡಿರುವ ವರದಿಯಲ್ಲಿ ಉಲ್ಲೇಖಿಸಿದೆ. ಹೀಗಾಗಿ, ಈ ಕೆರೆಗಳನ್ನು ಪರಿಶೀಲಿಸಿ, ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು,'' ಎಂದು ಹೇಳಿದರು.

''ಕೇಂದ್ರ ನಗರ ಪಾಲಿಕೆ 1, ಉತ್ತರ 8, ದಕ್ಷಿಣ 7, ಪೂರ್ವ 12 ಹಾಗೂ ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿನ 4 ಕೆರೆಗಳು ಸೇರಿ ಒಟ್ಟು 38 ಕೆರೆಗಳು ಕ್ಲಾಸ್ 'ಇ' ವರ್ಗದಲ್ಲಿವೆ. ಪಾಲಿಕೆ ಹಾಗೂ ಜಲಮಂಡಳಿ ಅಧಿಕಾರಿಗಳು ಜಂಟಿಯಾಗಿ ಪರಿಶೀಲನೆ ನಡೆಸಿ ಸಮಸ್ಯೆ ಪರಿಹಾರಕ್ಕೆ ವರದಿ ಸಲ್ಲಿಸಬೇಕು,'' ಎಂದು ನಿರ್ದೇಶನ ನೀಡಿದರು.

ಕೆ-100ಕ್ಕೆ ಕೊಳಚೆ ಸೇರ್ಪಡೆ ತಡೆಯಬೇಕು: ''ಕೆ-100 ರಾಜಕಾಲುವೆ ಮಾರ್ಗದಲ್ಲಿ 19 ಕಡೆ ಕೊಳಚೆ ನೀರು ಸೇರುತ್ತಿದ್ದು, ಅದನ್ನು ಸಂಪೂರ್ಣವಾಗಿ ತಡೆಯಬೇಕಿದೆ. ಈ ಸಂಬಂಧ ಜಲಮಂಡಳಿ ಹಾಗೂ ಪಾಲಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಸಮಸ್ಯೆಯ ಮೂಲವನ್ನು ಗುರುತಿಸಿ ರಾಜಕಾಲುವೆಗೆ ಕೊಳಚೆ ನೀರು ಸೇರುವುದನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕು,'' ಎಂದು ಸೂಚನೆ ನೀಡಿದರು.

''ಮಿಷನ್ ರಸ್ತೆಯಲ್ಲಿ ಕೆಲ ಮನೆಗಳಿಂದ ನೇರವಾಗಿ ರಾಜಕಾಲುವೆಗೆ ಕೊಳಚೆ ನೀರು ಹರಿಯುತ್ತಿದ್ದು, ಯಾವ ಮನೆಗಳಿಂದ ಕೊಳಚೆ ನೀರು ಬರುತ್ತಿದೆ ಎಂಬುದನ್ನು ಪರಿಶೀಲಿಸಿ ಸಂಬಂಧಿಸಿದವರಿಗೆ ನೋಟಿಸ್ ನೀಡಿ ಸಮಸ್ಯೆ ಸರಿಪಡಿಸಬೇಕು. ಕೆ.ಎಸ್.ಗಾರ್ಡನ್ ಸಮೀಪದ ರಾಜಕಾಲುವೆಯಲ್ಲಿ ಒಳಚರಂಡಿ ಪೈಪ್ ಹಾದು ಹೋಗಿದ್ದು, ಜೋರು ಮಳೆ ಬಂದಾಗ ಒಳಚರಂಡಿ ನೀರು ಉಕ್ಕಿ ಹರಿದು ಸಮಸ್ಯೆ ಉಂಟಾಗುತ್ತಿದೆ. ಆ ಭಾಗವನ್ನು ಮರು ವಿನ್ಯಾಸಗೊಳಿಸಿ ಸಮಸ್ಯೆ ಪರಿಹರಿಸಬೇಕು,'' ಎಂದು ತಿಳಿಸಿದರು.

ಪತ್ನಿ ವಿರುದ್ಧವೇ ದೂರು

» ನಮ್ಮ ಮೊದಲ ಪುಟದಿಂದ

ಆತನ ಶೈಕ್ಷಣಿಕ ವೆಚ್ಚಕ್ಕೆ ಮತ್ತು ಸ್ವಾತಿ ತಂದೆಯ ಮನೆ ಬಾಡಿಗೆಗೆ ತಾನೇ ಹಣ ಕೊಡುತ್ತಿದ್ದೆ. ಈ ಮಧ್ಯೆ ಸ್ವಾತಿ ಬೇರೆ ಇಬ್ಬರು ವ್ಯಕ್ತಿಗಳೊಂದಿಗೆ ಸಲುಗೆಯಿಂದ ಇರುವುದು ಗೊತ್ತಾಗಿತ್ತು. ಇದೇ ವಿಚಾರಕ್ಕೆ ತಮ್ಮ ನಡುವೆ ಜಗಳವಾಗಿತ್ತು. ನಂತರ ಪರಸ್ಪರರು ಸೌಹಾರ್ದಯುತವಾಗಿ ದೂರವಾಗಿದ್ದೆವು ಎಂದು ಉದ್ಯಮಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ದೂರವಾದ ಬಳಿಕ ಸ್ವಾತಿ ಮನೆಗೆ ನುಗ್ಗಿ 18 ಲಕ್ಷ ರೂ. ನಗದು, ಲಕ್ಷಾಂತರ ಮೌಲ್ಯದ ವಿದೇಶಿ ಕರೆನ್ಸಿ, 320 ಗ್ರಾಂ ಚಿನ್ನಾಭರಣ, 1.5 ಕೆ.ಜಿ. ಬೆಳ್ಳಿ ಸೇರಿದಂತೆ ಬೆಲೆಬಾಳುವ ವಸ್ತುಗಳನ್ನು ಕಳವು ಮಾಡಿದ್ದಾಳೆ. ನಕಲಿ ಕೀ ಬಳಸಿ ತನ್ನ ಕಾರು ಕೂಡ ತೆಗೆದುಕೊಂಡು ಹೋಗಿದ್ದಾಳೆ. ಅಲ್ಲದೆ, ತನ್ನ ಬ್ಯಾಂಕ್ ಚೆಕ್‌ಗೆ ನಕಲಿ ಸಹಿ ಹಾಕಿ 83 ಸಾವಿರ ರೂ. ಡ್ರಾ ಮಾಡಿಕೊಂಡಿದ್ದಾಳೆ. ಈ ಬಗ್ಗೆ ಪ್ರಶ್ನಿಸಿದ್ದಕ್ಕೆ ಆಕೆ, ಪ್ರಭಾವಿ ರಾಜಕಾರಣಿಗಳು, ನ್ಯಾಯಾಧೀಶರು ಹಾಗೂ ಪೊಲೀಸರ ಪರಿಚಯವಿದೆ. 50 ಲಕ್ಷ ರೂ. ಕೊಡದಿದ್ದರೆ ತಾವು ಏಡ್ಸ್ ರೋಗಿ ಎಂದು ಬಿಂಬಿಸುತ್ತೇನೆ ಮತ್ತು ವೇಶ್ಯಾವಾಟಿಕೆ ದಂಧೆಯೊಂದಿಗೆ ಸಂಪರ್ಕ ಹೊಂದಿರುವುದಾಗಿ ಸುಳ್ಳು ಸುದ್ದಿ ಹಬ್ಬಿಸಿ ಮಾನಹಾನಿ ಮಾಡುವುದಾಗಿ ಬೆದರಿಕೆ ಹಾಕಿದ್ದಾಳೆ ಎಂದು ಉದ್ಯಮಿ ಆರೋಪಿಸಿದ್ದಾರೆ.

'ದೇವರ ಮುಂದೆ ಎಲ್ಲರೂ ಸಮಾನರು'

3 ಸಾವಿರ ಮಹಿಳೆಯರಿಂದ ಲೋಕ ಕಲ್ಯಾಣಾರ್ಥ ಲಲಿತಾ ಸಹಸ್ರನಾಮ ಪಠಣ

■ ವಿಕ ಸುದ್ದಿಲೋಕ ಬೆಂಗಳೂರು

''ದೇವರ ಮುಂದೆ ಎಲ್ಲರೂ ಸಮಾನರು. ಇಲ್ಲಿ ಜಾತಿ, ಮತ, ಧರ್ಮ, ಬೇಧಪಿರುವುದಿಲ್ಲ'' ಎಂದು ಮಂತ್ರಾಲಯ ಮಠದ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ರಕ್ಷಾ ಫೌಂಡೇಷನ್ ವತಿಯಿಂದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ ಆಯೋಜಿಸಿದ್ದ 4ನೇ ವರ್ಷದ ಲಲಿತಾ ಸಹಸ್ರನಾಮ ಸಮಾರಂಭಕ್ಕೆ ಚಾಲನೆ ನೀಡಿ ಶುಕ್ರವಾರ ಅವರು ಮಾತನಾಡಿದರು. ಮೂರು ಸಾವಿರಕ್ಕೂ ಹೆಚ್ಚು ಮಹಿಳೆಯರು ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರ ಪಠಣ ಮಾಡಿದರು.

ಬಳಿಕ ಆಶೀರ್ವಚನ ನೀಡಿದ ಸುಬುಧೇಂದ್ರ ತೀರ್ಥ ಸ್ವಾಮೀಜಿ, ''ಉದ್ಯಾನನಗರಿ ಬೆಂಗಳೂರಿನಲ್ಲಿ ಲಲಿತಾ ಸಹಸ್ರನಾಮ ಪೂಜೆ, ಪಠಣ ಕಾರ್ಯಕ್ರಮವನ್ನು ನಾಲ್ಕು ವರ್ಷಗಳಿಂದ ಹಮ್ಮಿಕೊಂಡು ಬರುತ್ತಿರುವುದು ಉತ್ತಮ ಬೆಳವಣಿಗೆ. ಜಾತಿ, ಮತ, ಪಂಥ, ಬೇಧವಿಲ್ಲದೆ ಎಲ್ಲರೂ ಸೇರಿ ಲಲಿತಾರಾಧನೆ ಮಾಡುತ್ತಿದ್ದಾರೆ. ಶ್ರೀಮಂತರು, ಮಧ್ಯಮ ವರ್ಗ, ಬಡವರು, ಪೌರ ಕಾರ್ಮಿಕರು ಪೂಜೆಯಲ್ಲಿ ಪಾಲ್ಗೊಂಡಿದ್ದಾರೆ,'' ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕ ಸಿ.ಕೆ.ರಾಮಮೂರ್ತಿ, ಆರ್‌ಎಸ್‌ಎಸ್ ಕ್ಷೇತ್ರಿಯ ಕಾರ್ಯವಾಹ ನಾ. ತಿಪ್ಪೇಸ್ವಾಮಿ, ನಟಿ ಪ್ರಣೀತ ಸುಭಾಷ್, ಪಾಲಿಕೆ ಮಾಜಿ ಸದಸ್ಯರಾದ ನಾಗರತ್ನ ರಾಮಮೂರ್ತಿ, ಬಿ. ಸೋಮಶೇಖರ್, ಮಾಲತಿ ಸೋಮಶೇಖರ್, ಚಂದ್ರಶೇಖರ್ ರಾಜು, ಗೋವಿಂದನಾಯ್ಡು, ಜೆಲ್ಲಿ ರಮೇಶ್, ಧನರಾಜ್, ದೀಪಿಕಾ ಮಂಜುನಾಥ್ ರೆಡ್ಡಿ, ಚನ್ನಗಿರಿಯಪ್ಪ, ಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಮುಖರು, ಸಾರ್ವಜನಿಕರು ಭಾಗವಹಿಸಿದ್ದರು.

ಎಲ್ಲಿ-ಏನು? ಶನಿವಾರ

ಮೈತ್ರೇಯಿ ಕನ್ನಡ ಮಹಿಳಾ ಹರಿದಾಸ ಟ್ರಸ್ಟ್: ವಾರ್ಷಿಕೋತ್ಸವ. ಮುಖ್ಯ ಅತಿಥಿ: ದಾಸ ಸಾಹಿತ್ಯ ಚಿಂತಕ ಸುರೇಶ್ ಪಾಟೀಲ್, ಆಧ್ಯಾತ್ಮ ಚಿಂತಕಿ ಮೃದುಲಾ ವಿಜಯೇಂದ್ರ. **ಸ್ಥಳ:** ಗೋವರ್ಧನಗಿರಿ ಉಡುಪಿ ಪುತ್ತಿಗೆ ಮಠ, ಬಸವನಗುಡಿ ರಸ್ತೆ. ಬೆ. 10ರಿಂದ

ಕಮಲಾ ಹಂಪನಾ ಸಾಹಿತ್ಯ ವೇದಿಕೆ: ಪ್ರೊ. ಕಮಲಾ ಹಂಪನಾ ಸಂಸ್ಮರಣ ಕಾರ್ಯಕ್ರಮ. ಮಧ್ಯಾಹ್ನ 3 ಕ್ಕೆ ಕಾವ್ಯ ನಮನ. 4.30ರಿಂದ ಗೀನನಮನ. ಅಧ್ಯಕ್ಷತೆ : ಪ್ರೊ. ಹಂಪನಾ. ಮುಖ್ಯ ಅತಿಥಿ: ಬಿ. ಎಸ್. ಮಂಜುನಾಥ ಸ್ವಾಮಿ. **ಸ್ಥಳ:** ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ.

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್: ಕಲಾ ಸ್ಪಂದನ. ಡಾ. ಶಾಮಲಾ ಜಿ. ಭಾವೆ ಅವರ ಸ್ಮರಣಾರ್ಥ ಶಾಸ್ತ್ರೀಯ ಸಂಗೀತ, ನೃತ್ಯ ಹಾಗೂ ತಿಂಗಳ ಕಾರ್ಯಕ್ರಮ. ಮುಖ್ಯ ಅತಿಥಿ: ಪಂ. ವಾಗೀಶ್ ಭಟ್, ಕಲಾಶ್ರೀ ಸುಗ್ಗನಹಳ್ಳಿ ಷಡಕ್ಷರಿ. ಹಿಂದೂಸ್ತಾನಿ ಗಾಯನ: ಪಂ. ವಾಗೀಶ್ ಭಟ್ ಶಿಷ್ಯ ವೃಂದದಿಂದ. ಕಥಕ್ ನೃತ್ಯ: ವೀಣಾ ಭಟ್ ಶಿಷ್ಯವೃಂದದಿಂದ. **ಸ್ಥಳ:** ಸನಾತನ ಕಲಾಕ್ಷೇತ್ರ, 4 ನೇ ಬ್ಲಾಕ್, ಜಯನಗರ. ಸಂಜೆ 6.

ಕರ್ನಾಟಕ ಸ್ವಾಭಿಮಾನಿ ವೇದಿಕೆ: ಚಂಪಾ ಸಿರಿಗನ್ನಡ ಪ್ರಶಸ್ತಿ ಪ್ರದಾನ ಸಮಾರಂಭ. ಪ್ರಶಸ್ತಿ ಪ್ರದಾನ: ಡಾ. ಎಸ್. ಜಿ. ಸಿದ್ದರಾಮಯ್ಯ. ಪ್ರಶಸ್ತಿ ಪುರಸ್ಕೃತರು: ಸಾ. ರಾ. ಗೋವಿಂದು. **ಸ್ಥಳ:** ಕನ್ನಡ ಸಾಹಿತ್ಯ ಪರಿಷತ್ತು. ಸಂಜೆ 4.

ಜೈನ ಮಿಲನ್ ಬೆಂಗಳೂರು ಸೆಂಟ್ರಲ್ ಹಾಗೂ ಚಕ್ರೇಶ್ವರಿ ಮಹಿಳಾ ಸಮಾಜ: ಜೈನ ಸಾಹಿತ್ಯ ಸಿರಿ. ನಯಸೇನನ ಧರ್ಮಾಮೃತ- ಧರ್ಮ ಸಂಬಂಧಿ ಆಯಾಮಗಳು ಕುರಿತು ವಿಶೇಷ ಉಪನ್ಯಾಸ. ಉಪನ್ಯಾಸ ನೀಡುವವರು: ಪ್ರೊ. ಹಾ. ಮ. ನಾಗಾರ್ಜುನ. ಅಧ್ಯಕ್ಷತೆ: ಜಿನೇಂದ್ರ ಖಿನಗಾವಿ. **ಸ್ಥಳ:** ಚಕ್ರೇಶ್ವರಿ ಮಹಿಳಾ ಸಮಾಜ, ಜಯನಗರ 3 ನೇ ಬಡಾವಣೆ. ಸಂಜೆ 4.15

ಕನ್ನಡ ಮತ್ತು ಸಂಸ್ಕೃತಿ ಇಲಾಖೆ: ಮನೆಯಂಗಳದಲ್ಲಿ ಮಾತುಕತೆಯಲ್ಲಿ ತಿಂಗಳ ಅತಿಥಿ: ಅಕ್ಕೈ ಪದ್ಮಶಾಲಿ **ಸ್ಥಳ:** ನಯನ ರಂಗಮಂದಿರ. ಸಂಜೆ 4.

ಕಾರಂಜಿ ಶ್ರೀರಾಮಸೇವಾ ಸಮಿತಿ ಟ್ರಸ್ಟ್: 72ನೇ ರಾಮೋತ್ಸವ ಸಂಗೀತ ಕಾರ್ಯಕ್ರಮ. ಶೃತಿ ಸಿಂಧೂರ ಅಕಾಡೆಮಿ ಆಫ್ ಮ್ಯೂಸಿಕ್ ವಿದ್ಯಾರ್ಥಿಗಳಿಂದ ತಾಳವಾದ್ಯ. ಬಳಿಕ ಆದಿತ್ಯದೇವಾ ಪುನ್ನಯೂರ್‌ಕುಳಂ ಅವರಿಂದ ಗಾಯನ. **ಸ್ಥಳ:** ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ. ಸಂಜೆ 5.30ರಿಂದ.

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆಪ್ ಮಾಡಿ 76766 68588

ವಾರಾಂತ್ಯ

ಶನಿವಾರ

ಯಕ್ಷಗಾನ



ತಿತ್ತಿತ್ತೆ ವತಿಯಿಂದ ತೆಂಕು ಬಡಗಿನ ಅತಿಥಿ ಕಲಾ ದಿಗ್ಗಜರ ಕೂಡುವಿಕೆಯಲ್ಲಿ 'ಯಕ್ಷ ಪರ್ವ' ಆಯೋಜಿಸಲಾಗಿದೆ. ಚೂಡಾಮಣಿ, ವಾಲಿವಧೆ, ಶ್ರೀ ಕೃಷ್ಣ ಕಲ್ಯಾಣ ಯಕ್ಷಗಾನ ಪ್ರದರ್ಶನಗೊಳ್ಳಲಿವೆ. **ಸ್ಥಳ:** ರವೀಂದ್ರ ಕಲಾಕ್ಷೇತ್ರ, ರಾತ್ರಿ 9.30

ಕಲಾ ಸಂಭ್ರಮ

ಮಾನಸಾ ಸ್ಕೂಲ್ ಆಫ್ ಭರತನಾಟ್ಯಂ ವಾರ್ಷಿಕೋತ್ಸವ ಪ್ರಯುಕ್ತ ಕಲಾ ಸಂಭ್ರಮ ಕಾರ್ಯಕ್ರಮ ಆಯೋಜಿಸಿದೆ. ನೃತ್ಯಗುರು ಕಾಮಾಕ್ಷಿ, ಲೇಖಕಿ ವೈ.ಕೆ.ಸಂಧ್ಯಾ ಶರ್ಮ, ಉದ್ಯಮಿ ಬಿ.ವಿ.ಗಣೇಶ ಪ್ರಭು, ಗೌರಿ ಜಿ.ಪ್ರಭು, ಆರ್.ಎಸ್. ಮಕಾಸ್ ವಿಶೇಷ ಶಾಲೆಯ ಸಂಸ್ಥಾಪಕಿ ಲಕ್ಷ್ಮೀಪ್ರಸಾದ್, ಜೆಎಸ್‌ಎಸ್ ಇನ್‌ಸ್ಟಿಟ್ಯೂಟ್‌ನ ಸಹಾಯಕ ಆಡಳಿತ ಅಧಿಕಾರಿ ತ್ರಿಪುರಾಂತಕ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಮಾನಸಾ ದೇವಿ ಶಂಕರ್ ಉಪಸ್ಥಿತರಿರುವರು. **ಸ್ಥಳ:** ಬೆಂಗಳೂರು ಗಾಯನ ಸಮಾಜ, ಕೆ.ಆರ್.ರಸ್ತೆ, ಬಸವನಗುಡಿ. 4.30.



ಪಾದಚಾರಿ ಮಾರ್ಗ ನಾಗರಿಕರ ಮೂಲಭೂತ ಹಕ್ಕು

ರಸ್ತೆ ಇದ್ದಲ್ಲಿ ಫುಟ್‌ಪಾತ್ ನಿರ್ಮಾಣ ಕಡ್ಡಾಯ | ಸುಪ್ರೀಂ ಕೋರ್ಟ್ ಸ್ಪಷ್ಟನೆ | ವಾಹನ ಸವಾರರ ಅತಿಕ್ರಮಣಕ್ಕೆ ಬೇಸರ

ಹೊಸದಿಲ್ಲಿ: ಗುರುತಿಸಲಾದ ಪಾದಚಾರಿ ಮಾರ್ಗದಲ್ಲಿ ನಡೆಯುವುದು ಸಂವಿಧಾನದ ಅಡಿಯಲ್ಲಿ ರಕ್ಷಿಸಲಾದ ಜನರ ಮೂಲಭೂತ ಹಕ್ಕು ಎಂದು ಸುಪ್ರೀಂಕೋರ್ಟ್ ಶುಕ್ರವಾರ ಚಾರಿತ್ರಿಕ ತೀರ್ಪು ನೀಡಿದೆ.

ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ ಮಗುವಿಗೆ ಹೆಚ್ಚುವರಿ ಪರಿಹಾರ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾ.ಪಿ.ಎಸ್.ನರಸಿಂಹ ಹಾಗೂ ನ್ಯಾ.ಎ.ಎಸ್.ಚಂದೂರ್ಕರ್ ಅವರಿದ್ದ ಪೀಠ, ''ಸಂವಿಧಾನದ ವಿಧಿ 19 (1)(ಡಿ) ಅಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಹಕ್ಕುಗಳಲ್ಲಿ ನಡೆಯುವುದು ಸಹ ಜನರ ಹಕ್ಕಾಗಿದೆ. ಸಂವಿಧಾನದ ಕಲಂ 19(1)(ಎ), 19(1)(ಬಿ), 19(1)(ಸಿ) ಹಾಗೂ 21ನೇ ವಿಧಿಯಡಿ ಜನರ ಜೀವನ ಮತ್ತು ವೈಯಕ್ತಿಕ ಸ್ವಾತಂತ್ರದ ಹಕ್ಕುಗಳಲ್ಲಿ ನಡೆಯುವುದು ಸಹ ಒಂದಾಗಿದೆ,'' ಎಂದು ಹೇಳಿದೆ.

''ಯಾವುದೇ ಮಾರ್ಗದಲ್ಲಿ ಒಂದು ರಸ್ತೆ ಇದೆ ಎಂದಾದರೆ ಅಲ್ಲಿ ಪಾದಚಾರಿ ಮಾರ್ಗ ರೂಪಿಸಿ, ನಿರ್ವಹಿಸುವುದನ್ನು ಸ್ಥಳೀಯ ಆಡಳಿತ ಖಾತರಿಪಡಿಸಿಕೊಳ್ಳಬೇಕು. ಮೂಲಭೂತ ಹಕ್ಕುಗಳ ರಕ್ಷಣೆಗೆ ಪಾದಚಾರಿ ಮಾರ್ಗವನ್ನು ಕಡ್ಡಾಯವಾಗಿ ರೂಪಿಸಿ, ಜನರ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಡುವುದು ಅಧಿಕಾರಿಗಳ ಕರ್ತವ್ಯವಾಗಿದೆ,''

ಎಂದು ನ್ಯಾಯಪೀಠ ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ಹೇಳಿದೆ.

ಪಾದಚಾರಿ ಮಾರ್ಗಕ್ಕೆ ಆದ್ಯತೆಯೇ ಇಲ್ಲ: ''ನಡೆದಾಡುವುದು ಸಮಂಜಸವಾದ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದರೆ, ಪಾದಚಾರಿ ಮಾರ್ಗಗಳ ಮೇಲೆ ವಾಹನ ಸವಾರರು ಅತಿಕ್ರಮಿಸದಂತೆ ನೋಡಿಕೊಳ್ಳಬೇಕಿದೆ,'' ಎಂದು ಹೇಳಿರುವ ನ್ಯಾಯಾಲಯ, ''ನಗರ ಹಾಗೂ ಪಟ್ಟಣಗಳಲ್ಲಿ ವಾಹನ ಸವಾರರನ್ನು ಕೇಂದ್ರೀಕರಿಸಿ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ, ವಿಸ್ತರಿಸಲಾಗುತ್ತಿದೆ. ಪರಿಣಾಮ ಪಾದಚಾರಿ ಮಾರ್ಗಗಳು ದುರ್ಬಲಗೊಂಡಿವೆ. ಚಿಕ್ಕದಾಗಿ ನಿರ್ಮಿಸಲಾದ ಬಹುತೇಕ ಪಾದಚಾರಿ ಮಾರ್ಗಗಳು ಮೋಟಾರು ವಾಹನಗಳ ಅಧೀನವಾಗಿವೆ. ಪರಿಣಾಮ ಸುರಕ್ಷಿತ ಪಾದಚಾರಿ ಮಾರ್ಗಗಳ ಅನುಪಸ್ಥಿತಿ ಕಾಡುತ್ತಿದೆ,'' ಎಂದು ಅಭಿಪ್ರಾಯಪಟ್ಟಿದೆ.

''ನಗರ ಅಥವಾ ಸ್ಥಳೀಯ ಆಡಳಿತ ಜನರ ಹಕ್ಕನ್ನು ಖಾತರಿಪಡಿಸುವಲ್ಲಿ ವಿಫಲವಾಗಿದೆ. ವಾಹನಗಳಿಗೆ ಸೂಕ್ತ ರಸ್ತೆ ನಿರ್ಮಿಸಲು ಆದ್ಯತೆ ನೀಡುತ್ತಿರುವ ಆಡಳಿತ ವ್ಯವಸ್ಥೆ, ಸೂಕ್ತ ಪಾದಚಾರಿ ಮಾರ್ಗ ರೂಪಿಸುವತ್ತ ಗಮನ ನೀಡುತ್ತಿಲ್ಲ. ವಾಹನಗಳ ಸಂಖ್ಯೆ ಹೆಚ್ಚಾದಂತೆ ಪಾದಚಾರಿ ಮಾರ್ಗಗಳು ಕಣ್ಮರೆಯಾಗುತ್ತಿವೆ. ಕೆಲವೆಡೆ ಪಾದಚಾರಿ ಮಾರ್ಗಗಳನ್ನು ವಾಹನ ಸವಾರರು ಅತಿಕ್ರಮಿಸಿಕೊಂಡಿದ್ದು, ಜನ ಅನಿವಾರ್ಯವಾಗಿ ರಸ್ತೆಯಲ್ಲೇ ನಡೆದುಕೊಂಡು ಹೋಗಬೇಕಾಗಿದೆ,'' ಎಂದು ನ್ಯಾಯಪೀಠ ವಿವರಿಸಿತು.

> ನಗರ ಯೋಜನೆಗಳಲ್ಲಿ ಜನರ ಸುರಕ್ಷಿತ ಸಂಚಾರಕ್ಕಿಂತ ವಾಹನಗಳ ಸಾರಿಗೆಗೆ ಆದ್ಯತೆ ನೀಡಲಾಗಿದೆ. ಪಾದಚಾರಿಗಳ ಹಕ್ಕುಗಳ ರಕ್ಷಣೆ ಹಾಗೂ ನಿಯಂತ್ರಣಕ್ಕೆ ಸೂಕ್ತ ಶಾಸನಬದ್ಧ ಚೌಕಟ್ಟಿನ ಕೊರತೆಯಿದೆ.
> - ಸುಪ್ರೀಂ ಕೋರ್ಟ್ ನ್ಯಾಯಪೀಠ

ನ್ಯಾಯಪೀಠ ಹೇಳಿದ್ದೇನು?

- ಹಕ್ಕುಗಳು, ಕರ್ತವ್ಯಗಳು ಮತ್ತು ಜಾರಿ ಕಾರ್ಯವಿಧಾನ ವ್ಯಾಖ್ಯಾನಿಸಲು ಶಾಸನ ರೂಪಿಸುವುದು ಅಗತ್ಯವಾಗಿದೆ
- ಪಾದಚಾರಿಗಳ ಹಕ್ಕುಗಳ ರಕ್ಷಣೆ ಖಾತರಿಪಡಿಸಲು ನಿಯಂತ್ರಣ ವ್ಯವಸ್ಥೆ ರೂಪಿಸಬೇಕು
- ರಸ್ತೆ ಇದ್ದಲ್ಲಿ ಪಾದಚಾರಿ ಮಾರ್ಗ ನಿರ್ಮಿಸುವುದು ಸ್ಥಳೀಯ ಆಡಳಿತಗಳ ಹೊಣೆಗಾರಿಕೆಯಾಗಿದೆ
- ತೀರ್ಪಿನ ಪ್ರತಿಯನ್ನು ಸಂಬಂಧಪಟ್ಟ ಸಚಿವಾಲಯ, ಆಯೋಗಕ್ಕೆ ರವಾನಿಸಬೇಕು

''ಇನ್ನು ಮುಂದೆ ನಡೆಯುವುದು ಸಹ ಮೂಲಭೂತ ಹಕ್ಕುಗಳಲ್ಲಿ ಒಂದಾಗಿದೆ. ಕೇವಲ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡುವ ಕಾರ್ಯವಿಧಾನ ಮುಂದುವರಿಸಲು ಅವಕಾಶ ಕೊಡುವುದಿಲ್ಲ. ಪಾದಚಾರಿ ಮಾರ್ಗಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಬೇಕು. ಜನರ ಓಡಾಟಕ್ಕೂ ಸೂಕ್ತ ಮಾರ್ಗ ರೂಪಿಸುವುದು ಸ್ಥಳೀಯ ಆಡಳಿತದ ಹೊಣೆಯಾಗಿದೆ,'' ಎಂದು ನ್ಯಾಯಾಲಯ ಆದೇಶಿಸಿತು.

ಅಧಿಕಾರಿಗಳ ಜವಾಬ್ದಾರಿ: ''ಜನರ ನಡೆಯುವ ಮೂಲಭೂತ ಹಕ್ಕನ್ನು ಅನುಷ್ಠಾನಗೊಳಿಸುವುದು ನಗರ ಹಾಗೂ ಸ್ಥಳೀಯ ಆಡಳಿತ ಹೊಣೆ ಹೊತ್ತ ಅಧಿಕಾರಿಗಳ ಜವಾಬ್ದಾರಿಯಾಗಿದೆ. ದೊಡ್ಡಮಟ್ಟದ ವಾಹನಗಳು ಸಂಚರಿಸುವ ಮಾರ್ಗದಲ್ಲಿ ಪಾದಚಾರಿ ಮಾರ್ಗ ನಿರ್ಮಿಸುವುದು ಬಾಧ್ಯತೆಯಾಗಿದೆ,'' ಎಂದು ಹೇಳಿರುವ ನ್ಯಾಯಪೀಠ, ''ಮೂಲಭೂತ ಹಕ್ಕಿನ ಉಲ್ಲಂಘನೆಯಾದಲ್ಲಿ ಜವಾಬ್ದಾರಿ ಹೊಣೆ ಹೊತ್ತ ಅಧಿಕಾರಿಗಳಿಂದ ಪರಿಹಾರ ಕೋರಲು ನಾಗರಿಕರು ಅರ್ಹರಾಗಿರುತ್ತಾರೆ. ಮೋಟಾರ್ ವಾಹನ ಕಾಯಿದೆಯಡಿ ಪರಿಹಾರ ಪಡೆಯುವ ಹಕ್ಕು ಸಹ ಪಡೆಯುತ್ತಾರೆ,'' ಎಂದು ಸ್ಪಷ್ಟಪಡಿಸಿದೆ.

ಪಾದಚಾರಿ ಮಾರ್ಗ ಇಲ್ಲದ ರಸ್ತೆಯಲ್ಲಿ ತಂದೆಯ ಜತೆ ಶಾಲೆಗೆ ಹೋಗುತ್ತಿದ್ದ ಐದು ವರ್ಷದ ಮಗುವಿನ ಮೇಲೆ ಹಿಂಬದಿಯಿಂದ ಬಂದ ಟ್ರಕ್ ಹರಿದಿತ್ತು. ತೀವ್ರವಾಗಿ ಗಾಯಗೊಂಡಿದ್ದ ಮಗು ಸ್ಥಳದಲ್ಲೇ ಮೃತಪಟ್ಟಿತ್ತು. ಅಧೀನ ನ್ಯಾಯಾಲಯ ನೀಡಿದ ಪರಿಹಾರದ ಮೊತ್ತ ಕಡಿತಗೊಳಿಸಿದ ಹೈಕೋರ್ಟ್ ವಿರುದ್ಧ ಮೃತ ಬಾಲಕನ ತಂದೆ ಸುಪ್ರೀಂ ಮೆಟ್ಟಿಲೇರಿದ್ದರು. ತೀರ್ಪು ಪ್ರಕಟಿಸುವ ವೇಳೆ ಪಾದಚಾರಿಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠವು, ಹೈಕೋರ್ಟ್ ತೀರ್ಪು ರದ್ದುಪಡಿಸಿದ್ದಲ್ಲದೆ ಮೃತ ಮಗುವಿನ ಕುಟುಂಬಕ್ಕೆ 11.44 ಲಕ್ಷ ರೂ.ಪರಿಹಾರಕ್ಕೆ ಆದೇಶಿಸಿತು.

ಪ್ರಧಾನಿಗೆ ಕಾಕ್ರೋಚ್ ಜನತಾ ಪಾರ್ಟಿ ಪತ್ರ

ಹೊಸದಿಲ್ಲಿ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಮರುಪರೀಕ್ಷೆಯ ಆತಂಕದಲ್ಲಿ ದೇಶದ ವಿವಿಧೆಡೆ ಕೆಲವು ವಿದ್ಯಾರ್ಥಿಗಳ ಆತ್ಮಹತ್ಯೆಗೆ ಸಂಬಂಧಿಸಿದಂತೆ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜಿತ್ ದೀಪ್ಕೆ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಮಾನಸಿಕ ಒತ್ತಡ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ವಿದ್ಯಾರ್ಥಿಗಳ ಕುಟುಂಬಗಳಿಗೆ ತಲಾ 1 ಕೋಟಿ ರೂ. ಪರಿಹಾರ ನೀಡಬೇಕು ಎಂದು ಅವರು ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿದ್ದಾರೆ. ಜೂನ್ 20ರ ಶನಿವಾರದಂದು ದಿಲ್ಲಿಯ ಜಂತರ್‌ಮಂತರ್‌ನಲ್ಲಿ ಸಿಜೆಪಿ ಹಮ್ಮಿಕೊಂಡಿರುವ ಎರಡನೇ ಹಂತದ ಬೃಹತ್ ಪ್ರತಿಭಟನಾ ಪ್ರದರ್ಶನದ ಮುನ್ನಾ ದಿನ ಈ ಪತ್ರವು ಸಾಮಾಜಿಕ ಜಾಲತಾಣದಲ್ಲಿ ಭಾರಿ ಸದ್ದುಮಾಡುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ಪ್ರಧಾನಿಗೆ ಬರೆದ ಪತ್ರವನ್ನು ಹಂಚಿಕೊಳ್ಳಲಾಗಿದೆ. ದೇಶದ ಭವಿಷ್ಯವನ್ನೇ ಕತ್ತಲಿಗೆ ತಳ್ಳುತ್ತಿರುವ ಈ ಜ್ವಲಂತ ಸಮಸ್ಯೆಗೆ ದೇಶಾದ್ಯಂತ ಒಟ್ಟು 11 ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ದೀಪ್ಕೆ ಆತಂಕ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ತಕ್ಷಣವೇ ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಮೇಕೆದಾಟು ಯೋಜನೆ ವಿರೋಧಿಸಿ ತ.ನಾಡು ವಿಧಾನಸಭೆ ನಿರ್ಣಯ

ಅನುಮೋದನೆ ನೀಡದಂತೆ ಕೇಂದ್ರಕ್ಕೆ ಆಗ್ರಹ

ಚೆನ್ನೈ: ಕರ್ನಾಟಕದ ಮಹತ್ವಾಕಾಂಕ್ಷಿ ಮೇಕೆದಾಟು ಅಣೆಕಟ್ಟು ಯೋಜನೆಗೆ ತಾಂತ್ರಿಕ ಮತ್ತು ಪರಿಸರ ವಿಭಾಗದ ಅನುಮತಿ ಸೇರಿದಂತೆ ಯಾವುದೇ ರೀತಿಯ ಒಪ್ಪಿಗೆ ನೀಡದಂತೆ ಕೇಂದ್ರ ಸರಕಾರವನ್ನು ಒತ್ತಾಯಿಸುವ ಮಹತ್ವದ ನಿರ್ಣಯವನ್ನು ತಮಿಳುನಾಡು ವಿಧಾನಸಭೆ ಶುಕ್ರವಾರ ಸರ್ವಾನುಮತದಿಂದ ಅಂಗೀಕರಿಸಿದೆ.

ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಸದನದಲ್ಲಿ ನಿರ್ಣಯ ಮಂಡಿಸಿದರು. ''ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಸಮತೋಲನ ಜಲಾಶಯ ನಿರ್ಮಿಸುವ ಕರ್ನಾಟಕದ ನಿರ್ಧಾರವು ಸಂಪೂರ್ಣವಾಗಿ ಏಕಪಕ್ಷೀಯ ಕ್ರಮವಾಗಿದೆ. ಈ ಯೋಜನೆಯ ಪ್ರಸ್ತಾವನೆಯು ಕಾವೇರಿ ಜಲ ವಿವಾದ ನ್ಯಾಯಮಂಡಳಿ ಮತ್ತು ಸುಪ್ರೀಂ ಕೋರ್ಟ್ ನೀಡಿರುವ ಅಂತಿಮ ಆದೇಶಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಜಲಾನಯನ ಪ್ರದೇಶದ ಕೆಳಭಾಗದಲ್ಲಿರುವ ತಮಿಳುನಾಡಿನ ಒಪ್ಪಿಗೆ ಇಲ್ಲದೆ ಅಥವಾ ಕೇಂದ್ರ ಸರಕಾರದ ಪೂರ್ವಾನುಮೋದನೆ ಪಡೆಯದೆ ಈ ಯೋಜನೆ ಜಾರಿಗೊಳಿಸಲು ಕರ್ನಾಟಕ ಮುಂದಾಗಿರುವುದು ಒಪ್ಪಲು ಸಾಧ್ಯವಿಲ್ಲ, ಇಂತಹ ಕ್ರಮವು ಸ್ವೀಕಾರಾರ್ಹವಲ್ಲ,'' ಎಂದು ನಿರ್ಣಯದಲ್ಲಿ ಆಕ್ಷೇಪಿಸಲಾಗಿದೆ.

ಡಿಪಿಆರ್ ಪರಿಶೀಲಿಸದಂತೆ ಆಗ್ರಹ: ''ತಮಿಳುನಾಡಿನ ರೈತರ ಹಿತಾಸಕ್ತಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಕೇಂದ್ರ ಜಲ ಆಯೋಗವು ತಕ್ಷಣವೇ ಮಧ್ಯಪ್ರವೇಶಿಸಬೇಕು. ಕರ್ನಾಟಕ ಸರಕಾರ ಸಲ್ಲಿಸಿರುವ ಮೇಕೆದಾಟು ಯೋಜನೆಯ ವಿವರವಾದ ಯೋಜನಾ ವರದಿ(ಡಿಪಿಆರ್)ಯನ್ನು ಯಾವುದೇ ಕಾರಣಕ್ಕೂ ಪರಿಶೀಲಿಸಬಾರದು,'' ಎಂಬ ನಿರ್ಣಯದ ಮೂಲಕ ಕೇಂದ್ರ ಸರಕಾರವನ್ನು ಒತ್ತಾಯಿಸಲಾಗಿದೆ.

ಇಂಡೋ-ಪಾಕ್ ಗಡಿಯಲ್ಲಿ ಹಸ್ತಲಾಘವ

ಜಮ್ಮು ಮತ್ತು ಕಾಶ್ಮೀರದ ಕುಪ್ವಾರ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆಯನ್ನು ದಾಟಿ ಬಂದಿದ್ದ ಪಾಕಿಸ್ತಾನದ ಪ್ರಜೆಯನ್ನು ವಿಚಾರಣೆ ಬಳಿಕ ಸೇನೆಯ ಅಧಿಕಾರಿಗಳು ಪಾಕಿಸ್ತಾನದ ರೇಂಜರ್‌ಗಳಿಗೆ ಒಪ್ಪಿಸಿದರು. ಈ ಸಂದರ್ಭದಲ್ಲಿ ಸೇನಾಧಿಕಾರಿಗಳು ಪರಸ್ಪರ ಹಸ್ತಲಾಘವ ಮಾಡಿರುವ ಅಪರೂಪದ ಘಟನೆಯು ನಡೆದಿದೆ.

IISER TIRUPATI
ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ, ತಿರುಪತಿ
(ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದಡಿಯ ರಾಷ್ಟ್ರೀಯ ಪ್ರಾಮುಖ್ಯತೆಯ ಸ್ವಾಯತ್ತ ಸಂಸ್ಥೆ)
ಒಪ್ಪಂದದ ಆಧಾರದ ಮೇಲೆ ಸಲಹೆಗಾರ ಮತ್ತು ಕಿರಿಯ ಸಲಹೆಗಾರರ ನೇಮಕಾತಿ
ತಿರುಪತಿಯ ಐಐಎಸ್‌ಇಆರ್, ಅತ್ಯುತ್ತಮ ಶೈಕ್ಷಣಿಕ ದಾಖಲೆ ಮತ್ತು ಸಂಬಂಧಿತ ಕೆಲಸದ ಅನುಭವವುಳ್ಳ ಭಾರತೀಯ ಪ್ರಜೆಗಳಿಂದ **"ಕೌನ್ಸೆಲರ್ 01 ಸಂಖ್ಯೆ"** ಮತ್ತು **"ಜೂನಿಯರ್ ಕೌನ್ಸೆಲರ್ 01 ಸಂಖ್ಯೆ"** ಹುದ್ದೆಗಳಿಗೆ ಸಂಪೂರ್ಣವಾಗಿ ಒಪ್ಪಂದದ ಆಧಾರದ ಮೇಲೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದೆ.
ವಿವರವಾದ ಜಾಹೀರಾತಿಗಾಗಿ **www.iisertirupati.ac.in** ಗೆ ಭೇಟಿ ನೀಡಿ ಮತ್ತು "ಕೆರಿಯರ್ಸ್ ಅಡ್ಮಿನಿಸ್ಟ್ರೇಷನ್" ಲಿಂಕ್ ಕ್ಲಿಕ್ ಮಾಡಿ.
ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **29ನೇ ಜೂನ್, 2026ರಂದು ಸಂಜೆ 17.00 ಗಂಟೆಗೆ.**
ಜಾಹೀರಾತು ಸಂಖ್ಯೆ 40/2026/IISER-T/Rect./06.06.2026 ಸಹಿ/- ರಿಜಿಸ್ಟ್ರಾರ್ (i/c)
CBC 21377/11/0005/2627

ಅರಣ್ಯ ಸಿಬ್ಬಂದಿ ಮೇಲೆ ಆನೆ ದಾಳಿ

■ ವಿಕ ಸುದ್ದಿಲೋಕ ನರಸಿಂಹರಾಜಪುರ (ಚಿಕ್ಕಮಗಳೂರು)

ತಾಲೂಕಿನ ಹೆಬ್ಬೆ ವನ್ಯ ಜೀವಿ ವಿಭಾಗದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ಶುಕ್ರವಾರ ಸಂಜೆ ಆನೆ ದಾಳಿ ನಡೆಸಿದೆ.

ಹೆಬ್ಬೆ ದೇವಸ್ಥಾನ ಸಮೀಪದ ಹೆಬ್ಬೆ ವನ್ಯಜೀವಿ ವಿಭಾಗದ ಪ್ರದೇಶದಲ್ಲಿ ಕಳ್ಳ ಬೇಟೆ ತಡೆ ಶಿಬಿರದ ವೀಕ್ಷಕರಿಬ್ಬರು ಗಸ್ತು ತಿರುಗುತ್ತಿದ್ದ ಸಂದರ್ಭದಲ್ಲಿ ಆನೆ ಏಕಾಏಕಿ ದಾಳಿ ನಡೆಸಿದೆ. ವೀಕ್ಷಕ ಹರೀಶ ಎಂಬುವವರನ್ನು ಆನೆ ತುಳಿದು, ಸೊಂಡಿಲಿನಿಂದ ತಳ್ಳಿದೆ. ಪಕ್ಕದಲ್ಲಿದ್ದ ಇನ್ನೊಬ್ಬ ವೀಕ್ಷಕ ಗಾಬರಿಗೊಂಡು ಓಡಿ, ಜೋರಾಗಿ ಶಬ್ದ ಮಾಡಿದ್ದರಿಂದ ಆನೆ ಗಾಬರಿಗೊಂಡು ಕಾಡಿನೊಳಗೆ ಓಡಿತು.

ಅರಣ್ಯ ಇಲಾಖೆ ಮೇಲಧಿಕಾರಿಗಳಿಗೆ ವಿಷಯ ಮುಟ್ಟಿಸಿದ ಅವರು, ನರಳಾಡುತ್ತಿದ್ದ ಹರೀಶ್ ಅವರನ್ನು ಪಟ್ಟಣದ ಸರಕಾರಿ ಆಸ್ಪತ್ರೆಗೆ ಕರೆತಂದರು. ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಸ್ಪತ್ರೆಗೆ ಆರ್‌ಎಫ್‌ಒ ಪ್ರವೀಣ್, ವೈಲ್ಡ್ ಲೈಫ್ ಆರ್‌ಎಫ್‌ಒ ಗೌರವ್ ಭೇಟಿ ನೀಡಿದರು.

ಕೆಇಎ ವೆಬ್‌ಸೈಟ್‌ನ ತಾಂತ್ರಿಕ ದೋಷ | ಹತ್ತು ದಿನ ಕಳೆದರೂ ಸುಧಾರಿಸದ ವೆಬ್‌ಸೈಟ್ | ಸಹಾಯವಾಣಿಯೂ ಇಲ್ಲ

ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆ: ಅರ್ಜಿ ಸಲ್ಲಿಸಲು ಪರದಾಟ

■ ಹನುಮಂತು ಪಿ ಯಾದಗಿರಿ
phanumanthu14@gmail.com

ರಾಜ್ಯದಲ್ಲಿ ಪೊಲೀಸ್ ಇಲಾಖೆಯ ನಾಗರಿಕ ಸೇವೆಯ ಕಾನ್ಸ್‌ಟೇಬಲ್‌ಗಳ ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅರ್ಜಿ ಆಹ್ವಾನಿಸಿದೆ. ಆದರೆ, ಪ್ರತಿನಿತ್ಯ ನೂರಾರು ರೂಪಾಯಿ ಖರ್ಚು ಮಾಡಿಕೊಂಡು ನಗರ ಪ್ರದೇಶಗಳಿಗೆ ಬರುವ ಗ್ರಾಮೀಣ ಭಾಗದ ಅಭ್ಯರ್ಥಿಗಳು ವೆಬ್‌ಸೈಟ್‌ನ ತಾಂತ್ರಿಕ ಸಮಸ್ಯೆಯಿಂದಾಗಿ ಅರ್ಜಿ ಸಲ್ಲಿಸಲಾಗದೆ ನಿರಾಸೆಯಿಂದ ವಾಪಸ್ ಹೋಗುವಂತಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶದ ಮೀಸಲಿನ 596 ಹುದ್ದೆಗಳು ಹಾಗೂ ಮೀಸಲು ಹೊರತುಪಡಿಸಿದ ರಾಜ್ಯ ವ್ಯಾಪಿಯ 3,395 ಹುದ್ದೆಗಳು ಸೇರಿ ಒಟ್ಟು 3,991 ಕಾನ್ಸ್‌ಟೇಬಲ್‌ಗಳ ಭರ್ತಿಗೆ ಜೂನ್ 8ರಿಂದ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಆದರೆ, ಕೆಇಎ ವೆಬ್‌ಸೈಟ್‌ನಲ್ಲಿ ತಾಂತ್ರಿಕ ಸಮಸ್ಯೆ ಇನ್ನೂ ಸರಿಪಡಿಸದಿರುವುದು ಅಭ್ಯರ್ಥಿಗಳ ಆತಂಕಕ್ಕೆ ಕಾರಣವಾಗಿದೆ.

ಪೊಲೀಸ್ ಕಾನ್ಸ್‌ಟೇಬಲ್‌ಗಳ ಭರ್ತಿಗೆ ಮೂರ್ನಾಲ್ಕು ವರ್ಷಗಳ ನಂತರ ಅಧಿಸೂಚನೆ ಹೊರಡಿಸಿರುವುದರಿಂದ ಬಹಳಷ್ಟು ಕನಸುಗಳೊಂದಿಗೆ ಯುವ ಸಮುದಾಯ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕಂಪ್ಯೂಟರ್ ಕೇಂದ್ರಗಳ ಬಳಿ ಬೆಳಗ್ಗೆಯಿಂದ ಸಂಜೆವರೆಗೆ ಕಾದು ಕುಳಿತರೂ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತಿಲ್ಲ. ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಜುಲೈ 3ಕ್ಕೆ ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಸಲು ಸಾಧ್ಯವಾಗದೆ ವ್ಯರ್ಥವಾಗಿ ದಿನಗಳು ಕಳೆದು ಹೋಗುತ್ತಿವೆ.

ಕೆಇಎ ವೆಬ್‌ಸೈಟ್‌ನಲ್ಲಿ ನಾಗರಿಕ ಸೇವಾ ಪೇದೆಗಳ ಹುದ್ದೆಗಳ ಭರ್ತಿಗೆ ಅರ್ಜಿ ಸಲ್ಲಿಸಲು ಎದುರಾಗಿರುವ ತಾಂತ್ರಿಕ ದೋಷ.

ವೆಬ್‌ಸೈಟ್‌ನ ತಾಂತ್ರಿಕ ತೊಂದರೆಯ ಜತೆಗೆ ಜಾತಿ ಮತ್ತು ಆದಾಯ ಪ್ರಮಾಣಪತ್ರದಲ್ಲಿ ಅಭ್ಯರ್ಥಿಗಳ ಹೆಸರುಗಳು ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ವ್ಯತ್ಯಾಸಗಳು ಇರುವುದರಿಂದ ಅರ್ಜಿ ಸಲ್ಲಿಸುವ ವೇಳೆ ಹೆಸರುಗಳು ಕೂಡ ಸರಿ ಹೊಂದುತ್ತಿಲ್ಲ ಎಂದು ಕಂಪ್ಯೂಟರ್ ಕೇಂದ್ರದವರು ವಿವರಿಸಿದರು.

ವೆಬ್‌ಸೈಟ್‌ನ ಸಹಾಯವಾಣಿಗೆ ಕರೆ ಮಾಡಿದರೂ ಯಾರೂ ಸ್ವೀಕರಿಸುತ್ತಿಲ್ಲ, ಕರೆ ಸ್ವೀಕರಿಸಿದರೂ ಕೇವಲ ತಾಳ್ಮೆ ವಹಿಸುವಂತೆ ಹೇಳುತ್ತಿದ್ದಾರೆ. ಆದರೆ, ಯಾವಾಗ ಸರಿಹೋಗಲಿದೆ ಎಂಬುದರ ಬಗ್ಗೆ ಸರಿಯಾಗಿ ಉತ್ತರಿಸುತ್ತಿಲ್ಲ ಅಭ್ಯರ್ಥಿಗಳು ಹಾಗೂ ಕಂಪ್ಯೂಟರ್ ಕೇಂದ್ರದವರ ಆರೋಪವಾಗಿದೆ.

> ಪೊಲೀಸ್ ಕಾನ್ಸ್‌ಟೇಬಲ್‌ಗಳ ಹುದ್ದೆಗಳ ಭರ್ತಿಗೆ ಕೆಇಎ ವೆಬ್ ಸೈಟ್‌ನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಹಾಕಲು ಅವಕಾಶ ನೀಡಿ 10 ದಿನಗಳಾದರೂ ಕೇವಲ ಮೂರೇ ಅರ್ಜಿಗಳನ್ನು ಹಾಕಲು ಸಾಧ್ಯವಾಗಿದೆ. ಈ 3 ಅರ್ಜಿಗಳು ಕೂಡ ಆರಂಭದಲ್ಲೇ ಹಾಕಲಾಗಿದೆ. ಅರ್ಜಿ ಹಾಕಲು ಬರುವ ಅಭ್ಯರ್ಥಿಗಳಿಗೆಲ್ಲ ತಾಂತ್ರಿಕ ಸಮಸ್ಯೆಯ ಬಗ್ಗೆ ವಿವರಿಸಿ ವಾಪಸ್ ಕಳುಹಿಸಲಾಗುತ್ತಿದೆ.
>
> – ಸುರೇಶ ಹವಾಲ್ದಾರ, ಕಂಪ್ಯೂಟರ್ ಸೆಂಟರ್ ಮಾಲೀಕ

> ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ಅರ್ಜಿ ಸಲ್ಲಿಸಲು ತಾಂತ್ರಿಕ ಸಮಸ್ಯೆಯ ಬಗ್ಗೆ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದರೂ ಸರಿಯಾದ ಮಾಹಿತಿ ಸಿಗುತ್ತಿಲ್ಲ. ಪರೀಕ್ಷೆಗೆ ಓದುವುದು ಬಿಟ್ಟು ಕಂಪ್ಯೂಟರ್ ಕೇಂದ್ರ ಬಳಿ ಅರ್ಜಿ ಹಾಕಲು ಕಾಯುವಂತಾಗಿದೆ.
>
> – ವೆಂಕಟೇಶ ಕೌಳೂರಿನ ಅಭ್ಯರ್ಥಿ

ನೇಮಕಾತಿಗೆ ಅರ್ಜಿ ಶುಲ್ಕ ದುಪ್ಪಟ್ಟು!

■ ನಿಜಗುಣಿ ದಿಂಡಲಕೊಪ್ಪ ಧಾರವಾಡ
nijaguni.dindalkoppa@timesofindia.com

ಬಹುದಿನಗಳ ನಂತರ ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) ಹುದ್ದೆಗಳ ಭರ್ತಿಗೆ ರಾಜ್ಯ ಸರಕಾರ ಅಸ್ತು ಎಂದಿದೆ. ಆದರೆ, ಅರ್ಜಿ ಶುಲ್ಕ ಮೊತ್ತವನ್ನು ಎರಡು ಪಟ್ಟು ಹೆಚ್ಚಿಸಿರುವುದು ತೀವ್ರ ಆಕ್ಷೇಪಕ್ಕೆ ಗುರಿ ಆಗಿದೆ.

ಪೊಲೀಸ್ ನೇಮಕಾತಿ ಪ್ರಕ್ರಿಯೆ ಈ ಹಿಂದೆ ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ) ನೇಮಕಾತಿ ಪ್ರಾಧಿಕಾರದ ಮೂಲಕ ನಡೆಯುತ್ತಿತ್ತು. ಈಗ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಜವಾಬ್ದಾರಿ ಹೊತ್ತಿದೆ. 2022–23ರಲ್ಲಿ ಸಾಮಾನ್ಯ ಹಾಗೂ ಇತರ ಹಿಂದುಳಿದ ವರ್ಗದವರಿಂದ ಪಡೆಯುತ್ತಿದ್ದ 400 ರೂ. ಅರ್ಜಿ ಶುಲ್ಕವನ್ನು ಈಗ 750 ರೂ. ಗಳಿಗೆ ಹೆಚ್ಚಿಸಲಾಗಿದೆ. ಎಸ್‌ಸಿ/ಎಸ್‌ಟಿ, ಪ್ರವರ್ಗ 1, ಮಾಜಿ ಸೈನಿಕರು, ತೃತೀಯ ಲಿಂಗಿಗಳಿಗಿದ್ದ 200 ರೂ. ಶುಲ್ಕ 500 ರೂ.ಗೆ ಹೆಚ್ಚಿಸಲಾಗಿದೆ.

40-45 ಕೋಟಿ ರೂ. ಸಂಗ್ರಹ ಗುರಿ: ಪಿಡಿಒ ಸೇರಿದಂತೆ ವಿವಿಧ ನಿಗಮಗಳಿಗೆ ಸಂಬಂಧಿಸಿದ ನೇಮಕಾತಿಗೆ ಅರ್ಜಿ ಸಲ್ಲಿಸಿದವರು ಎರಡೆರಡು ಪರೀಕ್ಷೆಗಳನ್ನು ಅಭ್ಯರ್ಥಿಗಳು ಬರೆಯಬೇಕು. ಅಲ್ಲಿ ಅರ್ಜಿ ಶುಲ್ಕ ಹೆಚ್ಚಾದರೂ ಖರ್ಚುವೆಚ್ಚ ಆಗಲಿದೆ ಎಂದು ಕೊಳ್ಳಬಹುದು. ಆದರೆ, ಪೊಲೀಸ್ ಕಾನ್ಸ್‌ಟೇಬಲ್ ಭರ್ತಿಗೆ ಒಂದೇ ಪರೀಕ್ಷೆ ನಡೆಯಲಿದೆ. ಆದಕ್ಕೆ ಈ ರೀತಿ ದುಪಟ್ಟು ಶುಲ್ಕ ಹೆಚ್ಚು ಮಾಡಿರುವುದು ಅಭ್ಯರ್ಥಿಗಳಿಗೆ ಆರ್ಥಿಕ ಹೊರೆ ಹೆಚ್ಚಿಸುತ್ತದೆ. ಈಗ ವಯೋಮಿತಿ ಸಡಿಲಗೊಳಿಸಿ 35 ವಯಸ್ಸಿನ ಒಳಗಿನವರಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಿದ್ದರಿಂದ 6 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಬರುವ ನಿರೀಕ್ಷೆಗಳಿವೆ. ಈ ಮೂಲಕ 40–45 ಕೋಟಿ ರೂ. ಸಂಗ್ರಹಿಸುವ ಗುರಿ ಸರಕಾರದ್ದಾಗಿದೆ ಎಂದು ಉದ್ಯೋಗಾಕಾಂಕ್ಷಿಗಳು ಬಳಿ ಅಸಮಾಧಾನ ತೋಡಿಕೊಂಡಿದ್ದಾರೆ.

> ಮೊದಲೇ ಸಾಲ ಮಾಡಿಕೊಂಡು ಓದುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಶುಲ್ಕ ಹೊರೆ ಆಗಿದೆ. 8 ದಿನಗಳಿಂದ ಅರ್ಜಿ ಸಲ್ಲಿಸಲು ನಾನು ಪ್ರಯತ್ನಿಸಿದರೂ ಸ್ವೀಕೃತ ಆಗುತ್ತಿಲ್ಲ.
>
> – ದೇವರಾಜ ಸಿದ್ದಾಪುರ, ಹುದ್ದೆ ಆಕಾಂಕ್ಷಿ

ಕುದುರೆಮುಖ ಚಾರಣ ಟಿಕೆಟ್ ಹಂಚಿಕೆಯಲ್ಲಿ ಅಕ್ರಮ ಪತ್ತೆ

■ ವಿಕ ಸುದ್ದಿಲೋಕ ಕಳಸ (ಚಿಕ್ಕಮಗಳೂರು)

ಕುದುರೆಮುಖ ಮತ್ತು ನೇತ್ರಾವತಿ ಪೀಕ್ ಚಾರಣದ ಆನ್‌ಲೈನ್ ಟಿಕೆಟ್ ಮಾಫಿಯಾವನ್ನು ಕುದುರೆಮುಖ ರಾಷ್ಟ್ರೀಯ ಉದ್ಯಾನದ ಅಧಿಕಾರಿ ಲತಾ ಭಟ್ ಪತ್ತೆ ಮಾಡಿದ್ದಾರೆ.

ನೇತ್ರಾವತಿ ಪೀಕ್ ಚಾರಣಕ್ಕೆ ಬಂದಿದ್ದ ಯುವಜನರ ಟಿಕೆಟ್ ಪರಿಶೀಲನೆ ನಡೆಸಿದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಲತಾ ಭಟ್, ನಿಯಮಬಾಹಿರವಾಗಿ ಟಿಕೆಟ್ ಪಡೆದವರ ಮೇಲೆ ಕ್ರಮಕೈಗೊಂಡಿದ್ದಾರೆ.

ಪ್ರತಿ ವಾರವೂ ಕೆಲವೇ ನಿಮಿಷಗಳಲ್ಲಿ ಕುದುರೆಮುಖ ಮತ್ತು ನೇತ್ರಾವತಿ ಪೀಕ್ ಚಾರಣದ ಟಿಕೆಟ್‌ಗಳು ಆನ್‌ಲೈನ್‌ನಲ್ಲಿ ಮಾರಾಟ ಆಗುತ್ತಿರುವುದರ ಬಗ್ಗೆ ಹಲವಾರು ಅಚ್ಚರಿ ವ್ಯಕ್ತಪಡಿಸಿದ್ದರು. ಸ್ಥಳೀಯ ಹೋಂ ಸ್ಟೇಗಳ ಅತಿಥಿಗಳಿಗೆ ಟಿಕೆಟ್ ಸಿಗದ ಬಗ್ಗೆ ಅಸಮಾಧಾನ ವ್ಯಕ್ತವಾಗಿತ್ತು. ಈ ಅಕ್ರಮದ ಬಗ್ಗೆ 'ವಿಜಯ ಕರ್ನಾಟಕ' ಜೂನ್ 1ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ಈ ಬಗ್ಗೆ ಕಾರ್ಕಳ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವರಾಮ್ ಬಾಬು ಕ್ರಮ ತೆಗೆದುಕೊಳ್ಳುವ ಭರವಸೆ ನೀಡಿದ್ದರು. ಅದರಂತೆ ಶುಕ್ರವಾರ ಚಾರಣಕ್ಕೆ ಬಂದಿದ್ದ ಯುವಕ, ಯುವತಿಯರ ಟಿಕೆಟುಗಳನ್ನು ಲತಾ ಭಟ್ ಅವರ ತಂಡ ಪರಿಶೀಲಿಸಿತು. ಟಿಕೆಟ್ ಮತ್ತು ಅವರ ಗುರುತಿನ ಚೀಟಿಗಳಿಗೆ ತಾಳೆ ಆಗಿಲ್ಲ. ಇದರ ಬಗ್ಗೆ ಎಸಿಎಫ್ ವಿಚಾರಣೆ ನಡೆಸಿದಾಗ, ಇವರೆಲ್ಲರೂ ಸ್ವಂತ ಟಿಕೆಟ್ ಪಡೆಯದೆ ಬೆಂಗಳೂರಿನ ಚಾರಣದ ಸಂಸ್ಥೆಗಳ ಮೂಲಕ ಚಾರಣಕ್ಕೆ ಬಂದಿದ್ದು ಬೆಳಕಿಗೆ ಬಂದಿದೆ. ಚಾರಣಕ್ಕೆ ಬಂದಿದ್ದ ಆರ್ಕಿಕ ಜನರಿಗೆ ತಾವು ಪಡೆದ ಟಿಕೆಟ್‌ನ ಮಾಹಿತಿ ಇರಲಿಲ್ಲ. ಪ್ಯಾಕೇಜ್ ಪ್ರವಾಸಕ್ಕೆ ದೊಡ್ಡ ಮೊತ್ತ ತೆತ್ತು ಅವರು ಬಂದಿದ್ದರು.

ಅಕ್ರಮ ಟಿಕೆಟ್ ಪಡೆದಿದ್ದ 50ಕ್ಕೂ ಹೆಚ್ಚು ಯುವಜನರನ್ನು ಎಸಿಎಫ್ ಲತಾ ಭಟ್ ಚಾರಣಕ್ಕೆ ಅವಕಾಶ ನೀಡದೆ ವಾಪಸ್ ಕಳಿಸಿದರು.

ಬೆಂಗಳೂರು ಮೂಲದ ಚಾರಣ ಸಂಸ್ಥೆಗಳು ಹಿಂದಿನ ವಾರಗಳಲ್ಲಿ ಚಾರಣಕ್ಕೆ ಬಂದಿದ್ದವರ ಗುರುತಿನ ಚೀಟಿಯನ್ನೇ ಬಳಸಿಕೊಂಡು ಟಿಕೆಟುಗಳನ್ನು ಆನ್‌ಲೈನ್ ಮೂಲಕ ಕಾಯ್ದಿರಿಸಿದ್ದರು. ಈ ಟಿಕೆಟ್‌ಗಳನ್ನು ಹೊಸದಾಗಿ ಚಾರಣಕ್ಕೆ ಬರುವವರಿಗೆ ಮಾರಾಟ ಮಾಡುತ್ತಿದ್ದರು ಎನ್ನಲಾಗಿದೆ.

ಇಬ್ಬರು ಲೋಕಾಯುಕ್ತ ಬಲೆಗೆ

ಬಳ್ಳಾರಿ: ಏಕ ಹಾಗೂ ಬಹು ನಿವೇಶನ ವಿನ್ಯಾಸದ ಅನುಮೋದನೆಗೆ ಲಂಚ ಸ್ವೀಕರಿಸಿದ ನಗರಾಭಿವೃದ್ಧಿ ಪ್ರಾಧಿಕಾರದ ಸರ್ವೆ ವಿಭಾಗದ ಇಬ್ಬರು ಸಿಬ್ಬಂದಿ ಶುಕ್ರವಾರ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾರೆ.


ಶಾಂತಮೂರ್ತಿ


ಸಾಜಿದ್

ಈರಣ್ಣ ಅವರು ತಮ್ಮ ಜಮೀನಿನಲ್ಲಿ ಏಕ, ಬಹು ನಿವೇಶನ ವಿನ್ಯಾಸದ ಅನುಮೋದನೆಗಾಗಿ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಸರ್ವೆಯರ್ ಶಾಂತಮೂರ್ತಿಯ ಖಾಸಗಿ ಸಹಾಯಕ ಮತ್ತು ಏಜೆಂಟ್ ಮೊಹಮ್ಮದ್ ಸಾಜಿದ್ ಅವರು 3 ಕಡತಗಳಿಗೆ ಅನುಮೋದನೆ ನೀಡಲು 3.50 ಲಕ್ಷ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಕುರಿತು ಈರಣ್ಣ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಕಚೇರಿಯಲ್ಲಿ ಲಂಚದ ಹಣ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದರು. ಹಣದೊಂದಿಗೆ ಶಿವಮೂರ್ತಿ ಹಾಗೂ ಮೊಹಮ್ಮದ್ ಸಾಜಿದ್ ಅವರನ್ನು ವಶಕ್ಕೆ ಪಡೆದಿದ್ದಾರೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ತಿ.ನರಸೀಪುರ (ಮೈಸೂರು): ಪಾಲಕರೊಂದಿಗೆ ಪಟ್ಟಣದಲ್ಲಿ ನೆಲೆಸಿರುವ ಪಶ್ಚಿಮ ಬಂಗಾಳ ಮೂಲದ 4 ವರ್ಷದ ಮಗುವಿನ ಮೇಲೆ ಅನಾಮಿಕನೊಬ್ಬ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಪಾಲಕರು ಗುರುವಾರ ಬೆಳಗ್ಗೆ ಕೆಲಸಕ್ಕೆಂದು ಅಂಗಡಿಗೆ ಹೋಗಿದ್ದ ಸಮಯದಲ್ಲಿ ಅನಾಮಿಕನೊಬ್ಬ ಏಕಾಏಕಿ ಮನೆಗೆ ನುಗ್ಗಿ 4 ವರ್ಷದ ಮಗುವನ್ನು ಮನೆಯ ಚಾವಣಿಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಕುರಿತು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಗರ್ ಹುಕುಂ ಪ್ರಕರಣ | ಅಕ್ರಮವಾಗಿ ಭೂ ಮಂಜೂರಾತಿ ಆರೋಪ

ಬೇಲೂರಿನ ಮಾಜಿ ಶಾಸಕ ಲಿಂಗೇಶ್ ಬಂಧನ

■ ವಿಕ ಸುದ್ದಿಲೋಕ ಬೇಲೂರು (ಹಾಸನ)

ಬಗರ್ ಹುಕುಂ ಜಮೀನು ಅಕ್ರಮ ಮಂಜೂರಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇಲೂರು ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಸೇರಿದಂತೆ ಹಲವರನ್ನು ಸಿಐಡಿ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಕೆ.ಎಸ್.ಲಿಂಗೇಶ್

> **ಹೈಕೋರ್ಟ್‌ಗೆ ಅರೆಸ್ಟ್ ಮಾಹಿತಿ**
>
> **ಬೆಂಗಳೂರು:** ಅಕ್ರಮವಾಗಿ ಬಗರ್‌ಹುಕುಂ ಜಮೀನು ಮಂಜೂರು ಮಾಡಿದ ಆರೋಪ ಪ್ರಕರಣದಲ್ಲಿ ಬೇಲೂರಿನ ಜೆಡಿಎಸ್ ಮಾಜಿ ಶಾಸಕ ಕೆ.ಎಸ್. ಲಿಂಗೇಶ್‌ರನ್ನು ಬಂಧಿಸಲಾಗಿದೆ ಎಂದು ಎಸ್‌ಪಿಪಿ ಬಿ.ಎನ್. ಜಗದೀಶ್ ಹೈಕೋರ್ಟ್‌ಗೆ ಶುಕ್ರವಾರ ಮಾಹಿತಿ ನೀಡಿದರು. ಲಿಂಗೇಶ್ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯು ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ವಿಚಾರಣೆಗೆ ಬಂದಿತು. ಆಗ ಎಸ್‌ಪಿಪಿ, ಶುಕ್ರವಾರ ಬೆಳಗ್ಗೆ ಲಿಂಗೇಶ್ ಸೇರಿ 12 ಜನರನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದರು. ಆ ಹಿನ್ನೆಲೆಯಲ್ಲಿ ನ್ಯಾಯಾಲಯ ಜಾಮೀನು ಅರ್ಜಿ ಸಲ್ಲಿಸುವಂತೆ ಸೂಚಿಸಿ ಅರ್ಜಿಯನ್ನು ವಿಲೇವಾರಿ ಮಾಡಿತು.

ಬೆಂಗಳೂರಿನಿಂದ ಆಗಮಿಸಿದ್ದ ಸಿಐಡಿ ವಿಶೇಷ ಅಧಿಕಾರಿಗಳ ತಂಡವು ಹೆಬ್ಬಾಳು ಸಮೀಪದ ಕರಿಕಟ್ಟೆಹಳ್ಳಿಯಲ್ಲಿರುವ ಮಾಜಿ ಶಾಸಕರ ನಿವಾಸದ ಮೇಲೆ ದಾಳಿ ನಡೆಸಿ ಬಂಧಿಸಿ ಕರೆದೊಯ್ದಿದೆ.

ಏನಿದು ಪ್ರಕರಣ?: 2018ರಿಂದ 2023ರವರೆಗೆ ಜೆಡಿಎಸ್ ಶಾಸಕರಾಗಿದ್ದ ಕೆ.ಎಸ್. ಲಿಂಗೇಶ್ ತಾಲೂಕು ಬಗರ್ ಹುಕುಂ ಸಮಿತಿ ಅಧ್ಯಕ್ಷರೂ ಆಗಿದ್ದರು. ಈ ಅವಧಿಯಲ್ಲಿ 2,750 ಎಕರೆ ಸರಕಾರಿ ಜಮೀನನ್ನು ನಿಯಮ ಉಲ್ಲಂಘಿಸಿ ಮಂಜೂರು ಮಾಡಿದ್ದಾರೆ ಎಂಬ ಆರೋಪದಡಿ ಪ್ರಕರಣ ದಾಖಲಿಸಲಾಗಿತ್ತು. ಕೋಲಾರದ ಮಾಹಿತಿ ಹಕ್ಕು ಹೋರಾಟಗಾರ ಕೆ.ಸಿ.ರಾಜಣ್ಣ ಅವರು 2023ರಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ "2016ರಿಂದ 2022ರ ಅವಧಿಯಲ್ಲಿ ತಾಲೂಕು ಬಗರ್ ಹುಕುಂ ಸಮಿತಿ ಮೂಲಕ 1,430 ಮಂದಿಗೆ ಸುಮಾರು 2,750 ಎಕರೆ ಜಮೀನನ್ನು ನಿಯಮ ಉಲ್ಲಂಘಿಸಿ ಮಂಜೂರು ಮಾಡಲಾಗಿದೆ'' ಎಂದು ದೂರು ನೀಡಿದ್ದರು.

ಕೋರ್ಟ್ ಸೂಚನೆ ಅನುಸಾರ ಕೆ.ಎಸ್. ಲಿಂಗೇಶ್, ಸಮಿತಿ ಸದಸ್ಯರಾಗಿದ್ದ ಜಿ.ಕೆ.ಕುಮಾರ್, ಶಾಲಿನಿ ಮೋಹನ್, ಟಿ.ಆರ್.ರಮೇಶ್, ಪರ್ವತೇಗೌಡ, ಎಂ.ಆರ್.ಚೇತನ್, ಕಳ್ಳಪ್ಪನಪ್ರಸಾದ್, ಎಸ್.ಎನ್.ಲಿಂಗೇಶ್, ರಂಗನಾಥ್, ಭಾಗ್ಯಮ್ಮ ಹಾಗೂ ಈ ಅವಧಿಯಲ್ಲಿ ತಹಸೀಲ್ದಾರ್‌ಗಳಾಗಿದ್ದ ಬಿ.ಎ.ಜಗದೀಶ್, ಎಚ್.ಎಸ್. ಪರಮೇಶ್, ಜೆ.ಉಮೇಶ್, ಬಿ.ಎಸ್. ಪುಟ್ಟಶೆಟ್ಟಿ ಯು.ಎಂ. ಮೋಹನ್ ಕುಮಾರ್ ಅವರು 2023ರಲ್ಲಿ ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಿತಿ ಸದಸ್ಯರು ಹಾಗೂ ತಹಸೀಲ್ದಾರರು 2023ರಲ್ಲಿ ನಿರೀಕ್ಷಣಾ ಜಾಮೀನು ಪಡೆದಿದ್ದರು. ಆದರೆ ಸಮಿತಿ ಅಧ್ಯಕ್ಷರಾಗಿದ್ದ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಉಚ್ಚನ್ಯಾಯಾಲಯ ತಿರಸ್ಕರಿಸಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದಿನ ರಾಜಸ್ವ ನಿರೀಕ್ಷಕರಾದ ನಾಗರಾಜು, ನಿಂಗರಾಜು, ಉದಿತ್, ಗ್ರಾಮಲೆಕ್ಕಾಧಿಕಾರಿ ಬಸಪ್ಪ ರಾಜಸಾಬ್, ಅಂಕೇಗೌಡ, ಸಾಗರ್, ರಮನಾಯಕ್, ಲಿಂಗರಾಜು, ತಹಸೀಲ್ದಾರ್ ಮೋಹನ್ ಕುಮಾರ್ ಅವರನ್ನು ಬಂಧಿಸಲಾಗಿದೆ ಎಂಬ ಮಾಹಿತಿ ಇದ್ದು, ವರ್ಗಾವಣೆ ಆಗಿರುವ ಇನ್ನು ಹೆಚ್ಚಿನ ಅಧಿಕಾರಿಗಳನ್ನು ಜಿಲ್ಲೆಯ ವಿವಿಧ ಭಾಗಗಳಲ್ಲಿ ಬಂಧಿಸಲಾಗಿದೆ ಎಂದು ತಿಳಿದುಬಂದಿದೆ.

ಮೇಲುಕೋಟೆ ದೇಗುಲದಲ್ಲಿ ಕಳವು ಪ್ರಕರಣ

ಆರು ಮಂದಿ ಅಮಾನತು

ಮೇಲುಕೋಟೆ (ಮಂಡ್ಯ): ಪಾಂಡವಪುರ ತಾಲೂಕು ಮೇಲುಕೋಟೆಯ ಯೋಗಾನರಸಿಂಹಸ್ವಾಮಿ ದೇವಾಲಯದ ಅರ್ಚಕ ಎಸ್. ನಾರಾಯಣಭಟ್ಟ ಸೇರಿದಂತೆ ಆರು ಮಂದಿಯನ್ನು ಅಮಾನತುಗೊಳಿಸಲಾಗಿದೆ.

ನಾರಾಯಣಭಟ್ಟರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿದ್ದು, ರಾಮಾನುಜರ ಸನ್ನಿಧಿಯ ಅರ್ಚಕ ವಿದ್ವಾನ್ ಬಿ.ಪಿ. ಆನಂದಾಳ್ವಾರ್ ಅವರನ್ನು ಪ್ರಭಾರ ಅರ್ಚಕರನ್ನಾಗಿ ನಿಯೋಜಿಸಲಾಗಿದೆ. ಅಮಾನತುಗೊಂಡ ಇತರ ಹುದ್ದೆಗಳಿಗೂ ಬದಲಿ ನಿಯೋಜನೆ ಮಾಡಲಾಗಿದೆ.

ಮೇಲುಕೋಟೆ ದೇವಾಲಯಗಳ ಇಒ ದೂರಿನ ಸಂಬಂಧ ದೇಗುಲದ ವ್ಯವಸ್ಥಾಪನಾ ಸಮಿತಿ ಜೂನ್ 16ರಂದು ತುರ್ತು ಸಭೆ ಸೇರಿ ಅರ್ಚಕ ನಾರಾಯಣ ಭಟ್ಟ, ಪಾರುಪತ್ತೇಗಾರ ಶ್ರೀಧರ, ಪರಿಚಾರಕ ತಿರುವೇಂಗಡಾಚಾರ್, ಕಾವಲುಗಾರ ಎಂ.ಬಿ ಗಂಗಾಧರ, ಬಸವರಾಜು, ಮಣೇಗಾರ್ ಕಸ್ತೂರಿ ಶ್ರೀನಿವಾಸನ್ ಅವರನ್ನು ಅಮಾನತುಗೊಳಿಸಿ ತೆರವಾದ ಹುದ್ದೆಗಳಿಗೆ ಬದಲಿ ವ್ಯವಸ್ಥೆ ಮಾಡಿ ಇಲಾಖೆ ತನಿಖೆ ನಡೆಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಿತ್ತು.

ಯೋಗಾನರಸಿಂಹಸ್ವಾಮಿ ದೇಗುಲದಲ್ಲಿ ಹುಂಡಿಯಲ್ಲಿ ಭಕ್ತರು ಹಾಕಿದ ಚಿನ್ನ, ಬೆಳ್ಳಿ ಸೇರಿದಂತೆ ನಗದು ಕಳ್ಳತನವಾಗುತ್ತಿರುವ ಬಗ್ಗೆ ಶಂಕೆ ವ್ಯಕ್ತವಾಗಿತ್ತು. ಇದನ್ನು ಕಂಡು ಹಿಡಿಯಲು ಗರ್ಭಗೃಹ ಹಾಗೂ ಇತರ ಕಡೆಗಳಲ್ಲಿ ರಹಸ್ಯ ಕ್ಯಾಮೆರಾ ಅಳವಡಿಸಲಾಗಿತ್ತು.

PUBLIC NOTICE

Public are informed that my client intends to Purchase All that piece and parcel of the Property bearing Residential **Site No.1060, Khatha PID No.3320020242,** situated at **2nd Block, Banashankari 6th Stage Layout,** Bangalore, measuring **East to West 15.00 Mtrs and North to South 24.00 Mtrs, totally measuring 360.00 Sq.Mtrs,** and bounded on the **East by:** Site No.1059; **West by :** Site No.1061; **North by :** Site No.1080 and **South by :** Road;
From its owner **Mr. K. UNNIKRISHNAN @ Mr.KAZHANI KUNNATH UNNIKRISHNAN, Mrs. PREMA UNNIKRISHNAN @ Mrs. PURAVALAPPIL BALAN PREMA , Mr. SYED FAZLULLAH and Mrs. RUKHSANA @ Mrs. RUKHSANA BEGUM,** Persons/Financial Institutions/Firms having any right over the said property may lodge their objections/claims with documentary evidence within 10 days from this date of publication to the undersigned.

R. Santhosh Kumar Associates, Advocates, Flat No.406, Motati Meadows, Nagavarapalya Main Road, Benniganahalli, Old Madras Road,C.V.Raman Nagar Post, Bangalore – 560 093.
Mobile No. 08041718108/ 9886714816

IN THE COURT OF THE VII ADDL DISTRICT AND SESSIONS JUDGE BENGALURU RURAL DISTRICT AT BENGALURU. M.A.6/2017

Between:
H Rajappa & others. ..Appellants
And The Tahasildar and others. ....Respondents

PUBLIC NOTICE

Whereas, the above appeal filed by the Appellants under Section 3 (2) of the Karnataka Village offices Abolition Act in respect of Sy. No.200 measuring to an extent of 4-15 guntas is situated at Begur Village, Bengaluru South Taluk by challenging an order of regrant bearing No. HOACR185 (D)/1980-81 was pleased to passed by the Respondent No. 1. The Tahasildar Bengaluru South Taluk, to the below listed parties.

1. Sri. Kaverappa, S/o Late Pillappa, Aged about 40 years, Residing at Chikkabeguru Village, Begur Hobli, Bengaluru South Taluk, Bengaluru-560068. ...Appellant No. 3.
2. Sri. Balappa, Aged about 63 years, S/o Late Doddaramaiah Residing at Chikkabeguru Village, Begur Hobli, Bengaluru South Taluk, Bengaluru-560068. ...Appellant No. 4.

AND:
The Tahasildar, Bengaluru South Taluk Office of Tahasildar Revenue Bhavan, KG. Road, Bengaluru-560009. ...Respondent No. 1
2. Sri. Narayanappa Since Deceased by LR
2(a) Mr. B.N. Kantharaj. Aged about 38 years, R/at No. 72, Sadhara Street, Near Yellamma Temple. Chikkabeguru Begur Hobli, Bengaluru South Taluk Postal Pincoe-560068. ...Respondent No. 2(a)
3. HV Ramaiah, Since deceased by Lrs.
3(a). R. Muniraju. Aged about 45 years, S/o late H. Ramaiah, R/at No. 164, Chikkabeguru Village, Begur Hobli, Bengaluru South Taluk, Bengaluru-560068. ....Respondent No. 3(a)
3(b) Mr. R. Venkachalapathy, Aged about 48 years, S/o Late H.V. Ramaiah Rat No. 164, Chikkabeguru Village, Begur Hobli, Bengaluru South Taluk, Bengaluru, Postal pincode-560068. ....Respondent No. 3(b)
4. Sri. Munibyrappa, S/o Not mentioned in the order Aged about years,. ...Respondent No. 4.
5. Sri. Govinda Reddy, S/o not mentioned in the order, Aged about years. .....Respondent No. 5.
6. Sri. Pilla Reddy, S/o not mentioned in the order, Aged about years.. ....Respondent No. 6.
7. Sri. Timma Reddy S/o not mentioned in the order, Aged about years. .....Respondent No. 7.
8 Sri. Rama Reddy, S/o not mentioned in the order, Aged about years. ...Respondent No. 8.
9. Sri. Govinda Reddy, S/o not mentioned in the order, Aged about years. ...Respondent No. 9.

Above 4 to 9 are all Residing at Chikka beguru Village, Beguru Hobli, Bengaluru South Taluk.
Interested parties are hereby called to appear in this Court in person or by Pleader duly instructed on 04-07.2026 at 11.A.M. in form to show cause notice in the notice to all the parties in the appeal.
Given under my hand and seal of the Court, this 29/4/26.

By Order of the Court
DISTRICT AND SESSIONS JUDGE BENGALURU RURAL DISTRICT AT BENGALURU
P. Naryanappa Advocate for Appellant No. 1 & 2.

CORRIGENDUM

Reference to the Public Notice published **in Times of India, Bengaluru Edition on Page No. 7, and in Vijaya Karnataka, Bengaluru Edition, on Page No. 5 dated 19-06-2026,** the following amendment to the description of the property mentioned in the Schedule is hereby made:

"All the piece and parcel of the transferrable development rights certificate to be issued by the Bangalore Development Authority pursuant to acquisition of the immovable property bearing Survey No. 53/9 (earlier part of Survey No. 53/8, much earlier part of Survey No. 53/2) measuring 1 acre 2½ guntas, situated at Kachamaranahalli Village, Varthur Hobli, Bengaluru East Taluk, Bengaluru District...."

Vinay K. S., Advocate,
Vinay Kademane & Associates
Bengaluru-01 Ph.: 080 22863885
Bengaluru Date:19-06-2026

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಹೆಚ್‌ಇ-ಟಿಆರ್‌ಡಿ–2025–26–ಓಟಿ–31–2 ದಿನಾಂಕ : 13–06–2026

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದಲ್ಲಿ ಲೋಡಿಂಗ್ / ಅನ್‌ಲೋಡಿಂಗ್ ಪಾಯಿಂಟ್‌ಗಳಿಗಾಗಿ ಸೀಕ್ವೆನ್ಷಿಯಲ್ ಇಂಟರ್‌ಲಾಕಿಂಗ್‌ನೊಂದಿಗೆ ಡಬಲ್ ಎಂಡ್ ಅರ್ಥ್ ಹೀಲ್ ಐಸೋಲೇಟರ್‌ಗಳನ್ನು ಒದಗಿಸುವುದು.	ರೂ. 61,91,786.56

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06–07–2026 ರಂದು 1100 ಗಂಟೆಯವರೆಗೆ

ಇ-ಟೆಂಡರ್ ಪ್ರಕಟಣೆ ಸಂ. ಹೆಚ್‌ಇ-ಟಿಆರ್‌ಡಿ–2025–26–ಓಟಿ–32–2 ದಿನಾಂಕ : 13–06–2026

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನಿಲ್ದಾಣಗಳು, ಪ್ಲಾಟ್‌ಫಾರಂಗಳು, ಪಾದಚಾರಿ ಮೇಲ್ಸೇತುವೆಗಳು, ರಸ್ತೆ ಮೇಲ್ಸೇತುವೆಗಳು ಮತ್ತು ಎಲ್‌ಸಿ ಗೇಟ್‌ಗಳಲ್ಲಿ ಟ್ರಾಕ್ಷನ್ ಡಿಸ್ಟ್ರಿಬ್ಯೂಷನ್ ಸ್ವತ್ತುಗಳ ಸುರಕ್ಷತೆಗಾಗಿ ಸುರಕ್ಷತೆ ಮತ್ತು ವಿಶ್ವಾಸಾರ್ಹ ಕಾರ್ಯ ಯೋಜನೆಯ ಅಳವಡಿಕೆ.	ರೂ. 1,29,48,655/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06–07–2026 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಹುಬ್ಬಳ್ಳಿ
ಪಿಯುಬಿ/224/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway-SWR | SWRRLY | @SWRAILWAYHQ | @sw_railways

ಕೆಂಪೇಗೌಡ ಥೀಮ್ ಪಾರ್ಕ್ ಲೋಕಾರ್ಪಣೆ ಜೂನ್ 27ಕ್ಕೆ

ಮುಖ್ಯಮಂತ್ರಿಗಳಿಂದ ಉದ್ಘಾಟನೆ

ಬೆಂಗಳೂರು ಗ್ರಾಮಾಂತರ: ಜೂನ್ 27ಕ್ಕೆ ನಾಡಪ್ರಭು ಕೆಂಪೇಗೌಡರ ಜಯಂತಿ ದಿನದಂದು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿರ್ಮಾಣಗೊಂಡಿರುವ ಕೆಂಪೇಗೌಡ ಥೀಮ್‌ಪಾರ್ಕ್ ಅನ್ನು ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಕೆಂಪೇಗೌಡ ಜಯಂತಿ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ದೇವನಹಳ್ಳಿಯಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 108 ಅಡಿ ಎತ್ತರದ ಕೆಂಪೇಗೌಡರ ಭವ್ಯ ಕಂಚಿನ ಪ್ರತಿಮೆ ಬಳಿ ಸುಮಾರು 20 ಕೋಟಿ ರೂ.ಗಳ ವೆಚ್ಚದಲ್ಲಿ ಕೆಂಪೇಗೌಡ ಥೀಮ್ ಪಾರ್ಕ್ ನಿರ್ಮಿಸಲಾಗಿದ್ದು ಜೂನ್ 27ರಂದು ಬೆಳಗ್ಗೆ 8.30ಕ್ಕೆ ಜನರ ವೀಕ್ಷಣೆಗೆ ಲಭ್ಯವಾಗಲಿದೆ ಎಂದರು.

ಬಾಲ್ಯ ವಿವಾಹ: 13 ಜನರ ವಿರುದ್ಧ ಕೇಸ್

ಬೀದರ್: ಬಾಲ್ಯ ವಿವಾಹಕ್ಕೆ ಕಾರಣರಾದ 13 ಜನರ ವಿರುದ್ಧ ಬೀದರ್ ತಾಲೂಕಿನ ಜನವಾಡಾ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬೀದರ್ ತಾಲೂಕಿನ ಮರಖಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆನಕನಹಳ್ಳಿ ಜೈ ಭವಾನಿ ಮಂದಿರದಲ್ಲಿ 16 ವರ್ಷದ ಬಾಲಕಿಯ ವಿವಾಹ ಜೂನ್ 18ರಂದು ನಡೆಯುತ್ತಿತ್ತು. ಇಲ್ಲಿಗೆ ಭೇಟಿ ನೀಡಿದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಶಾರದಾ ಕಲ್ಮಲಕರ್ ಅವರು ವರ (ವಯಸ್ಕ), ವರನ ತಂದೆ, ತಾಯಿ, ಸಂತ್ರಸ್ತೆಯ ಪೋಷಕರು, ಕಲ್ಯಾಣ ಮಂಟಪದ ಮಾಲೀಕರು, ಫೋಟೊಗ್ರಾಫರ್, ಟೆಂಟ್ ಹೌಸ್ ಮಾಲೀಕರು ಸೇರಿ ಒಟ್ಟು 13 ಜನರ ವಿರುದ್ಧ ಜನವಾಡಾ ಠಾಣೆಗೆ ದೂರು ನೀಡಿದ್ದರು.

ಮುಂಬಯಿ ಮಹಿಳೆಗೆ ₹2.50 ಕೋಟಿ ವರ್ಗ

ವಾಲ್ಮೀಕಿ ಹಗರಣ | ವಿವರ ನೀಡದ ನಾಗೇಂದ್ರ | ಸಿಬಿಐ ವಕೀಲರ ಆರೋಪ

■ ವಿಕ ಸುದ್ದಿಲೋಕ ಬೆಂಗಳೂರು

ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂಪಾಯಿ ಅವ್ಯವಹಾರ ಪ್ರಕರಣದಲ್ಲಿ ಮಾಜಿ ಸಚಿವ ನಾಗೇಂದ್ರ ಹಣದ ವರ್ಗಾವಣೆ ಬಗ್ಗೆ ಸೂಕ್ತ ವಿವರಣೆ ನೀಡಿಲ್ಲ ಎಂದು ಸಿಬಿಐ ಹೈಕೋರ್ಟ್‌ಗೆ ತಿಳಿಸಿದೆ.

> **ತನಿಖೆಗೆ ಸಹಕರಿಸದ ನೆಕ್ಕುಂಟಿ ನಾಗರಾಜ್**
>
> ಈ ಮಧ್ಯೆ, ಅದೇ ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ಅವ್ಯವಹಾರ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಮತ್ತೊಬ್ಬ ಆರೋಪಿ ನೆಕ್ಕುಂಟಿ ನಾಗರಾಜ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಆ ಅರ್ಜಿ ಕೂಡ ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಶುಕ್ರವಾರ ವಿಚಾರಣೆಗೆ ಬಂದಿತು. ಆಗ ಸಿಬಿಐ ಪರ ವಕೀಲರು, ''ಆರೋಪಿ ವಿಚಾರಣೆಗೆ ಸಹಕರಿಸುತ್ತಿಲ್ಲ,'' ಎಂದು ಆಕ್ಷೇಪ ವ್ಯಕ್ತಪಡಿಸಿದರು. ಹಾಗಾಗಿ, ಆರೋಪಿಯು ಜೂ.23ರಂದು ಸಿಬಿಐ ಮುಂದೆ ಹಾಜರಾಗಬೇಕು. ಸಿಬಿಐ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂದು ನ್ಯಾಯಾಲಯ ಸೂಚನೆ ನೀಡಿತು. ಅಲ್ಲದೆ, ಆರೋಪಿಯು ನೀಡಿದ ಉತ್ತರವನ್ನು ಹೈಕೋರ್ಟ್‌ಗೆ ಸಲ್ಲಿಸಲು ಸಿಬಿಐಗೆ ಸೂಚನೆ ನೀಡಿದ ನ್ಯಾಯಪೀಠ, ಅವರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ಈ ಹಿಂದೆ ನೀಡಿದ್ದ ಮಧ್ಯಂತರ ಆದೇಶ ವಿಸ್ತರಿಸಿ ವಿಚಾರಣೆಯನ್ನು ಮುಂದೂಡಿತು.

ಅಲ್ಲದೆ, ನಾಗೇಂದ್ರ ಅವರ ಖಾತೆಯಿಂದ ಮುಂಬಯಿನ ಮಹಿಳೆಯೊಬ್ಬರ ಖಾತೆಗೆ 2.50 ಕೋಟಿ ರೂ. ವರ್ಗಾವಣೆಯಾಗಿದೆ. ಆದರೆ, ಆ ಮಹಿಳೆಯ ದಾಖಲೆಗಳಲ್ಲಿ ನಾಗೇಂದ್ರ ಪತ್ನಿ ಎಂದು ಉಲ್ಲೇಖಿಸಲಾಗಿದೆ ಎಂದು ಸಿಬಿಐ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಮಾಜಿ ಸಚಿವ ಬಿ.ನಾಗೇಂದ್ರಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಂಜೂರು ಮಾಡಿರುವ ಜಾಮೀನು ರದ್ದು ಕೋರಿ ಸಿಬಿಐ ಸಲ್ಲಿಸಿರುವ ಅರ್ಜಿ ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಶುಕ್ರವಾರ ವಿಚಾರಣೆಗೆ ಬಂದಿತು.

ಆಗ ಸಿಬಿಐ ಪರ ವಾದ ಮಂಡಿಸಿದ ಎಸ್‌ಪಿಪಿ ಪಿ. ಪ್ರಸನ್ನ ಕುಮಾರ್, ''ವಿಚಾರಣೆ ವೇಳೆ ಆರೋಪಿಗಳ ಮೊಬೈಲ್‌ನಲ್ಲಿ ಕೆಲವು ವಿಡಿಯೋಗಳು ಪತ್ತೆಯಾಗಿವೆ. ಅದರಲ್ಲಿ ಹಣದ ಕಂತೆ ಎಣಿಸುತ್ತಿರುವ ವಿಡಿಯೊಗಳಿವೆ. ಆದರೆ, ಆ ಬಗ್ಗೆ ಆರೋಪಿಗಳು ವಿವರಣೆ ನೀಡಿಲ್ಲ. ಜತೆಗೆ ಮುಂಬಯಿನ ಮಹಿಳೆಯೊಬ್ಬರಿಗೆ 2 ಕೋಟಿ 50 ಲಕ್ಷ ರೂ. ವರ್ಗಾವಣೆಯಾಗಿದೆ. ಆಕೆ ತನ್ನನ್ನು ಬಿ.ನಾಗೇಂದ್ರ ಅವರ ಪತ್ನಿ ಎಂದು ಹೇಳಿಕೊಂಡಿದ್ದಾರೆ,'' ಎಂದರು.

''ಅಲ್ಲದೆ, ಮುಂಬಯಿ ಅಪಾರ್ಟ್‌ಮೆಂಟ್‌ನಲ್ಲಿರುವ ಮಹಿಳೆಯ ದಾಖಲೆಗಳಲ್ಲಿ ತಾನು ಮಾಜಿ ಸಚಿವ ಬಿ.ನಾಗೇಂದ್ರ ಪತ್ನಿ ಎಂದು ಉಲ್ಲೇಖವಾಗಿದೆ. ಆಕೆಗೆ ಹಣದ ವರ್ಗಾವಣೆ ಬಗ್ಗೆ ಸೂಕ್ತ ವಿವರಣೆ ನೀಡಿಲ್ಲ, ಹಾಗಾಗಿ, ಅವರನ್ನು ಮತ್ತೆ ವಿಚಾರಣೆಗೆ ಒಳಪಡಿಸಬೇಕಾಗಿರುವುದರಿಂದ ಅವರಿಗೆ ನೀಡಿರುವ ಜಾಮೀನು ರದ್ದುಗೊಳಿಸಬೇಕು,'' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು. ಆದರೆ, ಬಿ.ನಾಗೇಂದ್ರ ಪರ ವಕೀಲರು ವಾದ ಮಂಡನೆಗೆ ಕಾಲಾವಕಾಶ ಕೋರಿದ ಹಿನ್ನೆಲೆಯಲ್ಲಿ ಅರ್ಜಿ ವಿಚಾರಣೆಯನ್ನು ಮುಂದೂಡಲಾಯಿತು.

ಲೈಂಗಿಕ ದೌರ್ಜನ್ಯ: 20 ವರ್ಷ ಸಜೆ

ಚಿಕ್ಕಮಗಳೂರು: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಿಗೆ 20 ವರ್ಷ ಜೈಲು, 25 ಸಾವಿರ ರೂ. ದಂಡವನ್ನು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ಎಫ್‌ಟಿಎಸ್‌ಸಿ–1 ಪೋಕ್ಸೊ ನ್ಯಾಯಾಲಯ ವಿಧಿಸಿದೆ.

ಕೊಪ್ಪ ತಾಲೂಕು ಕಾರೆಮನೆ ಹೆಗ್ಗಾರು ಗ್ರಾಮದ ಸಂತೋಷ(31) ಶಿಕ್ಷೆಗೆ ಗೊಳಗಾದವನು. ಅಪರಾಧಿ ಬಾಲಕಿಯ ಸಂಬಂಧಿಯಾಗಿದ್ದು ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದ. 2024ರ ಆಗಸ್ಟ್‌ನಲ್ಲಿ ಬಾಲಕಿ ಒಬ್ಬಳೇ ಮನೆಯಲ್ಲಿದ್ದಾಗ ಮದುವೆಯಾಗುವುದಾಗಿ ಪುಸಲಾಯಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಬಳಿಕ ಹಲವು ಬಾರಿ ಈ ಕೃತ್ಯ ಮುಂದುವರಿಸಿದ್ದ. ಬಾಲಕಿ ಗರ್ಭಿಣಿಯಾಗಿ ಗಂಡು ಮಗುವಿಗೆ ಜನ್ಮ ನೀಡಿದ್ದಳು. ಪ್ರಕರಣದ ಬಗ್ಗೆ ಬಾಲಕಿಯ ಸಹೋದರಿ ಜಯಪುರ ಠಾಣೆಗೆ ದೂರು ನೀಡಿದ್ದರು.

ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಐದು ಮಂದಿ ದುರ್ಮರಣ

■ ವಿಕ ಸುದ್ದಿಲೋಕ ಬೆಂಗಳೂರು ಗ್ರಾಮಾಂತರ/ಚಾಮರಾಜನಗರ

ಬೆಂಗಳೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಐವರು ಮೃತಪಟ್ಟಿದ್ದಾರೆ.

ಹೊಸಕೋಟೆ ತಾಲೂಕಿನ ಸೂಲಿಬೆಲೆ ಸಮೀಪ ಶುಕ್ರವಾರ ಸಂಜೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಒಂದೇ ಕುಟುಂಬದ ಮೂವರು ಮೃತಪಟ್ಟಿದ್ದು, ಐದು ವರ್ಷದ ಬಾಲಕಿಗೆ ಗಂಭೀರ ಗಾಯಗಳಾಗಿವೆ.

ದೇವನಹಳ್ಳಿ ತಾಲೂಕಿನ ತೆಲ್ಲಹಳ್ಳಿ ಗ್ರಾಮದ ಅರುಣ್(35), ಅವರ ಪತ್ನಿ ಅನುಷಾ(32) ಹಾಗೂ ಎರಡು ವರ್ಷದ ಮಗಳು ಅರ್ನಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೊಬ್ಬ ಮಗಳು ಅನುಷಿಕಾ(5) ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

ಸೂಲಿಬೆಲೆಯಿಂದ ದೇವನಹಳ್ಳಿ ಕಡೆಗೆ ದ್ವಿಚಕ್ರ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಕುಟುಂಬದ ವಾಹನಕ್ಕೆ, ಹೊಸಕೋಟೆ ಮಾರ್ಗವಾಗಿ ರಾಂಗ್ ಸೈಡ್‌ನಲ್ಲಿ ಬಂದ ಬಿಎಂಟಿಸಿ ಬಸ್ ಮುಖಾಮುಖಿ ಡಿಕ್ಕಿ ಹೊಡೆಯಿತು ಎಂಬ ಆರೋಪ ಕೇಳಿಬಂದಿದೆ.

ಇಬ್ಬರ ಸಾವು: ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ಪಟ್ಟಣ ಸಮೀಪದ ಮುಡಿಗುಂಡ ಸೇತುವೆಗೆ ಕಾರು ಡಿಕ್ಕಿಯಾಗಿ ಇಬ್ಬರು ಸ್ಥಳದಲ್ಲೇ ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ.

ಪಟ್ಟಣದ ನ್ಯಾಯಾಲಯದ ಶಿರಸ್ತೇದಾರ್ ಆಗಿರುವ ಬಾಗೇಪಲ್ಲಿ ಮೂಲದ ನಂಜುಂಡಪ್ಪ (50), ಗುಮಾಸ್ತ ಯಮುನಪ್ಪ ಭಜತ್ರಿ (40) ಮೃತರು. ಬೆಂಚ್ ಕ್ಲರ್ಕ್ ಕೃಷ್ಣಪ್ಪ, ಎಫ್‌ಡಿಎ ಲೋಕೇಶ್, ಗುಮಾಸ್ತ ಶಂಕರಪ್ಪ ಗಾಯಗೊಂಡು ಮೈಸೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪೊಲೀಸರೊಂದಿಗೆ ತಿರುಗಾಡಿ ಚಳ್ಳೆಹಣ್ಣು ತಿನ್ನಿಸಲು ಮುಂದಾದ ಆರೋಪಿ ಸೆರೆ

ಕೊಲೆ ಆರೋಪಿ ಸುಳಿವು ನೀಡಿದ ಕಿವಿಯೋಲೆ!

■ ಶಿವರಾಜ ಬಂಡಿಹಾಳ ಹನುಮಸಾಗರ (ಕೊಪ್ಪಳ)
raja.bandihal@gmail.com

ಮೃತಳ ಸಹೋದರಿ ಜಾತ್ರೆಯಲ್ಲಿ ಖರೀದಿಸಿ ಉಡುಗೊರೆ ನೀಡಿದ್ದ ಕಿವಿಯೋಲೆಗಳೇ ಕೊಲೆ ಆರೋಪಿಯ ಪತ್ತೆಹಚ್ಚುವಲ್ಲಿ ನೆರವಿಗೆ ಬಂದವು. ಪತ್ನಿ ಕಾಣೆಯಾಗಿದ್ದಾಳೆ ಎಂದು ದೂರು ಸಲ್ಲಿಸಿ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಲು ಮುಂದಾದ ಆರೋಪಿ ಪತಿ ಸದ್ಯ ಸೆರೆಯೂಟ ತಿನ್ನುತ್ತಿದ್ದಾನೆ.

ಮೃತ ಶಕುಂತಲಾ

ಗದಗ ಜಿಲ್ಲೆ ಗಜೇಂದ್ರಗಡ ತಾಲೂಕಿನ ಬೈರಾಪುರ ಗ್ರಾಮದ ಉಮೇಶ (37) ಮತ್ತು ಕೊಪ್ಪಳ ಜಿಲ್ಲೆ ಕಾರಟಗಿಯ ಶಕುಂತಲಾ (35) ಅವರ ಮದುವೆ 14 ವರ್ಷಗಳ ಹಿಂದೆ ನಡೆದಿತ್ತು. ಒಂದು ವರ್ಷದ ಹಿಂದೆ ಕುಷ್ಟಗಿ ತಾಲೂಕಿನ ಬೀಳಗಿ ಗ್ರಾಮದಲ್ಲಿ ಈ ದಂಪತಿ ತಮ್ಮ ಮಕ್ಕಳೊಂದಿಗೆ ನೆಲೆಸಿದ್ದರು. ಆದರೆ, ಶಕುಂತಲಾ ದಿಢೀರ್ ನಾಪತ್ತೆಯಾದ ಹಿನ್ನೆಲೆಯಲ್ಲಿ 2025ರ ನ.27ರಂದು ಹನುಮಸಾಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿ ಪತಿ ಪೊಲೀಸರ ಜತೆಗೂಡಿ ಪತ್ನಿಯ ಹುಡುಕಾಟದ ನಾಟಕವಾಡಿದ್ದರಿಂದ ಪ್ರಕರಣ ಬೇಧಿಸುವುದು ಸವಾಲಾಗಿತ್ತು.

ರಂಗೋಲಿ ಕೆಳಗೆ ತೂರಿದ ಆರೋಪಿ

ತನ್ನ ಪತ್ನಿಯನ್ನು ಹುಡುಕಿಕೊಡುವಂತೆ ಉಮೇಶನೇ ಪೊಲೀಸರನ್ನು ಕರೆದುಕೊಂಡು ಬೆಂಗಳೂರು, ಮಂಗಳೂರು, ಉಡುಪಿ, ಗದಗ, ಹುಬ್ಬಳ್ಳಿ, ಧಾರವಾಡ ಸೇರಿ ನಾನಾ ಕಡೆ ಅಲೆದಾಡಿದ್ದ. ತಮ್ಮೆಲ್ಲ ಬಂಧುಗಳ ಮನೆಗೆ ಕರೆದೊಯ್ದು ಸುಮಾರು 6 ತಿಂಗಳು ಕಾಲ ಕಳೆದಿದ್ದ. ಪೊಲೀಸರೊಂದಿಗೆ ನಿತ್ಯ ದೂರವಾಣಿ ಸಂಪರ್ಕದಲ್ಲಿದ್ದ ಈತ, ಪತ್ನಿಯ ಪತ್ತೆ ಕುರಿತು ಮಾಹಿತಿ ಕೊಡುವಂತೆ ಪೀಡಿಸುತ್ತಿದ್ದ. ಪೊಲೀಸರ ಜತೆಗಿದ್ದರೂ ಎಳ್ಳಷ್ಟು ಅನುಮಾನ ಬಾರದಂತೆ ಎಚ್ಚರಿಕೆವಹಿಸಿದ್ದ.

ಸುಟ್ಟ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾದ ಜಾಗ.

> ಮಹಿಳೆ ಕಾಣೆಯಾಗಿರುವ ಕುರಿತು ಹನುಮಸಾಗರ ಠಾಣೆಯಲ್ಲಿ ನವೆಂಬರ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಇತ್ತೀಚೆಗೆ ಸುಟ್ಟಿರುವ ತಲೆ ಬುರುಡೆ ಪತ್ತೆಯಾಗಿತ್ತು. ಈ ಕುರಿತು ವಿಚಾರಣೆ ನಡೆಸಿದಾಗ ಮೃತಳ ಪತಿಯೇ ಕೊಲೆ ಮಾಡಿರುವುದು ಬೆಳಕಿಗೆ ಬಂದಿದೆ.
>
> – ವಿಶ್ವನಾಥ ಹಿರೇಗೌಡ್ರ, ಸಿಪಿಐ, ಕುಷ್ಟಗಿ

ಈ ಮಧ್ಯೆ, ಹನುಮಸಾಗರ ಸಮೀಪದ ಕಪಿಲತೀರ್ಥ ಕಿರು ಜಲಪಾತದ ಬಳಿ ಇತ್ತೀಚೆಗೆ ಸುಟ್ಟ ಸ್ಥಿತಿಯಲ್ಲಿ ತಲೆ ಬುರುಡೆ ಮಾತ್ರ ಇರುವ ದೇಹವನ್ನು ಕುರಿಗಾಹಿಗಳು ಪತ್ತೆಹಚ್ಚಿದ್ದರು. ಅರಣ್ಯ ಇಲಾಖೆಯ ಸಿಬ್ಬಂದಿಯೂ ಇದನ್ನು ಗಮನಿಸಿದ್ದರು. ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಪೊಲೀಸರು, ಅಲ್ಲಿ ಸಿಕ್ಕ ಕಿವಿಯೋಲೆ, ಬಳೆ, ಕಾಲುಂಗರ ಸಂಗ್ರಹಿಸಿ, ತನಿಖೆ ಚುರುಕುಗೊಳಿಸಿದ್ದರು. ಶಕುಂತಲಾ ಅವರ ಸಹೋದರಿಯನ್ನು ಠಾಣೆಗೆ ಕರೆಯಿಸಿದ ಪೊಲೀಸರು ಕಿವಿಯೋಲೆಗಳನ್ನು ತೋರಿಸಿ, ಗುರುತು ಪತ್ತೆಹಚ್ಚುವಂತೆ ಕೋರಿದರು. ಆ ಕಿವಿಯೋಲೆಗಳನ್ನು ಜಾತ್ರೆಯಲ್ಲಿ ತಾನೇ ಶಕುಂತಲಾಳಿಗೆ ಕೊಡಿಸಿದ್ದಾಗಿ ಅವರ ಸಹೋದರಿ ತಿಳಿಸಿದರು. ಇದರಿಂದ ಮೃತದೇಹ ಶಕುಂತಲಾ ಅವರದ್ದೇ ಎಂಬುದು ಖಚಿತವಾಯಿತು.

ಈ ಹಿಂದೆ ಕುಟುಂಬದ ಸದಸ್ಯರನ್ನು ವಿಚಾರಣೆಗೊಳಪಡಿಸಿದಾಗ ಪೊಲೀಸರಿಗೆ ಮಹಿಳೆ ಕೊಲೆಯಾಗಿರುವ ಯಾವುದೇ ಅನುಮಾನ ಬಂದಿರಲಿಲ್ಲ. ಆದರೆ, ತಮ್ಮೊಂದಿಗೆ ಹಲವು ತಿಂಗಳವರೆಗೆ ಪತ್ನಿಯನ್ನು ಹುಡುಕಲು ಬಂದಿದ್ದ ಪತಿ ಉಮೇಶನ ಬಗ್ಗೆ ಅನುಮಾನ ಶುರುವಾಯಿತು. ತನಿಖೆ ಚುರುಕುಗೊಳಿಸಿದಾಗ ಅಸಲಿ ವಿಷಯ ಬಯಲಾಯಿತು. ಬೀಳಗಿ ಗ್ರಾಮದ ಮಹಿಳೆಯೊಬ್ಬರ ಜತೆ ಉಮೇಶ ಅನೈತಿಕ ಸಂಬಂಧ ಹೊಂದಿದ್ದ. ಈ ವಿಷಯ ಪತ್ನಿಗೂ ತಿಳಿದು ಮನೆಯಲ್ಲಿ ನಿತ್ಯ ಜಗಳ, ವಾಗ್ವಾದ ನಡೆಯುತ್ತಿತ್ತು. ಅನೈತಿಕ ಸಂಬಂಧಕ್ಕೆ ಅಡ್ಡಿಯಾದ ಪತ್ನಿಯನ್ನು ಮುಗಿಸಲು ಸಂಚು ರೂಪಿಸಿ ಕೊಲೆ ಮಾಡಿದ್ದಾಗಿ ಉಮೇಶ, ಪೊಲೀಸರ ಎದುರು ಒಪ್ಪಿಕೊಂಡ.

ಕೊಲೆ ಪ್ರಕರಣ ಭೇದಿಸುವ ಕಾರ್ಯಾಚರಣೆಯಲ್ಲಿ ಸಿಪಿಐ ವಿಶ್ವನಾಥ ಹಿರೇಗೌಡ್ರ, ಪಿಎಸ್‌ಐಗಳಾದ ಧನುಂಜಯ ಎಂ., ಗೋಣಿಬಸಪ್ಪ, ಎಎಸ್‌ಐಗಳಾದ ಬಸನಗೌಡ ವಸಂತ, ದುರುಗಪ್ಪ, ಸಿಬ್ಬಂದಿ ಶ್ರೀಧರ, ಶರಣಪ್ಪ, ಪ್ರಶಾಂತ, ಪರಶುರಾಮ, ಶಿವಾನಂದ ಸೇರಿ ಇತರರು ಇದ್ದರು.

ನಾಕೌಟ್ ಹಂತಕ್ಕೆ ಮೆಕ್ಸಿಕೊ ಲಗ್ಗೆ

ದಕ್ಷಿಣ ಕೊರಿಯಾ ವಿರುದ್ಧ 1-0 ಅಂತರದ ಗೆಲುವು

ಮೆಕ್ಸಿಕೊ ಪರ ಗೋಲ್ ಗಳಿಸಿದ ಲೂಯಿಸ್ ರೊಮೊ.

ಗ್ವಾಡಲಜರ: ದಕ್ಷಿಣ ಕೊರಿಯಾದ ರಕ್ಷಣಾ ವೈಫಲ್ಯಗಳನ್ನು ಸಮರ್ಥವಾಗಿ ಬಳಸಿಕೊಂಡ ಮೆಕ್ಸಿಕೊ ತಂಡ 1-0 ಅಂತರದಲ್ಲಿ ಗೆಲುವು ಸಾಧಿಸಿತು. ಇದರೊಂದಿಗೆ ಪ್ರಸಕ್ತ ವಿಶ್ವಕಪ್‌ನಲ್ಲಿ ನಾಕೌಟ್ ಹಂತ ಪ್ರವೇಶಿಸಿದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಭಾಜನವಾಯಿತು.

ಗ್ವಾಡಲಜರ ಕ್ರೀಡಾಂಗಣದಲ್ಲಿ ಗುರುವಾರ ತಡರಾತ್ರಿ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಸಹ ಆತಿಥೇಯ ಮೆಕ್ಸಿಕೊ ತಂಡ ಎದುರಾಳಿ ತಂಡದ ಎಲ್ಲನ್ಯೂನತೆಗಳನ್ನು ಬಳಸಿಕೊಂಡಿತು. 2022ರಲ್ಲಿ ಗುಂಪು ಹಂತವನ್ನು ದಾಟಲು ವಿಫಲವಾದ ಮೆಕ್ಸಿಕೊ ತಂಡಕ್ಕೆ ಈ ಗೆಲುವು ಅತ್ಯಂತ ಪ್ರಮುಖವಾಗಿದೆ. ಎಸ್ಟಾಡಿಯೊ ಅಕ್ರಾನ್‌ನಲ್ಲಿ ಕಿಕ್ಕಿರಿದು ತುಂಬಿದ್ದ ತವರು ಪ್ರೇಕ್ಷಕರನ್ನು ನಿರಾಸೆಗೊಳಿಸದ ಮೆಕ್ಸಿಕೊ ಆಟಗಾರರ ಸಂಭ್ರಮಕ್ಕೆ ಕಿಚ್ಚು ಹಚ್ಚಿದ್ದರು.

ದಕ್ಷಿಣ ಕೊರಿಯಾದ ಗೋಲ್‌ಕೀಪರ್ ಕಿಮ್ ಸೆಯುಂಗ್ ಗ್ಯು ಮತ್ತು ಡಿಫೆಂಡರ್ ಲೀ ಗಿ ಹ್ಯುಕ್ ನಡುವಿನ ಪ್ರಮಾದಗಳು ದ್ವಿತೀಯಾರ್ಧದ 50ನೇ ನಿಮಿಷದಲ್ಲಿ ಲೂಯಿಸ್ ರೊಮೊ ಗೋಲ್ ಗಳಿಸಲು ಕಾರಣವಾಯಿತು.

87ನೇ ನಿಮಿಷದಲ್ಲಿ ದಕ್ಷಿಣ ಕೊರಿಯಾ ಆಟಗಾರರು ಸಮಬಲ ಸಾಧಿಸುವ ಅವಕಾಶವನ್ನು ಹೊಂದಿದ್ದರು. ಚೊ ಗ್ಯು ಸುಂಗ್ ಅವರ ಗೋಲ್ ಗಳಿಕೆಯ ಅವಕಾಶವನ್ನು ಮೆಕ್ಸಿಕೊ ಗೋಲ್ ಕೀಪರ್ ರೌಲ್ ರಾಂಜೆಲ್ ಹೆಡರ್ ಮೂಲಕ ತಡೆದು ಮೆಕ್ಸಿಕೊ ತಂಡದ ಹೀರೊ ಆಗಿ ಕಂಗೊಳಿಸಿದರು. ಆಡಿದ ಎರಡು ಪಂದ್ಯಗಳಲ್ಲಿ ಗೆದ್ದು 6 ಅಂಕಗಳನ್ನು ಕಲೆಹಾಕಿದ ಮೆಕ್ಸಿಕೊ, ಗುಂಪಿನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದೆ. ಗುಂಪಿನ ಅಗ್ರ ಎರಡು ತಂಡಗಳು 32ನೇ ಸುತ್ತಿಗೆ ಅರ್ಹತೆ ಪಡೆಯಲಿವೆ.

ಪಂದ್ಯಗಳು

ನೆದರ್ಲೆಂಡ್ಸ್ vs ಸ್ವೀಡನ್
ಪಂದ್ಯ ಆರಂಭ: ರಾತ್ರಿ 10:30
ಸ್ಥಳ: ಹ್ಯೂಸ್ಟನ್

ಜರ್ಮನಿ vs ಐವರಿ ಕೋಸ್ಟ್
ಪಂದ್ಯ ಆರಂಭ: ಮಧ್ಯರಾತ್ರಿ 1:30
ಸ್ಥಳ: ಟೊರಾಂಟೊ

ಇಕ್ವಡಾರ್ vs ಕ್ಯೂರಾಸಾವೊ
ಪಂದ್ಯ ಆರಂಭ: ಬೆಳಗ್ಗೆ 5:30
ಸ್ಥಳ: ಕೆನ್ಸಾಸ್ ಸಿಟಿ

ಟ್ಯುನಿಷಿಯಾ vs ಜಪಾನ್
ಪಂದ್ಯ ಆರಂಭ: ಬೆಳಗ್ಗೆ 9:30
ಸ್ಥಳ: ಮಾಂಟೆರ್ರಿ

ಸ್ಪೇನ್ vs ಸೌದಿ ಅರೇಬಿಯಾ
ಪಂದ್ಯ ಆರಂಭ: ರಾತ್ರಿ 9:30
ಸ್ಥಳ: ಅಟ್ಲಾಂಟಾ

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಅಂಕ ಹಂಚಿಕೊಂಡ ದಕ್ಷಿಣ ಆಫ್ರಿಕಾ, ಜೆಕ್ ಗಣರಾಜ್ಯ

ಅಟ್ಲಾಂಟಾ: ಇಲ್ಲಿ ನಡೆದ 'ಕೆ' ಗುಂಪಿನ ಪಂದ್ಯದಲ್ಲಿ ಜೆಕ್ ಗಣರಾಜ್ಯ ಮತ್ತು ದಕ್ಷಿಣ ಆಫ್ರಿಕಾ 1-1 ಗೋಲ್‌ಗಳಿಂದ ಡ್ರಾ ಸಾಧಿಸಿ, ತಲಾ ಒಂದು ಅಂಕ ಹಂಚಿಕೊಂಡರೆ, ಲಾಸ್ ಏಂಜಲೀಸ್‌ನಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಸ್ವಿಟ್ಜರ್ಲೆಂಡ್ ತಂಡ 4-1 ಗೋಲ್‌ಗಳಿಂದ ಬೋಸ್ನಿಯಾ/ಹರ್ಜೆಗೋವಿನಾ ತಂಡದ ವಿರುದ್ಧ ಸುಲಭ ಜಯ ಗಳಿಸಿತು.

ರಾಹುಲ್, ಜೈಸ್ವಾಲ್ ಮೇಲೆ ಕಣ್ಣು

ಆಫ್ಘನ್ ವಿರುದ್ಧದ 3ನೇ ಏಕದಿನ ಇಂದು

ಭಾರತ ತಂಡಕ್ಕೆ ಕ್ಲೀನ್‌ಸ್ವೀಪ್ ಗುರಿ

ಚೆನ್ನೈ: ಹಿಂದಿನ 2 ಪಂದ್ಯಗಳಲ್ಲಿ ಹಲವು ಪ್ರಯೋಗಗಳ ಜತೆಗೆ ಅಧಿಕಾರಯುತ ಪ್ರದರ್ಶನ ನೀಡಿರುವ ಭಾರತ ತಂಡ ಶನಿವಾರ ಅಫಘಾನಿಸ್ತಾನ ವಿರುದ್ಧ ನಡೆಯಲಿರುವ 3ನೇ ಹಾಗೂ ಅಂತಿಮ ಏಕದಿನ ಪಂದ್ಯವನ್ನು ಗೆದ್ದು ಸರಣಿಯನ್ನು ಕ್ಲೀನ್ ಸ್ವೀಪ್ ಮಾಡುವ ಗುರಿ ಹೊಂದಿದೆ. ಜತೆಗೆ ಹಿಂದಿನ ಪಂದ್ಯದಲ್ಲಿ ಲಯ ತಪ್ಪಿರುವ ಕೆ. ಎಲ್. ರಾಹುಲ್ ಮತ್ತು ಫಾರ್ಮ್‌ಗೆ ಮರಳಲು ಹೆಣಗಾಡುತ್ತಿರುವ ಜೈಸ್ವಾಲ್ ಮೇಲೆ ಟೀಮ್ ಮ್ಯಾನೇಜ್‌ಮೆಂಟ್ ಕಣ್ಣಿಟ್ಟಿದೆ.

ರಾಹುಲ್ ಏಕದಿನ ತಂಡದಲ್ಲಿ ಸ್ಥಾನ ಖಾತ್ರಿಪಡಿಸಿಕೊಂಡರೆ ಯಾವುದೇ ಅಚ್ಚರಿ ಇಲ್ಲ, ಆದರೆ ಹಲವು ಆಟಗಾರರು ತಂಡಕ್ಕೆ ಸೇರ್ಪಡೆಯಾಗಲು ಪೈಪೋಟಿ ನಡೆಸುತ್ತಿರುವ ಹೊತ್ತಿನಲ್ಲಿ ಅವರ ಫಾರ್ಮ್ ನಿರ್ಣಾಯಕವಾಗಲಿದೆ. 2025ರ ಡಿಸೆಂಬರ್ ನಂತರ ಮೊದಲ ಬಾರಿಗೆ 50 ಓವರ್‌ಗಳ ಮಾದರಿಯ ತಂಡಕ್ಕೆ ಮರಳಿರುವ ಜೈಸ್ವಾಲ್, ಲಖನೌದಲ್ಲಿ ಆಫ್ಘನ್ ವಿರುದ್ಧ ನಡೆದ ಎರಡನೇ ಪಂದ್ಯದಲ್ಲಿ ಕೇವಲ 4 ರನ್‌ಗಳಿಗೆ ಕುಸಿದರು. ಆದಾಗ್ಯೂ, ನಿರ್ಣಾಯಕ ಪಂದ್ಯದಲ್ಲಿ ತಮ್ಮ ಅಸ್ತಿತ್ವ ಕಂಡುಕೊಳ್ಳಲು ಹೇಗೆ ಯೋಜಿಸುತ್ತಾರೆ ಎಂಬುದು ಅವರ ಭವಿಷ್ಯವನ್ನು ಅವಲಂಬಿಸಿದೆ. ಇನ್ನು ಸಿಕ್ಕ ಅವಕಾಶವನ್ನು ಎರಡು ಕೈಯಲ್ಲಿ ಬಾಚಿಕೊಳ್ಳುತ್ತಿರುವ ಇಶಾನ್ ಕಿಶನ್, ತಂಡದಲ್ಲಿ ಕಾಯಂ ಸದಸ್ಯರಾಗಲು ಪಣತೊಟ್ಟಂತಿದೆ. ಹಾಗೆಯೇ ಹಿರಿಯ ಆಟಗಾರ ವಿರಾಟ್ ಕೊಹ್ಲಿ ಅವರ ಅನುಪಸ್ಥಿತಿಯಲ್ಲೂ ಅಗ್ರ ಕ್ರಮಾಂಕದ ಬ್ಯಾಟಿಂಗ್ ಜವಾಬ್ದಾರಿಗಳ ನೇತೃತ್ವ ವಹಿಸಿರುವ ನಾಯಕ ಶುಭ್ಮನ್ ಗಿಲ್, ಮತ್ತೆ ಆಕರ್ಷಣೆಯಾಗಿದ್ದಾರೆ. ಅತ್ತ ಸತತ ಎರಡು ಪಂದ್ಯಗಳಲ್ಲಿ ಸೋತು ಸರಣಿ ಕಳೆದುಕೊಂಡಿರುವ ಆಫ್ಘನ್ ತಂಡ ಅಂತಿಮ ಪಂದ್ಯದಲ್ಲಿ ಪುಟಿದೇಳುವ ಮೂಲಕ ವೈಟ್ ವಾಷ್ ಮುಖಭಂಗ ತಪ್ಪಿಸಲು ಕಾತರಿಸುತ್ತಿದೆ. **ಪಂದ್ಯ:** ಮಧ್ಯಾಹ್ನ 1:30

ವಿಶ್ವಕಪ್‌ನಿಂದ ಶ್ರೇಯಾಂಕಾ ಔಟ್

ಲೀಡ್ಸ್: ಪಾದದ ಗಾಯಕ್ಕೆ ಒಳಗಾಗಿರುವ ಆಫ್ ಸ್ಪಿನ್ನರ್ ಕನ್ನಡತಿ ಶ್ರೇಯಾಂಕಾ ಪಾಟೀಲ್ ಪ್ರಸ್ತುತ ನಡೆಯುತ್ತಿರುವ ಮಹಿಳೆಯರ ಟಿ20 ವಿಶ್ವಕಪ್‌ನಿಂದ ಹೊರಬಿದ್ದಿದ್ದಾರೆ. ಇದು ಭಾರತ ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ. ಶ್ರೇಯಾಂಕಾ ಅವರ ಸ್ಥಾನಕ್ಕೆ ಅನ್‌ಕ್ಯಾಪ್ಡ್ ಆಟಗಾರ್ತಿ ಪ್ರೇಮಾ ರಾವತ್ ಆಯ್ಕೆಯಾಗಿದ್ದಾರೆ.

ಬುಧವಾರ ನೆದರ್ಲೆಂಡ್ಸ್ ವಿರುದ್ಧ ಭಾರತ 95 ರನ್‌ಗಳ ಜಯ ಗಳಿಸಿದ ವೇಳೆ 23 ವರ್ಷದ ಶ್ರೇಯಾಂಕಾ ಗಾಯಗೊಂಡಿದ್ದರು. ಪವರ್ ಪ್ಲೇನ ಅಂತಿಮ ಓವರ್ ವೇಳೆ ಚೆಂಡನ್ನು ತಡೆಯುವ ಧಾವಂತದಲ್ಲಿದ್ದ ಪಾಟೀಲ್ ಅವರ ಬಲಗಾಲು ಉಳುಕಿತು. ಕೂಡಲೇ ಮೈದಾನಕ್ಕೆ ಆಗಮಿಸಿದ ಫಿಸಿಯೊ ಅವರಿಗೆ ಆರೈಕೆ ಮಾಡಿದರು. ಆದಾಗ್ಯೂ ಅವರು ನಡೆಯಲು ಸಾಧ್ಯವಾಗದ ಕಾರಣ ಅವರನ್ನು ಸ್ಟ್ರೆಚರ್‌ನಲ್ಲಿ ಮೈದಾನದಿಂದ ಹೊರಕ್ಕೆ ಕರೆದೊಯ್ಯಲಾಯಿತು.

ಭಾರತ ವಿಶ್ವಕಪ್ ತಂಡದಲ್ಲಿ ಶ್ರೇಯಾಂಕಾ ಪಾಟೀಲ್ ಅವರ ಬದಲಿಗೆ ಪ್ರೇಮ ರಾವತ್ ಅವರನ್ನು ಸೇರ್ಪಡೆಗೊಳಿಸಲು ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ತಾಂತ್ರಿಕ ಸಮಿತಿ ಒಪ್ಪಿಗೆ ಸೂಚಿಸಿದೆ ಎಂದು ಐಸಿಸಿ ತಿಳಿಸಿದೆ.

ರಕ್ಷಣಾ ವೈಫಲ್ಯಕ್ಕೆ ದಂಡ ತೆತ್ತ ಕತಾರ್

ಕೆನಡಾ ಪರ ಜೊನಾಥನ್ ಡೇವಿಡ್ ಹ್ಯಾಟ್ರಿಕ್ ಗೋಲ್



ವಾಂಕೋವರ್: ರೆಡ್ ಕಾರ್ಡ್‌ಗಳು ಮತ್ತು ರಕ್ಷಣಾ ವೈಫಲ್ಯಗಳ ಪರಿಣಾಮ ಕಳೆದ ವಿಶ್ವಕಪ್ ಆತಿಥ್ಯ ವಹಿಸಿದ್ದ ಕತಾರ್ ತಂಡವು ಸಹ ಆತಿಥೇಯ ಕೆನಡಾ ತಂಡದ ವಿರುದ್ಧ ಹೀನಾಯ ಸೋಲಿನೊಂದಿಗೆ ಪ್ರಸಕ್ತ ವಿಶ್ವಕಪ್ ಅಭಿಯಾನ ಆರಂಭಿಸಿದೆ.

ವಾಂಕೋವರ್ ಕ್ರೀಡಾಂಗಣದಲ್ಲಿ ಗುರುವಾರ ತಡರಾತ್ರಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಕೆನಡಾ 6-0 ಗೋಲ್‌ಗಳ ಅಂತರದಿಂದ ಅಧಿಕಾರಯುತ ಜಯ ಗಳಿಸಿತು.

ಪ್ರಥಮಾರ್ಧ ಮತ್ತು ದ್ವಿತೀಯಾರ್ಧದಲ್ಲಿ ಕ್ರಮ'ವಾಗಿ ಹೋಮಮ್ ಅಹ್ಮದ್ (33ನೇ ನಿ.)ಮತ್ತು ಆಸಿಮ್ ಮಡಿಬೊ (51ನೇ ನಿ.) ರೆಡ್ ಕಾರ್ಡ್‌ಗೆ ಗುರಿಯಾಗಿದ್ದು, ತಂಡದ ಹಿನ್ನಡೆಗೆ ಪ್ರಮುಖ ಕಾರಣವಾಯಿತು. ಇದಲ್ಲದೆ, ಕತಾರ್ ಗೋಲ್ ಕೀಪರ್ ಮಹಮೂದ್ ಅಬುನಾದ್ ಅವರ ನೀರಸ ಪ್ರದರ್ಶನ ತಂಡಕ್ಕೆ ಮುಳ್ಳಾಯಿತು.

ಕೆನಡಾ ತಂಡದ ಪರ ಜೊನಾಥನ್ ಡೇವಿಡ್(29, 45+3, 90+2ನೇ ನಿ.) ಹ್ಯಾಟ್ರಿಕ್ ಗೋಲ್ ಗಳಿಸಿದರೆ, ಮೊಹಮ್ಮದ್ ಮನ್ನೈ (75ನೇ ನಿ. ಉಡುಗೊರೆ ಗೋಲ್), ನಾಥನ್ ಸಿಲಿಬಾ (64ನೇ ನಿ.) ಮತ್ತು ಸೈಲ್ ಲ್ಯಾರಿನ್(16ನೇ ನಿ.) ತಲಾ ಒಂದು ಗೋಲ್ ಗಳಿಸಿದರು. ಹಾಲಿ ವಿಶ್ವಕಪ್‌ನಲ್ಲಿ ಅರ್ಜೆಂಟೀನಾದ ಸ್ಟಾರ್ ಆಟಗಾರ ಲಯೊನೆಲ್ ಮೆಸ್ಸಿ ನಂತರ ಹ್ಯಾಟ್ರಿಕ್ ಗೋಲ್ ಗಳಿಸಿದ ಎರಡನೇ ಆಟಗಾರ ಎಂಬ ಶ್ರೇಯಕ್ಕೆ ಜೊನಾಥನ್ ಡೇವಿಡ್ ಪಾತ್ರರಾದರು.

2 ಪ್ರಸಕ್ತ ಫಿಫಾ ವಿಶ್ವಕಪ್ ಫುಟ್ಬಾಲ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಗೋಲ್ ಗಳಿಸಿದ ಜೊನಾಥನ್ ಡೇವಿಡ್ ಎರಡನೇ ಆಟಗಾರ. ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಮೊದಲ ಆಟಗಾರ.

2ನೇ ಪಂದ್ಯಕ್ಕೂ ನೇಮರ್ ಅಲಭ್ಯ

ಮೊರಿಸ್ಟೌನ್: ಗಾಯದಿಂದಾಗಿ ನೇಮರ್ ಪ್ರಸಕ್ತ ವಿಶ್ವಕಪ್‌ನಲ್ಲಿ ಬ್ರೆಜಿಲ್‌ನ 2ನೇ ಪಂದ್ಯದಿಂದ ಹೊರಗುಳಿದಿದ್ದಾರೆ.

ಫಿಲಿಡೆಲ್ಫಿಯಾದಲ್ಲಿ ಹೈಟಿ ವಿರುದ್ಧದ ಶುಕ್ರವಾರದ ಪಂದ್ಯಕ್ಕೆ ನೇಮರ್ ತಂಡಕ್ಕೆ ಲಭ್ಯರಿಲ್ಲ ಎಂದು ಬ್ರೆಜಿಲ್ ಫುಟ್ಬಾಲ್ ಫೆಡರೇಶನ್ ಗುರುವಾರ ಹೇಳಿದೆ. ''ಅವರ ಚೇತರಿಕೆ ಪ್ರಕ್ರಿಯೆಯ ಅಂತಿಮ ಹಂತವನ್ನು ಉತ್ತಮಗೊಳಿಸಲು ಅವರು ನ್ಯೂಜೆರ್ಸಿಯಲ್ಲಿ ಉಳಿಯುತ್ತಾರೆ'' ಎಂದು ಕಾನ್ಫಡರೇಶನ್ ಹೇಳಿಕೆಯಲ್ಲಿ ತಿಳಿಸಿದೆ.

ಜರ್ಮನಿಗೆ ಮಣಿದ ಭಾರತ

ಎಫ್‌ಐಎಚ್ ಪ್ರೊ ಲೀಗ್

ರೋಟರ್‌ಡ್ಯಾಮ್: ಪಂದ್ಯದ ಕಡೆಯ ಕ್ಷಣದಲ್ಲಿ ಮೈಮರೆತು ಎರಡು ಗೋಲ್ ಬಿಟ್ಟುಕೊಟ್ಟ ಪರಿಣಾಮ ಭಾರತ ತಂಡವು ಎಫ್‌ಐಎಚ್ ಪ್ರೊ ಲೀಗ್ ಪಂದ್ಯದಲ್ಲಿ ಹಾಲಿ ವಿಶ್ವ ಚಾಂಪಿಯನ್ಸ್ ಜರ್ಮನಿ ಎದುರು 1-2ರಲ್ಲಿ ಪರಾಭವಗೊಂಡಿತು.

ಗುರುವಾರ ತಡರಾತ್ರಿ ನಡೆದ ಪಂದ್ಯದ ಮೊದಲಾರ್ಧದಲ್ಲಿ ಉಭಯ ತಂಡಗಳು ಗೋಲ್ ಗಳಿಸಲು ವಿಫಲವಾದವು. ಆದರೆ 38ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಮೂಲಕ ಜುಗ್ರಾಜ್ ಸಿಂಗ್ ಭಾರತಕ್ಕೆ 1-0 ಅಂತರದ ಮುನ್ನಡೆ ಕಲ್ಪಿಸಿದರು. ಆದರೆ ಅಂತಿಮ ಕ್ವಾರ್ಟರ್‌ನಲ್ಲಿ ಎರಡು ಗೋಲ್ ಗಳಿಸಿದ ಜರ್ಮನಿ ರೋಚಕ ಗೆಲುವು ಸಾಧಿಸಿತು. ಪಂದ್ಯ ಮುಕ್ತಾಯಕ್ಕೆ 4 ನಿಮಿಷ ಗಳಿರುವಾಗ ಜಸ್ಟಸ್ ವೀಗಾಂಡ್ ಗೋಲ್ ಗಳಿಸಿದರೆ, ಅಂತಿಮ ನಿಮಿಷದಲ್ಲಿ ಜಾಕೋಬ್ ಬ್ರಿಲ್ಲಾ ಗೆಲುವಿನ ಗೋಲ್ ದಾಖಲಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ಭಾರತ 3-1ರಲ್ಲಿ ಜರ್ಮನಿಗೆ ಆಘಾತ ನೀಡಿತ್ತು. ಭಾರತ ತನ್ನ ಮುಂದಿನ ಪಂದ್ಯದಲ್ಲಿ ಜೂನ್ 21ರಂದು ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದೆ.

ಭಾರತಕ್ಕೆ ಇಂದು ಚಿಲಿ ಚಾಲೆಂಜ್

ಆಕ್ಲೆಂಡ್: ಟೂರ್ನಿಯಲ್ಲಿ ಪಾರಮ್ಯ ಸಾಧಿಸಿರುವ ಭಾರತ ಮಹಿಳಾ ತಂಡ ಎಫ್‌ಐಎಚ್ ನೇಷನ್ಸ್ ಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಶನಿವಾರ ಚಿಲಿ ತಂಡದ ಸವಾಲು ಎದುರಿಸಲಿದೆ.

ಲೀಗ್ ಹಂತದಲ್ಲಿ ಸಂಪೂರ್ಣ ಪ್ರಭುತ್ವ ಕಾಯ್ದುಕೊಂಡಿರುವ ಸಲಿಮಾ ಟೇಟೆ ಬಳಗ, ತನಗಿಂತ ಕಡಿಮೆ ರ‍್ಯಾಂಕ್‌ನ ಚಿಲಿ ಎದುರು ಗಮನಾರ್ಹ ಪ್ರದರ್ಶನ ನೀಡುವ ನಿರೀಕ್ಷೆಯಲ್ಲಿದೆ. ಟೂರ್ನಿಯ ವಿಜೇತರು ಮುಂದಿನ ವರ್ಷ ಎಲೈಟ್ ಎಫ್‌ಐಎಚ್ ಪ್ರೊ ಲೀಗ್‌ಗೆ ಅರ್ಹತೆ ಗಳಿಸಲಿದೆ.

ಹಾರ್ಸ್ ಪವರ್

ಬೆಂಗಳೂರು ರೇಸ್ ■ ಅಶ್ವಬಂಧು

ಉತ್ತಮ ಅವಕಾಶದಲ್ಲಿ ಮೇನ್ ಮ್ಯಾಜಿಕ್

ಕಿಶನ್ ಥಾಮಸ್ ತರಬೇತಿಯಲ್ಲಿ ಪಳಗಿರುವ ಮೇನ್ ಮ್ಯಾಜಿಕ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ ಚೀಫ್ ಜಸ್ಟೀಸ್ ಕಪ್ ಗೆಲ್ಲುವ ಅವಕಾಶ ಹೊಂದಿದೆ. 7 ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ಡಿಜಿಟಲ್ ಎಂಪ್ರೆಸ್ 6, ದಿ ಆರ್ಚರ್ 5, ಅಸ್ಟೇರಿಯಸ್ 1
- 2ನೇ ರೇಸ್: ಎಕ್ಸೀಡ್ 8, ನಾಟಿ ಕ್ರೂರಿಷ್ 9, ಆಲಂಗಿರ್ 11
- 3ನೇ ರೇಸ್: ಸ್ಟೆಲ್ಲಾ ಮಾರಿಸ್ 1, ಆರ್ಟ್ ಆಫ್ ರೊಮಾನ್ಸ್ 2, ಸೀ ಡೈಮಂಡ್ 3
- 4ನೇ ರೇಸ್- ರಾಯಲ್ ಲೆಗಸಿ 6, ಶಟ್ಟರ್‌ಫ್ಲೈ 7, ಎಡಿಷನ್ 1
- 5ನೇ ರೇಸ್: ಮೇನ್ ಮ್ಯಾಜಿಕ್ 3, ಮಿರಾಕಲ್ ಸ್ಟಾರ್ 4, ಪೊಸಿಟಾನೊ 5
- 6ನೇ ರೇಸ್: ಬ್ರೈಟ್ ಥಂಡರ್ 2, ಡಬಲ್ ಯುವರ್ ಮನಿ 9, ವಿಂಡ್‌ಕ್ಲೀವರ್ 6
- 7ನೇ ರೇಸ್: ವ್ಯಾಲಿಯಂಟ್ ಸ್ಟ್ರೀಮ್ 4, ಈಗಲ್ ಐ 1, ಗಾಡೆಸ್ ಆಫ್ ವಾರ್ 10

ಮಲ್ಟಿ-ಲೆಗ್ ಪೂಲ್ಸ್:

- ಜಾಕ್‌ಪಾಟ್: 3,4,5,6,7; 1ನೇ ಟ್ರಿಬಲ್: 3,4,5; 2ನೇ ಟ್ರಿಬಲ್: 6,7,8

ಅತ್ಯುತ್ತಮ ಬೆಟ್: ವ್ಯಾಲಿಯಂಟ್ ಸ್ಟ್ರೀಮ್

ಭಾರತಕ್ಕೆ ಬೆಳ್ಳಿ ಪದಕ

ವಿಶ್ವ ತಂಡ ಸ್ನೂಕರ್ ಚಾಂಪಿಯನ್‌ಷಿಪ್

ಗುವಾಂಗ್‌ಡಾಂಗ್(ಚೀನಾ): ನಿರೀಕ್ಷಿತ ಪ್ರದರ್ಶನ ನೀಡಲು ವಿಫಲಗೊಂಡ ಭಾರತ ತಂಡ ವಿಶ್ವ ತಂಡ ಸ್ನೂಕರ್ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಚೀನಾ 'ಎ' ತಂಡದ ವಿರುದ್ಧ ವೀರೋಚಿತ ಸೋಲನುಭವಿಸಿ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟಿತು.

ಶುಕ್ರವಾರ ಸ್ವರ್ಣ ಪದಕಕ್ಕಾಗಿ ನಡೆದ ಫೈನಲ್‌ನಲ್ಲಿ ಭಾರತ 2-3 ಫ್ರೇಮ್‌ಗಳಿಂದ ವೀರೋಚಿತ ಸೋಲು ಕಂಡಿತು. ಪಂದ್ಯ 2-2ರಲ್ಲಿ ಸಮಬಲಗೊಂಡಾಗ ಭಾರತದ ಆದಿತ್ಯ ಮೆಹ್ತಾ ಮೇಲೆ ನಿರ್ಣಾಯಕ ಜವಾಬ್ದಾರಿ ಬಿದ್ದಿತು. ಆದರೆ ಲಿ ಚೆಂಗ್ಜೀ ಅವರ ಸವಾಲನ್ನು ಮೀರಲು ಭಾರತೀಯ ಆಟಗಾರನಿಗೆ ಸಾಧ್ಯವಾಗಲಿಲ್ಲ.

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ
TRAI
4-7ನೇ ಮಹಡಿ, ಟವರ್-ಎಫ್, ವಿಶ್ವ ವಾಣಿಜ್ಯ ಕೇಂದ್ರ, ನೌರೋಜಿ ನಗರ, ನವದೆಹಲಿ-110029

ಖಾಲಿಹುದ್ದೆ ಸುತ್ತೋಲೆ ಸಂಖ್ಯೆ ಸಿ-01/2026-27
ನೋಟಿಸ್

ವಿಷಯ: TRAIನ ಪ್ರಾದೇಶಿಕ ಕಚೇರಿಗಳಲ್ಲಿ (ಹೈದರಾಬಾದ್/ಕೋಲ್ಕತ್ತಾ/ಭೋಪಾಲ್/ಬೆಂಗಳೂರು) ಗುತ್ತಿಗೆ ಆಧಾರದ ಮೇಲೆ ಸಲಹೆಗಾರರನ್ನು (ನಿವೃತ್ತ ಸರ್ಕಾರಿ ನೌಕರರು) ತೊಡಗಿಸಿಕೊಳ್ಳುವುದು. ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕದ ವಿಸ್ತರಣೆ.

TRAIನ ಖಾಲಿಹುದ್ದೆ ಸುತ್ತೋಲೆ ಸಂಖ್ಯೆ ಸಿ-01/2026-27 ದಿನಾಂಕ 15ನೇ ಮೇ, 2026ರ ಉಲ್ಲೇಖ ಸಂಬಂಧ ತನ್ನ ಪ್ರಾದೇಶಿಕ ಕಚೇರಿಗಳಲ್ಲಿ (ಹೈದರಾಬಾದ್ / ಕೋಲ್ಕತ್ತಾ / ಬೆಂಗಳೂರು / ಭೋಪಾಲ್) ಗುತ್ತಿಗೆ ಆಧಾರದ ಮೇಲೆ ಓರ್ವ (01) ಸಲಹೆಗಾರನನ್ನು ತೊಡಗಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2. ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು ಈಗ 30ನೇ ಜೂನ್, 2026 ರವರೆಗೆ ವಿಸ್ತರಿಸಲಾಗಿದೆ.
3. ಹೆಚ್ಚಿನ ವಿವರಗಳನ್ನು TRAIನ ವೆಬ್‌ಸೈಟ್ www.trai.gov.in ನಿಂದ ಪಡೆಯಬಹುದು.

CBC 06202/11/0021/2627

ಗ್ರೇಟರ್ ಬೆಂಗಳೂರು ಪ್ರಾಧಿಕಾರ
ಉಪ ಆಯುಕ್ತ ರವರ ಕಚೇರಿ, ಐಟಿ ವಿಭಾಗ, ಅನೆಕ್ಸರ್ 2 ಕಟ್ಟಡ, ಜಿಬಿಎ ಪ್ರಧಾನ ಕಚೇರಿ, ಎನ್.ಆರ್. ಸ್ಕ್ವೇರ್, ಬೆಂಗಳೂರು-560002.

ನಂ. ಜಿಬಿಎ/2026-27/SE0028/2ನೇ ಕರೆ ದಿನಾಂಕ : 19.06.2026

ಟೆಂಡರ್ ವೇಳಾಪಟ್ಟಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಗೆ 92 ಐ ಟಿ ಮಾನವಶಕ್ತಿಯನ್ನು ಇ - ಪ್ರೊಕ್ಯೂರ್ಮೆಂಟ್ ಅಡಿಯಲ್ಲಿ ಒದಗಿಸುವುದು

1. ಟೆಂಡರ್ ಆಹ್ವಾನಿಸುವ ಪ್ರಾಧಿಕಾರ: ಉಪ ಆಯುಕ್ತರು- ಐಟಿ, ಜಿಬಿಎ
2. ಟೆಂಡರ್ ಸ್ವೀಕರಿಸುವ ಪ್ರಾಧಿಕಾರ: ವಿಶೇಷ ಆಯುಕ್ತರು - ಐಟಿ, ಜಿಬಿಎ
3. ಟೆಂಡರ್ ಉಲ್ಲೇಖ : GBA/2026-27/SE0028/CALL-2
4. ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಬಿಡ್ ದಾಖಲೆ ಡೌನ್‌ಲೋಡ್ ಮಾಡಲು ಲಭ್ಯವಿರುವ ದಿನಾಂಕ: 19.06.2026
5. ಸ್ಪಷ್ಟೀಕರಣವನ್ನು ಸಲ್ಲಿಸಲು ಕೊನೆಯ ದಿನಾಂಕ: 22/06/2026 @ ಮಧ್ಯಾಹ್ನ 1.00 ಗಂಟೆಗೆ
6. ಬಿಡ್ ಪೂರ್ವ ಸಭೆ: 23/06/2026 ಸಂಜೆ 4.00 ಗಂಟೆಗೆ
7. ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 30/06/2026 @ ಸಂಜೆ 5.00 ಗಂಟೆಗೆ
8. ಟೆಂಡರ್ ತೆರೆಯುವ ಸಮಯ ಮತ್ತು ದಿನಾಂಕ: ಪೂರ್ವ ಅರ್ಹತೆ ಮತ್ತು ತಾಂತ್ರಿಕ ಬಿಡ್ ಮತ್ತು ತಾಂತ್ರಿಕ ಮೌಲ್ಯಮಾಪನ: 01/07/2026 ಸಂಜೆ 05.10 ಗಂಟೆಗೆ.
9. ಟೆಂಡರ್ ತೆರೆಯುವ ಸಮಯ ಮತ್ತು ದಿನಾಂಕ ವಾಣಿಜ್ಯ ಬಿಡ್ (ತಾತ್ಕಾಲಿಕ) : 04/07/2026 @ ಬೆಳಿಗ್ಗೆ 11.00 ಗಂಟೆಗೆ
10. ಪ್ರೀ ಬಿಡ್ ಮೀಟಿಂಗ್ ನಡೆಯುವ ಸ್ಥಳ: ವಿಶೇಷ ಆಯುಕ್ತರ ಕಚೇರಿ, ಕಂದಾಯ ಮತ್ತು ಐಟಿ ವಿಭಾಗ, ಅನುಬಂಧ 1 ಕಟ್ಟಡ, ಜಿಬಿಎ ಪ್ರಧಾನ ಕಚೇರಿ, ಎನ್‌ಆರ್ ಸ್ಕ್ವೇರ್, ಬೆಂಗಳೂರು-560002
11. ಸಂಪರ್ಕಿಸಬೇಕಾದ ವಿಳಾಸ: ಉಪ ಆಯುಕ್ತರವರ ಕಚೇರಿ, ಐಟಿ ವಿಭಾಗ, ಅನೆಕ್ಸರ್ 2 ಕಟ್ಟಡ, ಜಿಬಿಎ ಪ್ರಧಾನ ಕಚೇರಿ, ಎನ್ ಆರ್ ಸ್ಕ್ವೇರ್, ಬೆಂಗಳೂರು- 560002. ಸಂಪರ್ಕಿಸುವ ಮೊಬೈಲ್ ಸಂಖ್ಯೆ - +91 9986035230. ಇ-ಮೇಲ್ ಐಡಿ: dycomm-it@bbmp.gov.in
12. ಟೆಂಡರ್ ತೆರೆಯುವ ಸ್ಥಳ: ಆನ್‌ಲೈನ್ ಕೆಪಿಪಿ ಪೋರ್ಟಲ್‌ನಲ್ಲಿ
13. ಇ.ಎಂ.ಡಿ ಮೊತ್ತ : ರೂ.15,00,000/- (ಹದಿನೈದು ಲಕ್ಷ ರೂಪಾಯಿಗಳು ಮಾತ್ರ)

ಸೂಚನೆ : ಪೂರ್ಣಗೊಳಿಸಿದ ಟೆಂಡರ್ ಅನ್ನು ಟೆಂಡರ್ ದಾಖಲೆಗಳಲ್ಲಿ ವಿವರಿಸಿದ ರೀತಿಯಲ್ಲಿ ಮಾತ್ರ ಇ-ಪ್ರೊಕ್ಯೂರ್ಮೆಂಟ್ ವ್ಯವಸ್ಥೆಯ ಮೂಲಕ ನಿಗದಿತ ಕೊನೆಯ ದಿನಾಂಕ ಮತ್ತು ಸಮಯದ ಒಳಗೆ ಅಪ್ಲೋಡ್ ಮಾಡಬೇಕು.
ಸಹಿ/- ಉಪ ಆಯುಕ್ತರು-ಐಟಿ, ಜಿಬಿಎ.

ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ
ಅನ್ಸಾರಿ ನಗರ, ನವದೆಹಲಿ-110029
ಪರೀಕ್ಷಾ ವಿಭಾಗ

ಜಾಹೀರಾತು ಸಂಖ್ಯೆ 04/2026
ನವದೆಹಲಿಯ AIIMSನಲ್ಲಿ ವಿಜ್ಞಾನಿ ಹುದ್ದೆ ನೇಮಕಾತಿ ಪರೀಕ್ಷೆಯ ಜಾಹೀರಾತು (RESA)

ನವದೆಹಲಿಯ AIIMSನಲ್ಲಿ (RESA) ವಿಜ್ಞಾನಿ ನೇಮಕಾತಿ ಪರೀಕ್ಷೆಗಾಗಿ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರಗಳು ಮತ್ತು ಅರ್ಹತೆಯನ್ನು ಅಧಿಕೃತ ವೆಬ್‌ಸೈಟ್ www.aiimsexams.ac.inನಲ್ಲಿ ಪ್ರಕಟವಾದ ಜಾಹೀರಾತಿನಲ್ಲಿ ಕಾಣಬಹುದು. ಪರೀಕ್ಷೆಯನ್ನು ಆನ್‌ಲೈನ್ (CBT) ಮೋಡ್‌ನಲ್ಲಿ ಮಾತ್ರ ನಡೆಸಲಾಗುತ್ತದೆ. ನಂತರ ಶಾರ್ಟ್‌ಲಿಸ್ಟ್ ಮಾಡಿದ ಅಭ್ಯರ್ಥಿಗಳಿಗೆ ಅರ್ಹತಾ ಸ್ಕ್ರೀನಿಂಗ್ ಮತ್ತು DWT (ವಿವರಣಾತ್ಮಕ ಲಿಖಿತ ಪರೀಕ್ಷೆ) ನಡೆಸಲಾಗುತ್ತದೆ.

ಅರ್ಜಿಗಳಿಗೆ ಆನ್‌ಲೈನ್ ನೋಂದಣಿ	
ಆರಂಭ	ಮುಕ್ತಾಯ
15ನೇ ಜೂನ್, 2026 (ಸೋಮವಾರ)	14ನೇ ಜುಲೈ, 2026 ರಂದು ಸಂಜೆ 5.00 ಗಂಟೆಗೆ (ಮಂಗಳವಾರ)
ನೇಮಕಾತಿಯ ಪರೀಕ್ಷಾ ದಿನಾಂಕ	
ಪರೀಕ್ಷಾ ದಿನಾಂಕ	ರಾಜ್ಯದಲ್ಲಿ ಪರೀಕ್ಷಾ ಕೇಂದ್ರ
ನಂತರ ತಿಳಿಸಲಾಗುವುದು	ದೆಹಲಿ/ಎನ್‌ಸಿಆರ್, ಮಹಾರಾಷ್ಟ್ರ, ತಮಿಳುನಾಡು, ಕೇರಳ ಮತ್ತು ಪಶ್ಚಿಮ ಬಂಗಾಳ

ಸೂಚನೆ: ಎಲ್ಲಾ ಅರ್ಜಿದಾರರು AIIMS ವೆಬ್‌ಸೈಟ್ www.aiimsexams.ac.in ಗೆ ನಿಯಮಿತವಾಗಿ ಭೇಟಿ ನೀಡಬೇಕೆಂದು ಸೂಚಿಸಲಾಗಿದೆ. ಏಕೆಂದರೆ ನಂತರದ ಎಲ್ಲಾ ತಿದ್ದುಪಡಿ/ಸೇರ್ಪಡೆ/ನವೀಕರಣಗಳನ್ನು ವೆಬ್‌ಸೈಟ್‌ನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು.

CBC 17112/11/0025/2627
ಸಹಿ/- ಸಹಾಯಕ ನಿಯಂತ್ರಕರು (ಪರೀಕ್ಷೆಗಳು)

ನೈಋತ್ಯ ರೈಲ್ವೆ
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕಾಮಗಾರಿಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಹೆಚ್‌ಇ-ಟಿಆರ್‌ಡಿ-2025-26-ಓಟಿ-29-01 ದಿನಾಂಕ : 13-06-2026

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಗೋಕಾಕ ರೋಡ್ (GKK) ಟ್ರ್ಯಾಕ್ಷನ್ ಸಬ್‌ಸ್ಟೇಷನ್‌ನಲ್ಲಿ 220ಕೆವಿ / 25ಕೆವಿ ಹೆಚ್ಚುವರಿ ಟ್ರ್ಯಾಕ್ಷನ್ ಟ್ರಾನ್ಸ್‌ಫಾರ್ಮರ್‌ನ ವಿನ್ಯಾಸ, ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.	ರೂ. 1,50,17,212.54

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06-07-2026 ರಂದು 15:00 ಗಂಟೆಯವರೆಗೆ

ಟೆಂಡರ್ ಪ್ರಕಟಣೆ ಸಂ. ಹೆಚ್‌ಇ-ಟಿಆರ್‌ಡಿ-2025-26-ಓಟಿ-37-2 ದಿನಾಂಕ : 13-06-2026

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಹುಬ್ಬಳ್ಳಿ ವಿಭಾಗದ ಎಲ್‌ಸಿ ಗೇಟ್‌ಗಳ ಇಂಟರ್‌ಲಾಕಿಂಗ್‌ಗಾಗಿ ಆಕ್ಸಿಲಿಯರಿ ಟ್ರಾನ್ಸ್‌ಫಾರ್ಮರ್‌ನ್ನು ಒದಗಿಸುವುದು.	ರೂ. 2,04,55,859.60

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 06-07-2026 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್ / ಹುಬ್ಬಳ್ಳಿ
ಪಿಯುಬಿ/223/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.
South Western Railway-SWR | SWRRLY | @SWRAILWAYHQ | @sw_railways

ನಗರಸಭಾ ಕಾರ್ಯಾಲಯ, ಹೆಬ್ಬಗೋಡಿ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ
E-Mail: itstaff_ulb_hebbagodi@yahoo.com Ph:080-27833730

ಸಂಖ್ಯೆ:ಹೆ.ನ.ಸ.ಕಾ/ಕ.ಶಾ/21/2026-27 ದಿನಾಂಕ: 05.06.2026

ಸಾರ್ವಜನಿಕ ಪ್ರಕಟಣೆ

ಹೆಬ್ಬಗೋಡಿ ನಗರಸಭೆಯ ಶೇ 24.10, ಶೇ 7.25 ಮತ್ತು ಶೇ 5ರ ಯೋಜನೆಯಡಿ 2025-26ನೇ ಸಾಲಿನವರೆಗೆ ಉಳಿಕೆಯಾಗಿರುವ ಸೌಲಭ್ಯಗಳಿಗೆ ಹಾಗೂ 2026-27ನೇ ಸಾಲಿನ ನಗರಸಭಾ ನಿಧಿ ಮತ್ತು ಎಸ್.ಎಫ್.ಸಿ ಮುಕ್ತನಿಧಿಯಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಬಡಜನರು ಮತ್ತು ವಿಶೇಷಚೇತನರಿಗೆ ಕೆಳಕಂಡ ವೈಯಕ್ತಿಕ ಸೌಲಭ್ಯಗಳಿಗೆ ಅರ್ಜಿಗಳನ್ನು ಅಹ್ವಾನಿಸಲಾಗಿದೆ. (1) ಶೇ 24.10ರ ಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಜನಾಂಗದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಪ್ರೋತ್ಸಾಹಧನ, ಎಂ.ಬಿ.ಬಿ.ಎಸ್/ಬಿ.ಇ ವ್ಯಾಸಾಂಗದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಶಸ್ತ್ರಚಿಕಿತ್ಸಾ ವೆಚ್ಚ ಸಹಾಯಧನ, ಕ್ರೀಡಾಪ್ರೋತ್ಸಾಹಧನ ಹಾಗೂ ಸಣ್ಣ ಉದ್ದಿಮೆ ಸಹಾಯಧನ. (2) ಶೇ 7.25ರ ಯೋಜನೆಯಡಿ ಇತರೆ ಬಡಜನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಪ್ರೋತ್ಸಾಹಧನ. (3) ಶೇ 5ರ ಯೋಜನೆಯಡಿ ವಿಶೇಷಚೇತನರಿಗೆ ಜೀವ ವಿಮೆ ವಾರ್ಷಿಕ ಕಂತು ಪಾವತಿ, ಶಸ್ತ್ರಚಿಕಿತ್ಸಾ ವೆಚ್ಚ ಸಹಾಯಧನ, ವೀಲ್ ಛೇರ್, ಶ್ರವಣಸಾಧನ, ಕ್ರೀಡಾಪ್ರೋತ್ಸಾಹಧನ, ಸಣ್ಣ ಉದ್ದಿಮೆ ಸಹಾಯಧನ ಹಾಗೂ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಪ್ರೋತ್ಸಾಹಧನ. ಹೆಬ್ಬಗೋಡಿ ನಗರಸಭಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಇತರೆ ಬಡಜನ ಮತ್ತು ವಿಶೇಷಚೇತನರು ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವ ಸಾರ್ವಜನಿಕರು ಕಛೇರಿಯಿಂದ ಅರ್ಜಿಯನ್ನು ಪಡೆದು ಭರ್ತಿ ಮಾಡಿ ಸೂಕ್ತ ದಾಖಲೆಗಳೊಂದಿಗೆ **ದಿನಾಂಕ: 15.07.2026** ರೊಳಗೆ ನಗರಸಭಾ ಕಛೇರಿಗೆ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ನಗರಸಭಾ ಕಛೇರಿಯ ಕಲ್ಯಾಣ ಶಾಖೆಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಅಧ್ಯಕ್ಷರು ನಗರಸಭೆ, ಹೆಬಗೋಡಿ | ಸಹಿ/- ಉಪಾಧ್ಯಕ್ಷರು ನಗರಸಭೆ, ಹೆಬ್ಬಗೋಡಿ | ಸಹಿ/- ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ಹೆಬ್ಬಗೋಡಿ | ಸಹಿ/- ಪೌರಾಯುಕ್ತರು ನಗರಸಭೆ, ಹೆಬ್ಬಗೋಡಿ

ವಾಸಸಂಇ/ವಾ.ಪ್ರ/1244/ಶಿರಡಿ ಸಾಯಿ/2026-27

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ಸಿ.ಎ. ನಿವೇಶನ ಖಾತೆ ನಂ.31-511-371, ವಾರ್ಡ್ ನಂ.20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110.

ಸಂ:ಬಿಐಎಎಪಿಎ/ಟಿಪಿ/ಭೂಉನಿ/01/2026-27/821 ದಿನಾಂಕ:18-06-2026

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ:27-01-2009 ಮತ್ತು ತಿದ್ದುಪಡಿ ಆದೇಶ ದಿನಾಂಕ:29-01-2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾಯೋಜನೆಯ ಪ್ರಕಾರ ಭೂಉಪಯೋಗ	ಭೂಉಪಯೋಗ ನಿಗದಿಪಡಿಸಲು ಕೋರಿರುವ ಉದ್ದೇಶ
1	ಶ್ರೀ ಸೂರಜ್ ಮಾಲೋ ಬಿನ್ ರಾಮ್‌ಲಾಲ್ ಜಿ	ದೇವನಹಳ್ಳಿ	ಕಸಬಾ	ಚಿಕ್ಕಸಣ್ಣೆ	51 ಪೈಕಿ	2-14	ಸಾರ್ವಜನಿಕ / ಅರೆಸಾರ್ವಜನಿಕ	ವಸತಿ

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ
ಡಿಐಪಿಆರ್/ಸಿಪಿ/1261/ಸಿಸಿಎಲ್/2026-27

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ
2ನೇ ಮಹಡಿ, ವನವಿಕಾಸ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003.
ದೂರವಾಣಿ ಸಂಖ್ಯೆ: 080-2222 8263, 2222 8264

ಸಂಖ್ಯೆ:STRRPA/TP/CLU/36/2026-27 ದಿನಾಂಕ:18.06.2026

"ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು "ವ್ಯವಸಾಯ" ವಲಯದಿಂದ "ವಾಣಿಜ್ಯ" ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀಟಿ.ವಿ.ಕೃಷ್ಣಮೂರ್ತಿ ಬಿನ್ ಶ್ರೀ ವೀರಣ್ಣ ಗೌಡ, ಐಸಿರಿ ನಿಲಯ, ನಂ.01, 1ನೇ ಮುಖ್ಯರಸ್ತೆ, ಸುಮುಖ ಬಡಾವಣೆ, ಯು.ಎಸ್.ಎ. ಅಪಾರ್ಟ್‌ಮೆಂಟ್, ವಿದ್ಯಾರಣ್ಯಪುರ, ಬೆಂಗಳೂರು ನಗರ	ದೊಡ್ಡಬಳ್ಳಾಪುರ	ಕಸಬಾ	ಕೆಸ್ತೂರು	125/6 125/9	2-02¾ 0-24	ವ್ಯವಸಾಯ	ವಾಣಿಜ್ಯ

ಷರಾ:- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ವಿನ್ಯಾಸವನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿದ್ದು, ಸದರಿ ಪ್ರದೇಶದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಂಡಲ್ಲಿ ವಾಣಿಜ್ಯ ಬೇಡಿಕೆಗಳನ್ನು ಪೂರೈಸುವ ಕಾರ್ಯ ಹಾಗೂ ಬದಲಾವಣೆಯ ಮೂಲಭೂತ ಸೌಕರ್ಯ ಚಟುವಟಿಕೆಯಿಂದಾಗಿ ಸಾರ್ವಜನಿಕರಿಗೆ ಉದ್ಯೋಗ ಅವಕಾಶ ಕಲ್ಪಿಸುವ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸಿರುತ್ತಾರೆ.

ಸಹಿ/- ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.
ಡಿಐಪಿಆರ್/ಸಿಪಿ/1252/ಸಿಸಿಎಲ್/2026-27

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,

ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ–ಆರ್‌ಡಿ 18 ಜಿಆರ್‌ಸಿ 2026 ದಿನಾಂಕ : 18.06.2026

ಅಧಿಸೂಚನೆ

ಸಹಾಯಕ ಆಯುಕ್ತರು, ಕಾರವಾರ ಉಪ ವಿಭಾಗ, ಕಾರವಾರ, ಇವರ ವರದಿಯನ್ನು ಪರಿಗಣಿಸಿದ ತರುವಾಯ ಹಾಗೂಠೇವಣಿದಾರರ ದೂರುಗಳ ಬಗ್ಗೆ, ಯುಕ್ತ ತನಿಖೆಯ ತರುವಾಯ ಜೈದುರ್ಗಾ ಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ.ಸದಾಶಿವಗಡ್, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಸಂಸ್ಥೆಯು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನುಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಜೈದುರ್ಗಾ ಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ಸದಾಶಿವಗಡ್, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆಸಂಸ್ಥೆ ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುಗಳನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನುಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಜೈದುರ್ಗಾ ಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ಸದಾಶಿವಗಡ್, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆಸಂಸ್ಥೆ ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಜೈದುರ್ಗಾ ಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ಸದಾಶಿವಗಡ್, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಸಂಸ್ಥೆಯ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ಸಹಾಯಕ ಆಯುಕ್ತರು, ಕಾರವಾರ ಉಪ ವಿಭಾಗ, ಕಾರವಾರ ಹಾಗೂ ಸಕ್ಷಮ ಪ್ರಾಧಿಕಾರಿಗಳು ಜೈದುರ್ಗಾ ಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ಸದಾಶಿವಗಡ್, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವರದಿಯನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005) ರ ಕರ್ನಾಟಕ ಅಧಿನಿಯಮ, 30) ರ 3ನೇ ಪ್ರಕರಣದ (2) ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನುಮಾಡುತ್ತದೆ:

ಆದೇಶ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30) ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲೆ ನಿರೂಪಿಸಲಾದ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಜೈದುರ್ಗಾ ಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ಸದಾಶಿವಗಡ್, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಸಂಸ್ಥೆಗೆ ಸೇರಿದ ಎನ್ನಲಾದ ಸ್ಥಿರ ಮತ್ತು ಚರಾಸ್ತಿಗಳನ್ನು ಜಪ್ತಿ ಮಾಡುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪರ್ಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಜೈದುರ್ಗಾ ಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ಸದಾಶಿವಗಡ್, ಕಾರವಾರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಸಂಸ್ಥೆಯು ಸಂಗ್ರಹಿಸಲಾದಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಆರ್ಜಿಸಿದ ಎನ್ನಲಾದ ಈ ಆದೇಶದ ಅನುಬಂಧ–1,2 ಮತ್ತು 3 ರಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಸ್ಥಿರಾ ಮತ್ತು ಚರಾಸ್ತಿಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಸ್ಥಿರ ಮತ್ತು ಚರ ಸ್ವತ್ತುಗಳನ್ನು ಅಧಿಕೃತರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1,
ಭೂಮಾಪನ ಮತ್ತು ವಿಶೇಷ ಕೋಶ)

ಅನುಬಂಧ–1

ಕ್ರಮ ಸಂ.	ಸ್ವತ್ತಿನ ವಿವರ (ಚಕ್ಕುಬಂದಿ ಒಳಗೊಂಡಂತೆ)	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕರು	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
1	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/GS/1 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ: ಸುನಿತಾ ರಾಯ್ಕರ ಮನೆ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ : ಖಾಲಿ ಜಾಗ	ಲಿಂಗರಾಜ ಪುತ್ತು ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220505	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸ ಲಾಗುವುದು.	ರೂ. 45,00,000/– ಲಕ್ಷಗಳು	ಈ ಆಸ್ತಿಗಳನ್ನು M/s Bhat developers Sadashivagad, Chittakula, Karwar ಇವರಿಂದ ಶ್ರೀ ಲಿಂಗರಾಜ ಪುತ್ತು ಕಲ್ಗುಟಕರ ಇವರು ಖರೀದಿಸಿರುತ್ತಾರೆ. ದಸ್ತಾವೇಜು ನಂಬರ್: KRW-1-00493/ 2020-21 ರಲ್ಲಿ ನೋಂದಣಿ ಯಾಗಿದೆ. ಈ ಅಂಗಡಿ ಕಟ್ಟಡ ಸಂಖ್ಯೆ: 1840/GS/1, 1840/GS/2, 1840/GS/3, 1840/GS/12, ಇವುಗಳ ಮೇಲೆ ನೋಂದಣಿ ದಾಖಲೆ ಸಂಖ್ಯೆ: KRW-1-01500-2024-25 ರಲ್ಲಿ ಋಣಭಾರವಿರುತ್ತದೆ
2	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/GS/2 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ: ಸುನಿತಾ ರಾಯ್ಕರ ಮನೆ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ : ಖಾಲಿ ಜಾಗ	ಲಿಂಗರಾಜ ಪುತ್ತು ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220506			
3	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/GS/3 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ: ಸುನಿತಾ ರಾಯ್ಕರ ಮನೆ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ : ಖಾಲಿ ಜಾಗ	ಲಿಂಗರಾಜ ಪುತ್ತು ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220507			
4	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/ಉಖ/12 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ: ಸುನಿತಾ ರಾಯ್ಕರ ಮನೆ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ: ಖಾಲಿ ಜಾಗ	ಲಿಂಗರಾಜ ಪುತ್ತು ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220475	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	ಈ ಆಸ್ತಿಗಳನ್ನು M/s Bhat developers Sadashivagad, Chittakula, Karwar ಇವರಿಂದ ಶ್ರೀ ಲಿಂಗರಾಜ ಪುತ್ತು ಕಲ್ಗುಟಕರ ಇವರು ಖರೀದಿಸಿರುತ್ತಾರೆ. ಈ ಬಗ್ಗೆ ದಸ್ತಾವೇಜು ನಂಬರ್: KRW-1-00493/2020-21 ರಲ್ಲಿ ನೋಂದಣಿಯಾಗಿದೆ. ಈ ಅಂಗಡಿ ಕಟ್ಟಡ ಸಂಖ್ಯೆ: 1840/GS/12, ಇದರ ಮೇಲೆ ನೋಂದಣಿ ದಾಖಲೆ ಸಂಖ್ಯೆ: KRW-1-01500-2024-25 ರಲ್ಲಿ ಋಣಭಾರವಿರುತ್ತದೆ.
5	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/GS/11 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ: ಸುನಿತಾ ರಾಯ್ಕರ ಮನೆ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ : ಖಾಲಿ ಜಾಗ	ಲಿಂಗರಾಜ ಪುತ್ತು ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220509	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	ರೂ. 45,00,000/– ಲಕ್ಷಗಳು	ಈ ಆಸ್ತಿಗಳನ್ನು M/s Bhat developers Sadashivagad, Chittakula, Karwar ಇವರಿಂದ ಶ್ರೀ ಲಿಂಗರಾಜ ಪುತ್ತು ಕಲ್ಗುಟಕರ ಇವರು ಖರೀದಿಸಿರುತ್ತಾರೆ. ದಸ್ತಾವೇಜು ನಂಬರ್: KRW-1-00466/2020-21 ರಲ್ಲಿ ನೋಂದಣಿ ಯಾಗಿದೆ. ಈ ಆಸ್ತಿಯು ಮೇಲೆ ನೋಂದಣಿ ದಾಖಲೆ ಸಂಖ್ಯೆ: KRW-1-01500-2024-25 ರಲ್ಲಿ ಋಣಭಾರ ವಿರುತ್ತದೆ.
6	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 33/5 ಮನೆ ಪೂರ್ವಕ್ಕೆ:ಖಾಲಿ ಜಾಗ ಪಶ್ಚಿಮಕ್ಕೆ: ಖಾಲಿ ಜಾಗ ಉತ್ತರಕ್ಕೆ: ಪಾಂಡುರಂಗ ಕಲ್ಗುಟಕರ ಇವರ ಮನೆ ದಕ್ಷಿಣಕ್ಕೆ: ದತ್ತಾರಾಮ ಕಲ್ಗುಟಕರ ಇವರ ಮನೆ	ದತ್ತಾರಾಮ ಪುತ್ತು ಕಲ್ಗುಟಕರ	–	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
7	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 33/4 ಮನೆ ಪೂರ್ವಕ್ಕೆ: ಖಾಲಿ ಜಾಗ ಪಶ್ಚಿಮಕ್ಕೆ: ಖಾಲಿ ಜಾಗ ಉತ್ತರಕ್ಕೆ: ಪಾಂಡುರಂಗ ಕಲ್ಗುಟಕರ ಇವರ ಮನೆ ದಕ್ಷಿಣಕ್ಕೆ: ದತ್ತಾರಾಮ ಕಲ್ಗುಟಕರ ಮನೆ	ಪುತ್ತು ದತ್ತಾ ಕಲ್ಗುಟಕರ	–	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
8	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 33/4/A ಮನೆ ಪೂರ್ವಕ್ಕೆ: ಖಾಲಿ ಜಾಗ ಪಶ್ಚಿಮಕ್ಕೆ:ಖಾಲಿ ಜಾಗ ಉತ್ತರಕ್ಕೆ:ಪಾಂಡುರಂಗ ಕಲ್ಗುಟಕರ ಮನೆ ದಕ್ಷಿಣಕ್ಕೆ:ದತ್ತಾರಾಮ ಕಲ್ಗುಟಕರ ಮನೆ	ಪುತ್ತು ದತ್ತಾ ಕಲ್ಗುಟಕರ	–	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
9	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಖಾಲಿ ಜಾಗ(0) ಪೂರ್ವಕ್ಕೆ:ವಿಷ್ಣು ಸಾವಂತ ಮನೆ ಪಶ್ಚಿಮಕ್ಕೆ:ಕಾಲು ದಾರಿ ಉತ್ತರಕ್ಕೆ:ರಸ್ತೆ ದಕ್ಷಿಣಕ್ಕೆ:ಸದರಿ ಜಮೀನಿನ ಗಡಿ	ಪುತ್ತು ದತ್ತಾ ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700223057	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	ರೂ. 10,00,000/– ಲಕ್ಷಗಳು	ಚಿತ್ತಾಕುಲಾ ಗ್ರಾಮದ ಇ–ಸ್ವತ್ತು ನಂಬರ್ 152700501700223057 (ಕಂದಾಯ ಸ.ನಂ, 229 ಹಿಸ್ಸಾ 10) ಈ ಆಸ್ತಿಯನ್ನು ಶ್ರೀಮತಿ ಮಂಜುಳಾ ರಮೇಶ ಸಾರಂಗ ಇವರಿಂದ 10 ಲಕ್ಷ ರೂ.ಗಳಿಗೆ ಶ್ರೀ ಪುತ್ತು ದತ್ತಾ ಕಲ್ಗುಟಕರ ರವರು ಖರೀದಿಸಿರುತ್ತಾರೆ. ಈ ಆಸ್ತಿಯ ಮೇಲೆ ನೋಂದಣಿ ದಾಖಲೆ ಸಂಖ್ಯೆ: KRW-1-02653-2022-23 ರಲ್ಲಿ ಋಣಭಾರ ವಿರುತ್ತದೆ.
10	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/GS/7 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ: ಅಂಗಡಿ ಸಂಖ್ಯೆ 1840/GS/12 ಉತ್ತರಕ್ಕೆ: ರುಕ್ಮಿಣಿ ಜ್ಯೂಯಲ್ಲರ್ಸ್ ದಕ್ಷಿಣಕ್ಕೆ: ಖಾಲಿ ಜಾಗ	ಪುತ್ತು ದತ್ತಾ ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220508	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	ರೂ. 20,52,000/– ಲಕ್ಷಗಳು	ಈ ಆಸ್ತಿಗಳನ್ನು M/s Bhat developers Sadashivagad, Chittakula, Karwar ಇವರಿಂದ ಶ್ರೀ ಪುತ್ತು ದತ್ತಾ ಕಲ್ಗುಟಕರ ಇವರು ಖರೀದಿಸಿರುತ್ತಾರೆ. ಈ ಬಗ್ಗೆ ದಸ್ತಾವೇಜು ನಂಬರ್: KRW-1-01010-2021-22 ರಲ್ಲಿ ನೋಂದಣಿಯಾಗಿದೆ. ಈ ಬಗ್ಗೆ ದಸ್ತಾವೇಜು ನಂಬರ್: KRW-1-01010-2021-22 ರಲ್ಲಿ ನೋಂದಣಿ ಯಾಗಿದೆ. ಈ ಅಂಗಡಿ ಕಟ್ಟಡ 1840/GS/7, 1840/GS/8, 1840/GS/9, 1840/GS/10 ಈ ಆಸ್ತಿಗಳಮೇಲೆ ನೋಂದಣಿ ದಾಖಲೆ ಸಂಖ್ಯೆ: KRW-1-00212-2023-24 ರಲ್ಲಿ ಋಣಭಾರವಿರುತ್ತದೆ
11	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/GS/8 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ: ಅಂಗಡಿ ಸಂಖ್ಯೆ:1840/GS/12 ಉತ್ತರಕ್ಕೆ:ರುಕ್ಮಿಣಿ ಜ್ಯೂಯಲ್ಲರ್ಸ್ ಅಂಗಡಿ ದಕ್ಷಿಣಕ್ಕೆ:ಖಾಲಿ ಜಾಗ	ಪುತ್ತು ದತ್ತಾ ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220510	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
12	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/GS/09 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ:ಅಂಗಡಿ ಸಂಖ್ಯೆ–1840/GS/12 ಉತ್ತರಕ್ಕೆ: ರುಕ್ಮಿಣಿ ಜ್ಯೂಯಲ್ಲರ್ಸ್ ಅಂಗಡಿ ದಕ್ಷಿಣಕ್ಕೆ: ಖಾಲಿ ಜಾಗ	ಪುತ್ತು ದತ್ತಾ ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220471	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
13	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ಓಶನ ಮೊನಾಲ್ಡ ಕಟ್ಟಡದ ಅಂಗಡಿ 1840/GS/10 ಪೂರ್ವಕ್ಕೆ: ವಾಹನ ಪಾರ್ಕಿಂಗ್ ಪಶ್ಚಿಮಕ್ಕೆ: ಸುನಿತಾ ರಾಯ್ಕರ ಮನೆ ಉತ್ತರಕ್ಕೆ: ರಸ್ತೆ ದಕ್ಷಿಣಕ್ಕೆ : ಖಾಲಿ ಜಾಗ	ಪುತ್ತು ದತ್ತಾ ಕಲ್ಗುಟಕರ	ಇ–ಸ್ವತ್ತು ಸಂಖ್ಯೆ: 152700501700220461	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
14	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮನೆ 1390/C ಪೂರ್ವಕ್ಕೆ: ಮನೆ ಪಶ್ಚಿಮಕ್ಕೆ: ರಸ್ತೆ ಉತ್ತರಕ್ಕೆ :ಮನೆ ದಕ್ಷಿಣಕ್ಕೆ:ಮನೆ	ಗ್ರೇಸಿ ಜೇವಿಯರ್ ಡಾಯಸ್	–	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
15	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮನೆ 1921 ಪೂರ್ವಕ್ಕೆ:ಖಾಲಿ ಜಾಗ ಪಶ್ಚಿಮಕ್ಕೆ: ಖಾಲಿ ಜಾಗ ಉತ್ತರಕ್ಕೆ: ಖಾಲಿ ಜಾಗ ದಕ್ಷಿಣಕ್ಕೆ: ರಸ್ತೆ	ದೀಕ್ಷಾ ದತ್ತಾರಾಮ ಕಲ್ಗುಟಕರ	–	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
16	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮನೆ 90 ಪೂರ್ವಕ್ಕೆ: ಖಾಲಿ ಜಾಗ ಪಶ್ಚಿಮಕ್ಕೆ: ಲಕ್ಷ್ಮಿಕಾಂತ ಕಲ್ಗುಟಕರ ಮನೆ ಉತ್ತರಕ್ಕೆ: ಶಾಮ ತಾಮಸೆ ಮನೆ ದಕ್ಷಿಣಕ್ಕೆ: ರಸ್ತೆ	ಉಜ್ವಲಾ ಉಲ್ಲಾಸ ಮಯೇಕರ ರವರ ಮಗನಾದ ಅಭಯ ಉಲ್ಲಾಸ ಮಯೇಕರ ಹೆಸರಿನಲ್ಲಿರುತ್ತದೆ.	ಇ–ಸ್ವತ್ತು ಸಂಖ್ಯೆ: 1527500501700200169	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
17	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 328/15 (ಅಂಗಡಿ ಸದಾನಂದ ಕಾಂಪ್ಲೆಕ್ಸ್) ಪೂರ್ವಕ್ಕೆ: ಪೀಟರ್ ಲೋಪೆಸ್ ಅಂಗಡಿ ಪಶ್ಚಿಮಕ್ಕೆ:ಲಿಯಾಜ ಅಲಿಶೇಖ ಅಂಗಡಿ ಉತ್ತರಕ್ಕೆ: ನೇತಲ್ಕರ ಅಂಗಡಿ ದಕ್ಷಿಣಕ್ಕೆ: ರಸ್ತೆ	ರಕ್ಷಿತಾ ರಾಘವೇಂದ್ರ ಕಲ್ಗುಟಕರ ಇವರ ಪತಿಯಾದ ರಾಘವೇಂದ್ರ ಕಲ್ಗುಟಕರ ಹೆಸರಿನಲ್ಲಿರುತ್ತದೆ	ಇ–ಸ್ವತ್ತು ಸಂಖ್ಯೆ: 152700501700220536	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
18	ಚಿತ್ತಾಕುಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 1006/D ಅಂಗಡಿ ಪೂರ್ವಕ್ಕೆ: ಸೂರಜ ದೇಸಾಯಿ ಬಿಲ್ಡಿಂಗ್ ಪಶ್ಚಿಮಕ್ಕೆ: ಸಾಯಿನಾಥ ಮೇತ್ರಿ ಅಂಗಡಿ ಉತ್ತರಕ್ಕೆ: ಖಾಲಿ ಜಾಗ ದಕ್ಷಿಣಕ್ಕೆ: ರಸ್ತೆ	ರಕ್ಷಿತಾ ರಾಘವೇಂದ್ರ ಕಲ್ಗುಟಕರ ಇವರ ಪತಿಯಾದ ರಾಘವೇಂದ್ರ ಕಲ್ಗುಟಕರ ಹೆಸರಿನಲ್ಲಿರುತ್ತದೆ.	–	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–

ಕ್ರಮ ಸಂ.	ಸ್ವತ್ತಿನ ವಿವರ (ಚಕ್ಕುಬಂದಿ ಒಳಗೊಂಡಂತೆ)	ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕರು	ದಾಖಲಾತಿ ವಿವರ	ಪ್ರಸ್ತುತ ಮಾರುಕಟ್ಟೆ ದರ (ರೂ.ಗಳಲ್ಲಿ)	ಖರೀದಿ ದರ (ರೂ.ಗಳಲ್ಲಿ)	ಷರಾ
19	ಅಸ್ನೋಟಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಳಗೆ ಗ್ರಾಮದ ಮನೆ ನಂ. 31 ಪೂರ್ವಕ್ಕೆ:ಪಾಟು ಗಣು ಪರವಾರ ಇವರ ಜಮೀನು ಪಶ್ಚಿಮಕ್ಕೆ: ಉದಯ ಕಮಲಾಕರ ಪರವಾರ ಮನೆ ಉತ್ತರಕ್ಕೆ: ಬಾಳಾಜಿ ವಿಶ್ವನಾಥ ನಾಯ್ಕ ಜಮೀನು ದಕ್ಷಿಣಕ್ಕೆ: ಪ್ರಭಾಕರ ಕೋಠಾರಕರ ಜಮೀನು	ಶ್ರೀಮತಿ ಲಕ್ಷ್ಮಿ ಕಮಲಾಕರ ಪರವಾರ ಇವರ ಹೆಸರಿನಲ್ಲಿರುತ್ತದೆ	–	ವಿಶೇಷ ನ್ಯಾಯಾಲಯದಿಂದ ಸ್ಥಿರೀಕರಣ ಆದೇಶ ಬಂದ ನಂತರ ಅಧಿಕೃತ ಮೌಲ್ಯ ಮಾಪಕರಿಂದ ಸ್ವತ್ತಿನ ಮೌಲ್ಯ ಮಾಪನ ಮಾಡಿಸಿ ಮಾರುಕಟ್ಟೆ ಮೌಲ್ಯವನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು	–	–
20	ಚಿತ್ತಾಕುಲಾ ಗ್ರಾಮದ ಕೃಷಿ ಜಮೀನು ಸ.ನಂ.1143/22ಅ ಕ್ಷೇತ್ರ 0–8–12 ಪೂರ್ವಕ್ಕೆ: ಲಾ. ಹಿ. ನಂ. ಗಡಿ ಪಶ್ಚಿಮಕ್ಕೆ: ಲಾ.ಹಿ.ನಂ.18ಡ ಉತ್ತರಕ್ಕೆ: ಲಾ.ಹಿ.ನಂ. 21ಬ ದಕ್ಷಿಣಕ್ಕೆ: ಲಾ.ಹಿ.ನಂ. 22ಬ ಚಿತ್ತಾಕುಲಾ ಗ್ರಾಮದ ಕೃಷಿ ಜಮೀನು ಸ.ನಂ. 1143/22ಕ ಕ್ಷೇತ್ರ 0–2–6 ಪೂರ್ವಕ್ಕೆ: ಲಾ. ಹಿ. ನಂ. ಗಡಿ ಪಶ್ಚಿಮಕ್ಕೆ: ಲಾ.ಹಿ.ನಂ.19ಕ ಉತ್ತರಕ್ಕೆ: ಲಾ.ಹಿ.ನಂ. 22ಬ ದಕ್ಷಿಣಕ್ಕೆ: ಲಾ.ಹಿ.ನಂ. ಗಡಿ ಚಿತ್ತಾಕುಲಾ ಗ್ರಾಮದ ಕೃಷಿ ಜಮೀನು ಸ.ನಂ. 1143/22ಬ ಕ್ಷೇತ್ರ 0–4–6 ಪೂರ್ವಕ್ಕೆ: ಲಾ. ಹಿ. ನಂ. ಗಡಿ ಪಶ್ಚಿಮಕ್ಕೆ: ಲಾ.ಹಿ.ನಂ.19ಕ ಉತ್ತರಕ್ಕೆ: ಲಾ.ಹಿ.ನಂ. 22ಅ ದಕ್ಷಿಣಕ್ಕೆ: ಲಾ.ಹಿ.ನಂ. 22ಕ	ಚಿತ್ತಾಕುಲಾ ಗ್ರಾಮದ ಸ.ನಂ. 1143/22ಅ 1143/22ಕ 1143/22ಬ ಈ ಜಮೀನುಗಳಲ್ಲಿ ಶ್ರೀ ಪುತ್ತು ದತ್ತಾ ಕಲ್ಗುಟಕರ ರವರಿಗೆ ಜಂಟಿನಾತೆಯಿಂದ ಮಾಲೀಕತ್ವ ಇರುತ್ತದೆ	–	ಪ್ರತಿ ಎಕರೆಗೆ 23,00,000 (ಪ್ರತಿ ಗುಂಟೆಗೆ 57,500/–)	–	ಈ ಜಮೀನುಗಳಲ್ಲಿ ಪುತ್ತು ದತ್ತಾ ಕಲ್ಗುಟಕರ ಇವರಿಗೆ ಜಂಟಿ ಮಾಲೀಕತ್ವ ಇರುವುದರಿಂದ ಇವರ ಹಕ್ಕಿನ ಕ್ಷೇತ್ರವನ್ನು ಮಾತ್ರ ಮುಟ್ಟುಗೋಲು ಮಾಡಿಕೊಳ್ಳುವುದು.
21	ಚಿತ್ತಾಕುಲಾ ಗ್ರಾಮದ ಕೃಷಿ ಜಮೀನು ಸ.ನಂ.1145/10 ಕ್ಷೇತ್ರ 0–4–0 ಪೂರ್ವಕ್ಕೆ: ಲಾ. ಹಿ. ನಂ.11 ಪಶ್ಚಿಮಕ್ಕೆ: ಲಾ.ಹಿ.ನಂ.1161 ಉತ್ತರಕ್ಕೆ: ಲಾ.ಹಿ.ನಂ. 1 ದಕ್ಷಿಣಕ್ಕೆ: ಲಾ.ಹಿ.ನಂ. 1143 ಚಿತ್ತಾಕುಲಾ ಗ್ರಾಮದ ಕೃಷಿ ಜಮೀನು ಸ.ನಂ.1145/11ಅ ಕ್ಷೇತ್ರ 0–4–0 ಪೂರ್ವಕ್ಕೆ: ಲಾ. ಹಿ. ನಂ. 3 ಪಶ್ಚಿಮಕ್ಕೆ: ಲಾ.ಹಿ.ನಂ.10 ಉತ್ತರಕ್ಕೆ: ಲಾ.ಹಿ.ನಂ. 2 ದಕ್ಷಿಣಕ್ಕೆ: ಲಾ.ಹಿ.ನಂ. 1143 ಚಿತ್ತಾಕುಲಾ ಗ್ರಾಮದ ಕೃಷಿ ಜಮೀನು ಸ.ನಂ. 203/5 ಕ್ಷೇತ್ರ 0–6–8 ಪೂರ್ವಕ್ಕೆ: ಲಾ. ಹಿ. ನಂ. ಗಡಿ ಪಶ್ಚಿಮಕ್ಕೆ: ಲಾ.ಹಿ.ನಂ.4 ಉತ್ತರಕ್ಕೆ: ಲಾ.ಹಿ.ನಂ. 202 ದಕ್ಷಿಣಕ್ಕೆ: ಲಾ.ಹಿ.ನಂ. 9	ಚಿತ್ತಾಕುಲಾ ಗ್ರಾಮದ ಸ.ನಂ. 1145/10 1145/11 203/5 ಈ ಜಮೀನುಗಳು ಶ್ರೀ ಪುತ್ತು ದತ್ತಾ ಕಲ್ಗುಟಕರ ಇವರ ಹೆಸರಿನಲ್ಲಿದೆ.	–	ಪ್ರತಿ ಎಕರೆಗೆ 23,00,000 (ಪ್ರತಿ ಗುಂಟೆಗೆ 57,500/–)	–	ಈ ಜಮೀನುಗಳಲ್ಲಿ ಪುತ್ತು ದತ್ತಾ ಕಲ್ಗುಟಕರ ಇವರ ಮಾಲೀಕತ್ವ ಇರುವುದರಿಂದ ಇವರ ಜಮೀನನ್ನು ಮುಟ್ಟುಗೋಲು ಮಾಡಿ ಕೊಳ್ಳುವುದು. ಚಿತ್ತಾಕುಲಾ ಗ್ರಾಮದ ಸ.ನಂ. 203/5ಕೃಷಿ ಜಮೀನನ್ನು ಶ್ರೀಮತಿ ಸ್ಮಿತಾ W/o ಅಜಿತ್ ಅರೋಲ್ಕರ ಇವರಿಂದ ಶ್ರೀ ಪುತ್ತು ದತ್ತಾ ಕಲ್ಗುಟಕರ ಇವರು ಕ್ರಯದ ಮೂಲಕ ಖರೀದಿಸಿರುತ್ತಾರೆ. ಈ ಬಗ್ಗೆ ದಸ್ತಾವೇಜು ನಂಬರ್ KRW-1-00185-2022-23 ರಲ್ಲಿ ನೋಂದಣಿಯಾಗಿದೆ. ಚಿತ್ತಾಕುಲಾ ಗ್ರಾಮದ ಸ.ನಂ. 203/5 ಜಮೀನಿಗೆ KRW-1-01211-2025-26 ರಲ್ಲಿ ಋಣಭಾರವಿರುತ್ತದೆ.
22	ಚಿತ್ತಾಕುಲಾ ಗ್ರಾಮದ ಕೃಷಿ ಜಮೀನು ಸ.ನಂ.1141/3 ಪೂರ್ವಕ್ಕೆ: ಲಾ. ಹಿ. ನಂ. 4 ಪಶ್ಚಿಮಕ್ಕೆ: ಲಾ.ಹಿ.ನಂ. 2,8,10 ಉತ್ತರಕ್ಕೆ: ಲಾ.ಹಿ.ನಂ.2 ದಕ್ಷಿಣಕ್ಕೆ: ಲಾ.ಹಿ.ನಂ. 11 ಚಿತ್ತಾಕುಲಾ ಗ್ರಾಮದ ಕೃಷಿ ಜಮೀನು ಸ.ನಂ.1154/2 ಕ್ಷೇತ್ರ 1–12–0 ಪೂರ್ವಕ್ಕೆ: ಲಾ. ಹಿ. ನಂ. 1051 ಪಶ್ಚಿಮಕ್ಕೆ: ಲಾ.ಹಿ.ನಂ.1045 ಉತ್ತರಕ್ಕೆ: ಲಾ.ಹಿ.ನಂ. 1 ದಕ್ಷಿಣಕ್ಕೆ: ಲಾ.ಹಿ.ನಂ. 1155	ಸ.ನಂ. 1141/3, ಹಾಗೂ 1154/2 ಈ ಜಮೀನುಗಳಲ್ಲಿ ಶ್ರೀ ಅಂಬರೀಷ ರೋಹಿದಾಸ ಕಲ್ಗುಟಕರ ಇವರಿಗೆ ಜಂಟಿನಾತೆಯಿಂದ ಹಕ್ಕು ಇರುತ್ತದೆ.	–	ಪ್ರತಿ ಎಕರೆಗೆ 23,00,000 (ಪ್ರತಿ ಗುಂಟೆಗೆ 57,500/–)	–	ಈ ಜಮೀನುಗಳಲ್ಲಿ ಶ್ರೀ ಅಂಬರೀಷ ರೋಹಿದಾಸ ಕಲ್ಗುಟಕರ ಇವರಿಗೆ ಜಂಟಿ ಮಾಲೀಕತ್ವ ಇರುವುದರಿಂದ ಇವರ ಹಕ್ಕಿನ ಕ್ಷೇತ್ರವನ್ನು ಮಾತ್ರ ಮುಟ್ಟುಗೋಲು ಮಾಡಿಕೊಳ್ಳುವುದು
23	ಕೊಳಗೆ ಗ್ರಾಮದ ಕೃಷಿ ಜಮೀನು ಸ.ನಂ. 77/*/1 ಕ್ಷೇತ್ರ 0–32–0 ಪೂರ್ವಕ್ಕೆ: ಲಾ. ಹಿ. ನಂ. ಗಡಿ ಪಶ್ಚಿಮಕ್ಕೆ: ಲಾ.ಹಿ.ನಂ.74 ಉತ್ತರಕ್ಕೆ: ಲಾ.ಹಿ.ನಂ. 76 ದಕ್ಷಿಣಕ್ಕೆ: ಲಾ.ಹಿ.ನಂ. 69 ಕೊಳಗೆ ಗ್ರಾಮದ ಕೃಷಿ ಜಮೀನು ಸ.ನಂ. 77/*/4 ಕ್ಷೇತ್ರ 0–2–0 ಪೂರ್ವಕ್ಕೆ: ಲಾ. ಹಿ. ನಂ. ಗಡಿ ಪಶ್ಚಿಮಕ್ಕೆ: ಲಾ.ಹಿ.ನಂ.ಗಡಿ ಉತ್ತರಕ್ಕೆ: ಲಾ.ಹಿ.ನಂ. ಗಡಿ ದಕ್ಷಿಣಕ್ಕೆ: ಲಾ.ಹಿ.ನಂ. ಗಡಿ ಕೊಳಗೆ ಗ್ರಾಮದ ಕೃಷಿ ಜಮೀನು ಸ.ನಂ. 79/*/1 ಕ್ಷೇತ್ರ 0–17–0 ಪೂರ್ವಕ್ಕೆ: ಲಾ. ಹಿ. ನಂ.2 ಪಶ್ಚಿಮಕ್ಕೆ: ಲಾ.ಹಿ.ನಂ.83,77 ಉತ್ತರಕ್ಕೆ: ಲಾ.ಹಿ.ನಂ. 83, ದಕ್ಷಿಣಕ್ಕೆ: ಲಾ.ಹಿ. ನಂ. 78 ಕೊಳಗೆ ಗ್ರಾಮದ ಕೃಷಿ ಜಮೀನು ಸ.ನಂ. 79/*/3 ಕ್ಷೇತ್ರ 0–20–4 ಪೂರ್ವಕ್ಕೆ: ಲಾ. ಹಿ. ನಂ. 80 ಪಶ್ಚಿಮಕ್ಕೆ: ಲಾ.ಹಿ.ನಂ.2 ಉತ್ತರಕ್ಕೆ: ಲಾ.ಹಿ.ನಂ. 83 ದಕ್ಷಿಣಕ್ಕೆ: ಲಾ.ಹಿ.ನಂ. 78 ಕೊಳಗೆ ಗ್ರಾಮದ ಕೃಷಿ ಜಮೀನು ಸ.ನಂ. 82/*/* ಕ್ಷೇತ್ರ 0–27–0 ಪೂರ್ವಕ್ಕೆ: ಲಾ. ಹಿ. ನಂ. 83 ಪಶ್ಚಿಮಕ್ಕೆ: ಲಾ.ಹಿ.ನಂ.84 ಉತ್ತರಕ್ಕೆ: ಲಾ.ಹಿ.ನಂ. 83 ದಕ್ಷಿಣಕ್ಕೆ: ಲಾ.ಹಿ.ನಂ. 81	ಕೊಳಗೆ ಗ್ರಾಮದ ಸ.ನಂ. 77/*/1 77/*/4 79/*/1 78/*/3 82/*/* ಈ ಜಮೀನುಗಳು ಶ್ರೀ ದೀಪಕ ಗೋಪಾಲ ಬಾವಾ ಇವರಿಗೆ ಜಂಟಿ ನಾತೆಯಿಂದ ಹಕ್ಕು ಇರುತ್ತದೆ.	–	ಪ್ರತಿ ಎಕರೆಗೆ 12,00,000 (ಪ್ರತಿ ಗುಂಟೆಗೆ 30,000/–)	–	ಈ ಜಮೀನುಗಳಲ್ಲಿ ಶ್ರೀ ದೀಪಕ ಗೋಪಾಲ ಬಾವಾ ಇವರಿಗೆ ಜಂಟಿ ಮಾಲೀಕತ್ವ ಇರುವುದರಿಂದ ಇವರ ಹಕ್ಕಿನ ಕ್ಷೇತ್ರವನ್ನು ಮಾತ್ರ ಮುಟ್ಟುಗೋಲು ಮಾಡಿಕೊಳ್ಳುವುದು
24	ಕೊಳಗೆ ಗ್ರಾಮದ ಕೃಷಿ ಜಮೀನು ಸ.ನಂ. 85/*/ ಪೂರ್ವಕ್ಕೆ: ಲಾ. ಹಿ. ನಂ. 86 ಪಶ್ಚಿಮಕ್ಕೆ: ಲಾ.ಹಿ.ನಂ.84 ಉತ್ತರಕ್ಕೆ: ಲಾ.ಹಿ.ನಂ. 88 ದಕ್ಷಿಣಕ್ಕೆ: ಲಾ.ಹಿ.ನಂ. 69	ಲಕ್ಷ್ಮಿ ಕಮಲಾಕರ ಪರವಾರ ಇವರ ಹೆಸರಿನಲ್ಲಿರುತ್ತದೆ	–	ಪ್ರತಿ ಎಕರೆಗೆ 12,00,000 (ಪ್ರತಿ ಗುಂಟೆಗೆ 30,000/–)	–	ಈ ಜಮೀನುಗಳಲ್ಲಿ ಲಕ್ಷ್ಮಿ ಕಮಲಾಕರ ಪರವಾರ ಇವರ ಮಾಲೀಕತ್ವ ಇರುವುದರಿಂದ ಇವರ ಜಮೀನನ್ನು ಮುಟ್ಟುಗೋಲು ಮಾಡಿಕೊಳ್ಳುವುದು

ಅನುಬಂಧ–2

Details of Seized Vehicles

Sl. No	Registration no	Vehicle Details Engine & Chasis No	Owner Name Details	Present Market Value
1	KA-30 S-5707	Hero Motorcycle Engine No: JF16ECEGM 27833 Chassis No: MBLJF16EGM02264	Dattraram Kalgutkar	Market value will be ascertained after obtaining the report form authorized valuator.
2	KA-30 A-5313	TATA Motors Goods Carrier Engine No: 697TC56JTZ141623 Chassis No: 373134JTZ133739	Purvi Premanad Bhandari	
3	KA-20 D-7957	JCB Excavator Engine No: H00099152 Chassis No: HAR3DXSSV01885123	Puttu Datta Kalgutkar	

ಅನುಬಂಧ–3

Details of Seized Electronic & Furnitures Items

Sl. No	Details of Movable item Seized	Total number of Electronic & Furnitures items seized	Market Value
1	Electronic and furnitures items seized from various branches of Jai Durgamata Credit Souharda Sahakari Sangha Niyamita, located in Uttara Kannada District (Sadashivagada, Yellapura, Honnavara, Murudeshwara, Shirali , Chittakula, Hanokona, mallapura, karwar, Manki and Kumta)	479 Items	Market value will be ascertained after obtaining the report form authorized valuator.

ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1,
ಭೂಮಾಪನ ಮತ್ತು ವಿಶೇಷ ಕೋಶ)

ವಾಸಾಸಂಇ/ವಾಪ್ರ/ಜಿಎ/1241/2026–27

ಮೆಟ್ರೊ ಕಾಮಗಾರಿ ಪ್ರಗತಿ ಪರಿಶೀಲಿಸಿದ ಸಚಿವ ಕೃಷ್ಣ ಬೈರೇಗೌಡ

ಮೆಟ್ರೊ 175 ಕಿ.ಮೀ. ವಿಸ್ತರಣೆಗೆ ಸಂಕಲ್ಪ

■ **ವಿಕ ಸುದ್ದಿಲೋಕ** ಬೆಂಗಳೂರು

ಚಾಲ್ತಿಯಲ್ಲಿರುವ ನಮ್ಮ ಮೆಟ್ರೊ ಯೋಜನೆಗಳನ್ನು ಕಾಲಮಿತಿಯಲ್ಲಿ ಮುಗಿಸಿ 2028ರ ಮಾರ್ಚ್ ವೇಳೆಗೆ ಒಟ್ಟಾರೆ ಮಾರ್ಗವನ್ನು 175 ಕಿ.ಮೀ.ಗೆ ವಿಸ್ತರಿಸಲು ಸಂಕಲ್ಪ ಮಾಡಿದ್ದೇವೆ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬಿಎಂಆರ್‌ಸಿಎಲ್ ಕಚೇರಿಯಲ್ಲಿ ಶುಕ್ರವಾರ ಮೆಟ್ರೊ ಪ್ರಗತಿ ಪರಿಶೀಲನಾ ಸಭೆ ನಡೆಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ''ನಗರದಲ್ಲಿ ಮೆಟ್ರೊ ಕಾಮಗಾರಿ ನಿರೀಕ್ಷೆಯ ವೇಗದಲ್ಲಾಗದಿದ್ದರೆ ವಾಹನ ದಟ್ಟಣೆ ಸಮಸ್ಯೆ ಪರಿಹಾರ ಸಿಗದು. ಪ್ರಸ್ತುತ ಕಾಮಗಾರಿ ನಡೆಯುತ್ತಿರುವ ಕಾಳೇನ ಅಗ್ರಹಾರ- ನಾಗವಾರ ನಡುವಿನ ಗುಲಾಬಿ ಮಾರ್ಗ (21.25 ಕಿ.ಮೀ.) ಮತ್ತು ನೀಲಿ ಮಾರ್ಗ ಕೆಆರ್ ಪುರ-ಸಿಲ್ಕ್ ಬೋರ್ಡ್ (19.75 ಕಿ.ಮೀ.) 2 'ಎ' ಹಾಗೂ ಸಿಲ್ಕ್ ಬೋರ್ಡ್- ವಿಮಾನ ನಿಲ್ದಾಣದ 2 'ಬಿ' ಮಾರ್ಗದ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಿದ್ದೇವೆ. ಸದ್ಯ ನಮ್ಮ ಮೆಟ್ರೊ 96 ಕಿ.ಮೀ. ಉದ್ದವಿದ್ದು, ನಿಗದಿತ ಅವಧಿಯಲ್ಲಿ ಮೂರು ಮಾರ್ಗದ ಕಾಮಗಾರಿ ಮುಗಿಸಿ 2028ಕ್ಕೆ 175 ಕಿ.ಮೀ.ಗೆ ವಿಸ್ತರಿಸುವುದು ಸರಕಾರದ ಗುರಿಯಾಗಿದೆ,'' ಎಂದರು.

ಅಕ್ಟೋಬರ್‌ಗೆ ಪ್ರಾಯೋಗಿಕ ಸಂಚಾರ: ''ನೀಲಿ '2 ಎ' ಮಾರ್ಗದಲ್ಲಿ ಮೂರು ನಿಲ್ದಾಣಗಳ ನಿರ್ಮಾಣ ವಿಳಂಬವಾಗಿದೆ. ಹೀಗಾಗಿ, ಈ ಮಾರ್ಗದಲ್ಲಿ ಕೆ.ಆರ್.ಪುರ -ಮಾರತ್ತಹಳ್ಳಿವರೆಗೆ ಹಾಗೂ ಮಾರತ್ತಹಳ್ಳಿಯಿಂದ ಎಚ್‌ಎಸ್‌ಆರ್‌ವರೆಗೆ ರೈಲುಗಳ ಪ್ರಾಯೋಗಿಕ ಸಂಚಾರ ನಡೆಸಲು ಸೂಚಿಸಲಾಗಿದೆ. ಇನ್ನು, ಕೆ.ಆರ್.ಪುರದಿಂದ ಹೆಬ್ಬಾಳದವರೆಗಿನ ಕಾಮಗಾರಿ ನಡೆಸಲು ಸಾಕಷ್ಟು ಸವಾಲುಗಳಿವೆ. ಹೀಗಾಗಿ, ಈ ಮಾರ್ಗ 2027ರ ಡಿಸೆಂಬರ್‌ಗೆ ಮುಗಿಯುವ ನಿರೀಕ್ಷೆಯಿದೆ,'' ಎಂದು ಹೇಳಿದರು.

ಡಬಲ್ ಡೆಕ್ಕರ್‌ಗೆ ಆಕ್ಷೇಪವಿಲ್ಲ: ''ಜೆಪಿ ನಗರ-ಕೆಂಪಾಪುರ ಹಾಗೂ ಹೊಸಹಳ್ಳಿ-ಕಡಬಗೆರೆವರೆಗಿನ 3ನೇ ಹಂತದ ಮೆಟ್ರೊಗೆ ಒಪ್ಪಿಗೆ ನೀಡುವ ವಿಚಾರ ಕೇಂದ್ರದ ಅಂಗಳದಲ್ಲಿದೆ. ಸಿಎಂ ಕೂಡ ದಿಲ್ಲಿಗೆ ತೆರಳಿದ್ದಾಗ ಅನುಮೋದನೆ ನೀಡುವಂತೆ ಕೋರಿದ್ದಾರೆ. ಡಬಲ್ ಡೆಕ್ಕರ್‌ಗೆ ಕೇಂದ್ರ ಆಕ್ಷೇಪಿಸಿಲ್ಲ, ಬದಲಾಗಿ ಕೇಂದ್ರದ ಸ್ವಾಯತ್ತ ಸಂಸ್ಥೆಯಾದ 'ರೈಟ್ಸ್'ನಿಂದ ತಾಂತ್ರಿಕ ಹಾಗೂ ಆರ್ಥಿಕ ಸಾಧ್ಯತೆ ವರದಿಯ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಕೋರಿದೆ. ಅದರಂತೆ 4 ತಿಂಗಳಿಂದ ಅಧ್ಯಯನ ನಡೆದಿದ್ದು, 20 ದಿನಗಳಲ್ಲಿ ಸಂಸ್ಥೆಯು ವರದಿ ನೀಡಲಿದೆ. ಅದನ್ನು ಕೇಂದ್ರಕ್ಕೆ ಸಲ್ಲಿಸಲಿದ್ದೇವೆ,'' ಎಂದರು.

''ಇನ್ನು, '3-ಎ' ಹಂತದ ಸರ್ಜಾಪುರ- ಹೆಬ್ಬಾಳ ಸಂಪರ್ಕಿಸುವ ಯೋಜನೆಯ ಪ್ರಸ್ತಾವನೆಗೆ ರಾಜ್ಯ ಸರಕಾರ ಒಪ್ಪಿಗೆ ನೀಡಿದ್ದು, ಶೀಘ್ರ ಇದರ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಿ ಮುಂದಿನ ಪ್ರಕ್ರಿಯೆ ನಡೆಸಲಿದ್ದೇವೆ,'' ಎಂದು ವಿವರಿಸಿದರು.

2027ರ ಮಾರ್ಚ್‌ಗೆ ಸುರಂಗ ಮುಕ್ತ: ''ಬನ್ನೇರುಘಟ್ಟ ರಸ್ತೆಯ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿಮೀ ಎತ್ತರಿಸಿದ ಗುಲಾಬಿ ಮಾರ್ಗ ಜೂನ್‌ನಲ್ಲೇ ಮುಗಿಯಬೇಕಿತ್ತು. ಇದನ್ನು ಆಗಸ್ಟ್ 15ರೊಳಗೆ ಮುಕ್ತಗೊಳಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಭರವಸೆ ನೀಡಿದ್ದಾರೆ. ತಾವರೆಕೆರೆಯಿಂದ ನಾಗವಾರದವರೆಗಿನ 13.5 ಕಿಮೀ ಸುರಂಗ ಮಾರ್ಗದಲ್ಲಿ ನಿಲ್ದಾಣಗಳ ಕಾಮಗಾರಿ ಮುಗಿದಿದೆ. ಟ್ರ್ಯಾಕ್ ಹಾಗೂ ಸಿಗ್ನಲಿಂಗ್ ಕೆಲಸ ನಡೆಯುತ್ತಿದೆ. ಈ ವಿಭಾಗವನ್ನು 2027ರ ಮಾರ್ಚ್‌ಗೆ ಮುಕ್ತಗೊಳಿಸಲು ಬಿಎಂಆರ್‌ಸಿಎಲ್ ಸಮಯ ಕೇಳಿದೆ,'' ಎಂದು ವಿವರಿಸಿದರು.

ದಟ್ಟಣೆ ತಪ್ಪಿಸಿ

''ಮೆಟ್ರೊ ಕಾಮಗಾರಿ ಸ್ಥಳದಲ್ಲಿ ಅಗತ್ಯಕ್ಕಿಂತ ಹೆಚ್ಚಾದ ಸ್ಥಳದಲ್ಲಿ ಸಾಮಗ್ರಿಗಳು, ಅವಶೇಷಗಳನ್ನು ಇಟ್ಟುಕೊಳ್ಳುವ ಕಾರಣಕ್ಕಾಗಿ ಟ್ರಾಫಿಕ್ ಸಮಸ್ಯೆ ಉಲ್ಬಣವಾಗುತ್ತಿದೆ. ಮಳೆಗಾಲದಲ್ಲಿ ಪ್ರವಾಹ ಉಂಟಾಗಲೂ ಇದು ಕಾರಣವಾಗುತ್ತಿದೆ. ಇದನ್ನು ತಪ್ಪಿಸಲು ಕಡಿಮೆ ಸ್ಥಳ ಬಳಸಿ ಬೇಗ ಕೆಲಸ ಮುಗಿಸಬೇಕು. ರಸ್ತೆ ಮಧ್ಯದ ಬದಲು ಒಂದು ಬದಿಯಲ್ಲಿ ಸಾಮಗ್ರಿಗಳನ್ನಿಟ್ಟುಕೊಳ್ಳಲು ಸೂಚಿಸಲಾಗಿದೆ,'' ಎಂದು ಕೃಷ್ಣ ಬೈರೇಗೌಡ ಹೇಳಿದರು.

ನಿಧಾನವೇ ಸಂಸ್ಕೃತಿ: ಸಚಿವರ ಬೇಸರ

''ನಮ್ಮ ಮೆಟ್ರೊ ಯಾವುದೇ ಮಾರ್ಗದ ಯೋಜನೆಗಳು ಕೂಡ ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಂಡಿಲ್ಲ. ಕನಿಷ್ಠ ಎರಡು ವರ್ಷ ವಿಳಂಬವೇ ಮೆಟ್ರೊದ ಸಂಸ್ಕೃತಿ ಎಂಬಂತಾಗಿದೆ. ಆರಂಭದ ಯೋಜನೆಗಳಲ್ಲಿ ವಿಳಂಬವಾದರೆ ಸರಿ. ಆದರೆ, ಮೆಟ್ರೊ ಆರಂಭವಾಗಿ 22-25 ವರ್ಷದ ಬಳಿಕವೂ ಯೋಜನೆಗಳನ್ನು ನಿಗದಿತ ಗಡುವಿನೊಳಗೆ ಮುಕ್ತಾಯಗೊಳಿಸಲು ಸಾಧ್ಯವಾಗುತ್ತಿಲ್ಲ. ಸ್ವಾಯುತ್ತತೆ ಜತೆಗೆ ಇಲ್ಲಿ ಉತ್ತರದಾಯಿತ್ವ ಇರಬೇಕಾಗಿದೆ,'' ಎಂದು ಸಚಿವರು ಅಸಮಾಧಾನ ವ್ಯಕ್ತಪಡಿಸಿದರು.

ಕೋರ್ಟ್ ವಿಚಾರಣೆಗೆ ಗೈರು: 57 ಆರೋಪಿಗಳ ಬಂಧನ

ಬೆಂಗಳೂರು: ನ್ಯಾಯಾಲಯದಲ್ಲಿ ಪ್ರಕರಣಗಳ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ 57 ಆರೋಪಿಗಳನ್ನು ಪೂರ್ವ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ಪೂರ್ವ ವಿಭಾಗದ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ವಿವಿಧ ಅಪರಾಧ ಪ್ರಕರಣಗಳ ಆರೋಪಿಗಳು ನ್ಯಾಯಾಲಯದ ವಿಚಾರಣೆಗೆ ನಿರಂತರವಾಗಿ ಗೈರಾಗಿದ್ದರು. ಹೀಗಾಗಿ, ನ್ಯಾಯಾಲಯವು ಆರೋಪಿಗಳ ಬಂಧನಕ್ಕೆ ವಾರಂಟ್ ಜಾರಿ ಮಾಡಿತ್ತು. ಆರೋಪಿಗಳು ಬಂಧನ ಭೀತಿಯಲ್ಲಿ ಪೊಲೀಸರ ಕೈಗೂ ಸಿಗದೆ ತಲೆಮರೆಸಿಕೊಂಡಿದ್ದರು. ಹಿರಿಯ ಪೊಲೀಸ್ ಅಧಿಕಾರಿಗಳು, ನಾಪತ್ತೆಯಾಗಿದ್ದ ಆರೋಪಿಗಳ ಪತ್ತೆಗಾಗಿ ವಿಶೇಷ ತಂಡಗಳನ್ನು ರಚಿಸಿದ್ದರು. ಈ ತಂಡಗಳು 10 ದಿನಗಳಿಂದ ನಿರಂತರ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿವೆ.

ಪುಲಿಕೇಶಿನಗರ, ಇಂದಿರಾನಗರ, ಹಲಸೂರು, ಜೆ.ಬಿ.ನಗರ, ಬೈಯಪ್ಪನಹಳ್ಳಿ, ಶಿವಾಜಿನಗರ, ಬಾಣಸವಾಡಿ, ಕಮರ್ಷಿಯಲ್ ಸ್ಟ್ರೀಟ್, ಕೆ.ಜಿ.ಹಳ್ಳಿ, ಡಿ.ಜೆ.ಹಳ್ಳಿ ಮತ್ತು ಹೆಣ್ಣೂರು ಠಾಣೆ ವ್ಯಾಪ್ತಿಯ 57 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಶವ ಸಂಸ್ಕಾರಕ್ಕೆ ಜಿಬಿಎ ಅಧಿಕೃತ ಜಾಲತಾಣದಲ್ಲೇ ನೋಂದಣಿಗೆ ಮನವಿ

■ **ವಿಕ ಸುದ್ದಿಲೋಕ** ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ವಿದ್ಯುತ್ ಚಿತಾಗಾರಗಳಲ್ಲಿ ಶವಸಂಸ್ಕಾರಕ್ಕಾಗಿ ಸ್ಲಾಟ್ ಕಾಯ್ದಿರಿಸುವಾಗ ಅಧಿಕೃತ ಜಾಲತಾಣಗಳನ್ನೇ ಬಳಸಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳಲಾಗಿದೆ.

ಪ್ರತಿ ಶವ ಸಂಸ್ಕಾರಕ್ಕೆ 250 ರೂ. ಶುಲ್ಕ

ಶವಸಂಸ್ಕಾರ ಸಂಬಂಧ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕೃತ ಜಾಲತಾಣವಾದ www.bbmp.gov.in ನಲ್ಲಿ ಮಾತ್ರ ನೋಂದಾಯಿಸಿಕೊಳ್ಳಬೇಕು. ಪ್ರತಿ ಶವಸಂಸ್ಕಾರಕ್ಕೆ 250 ರೂ. ಶುಲ್ಕ ನಿಗದಿಪಡಿಸಲಾಗಿದೆ. ಶುಲ್ಕ ಪಾವತಿಸಿ ರಸೀದಿ ಪಡೆಯಬೇಕು ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಚಟ್ಟ, ಮಡಕೆ, ಪೂಜಾ ಸಾಮಗ್ರಿ ವ್ಯವಸ್ಥೆಯನ್ನು ಸ್ವಯಂ ಮಾಡಿಕೊಳ್ಳಬೇಕಾಗಿರುತ್ತದೆ. ಪಾಲಿಕೆಯಿಂದ ಇವುಗಳನ್ನು ಒದಗಿಸುವುದಿಲ್ಲ, ಶವಸಂಸ್ಕಾರಕ್ಕೆ ಬರುವ ಸಂದರ್ಭದಲ್ಲಿ ಮನವಿ ಪತ್ರ, ಮರಣದ ವರದಿ ನಮೂನೆ-02, ವೈದ್ಯರ ದೃಢೀಕರಣ ಪತ್ರ ನಮೂನೆ-4 ಎ, ಶವಸಂಸ್ಕಾರ ದೃಢೀಕರಣ ಪತ್ರ, ಮೃತರ ಪಡಿತರ ಕಾರ್ಡ್, ಆಧಾರ್, ಚುನಾವಣಾ ಗುರುತಿನ ಚೀಟಿ, ಟಿ.ಸಿ, ಪಾನ್ ಕಾರ್ಡ್‌ಗಳಲ್ಲಿ ಯಾವುದಾದರೂ ಒಂದನ್ನು ಸಲ್ಲಿಸಬೇಕು. ಈ ಯಾವುದೇ ಗುರುತಿನ ಚೀಟಿಗಳು ಇಲ್ಲದಿದ್ದಲ್ಲಿ ನೋಟರಿ ಪ್ರಮಾಣಪತ್ರ ನೀಡಬೇಕು ಎಂದು ಸೂಚಿಸಿದ್ದಾರೆ.

ಸಾರ್ವಜನಿಕರು ವಿದ್ಯುತ್ ಚಿತಾಗಾರಗಳಲ್ಲಿ ಶವಸಂಸ್ಕಾರಕ್ಕಾಗಿ ಸ್ಲಾಟ್‌ಗಳನ್ನು ಕಾಯ್ದಿರಿಸುವ ಸಂದರ್ಭದಲ್ಲಿ ಗೂಗಲ್‌ನಲ್ಲಿ ತೋರಿಸುವ ನಕಲಿ ಜಾಲತಾಣಗಳು ಅಥವಾ ಅನಧಿಕೃತ ಲಿಂಕ್‌ಗಳಿಗೆ ಭೇಟಿ ನೀಡಬಾರದು. ನಕಲಿ ಜಾಲತಾಣಗಳ ಮೂಲಕ ಸಾರ್ವಜನಿಕರಿಗೆ ವಂಚನೆಯಾಗದಂತೆ ತಡೆಯುವ ಉದ್ದೇಶದಿಂದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಈಗಾಗಲೇ ದೂರು ದಾಖಲಿಸಲಾಗಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಅಧಿಕೃತ ಜಾಲತಾಣಗಳನ್ನೇ ಬಳಸಬೇಕು ಎಂದು ಕೋರಿದ್ದಾರೆ.

ಬಿಎಂಟಿಸಿ ಬಸ್‌ಗೆ ಪಾದಚಾರಿ ಬಲಿ

ಬೆಂಗಳೂರು: ನಗರದ ಉಲ್ಲಾಳ ರಸ್ತೆಯ ಮಂಗನಹಳ್ಳಿ ಕ್ರಾಸ್ ಬಳಿ ಗುರುವಾರ ರಾತ್ರಿ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಡಿಕ್ಕಿ ಹೊಡೆದು ಪಾದಚಾರಿ ಸಾವನ್ನಪ್ಪಿದ್ದಾರೆ.

ಮಂಡ್ಯ ಜಿಲ್ಲೆಯ ರಾಜು (57) ಮೃತಪಟ್ಟವರು. ಉಲ್ಲಾಳ ಉಪ ನಗರದಲ್ಲಿ ವಾಸವಾಗಿದ್ದ ಅವರು, ಗಾರೆ ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದರು. ಅವರು ಕೆಲಸ ಮುಗಿಸಿಕೊಂಡು ಮನೆಗೆ ನಡೆದು ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ರಸ್ತೆ ದಾಟುತ್ತಿದ್ದ ರಾಜು ಅವರಿಗೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಅವರು ಸ್ಥಳದಲ್ಲೇ ಉಸಿರು ಚೆಲ್ಲಿದ್ದಾರೆ. ಬಸ್ ಚಾಲಕನನ್ನು ಬಂಧಿಸಿ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಯುವಕ ಸಮುದ್ರಪಾಲು

ಕುಂದಾಪುರ: ಪ್ರವಾಸದ ನಿಮಿತ್ತ ಕರಾವಳಿಗೆ ಬಂದಿದ್ದ ಬೆಂಗಳೂರು ಮೂಲದ ಯುವಕ ಸಮುದ್ರಪಾಲಾದ ಘಟನೆ ಶುಕ್ರವಾರ ಕೋಟ ವ್ಯಾಪ್ತಿಯ ಕೋಡಿಕನ್ಯಾಣದಲ್ಲಿ ನಡೆದಿದೆ. ಬೆಂಗಳೂರಿನ ರಾಜಾಜಿನಗರದ ನಿಖಿಲ್ ಕುಮಾರ್(32) ಸಮುದ್ರಪಾಲಾದ ಯುವಕ. ಬೆಂಗಳೂರಿನಿಂದ ಕರಾವಳಿ ಪ್ರವಾಸ ಕೈಗೊಂಡಿದ್ದ 9 ಯುವಕರ ತಂಡವೊಂದು ಶುಕ್ರವಾರ ಬೆಳಗ್ಗೆ ಕೋಡಿಕನ್ಯಾಣ ಸಮುದ್ರ ತೀರಕ್ಕೆ ಆಗಮಿಸಿತ್ತು. ಈ ಪೈಕಿ ನಾಲ್ವರು ಸಮುದ್ರದಲ್ಲಿ ಸ್ನಾನ ಮಾಡಲೆಂದು ನೀರಿಗೆ ಇಳಿದಿದ್ದರು. ಈ ಸಂದರ್ಭ ಅಲೆಗಳ ತೀವ್ರತೆಗೆ ಸಿಲುಕಿದ ನಿಖಿಲ್, ಸಮುದ್ರದಲ್ಲಿ ಕೊಚ್ಚಿ ಹೋಗಿದ್ದಾರೆ. ಯುವಕ ನೀರಿನಲ್ಲಿ ಕೊಚ್ಚಿ ಹೋಗುತ್ತಿರುವುದನ್ನು ಗಮನಿಸಿದ ಸ್ಥಳೀಯರು ತಕ್ಷಣವೇ ಕಾರ್ಯಪ್ರವೃತ್ತರಾಗಿ, ದೋಣಿ ಮೂಲಕ ತೆರಳಿ ಯುವಕನನ್ನು ರಕ್ಷಿಸಿ ದಡಕ್ಕೆ ತಂದಿದ್ದಾರೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ನಿಖಿಲ್‌ನನ್ನು ಬ್ರಹ್ಮಾವರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ಘೋಷಿಸಿದ್ದಾರೆ. ಕೋಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಹಲವೆಡೆ ವಿದ್ಯುತ್ ವ್ಯತ್ಯಯ

■ **ವಿಕ ಸುದ್ದಿಲೋಕ** ಬೆಂಗಳೂರು

ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜೂನ್ 20ರಂದು ನಗರದ ಹಲವು ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಕುಂದಲಹಳ್ಳಿ ಮುಖ್ಯ ರಸ್ತೆ, ಗ್ರಾಫೈಟ್ ವೃತ್ತ, ರಾಧಾ ಹೋಮ್ ಟೆಲ್, ಫಾರ್ಚೂನ್ ಹೋಟೆಲ್, ನಂದಿ ಟೊಯೋಟಾ, ಎಲ್-ಟಿ ಲಿಮಿಟೆಡ್, ಐಡಿಯಾ, ಉಡುಪಿ ಹೋಟೆಲ್, ಚೆಸ್ಸಾ ಡೆಂಟಲ್ ಕೇರ್, ವಾಟರ್ ಟ್ಯಾಂಕ್ ಪ್ರದೇಶ, ಬಿಎಂಟಿಸಿ, ಆರ್‌ಎಂಜೆಡ್, ಚೆನ್ನಮ್ಮ ಲೇಔಟ್, ಎಸ್‌ಎಪಿ ಲ್ಯಾಬ್ಸ್ ಲಿಮಿಟೆಡ್, ಗೋಪಾಲನ್ ಗ್ಲೋಬಲ್ ಆಕ್ಸೆಸ್ ಮತ್ತು ಗೋಪಾಲನ್ ಎಂಟರ್‌ಪ್ರೈಸಸ್, ಮೈಂಡ್ ಕಾಂಪ್, ಬಿಐಪಿ ಡೆವಲಪರ್ಸ್, ಬಾಗ್ಮನೆ ನಿಯಾನ್ ಬಿಲ್ಡಿಂಗ್ ಮತ್ತು ಬಾಗ್ಮನೆ ನಿಯಾನ್ ಬ್ಲಾಕ್, ಆರ್‌ಜಿ ಹಳ್ಳಿ ಸಿದ್ದಾಪುರ ಗೇಟ್, ಇಪಿಐಪಿ ಲೇಔಟ್ ಮತ್ತು ಇಪಿಐಪಿ ಇಂಡಸ್ಟ್ರಿಯಲ್ ಏರಿಯಾ, ಟಿಸಿಎಸ್ ಸಾಫ್ಟ್‌ವೇರ್, ಎಸ್‌ಜೆಆರ್ ಟೆಕ್ ಪಾರ್ಕ್, ವಿಎಸ್‌ಎನ್‌ಎಲ್ ಫೀಡರ್ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 9.30ರಿಂದ ಸಂಜೆ 6ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಅದೇ ರೀತಿ ಫಿಡೆಲಿಟಿ, ಫಿಲಿಪ್ಸ್, ಇನ್‌ಕ್ಯುಬೇಟರ್, ಮಾನ್ಯತಾ ರೆಸಿಡೆನ್ಸಿ, ಗೋದ್ರೇಜ್ ಅಪಾರ್ಟ್‌ಮೆಂಟ್, ಹೆಬ್ಬಾಳ ಅಪಾರ್ಟ್‌ಮೆಂಟ್ ಲೇಔಟ್, ವೆಂಕಟೇಗೌಡ ಲೇಔಟ್, ಜೆಎನ್‌ಸಿ, ಎಂಎಫ್‌ಎಆರ್, ಮಧುವನ ಎಂ-2 ಬ್ಲಾಕ್, ರಾಚೇನಹಳ್ಳಿ, ಶ್ರೀರಾಂಪುರ, ಚಾಮುಂಡೇಶ್ವರಿ ಲೇಔಟ್, ರಾಯಲ್ ಎನ್‌ಕ್ಲೇವ್, ಮೇಸ್ತ್ರಿಪಾಳ್ಯ, ಥಣಿಸಂದ್ರ, ಎಸ್‌ಎನ್‌ಎನ್ ಕ್ಲರ್ಮಾಂಟ್ ಅಪಾರ್ಟ್‌ಮೆಂಟ್‌ಗಳು, ಕಾರ್ಲೆ ಟೌನ್ ಸೆಂಟರ್, ಬಿ. ನಾರಾಯಣಪುರ ಕ್ರಾಸ್, ಬಿಡಿಎಸ್ ಲೇಔಟ್, ಸಿ, ಫಾತಿಮಾ ಬೋರ್ಡ್ ಲೇಔಟ್, ಸಿ. ಅಮರಜ್ಯೋತಿ ಲೇಔಟ್, ಮರಿಯಣ್ಣಪಾಳ್ಯ, ಉಮಿಯಾ ವೆಲಾಸಿಟಿ, ಬ್ರಿಗೇಡ್ ಕ್ಯಾಲಡಿಯಂ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 11 ರಿಂದ ಸಂಜೆ 5ರವರೆಗೆ ವ್ಯತ್ಯಯ ಉಂಟಾಗಲಿದೆ.

ಇನ್ನು, ರೆಸಿಡೆನ್ಸಿ ರಸ್ತೆ, ಹೊಂಡೈ ಆರ್‌ಎಂಯು, ಲ್ಯಾವೆಲ್ಲೆ ರಸ್ತೆ, ವಾಲ್ಟನ್ ರಸ್ತೆ, ವಿಠಲ್ ಮಲ್ಯ ರಸ್ತೆ, ಚರ್ಚ್ ಸ್ಟ್ರೀಟ್, ಕಸ್ತೂರಬಾ ರಸ್ತೆ, ಎಂ.ಜಿ. ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ರೆಸಿಡೆನ್ಸಿ ರಸ್ತೆ ಕ್ರಾಸ್, ಕ್ವೀನ್ಸ್ ವೃತ್ತ, ಐಟಿಸಿ ಹೋಟೆಲ್, ದೊಮ್ಮಲೂರು 2 ನೇ ಹಂತ, ಕೋಡಿಹಳ್ಳಿ, ದೊಮ್ಮಲೂರು ಗ್ರಾಮ, ಯೋಗಾನಂದ ಲೇಔಟ್, ಪರಮಹಂಸ ರಸ್ತೆ, ಧೂಪನಹಳ್ಳಿ, ಸಲಾರ್‌ಪುರಿಯಾ ಟೆಕ್ ಪಾರ್ಕ್, ಜೋಗುಪಾಳ್ಯ, ಕಾರ್‌ಸ್ಟ್ರೀಟ್, ಬಜಾರ್‌ಸ್ಟ್ರೀಟ್, ಜೋಗುಪಾಳ್ಯ ಮುಖ್ಯ ರಸ್ತೆ, ರಂಕಾ ಕೋರ್ಟ್, ಆರ್ಟಿಲರಿ ರಸ್ತೆ, ಗೌತಂಪುರ, ಕೇಂಬ್ರಿಜ್ ರಸ್ತೆ, ಹಲಸೂರು, ಕೆನರಾ ಬ್ಯಾಂಕ್, ಅಜಂತಾ ಟ್ರಿನಿಟಿ ಸರ್ಕಲ್, ಎ ಮತ್ತು ಬಿ ನಾರಾಯಣಪುರ, ಕಗ್ಗದಾಸಪುರ, ಆಕಾಶ್ ನಗರ, ಉದಯನಗರ, ಬೈರಸಂದ್ರ, ಸಿವಿ ರಾಮನಗರ, ಸದಾನಂದನಗರ, ಕಸ್ತೂರಿನಗರ, ಭುವನೇಶ್ವರಿ ನಗರ, ವರ್ತೂರು ರಸ್ತೆ, ನಾಗವಾರಪಾಳ್ಯ ನಾಗಪ್ಪರೆಡ್ಡಿ ಲೇಔಟ್, ಅಬ್ಬಯ್ಯ ಲೇಔಟ್, ಧರ್ಮೋಹಲ್ಲಾ, ವಿಜಿನಾಪುರ ಪೈ ಲೇಔಟ್, ಉದಯನಗರ ನಗರ, ಗಂಗಪ್ಪ ಲೇಔಟ್, ಕೃಷ್ಣಪಾಳ್ಯ, ಸುದ್ದಗುಂಟೆ ಪಾಳ್ಯ, ನಾಗವಾರಪಾಳ್ಯ, ಕುವೆಂಪು ಬೀದಿ, ವಿವೇಕಾನಂದ ಬೀದಿ, ಕೊಂಡಪ್ಪರೆಡ್ಡಿ ಲೇಔಟ್, ಅಂಕಪ್ಪರೆಡ್ಡಿ ಲೇಔಟ್, ಶಿವ ದೇವಸ್ಥಾನ ರಸ್ತೆ, ಅಯ್ಯಪ್ಪ ದೇವಸ್ಥಾನ ರಸ್ತೆ, ಏರ್‌ಫೋರ್ಸ್ ಕ್ವಾರ್ಟರ್ಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಮಲ್ಲೇಶ್ವರಂ ವಿಭಾಗದ ರಾಮಯ್ಯ ಆಸ್ಪತ್ರೆ, ಪೈಪ್ ಲೈನ್ ರಸ್ತೆ, ಎಂಎಸ್‌ಆರ್ ನಗರ, ಬಿಇಎಲ್ ರಸ್ತೆ, ಸಿಪಿಆರ್‌ಐ ಕ್ವಾರ್ಟರ್ಸ್, ಸದಾಶಿವನಗರ ಪೊಲೀಸ್ ಠಾಣೆ, ಎಜಿಎಸ್ ಲೇಔಟ್, ಬಿಇಎಲ್ ರಸ್ತೆ, ಎಂಎಸ್ ಆರ್ ನಗರ, ಜಲದರ್ಶಿನಿ ಲೇಔಟ್, ಎಂಎಸ್‌ಆರ್ ನಗರ ಪೈಪ್ ಲೈನ್ ರಸ್ತೆ, ರಾಮಯ್ಯ ಬಾಲಕರ ಹಾಸ್ಟೆಲ್, ಎ.ಕೆ. ಕಾಲೋನಿ, ಶ್ರೀನಿಕೇತ್ ಅಪಾರ್ಟ್‌ಮೆಂಟ್, ಕಾಫಿ ಡೇ, ನಾರಾಯಣ ಪ್ರಸಾದ್ ಕಟ್ಟಡ, ಸೀನಪ್ಪ ಲೇಔಟ್, ಬಿಇಎಲ್ ರಸ್ತೆ, ಇಸ್ರೋ, ಡಾಲರ್ಸ್ ಕಾಲೊನಿ, ಬಿಇಎಲ್ ರಸ್ತೆ, ಚಿಕ್ಕಮಾರನಹಳ್ಳಿ, ಗೌರಿ ಅಪಾರ್ಟ್‌ಮೆಂಟ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10ರಿಂದ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಭರತ್ ಲೇಔಟ್, ಪಟಾಲಮ್ಮ ದೇವಸ್ಥಾನ ಹಿಂಭಾಗ, ಹ್ಯಾಪಿ ವ್ಯಾಲಿ ಲೇಔಟ್, ವಿನಾಯಕ ಲೇಔಟ್, ಉತ್ತರಹಳ್ಳಿ, ಅಪ್ಪಯ್ಯ ಸ್ವಾಮಿ ಲೇಔಟ್, ವಡ್ಡರಪಾಳ್ಯ ಏರಿಯಾ, ಬನಶಂಕರಿ 5ನೇ ಹಂತ, ಪೂರ್ಣ ಪ್ರಜ್ಞಾ ಲೇಔಟ್, ಮಂತ್ರಿ ಅಲ್ಪೈನ್ಸ್, ದ್ವಾರಕಾನಗರ, ಬನಶಂಕರಿ 6ನೇ ಹಂತ, 80 ಫೀಟ್ ರೋಡ್, ಶ್ರೀನಗರ, ಹೊಸಕೆರೆಹಳ್ಳಿ, ಪಿಇಎಸ್ ಕಾಲೇಜ್, ವೀರಭದ್ರನಗರ, ಬ್ಯಾಂಕ್ ಕಾಲೊನಿ, ಎನ್‌ಟಿವೈ ಲೇಔಟ್, ತ್ಯಾಗರಾಜನಗರ, ಬಸವನಗುಡಿ, ಬಿ.ಎಸ್.ಕೆ. 3ನೇ ಹಂತ, ಕತ್ತರಿಗುಪ್ಪೆ, ಗಿರಿನಗರ 4ನೇ ಹಂತ, ಐಟಿಐ ಲೇಔಟ್, 100 ಫೀಟ್ ರಿಂಗ್ ರಸ್ತೆ, ಕಾಮಾಕ್ಯ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಕ್ರೋಮಾ ಧಾರಾಕಾರ ಡೀಲ್‌ಗಳು ಮನ ಸೂರೆಗೊಳಿಸುವ ಆಫರ್‌ಗಳು

ಸೀದಾ 10%* ಕ್ಯಾಶ್‌ಬ್ಯಾಕ್

croma
A TATA Enterprise

*T&C Apply

ಕನ್ಸೂಮರ್ ಫೈನಾನ್ಸ್* ಮೇಲೆ ಕ್ಯಾಶ್‌ಬ್ಯಾಕ್ | HDB FINANCIAL SERVICES | IDFC FIRST Bank | TVS CREDIT | ಆಪಲ್ ಉತ್ಪನ್ನಗಳ ಮೇಲೆ 10% ವರೆಗೆ ಉಳಿತಾಯಗಳು* | HDFC BANK | TATA NEU CARD ಜೊತೆಗೆ

ಆಯ್ದ ಕಾರ್ಡುಗಳ ಮೇಲೆ ಇನ್ಸ್‌ಟೆಂಟ್ ಕ್ಯಾಶ್‌ಬ್ಯಾಕ್* | AMERICAN EXPRESS | AXIS BANK | HDFC BANK | HSBC | ICICI Bank

LG NANO 4K UHD AI 2026 — 45% OFF*

LG NanoCell TV 2026 1m 40cm (55)	
MRP	₹89,990*
Product Cashback Up to#	₹4,000*
EMI Starting	₹1,999*

Save up to 10% on LG Soundbar with TV Purchase*

46% OFF*

ASUS Vivobook 16 Next Gen AI	
MRP	₹84,990*
Selling Price	₹58,990*
Product Cashback Up to#	₹2,000*
Exchange Value & Bonus Up to	₹11,000*
Sale Price	₹45,990*

Free Kamiliant Trolley worth ₹7,500*

46% OFF*

Haier Washing Machine 8.5kg	
MRP	₹38,500*
Selling Price	₹24,890*
Savings Up to	₹1,245*
Product Cashback Up to#	₹1,698*
Exchange Value Up to	₹1,000*
Sale Price	₹20,947*

34% OFF*

Samsung Refrigerator 236L	
MRP	₹39,999*
Selling Price	₹29,490*
Product Cashback Up to#	₹2,000*
Exchange Value Up to	₹1,000*
Sale Price	₹26,490*

*Sale Price inclusive of exchange/cashback or both

ಕ್ರೋಮಾ ಅಂಗಡಿಗೆ ಭೇಟಿ ನೀಡಿ | croma.com | TATA NEU | bigbasket A TATA Enterprise

Scan to locate us

Visit us @ Sahakar Nagar | Garuda Mall | Nagavara | RT Nagar | Yeshwanthpur | Nelamangala | Tumkur | 55+ Stores across Karnataka

*Offer valid only at stores | Two offers cannot be clubbed | Offer valid till stocks lasts | Offer valid on select brands/categories/days/locations/products | The final offer shall be subject to cashback offers or discounts provided by participating banks or consumer finance or Croma or Brand or Exchange Value of your old product or all of the above, as applicable | Instant Cashback on select cards & Cashback on Consumer Finance is based on invoice/bill value | In addition, select products may be eligible for exchange bonus as well | Processing fee shall be applicable as levied by participating banks and consumer finance | Flat 10% cashback is applicable on consumer finance payment. It is applicable on the loan amount, that is the invoice value minus down payment | #Customer can avail product cashback or consumer finance cashback, not both | bigbasket exclusive delivery offer valid across Bangalore only | MRP is inclusive of all taxes | The prices mentioned are for one unit of the product | EMIs are payable monthly and may vary by product, tenure, and customer eligibility | For further details, visit store | T&C apply

Hero

EXCHANGE MELA
8th-22nd June

ಎಕ್ಸ್‌ಚೇಂಜ್‌ನ ಹೀರೊ ಅವಕಾಶ

ಎಕ್ಸ್‌ಚೇಂಜ್ ಬೋನಸ್ ₹ 4000^

ಫ್ಲಿಪ್‌ಕಾರ್ಟ್ ಆಫರ್ ₹ 2000^

INDIA'S FIRST 5 YEAR WARRANTY* *Conditions apply

Hero GoodLife — Stand a chance to win 100% Cashback | Silver Coin and many more assured benefits*

SCAN TO KNOW MORE — ಎಕ್ಸ್-ಶೋರೂಮ್ ಬೆಲೆ ₹ 71 912#

SCAN TO KNOW MORE — ಎಕ್ಸ್-ಶೋರೂಮ್ ಬೆಲೆ ₹ 81 655#

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ^Finance offer is at the sole discretion of the Financier, subject to its respective T&Cs. Available at select dealerships. #Ex-showroom price of Pleasure+ Range and Destini Range in Karnataka. *T&C apply.

TOLL FREE 1800 266 0018

AUTHORISED DEALERS: BENGALURU - LALBAGH ROAD: PRAKASH HERO - PH: 9289922117. PEENYA: SAI HERO - PH: 9289922830. BYATARAYANAPURA: BIMAL HERO - PH: 9289922863. HOSUR ROAD: RT KRISHNA HERO - PH: 9289923177. BANASHANKARI: SAI HERO - PH: 9289922476. RAJAJI NAGAR: MAX HERO - PH: 9289923023. BANASWADI: BHAGATH HERO - PH: 9289922738. MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. KAMAKSHIPALYA: POORNA MOTORS – PH: 9606922534. MAHALAKSHMI LAYOUT : MAX MOTORS 8861748886. JP NAGAR: SAI HERO, PH: 99002 36280. KANAKPURA ROAD: SAI HERO - 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. JIGANI: RT KRISHNA HERO – PH: 9482788355. RT NAGAR: BIMAL HERO 9535327710. TUMKUR: SAI HERO - PH: 9289922986. B.H.ROAD – SAI HERO, PH. 7022752841. KUNIGAL: SAI HERO - PH: 7022752858. TIPTUR: SAI HERO PH. 9164840456. CHIKKABALLAPUR: MANJUNATH HERO - PH: 9821751332. KOLAR: SAI BALAJI HERO PH. 9821745024. DODDABALLAPURA: BIMAL HERO 9742202125. Associate Dealer: BELATHUR - 9902649569. MADIWALA - 9731660639. BANASHANKARI 3RD STAGE - 9513353864. BANNERGHATTA ROAD - 9845397222 . KENGERI - 9739275523. YELAHANKA - 9341025589. MYSORE ROAD: 9611997733. DEVANAHALLI - 9964560599. KANAKAPURA - 9880212346. WHITEFIELD - 9741646466 . BAGEPALLI - 282828. SRINIVASPUR - 9738504002. SIDLAGHATTA - 254827. NELAMANGALA - 27723395. PAVAGADA - 9740324639. MADHUGIRI - 9972278989. VIJAYAPURA: 9449619920. SIRA: 9448417393. CHANDAPURA: 9481329064. VIDYARANYAPURA: 9606934533. MAGADI: 9482090890. GOTTIGERE: 81976 78979 Also Available at: DUNNASANDRA: 8310166369. HSR LAYOUT: 7428893265. MATHIKERE: 9035027951. DOMLUR: 7353919910- J.P.NAGAR: 9035024274. RT NAGAR: 9535327710. . ATTIBELE: 8050609104. B NARAYANAPURA: 9945472149. VARTHUR: 9900877227. PAPAREDDYPALYA: 9916678309. ANEKAL: 9739519252. KONANKUNTE: 9886122251. SARJAPUR MAIN ROAD: 8762860999. BIDADI: 9844767719. RAMANAGARA: 9663399909. CHIKKANAYAKANAHALLI: 9880807399. TURUVEKERE: 9448403205. KORATAGERE: 9731713711. PERESANDRA: 9901502049. For Bulk deals/Corporate purchase - "bangalore@heromotocorp.com" & "kiran.kumart@heromotocorp.com" For Buy/Sell/Exchange Old any Vehicle contact VV PURAM, Bengaluru Olety Sai Hero Sure: 98450 74491

VML.2630.2026KAN